## ಅಧ್ಯಾಯ – ೧೭

# ಪ್ರೇಕ್ಷಣೀಯ ಸ್ಥಳಗಳು

**ದ**ಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರ್ಗತವಾಗಿದ್ದ ಇಂದಿನ ಉಡುಪಿ ಜಿಲ್ಲೆಯು ೧೯೯೭ರ ಆಗಸ್ಟ್‌ನಲ್ಲಾದ ಜಿಲ್ಲಾ ಪುನಾರಚನೆಯಿಂದಾಗಿ ಕಾರ್ಕಳ, ಕುಂದಾಪುರ ಹಾಗೂ ಉಡುಪಿ ತಾಲೂಕುಗಳನ್ನೊಳಗೊಂಡ ನೂತನ ಜಿಲ್ಲೆಯಾಗಿ ಸ್ವತಂತ್ರ ಅಸ್ತಿತ್ವ ಪಡೆಯಿತು. ಮುಂದೆ ೧೯೯೮ರ ಆಗಸ್ಟ್‌ನಲ್ಲಿ ಕಾರ್ಕಳ ತಾಲೂಕಿನ ಮೂಡಬಿದ್ರಿ ಹೋಬಳಿಯನ್ನು ಮಂಗಳೂರು ತಾಲೂಕಿಗೆ ವರ್ಗಾಯಿಸಲಾಯಿತು. ಅಲ್ಲಿಂದೀಚೆಗೆ ಉಡುಪಿ ಜಿಲ್ಲೆಯು ಯಾವುದೇ ಭೌಗೋಳಿಕ ಬದಲಾವಣೆಗೊಳಗಾಗದೆ ಮುಂದುವರಿದಿದೆ. ಪೂರ್ವಕ್ಕೆ ಪಶ್ಚಿಮ ಘಟ್ಟ ಶ್ರೇಣಿ, ಪಶ್ಚಿಮಕ್ಕೆ ವಿಶಾಲವಾದ ಅರಬ್ಬೀಸಮುದ್ರ, ದಕ್ಷಿಣಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರಕ್ಕೆ ಉತ್ತರಕನ್ನಡ ಜಿಲ್ಲೆಗಳಿಂದ ಆವೃತ್ತವಾಗಿರುವ ಉಡುಪಿ ಜಿಲ್ಲೆಯು, ಇತರ ಕರಾವಳಿ ಜಿಲ್ಲೆಗಳಂತೆ ನೀಲಿ ಸಾಗರ ಹಾಗೂ ಹಸಿರ ವನಸಿರಿಗಳಿಂದಾಗಿ **"ನೀಲಿ ಹಸಿರುಗಳ ಚೆನ್ನಾಡು"** ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಭೌಗೋಳಿಕ ಕಾರಣಗಳಿಂದಾಗಿ ವೈವಿಧ್ಯಮಯ ಸಾಮಾಜಿಕ ಧಾರ್ಮಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಯನ್ನು ಕಂಡಿರುವ ಈ ಜಿಲ್ಲೆಯು ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಜಿಲ್ಲೆಯ ಸಾಂಸ್ಕೃತಿಕ ಬದುಕನ್ನು ಅರಿಯುವಲ್ಲಿ ಪೊಳಲಿ ಶೀನಪ್ಪ ಹೆಗ್ಡೆ, ಎಂ. ಗೋವಿಂದ ಪೈ, ಗಣಪತಿರಾವ್ ಐಗಳ್, ಪಿ.ಗುರುರಾಜ ಭಟ್, ಕೆ.ವಿ.ರಮೇಶ್, ಎಂ, ಮುಕುಂದ ಪ್ರಭು, ವಸಂತಮಾಧವ, ದಿವಂಗತ ಬಿ.ವಸಂತಶೆಟ್ಟಿ, ಕೆ.ಅನಂತರಾಮು, ಪಿ.ಎನ್.ನರಸಿಂಹಮೂರ್ತಿ, ಪುಂಡಿ ಕಾಯಿ ಗಣಪಯ್ಯ ಭಟ್ ಮುಂತಾದವರ ಅಧ್ಯಯನಗಳು ಉಪಯುಕ್ತವಾಗಿವೆ. ಅದರಲ್ಲೂ ಪಿ.ಗುರುರಾಜಭಟ್ಟರ *Vwxglhv#lq#Wxoxyd#Klvwru|#dqg#Fxowxuh* (೧೯೭೬) ಹಾಗೂ ಕೆ. ಅನಂತರಾಮುರವರ ***"ದಕ್ಷಿಣದ ಸಿರಿನಾಡು"*** (೧೯೯೭) ಉದ್‌ಗ್ರಂಥಗಳು ಜಿಲ್ಲೆಗೆ ಸಂಬಂಧಿಸಿದಂತೆ ಮಹತ್ವದ ಅಂಶಗಳನ್ನೊಳ ಗೊಂಡ ಮಾಹಿತಿಯ ಗಣಿಯಾಗಿವೆ.

ಜಿಲ್ಲೆಯಲ್ಲಿನ ಮಾನವ ಚಟುವಟಿಕೆಯನ್ನು ಶಿಲಾಯುಗ ಮಾನವನಷ್ಟು ಹಿಂದಕ್ಕೆ ಗುರುತಿಸ ಬಹುದಾಗಿದ್ದು, ಆಲುಪ, ಹೊಯ್ಸಳ, ವಿಜಯನಗರ, ಕೆಳದಿ ಮುಂತಾದ ದೇಶಿಯ ಅರಸರು; ತೊಳಹರರು, ಭೈರರಸರು ಹೊಸಅಂಗಡಿ, ಇರವತ್ತೂರು, ಯೆಳ್ಳಾರೆ, ಮುದ್ರಾಡಿ, ಮುಂತಾದ ಸ್ಥಳೀಯ ಸಾಮಂತ ಹೆಗ್ಗಡೆಗಳು; ವಿದೇಶಿ ಶಕ್ತಿಗಳಾದ ಪೋರ್ಚುಗೀಸ್, ಡಚ್ ಹಾಗೂ ಬ್ರಿಟಿಷರ ಆಡಳಿತಕ್ಕೊಳಪಟ್ಟಿದ್ದ

ಈ ಪ್ರದೇಶ ಹಲವಾರು ಏಳು–ಬೀಳುಗಳನ್ನು ಕಂಡರೂ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ. ಜಿಲ್ಲೆಯ ಸೂರಾಲು, ವಂಡಾರು ಮುಂತಾದೆಡೆಗಳಲ್ಲಿ ಸ್ಥಳೀಯ ಅರಸರ ಕಾಲದ ಕಾಷ್ಟ ನಿರ್ಮಿತ ಅರಮನೆಗಳಿವೆ. ಬಹು ಹಿಂದಿನಿಂದಲೂ ಜಿಲ್ಲೆಯು ಬೌದ್ಧ, ಜೈನ, ನಾಥ, ಹಾಗೂ ಶಾಕ್ತ ಧರ್ಮಿಯರ ಕೇಂದ್ರವಾಗಿದ್ದು ಬೌದ್ಧ ಕುರುಹುಗಳು ಜಿಲ್ಲೆಯಲ್ಲಿ ಉಳಿದು ಬಂದಿದ್ದರೆ, ಇತರೇ ಪಂಥಕ್ಕೆ ಸೇರಿದ ಕೇಂದ್ರಗಳು ಇಂದಿಗೂ ಜನಪ್ರಿಯತೆಯನ್ನು ಕಾಯ್ದುಕೊಂಡಿವೆ. ಅಲ್ಲದೆ ಭೂತಾರಾಧನೆಗೆ ಹೆಸರಾದ ಅನೇಕ ದೈವಸ್ಥಾನಗಳು ಜಿಲ್ಲೆಯಲ್ಲಿವೆ. ಆದಿ ಶಂಕರರು ಭೇಟಿ ನೀಡಿದ ಸ್ಥಳಗಳು ಜಿಲ್ಲೆಯಲ್ಲಿದ್ದು, ವೈಷ್ಣವ ಪಂಥದ ಪ್ರತಿಪಾದಕರಾದ ಮಧ್ವಾಚಾರ್ಯರು ಜಿಲ್ಲೆಯ ಪಾಜಕದವರಾಗಿದ್ದು, ಅವರು ಸ್ಥಾಪಿಸಿದ ಕೃಷ್ಣಮಠ ಹಾಗೂ ಅಷ್ಟಮಠಗಳು ಜಿಲ್ಲಾ ಕೇಂದ್ರ ಉಡುಪಿಯಲ್ಲಿವೆ. ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಕರಾವಳಿ ಭಾಗವು ಕಂಡಿರುವ ಪ್ರಗತಿ ಗುರುತರವಾಗಿದ್ದು, ಮಣಿಪಾಲ್ ಅಕಾಡೆಮಿ ನಾಡಿಗೇ ಕಿರೀಟಪ್ರಾಯವಾಗಿದ್ದು, ದೇಶ ವಿದೇಶಗಳಲ್ಲಿ ಖ್ಯಾತಿ ಪಡೆದಿದೆ. ಬ್ಯಾಂಕಿಂಗ್ ರಂಗಕ್ಕೆ ಜಿಲ್ಲೆಯ ಕೊಡುಗೆ ಉಲ್ಲೇಖಾರ್ಹವಾಗಿದ್ದು ಎರಡು ರಾಷ್ಟ್ರೀಕೃತ (ಸಿಂಡಿಕೇಟ್ ಬ್ಯಾಂಕ್ ಹಾಗೂ ಕಾರ್ಪೋರೇಷನ್ ಬ್ಯಾಂಕ್) ಬ್ಯಾಂಕ್‌ಗಳನ್ನು ನೀಡಿದ ಹೆಗ್ಗಳಿಕೆ ಈ ಜಿಲ್ಲೆಯದಾಗಿದೆ. ಸಾಗರ ಸಂಪರ್ಕದಿಂದಾಗಿ ಕ್ರಿ.ಪೂ.ದಲ್ಲೇ ಪಾಶ್ಚಿಮಾತ್ಯ ಸಂಪರ್ಕ ಪಡೆಯುವ ಮೂಲಕ ತನ್ನನ್ನು ತೆರೆದುಕೊಂಡ ಈ ಭಾಗ ನಂತರದಲ್ಲಿ ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಪ್ರಭಾವಕ್ಕೆ ಸಿಲುಕಿದ ಅಂಶವನ್ನು ಜಿಲ್ಲೆಯಲ್ಲಿರುವ ಇಸ್ಲಾಂ ಹಾಗೂ ಕ್ರೈಸ್ತ ಸ್ಮಾರಕಗಳು ಖಚಿತಪಡಿಸುತ್ತವೆ.

ವೈವಿಧ್ಯಗಳ ಆಗರವಾಗಿರುವ ಉಡುಪಿ ಜಿಲ್ಲೆಯು ಪ್ರಕೃತಿದತ್ತವಾದ ಮಲ್ಪೆ, ಮರವಂತೆ, ಕಾಪು, ತ್ರಾಸಿ ಬೆಂಗ್ರೆ ಮುಂತಾದ ಬೀಚು; ಕೋಸಳ್ಳಿ, ಅರಸಿನಗುಂಡಿ ಕೂಡ್ಲುತೀರ್ಥ, ಮುಂತಾದ ಜಲಪಾತ, ಕೊಡಚಾದ್ರಿ ಮುಂತಾದ ಗಿರಿಶ್ರೇಣಿ; ಮಲ್ಪೆಯಿಂದ ಹೋಗಿಬರಬಹುದಾದ ಸುಂದರ ಸೇಂಟ್ ಮೇರಿ ದ್ವೀಪ; ಚಾರಿತ್ರಿಕ ಮಹತ್ವದ ಉದ್ಯಾವರ, ಬಾರಕೂರು, ಬಸರೂರು, ಕೋಟೇಶ್ವರ, ಮುಂತಾದವು; ಜಲಸಂಪರ್ಕ ಕಲ್ಪಿಸುವ ಮಲ್ಪೆ, ಬೈಂದೂರು, ಹಂಗಾರಕಟ್ಟೆ ಮುಂತಾದ ಬಂದರುಗಳು; ಧಾರ್ಮಿಕ ಮಹತ್ವದ ಉಡುಪಿ, ಕೊಲ್ಲೂರು, ಕಾರ್ಕಳ ಮುಂತಾದವು; ವಾಣಿಜ್ಯ ಮಹತ್ವದ ಉಡುಪಿ, ಮಲ್ಪೆ, ಕುಂದಾಪುರ ಮುಂತಾದವು; ಶೈಕ್ಷಣಿಕ ಮಹತ್ವದ ಮಣಿಪಾಲ ಇತ್ಯಾದಿ ಸ್ಥಳಗಳನ್ನು ಹೊಂದಿದೆ. ಜಿಲ್ಲೆಯಾದ್ಯಂತ ಹರಡಿಕೊಂಡಿರುವ ಯಕ್ಷಗಾನ ಮೇಳದ ತಂಡಗಳು; ಜಿಲ್ಲೆಯಲ್ಲಿ ನಡೆಯುವ ಕಂಬಳ–ಕೋಳಿ ಅಂಕ; ಜಾತ್ರೆ–ನೇಮೋತ್ಸವಗಳು ಜಿಲ್ಲೆಯ ಸಾಂಸ್ಕೃತಿಕ ಬದುಕನ್ನು ಬಿಂಬಿಸುವ ಮಹತ್ವದ ಅಂಶಗಳಾಗಿವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿರುವ ಚಾರಿತ್ರಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಮಹತ್ವದ ಪ್ರೇಕ್ಷಣೀಯ ಸ್ಥಳಗಳನ್ನಿಲ್ಲಿ ಪರಿಚಯಿಸಲು ಯತ್ನಿಸಲಾಗಿದೆ. ಆಯಾ ಸ್ಥಳದ ಮುಂದೆ ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯನ್ವಯ ಆ ಸ್ಥಳದಲ್ಲಿದ್ದ ಜನಸಂಖ್ಯೆಯನ್ನು ಸೂಚಿಸುತ್ತದೆ.

**ಅತ್ತೂರು**: ತಾಲೂಕು ಕೇಂದ್ರ ಕಾರ್ಕಳದಿಂದ ಐದು ಕಿ.ಮೀ. ಅಂತರದಲ್ಲಿ ನಿಟ್ಟೆ (ಜನಸಂಖ್ಯೆ:೧೧,೩೮೧) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮ. ಸುಮಾರು ಮೂರನೆಯ ಶತಮಾನದಲ್ಲಿ ಸ್ಪೇನ್ ದೇಶದಲ್ಲಿದ್ದ ಸಂತ ಲಾರೆನ್ಸ್‌ನ ಹೆಸರಿನಲ್ಲಿ ನಿರ್ಮಿಸಲ್ಪಟ್ಟಿರುವ ಭವ್ಯ ಇಗರ್ಜಿಯಿಂದಾಗಿ ಇದು ಪ್ರಸಿದ್ಧವಾಗಿದೆ. ಅಲ್ಲಿರುವ ಲಾರೆನ್ಸ್‌ನ ಪುಟ್ಟ ಕಾಷ್ಟ ಪವಾಡ ಮೂರ್ತಿಯಿಂದಾಗಿ ಜನಪ್ರಿಯವಾಗಿರುವ ಈ ಇಗರ್ಜಿಯನ್ನು ಸುಮಾರು ೧೮೩೯ರಲ್ಲಿ ನಿರ್ಮಿಸಲಾಗಿದ್ದು, ೧೯೦೦ ಹಾಗೂ ೧೯೭೪ರಲ್ಲಿ ಜೀರ್ಣೋದ್ಧಾರಗೊಂಡು ಇಂದಿನ ರೂಪು ಪಡೆದಿದೆ. **‘ಕಾರ್ಲದದೇವರ್’** (ಕಾರ್ಕಳದ ದೇವರು) ಎಂದೇ ಕರೆಯಲ್ಪಡುವ ಈ ಸಂತನ ವಾರ್ಷಿಕ ಜಾತ್ರೆಯು ಜನವರಿ ತಿಂಗಳ ಕೊನೆಯ ಮಂಗಳ, ಬುಧ ಹಾಗೂ ಗುರುವಾರಗಳಂದು ಮೂರು ದಿನಗಳ ಕಾಲ ವೈಭವದಿಂದ ಜರುಗುತ್ತಿದ್ದು, ಜನವರಿ ಜಾತ್ರೆ ಎಂದೇ ಪ್ರಸಿದ್ಧವಾಗಿದೆ. ಕಂದಾಯ ಗ್ರಾಮವಾದ ನಿಟ್ಟೆಯು ಕೈಗಾರಿಕಾ ಕೇಂದ್ರವಾಗಿ, ಶೈಕ್ಷಣಿಕ ತಾಣವಾಗಿ, ಪ್ರಾಮುಖ್ಯತೆ ಗಳಿಸಿದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ, ಲೋಕಸಭಾ ಸ್ಪೀಕರರಾಗಿ ಸೇವೆ ಸಲ್ಲಿಸಿದ ಕೌಡೂರಿನ ಸದಾನಂದ ಹೆಗಡೆ ಕುಟುಂಬದವರು ಇದಕ್ಕೆ ಕಾರಣರಾಗಿದ್ದಾರೆ.

**ಅದಮಾರು :** ಎರ್ಮಾಳ ತೆಂಕ (ಉಡುಪಿ ತಾಲುಕು)ಎಂಬ ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ ಇದಾಗಿದ್ದು, ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಅದಮಾರು ಮಠದ ಶಾಖಾಮಠವಿಲ್ಲಿರುವುದರಿಂದಾಗಿ ಪ್ರಸಿದ್ಧವಾಗಿದೆ. ಮಧ್ವಾಚಾರ್ಯರ ದ್ವಿತೀಯ ನೇರ ಶಿಷ್ಯರಾದ ನರ(ಸಿಂಹ)ಹರಿತೀರ್ಥರು ಈ ಮಠದ ಆದಿ ಯತಿಗಳಾಗಿದ್ದು, ಚತುರ್ಭುಜ ಕಾಳಿಂಗಮರ್ಧನ ಕೃಷ್ಣ, ಈ ಮಠದ ಮೂಲದೇವರು. ಅಲ್ಲದೆ ಮಠದ ಗುಡಿಗೆ ಹೊಂದಿಕೊಂಡಂತೆ ಗಣಪತಿ, ವಾಸುದೇವರು ಇದ್ದಾರೆ. ಅಲ್ಲಿನ ನಾಗಸನ್ನಿಧಿಯಲ್ಲಿ ಬೃಹತ್ತಾದ ವಲ್ಮೀಕವಿದ್ದು, ವಾಸುದೇವತೀರ್ಥ ಎಂಬ ಪುಷ್ಕರಿಣಿಯೂ ಇದೆ. ಹಿಂದಿನ ಯತಿಗಳ ವೃಂದಾವನಗಳಿವೆ. ಮಠದ ಕಾಷ್ಠಶಿಲ್ಪ ಕೆತ್ತನೆಯು ಮನೋಜ್ಞವಾಗಿದ್ದು, ಆನೆಯ ಸೊಂಡಿಲು, ಗರುಡನ ಕಾಲು, ನವಿಲಿನ ಗರಿ, ಗಜಪೃಷ್ಠ ವಕ್ಷಸ್ಥಳವನ್ನುಳ್ಳ ಅಪರೂಪದ ಗಜಪಕ್ಷಿಯ ಕೆತ್ತನೆಯು ಗಂಡಭೇರುಂಡದಂತಹ ಪೌರಾಣಿಕ ಪಕ್ಷಿಯಾಗಿದ್ದು ವಿಶಿಷ್ಟವಾಗಿದೆ. ಅದಮಾರಿನ ಶಾಖಾ ಮಠಗಳು ವಿವಿಧೆಡೆಗಳಲ್ಲಿದ್ದು, ಅದರಲ್ಲೂ ಬಂಟ್ವಾಳ ತಾಲೂಕಿನಲ್ಲಿರುವ ಕಟತಿಲ (ಕಡ್ತಿಲ)ದಲ್ಲಿ ಮಧ್ವಾಚಾರ್ಯರು ತಾವು ರಚಿಸಿದ ಗ್ರಂಥಗಳನ್ನು ತಾಮ್ರಫಲಕಗಳಲ್ಲಿ ಕೊರೆಯಿಸಿ, ಭೂಗತವಾಗಿರಿಸಿದ್ದಾರೆಂದು ಹೇಳಲಾಗುತ್ತದೆ. ಅದಮಾರು ಮಠವು ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಉಡುಪಿ ಕೃಷ್ಣನಿಗೆ ಇರುವ ೩೨ ಅಡಿ ಎತ್ತರದ ಬೆಳ್ಳಿರಥ, ಚಿನ್ನದ ತೊಟ್ಟಿಲು ಈ ಮಠದ ಕೊಡುಗೆಯಾಗಿದೆ. ಎರ್ಮಾಳದ ಜನಾರ್ದನ ದೇವಾಲಯದಲ್ಲಿರುವ ತೇದಿರಹಿತ ಶಾಸನದಿಂದ, ತಿರುಮಲರಸರಾಜನು ಜನಾರ್ದನ ದೇವರ ಸೇವೆಗೆಂದು ದತ್ತಿ ಬಿಟ್ಟ ವಿಷಯ ಗೊತ್ತಾಗುತ್ತದೆ.

**ಅಲೆವೂರು** (ಜನಸಂಖ್ಯೆ:೪,೭೩೩):ಉಡುಪಿ ಪಟ್ಟಣದಿಂದ ಆರು ಕಿ.ಮೀ. ದಕ್ಷಿಣಕ್ಕಿದ್ದು, ಅಲ್ಲಿರುವ ಜನಾರ್ದನ ಹಾಗೂ ದುರ್ಗಾದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಮೂಡು ಅಲೆವೂರಲ್ಲಿರುವ ಜನಾರ್ದನ ದೇವಾಲಯವು ಪುರಾತನದ್ದಾಗಿದ್ದು, ಕದಂಬ ಮಯೂರವರ್ಮನ ಕಾಲದ ರಚನೆ ಎಂದು ಸ್ಥಳೀಯವಾಗಿ ಹೇಳಲಾಗುತ್ತಾದರೂ ಅದು ಸುಮಾರು ೧೦ನೆಯ ಶತಮಾನದ ರಚನೆಯಾಗಿದ್ದು, ಗರ್ಭಗೃಹದಲ್ಲಿ ಸುಂದರವಾದ ಜನಾರ್ದನ ಶಿಲ್ಪವಿದೆ. ಇದೇ ಕಾಲಾವಧಿಗೆ ಸೇರಿದ ದುರ್ಗಾ ದೇವಾಲಯವು ಪಡು ಅಲೆವೂರಲ್ಲಿದ್ದು ಗರ್ಭಗೃಹದಲ್ಲಿರುವ ಶಿವಲಿಂಗವನ್ನೇ ದೇವಿಯೆಂದು ಆರಾಧಿಸಲಾಗುತ್ತಿದ್ದು, ೧೦ನೆಯ ಶತಮಾನದ ಶಾಸನವೊಂದರಲ್ಲಿ ಇದರ ಉಲ್ಲೇಖವೂ ಇದ್ದು, ಕೊಕ್ಕರ್ಣೆಯ ಅಬ್ಬೆಯು ದಾನಬಿಟ್ಟ ಅಂಶವನ್ನೂ ದಾಖಲಿಸಲಾಗಿದೆ. ಗರ್ಭಗೃಹದ ಮುಂಬದಿಯಲ್ಲಿ ವಿಜಯನಗರಕಾಲದ ಮಂಟಪವಿದ್ದು, ಛಾವಣಿಯಲ್ಲಿ ಅಷ್ಟ ದಿಕ್ಪಾಲಕ-ಬ್ರಹ್ಮರುಳ್ಳ ಫಲಕವಿದೆ. ಇಲ್ಲಿರುವ ಬಲಿದೇವತೆಯ ಶಿಲ್ಪವು ಉಲ್ಲೇಖಾರ್ಹವಾಗಿದ್ದು, ಈ ಗುಡಿಯನ್ನು ವಿಜಯನಗರ ಕಾಲದಲ್ಲಿ ಬಾರಕೂರಿನ ಅರಸರು ಪುನರ್ ಜೀರ್ಣೋದ್ಧಾರ ಮಾಡಿರುವಂತೆ ತೋರುತ್ತದೆ.

**ಉಚ್ಚಿಲ:**ಬಡಾ (ಜನಸಂಖ್ಯೆ:೭,೩೦೦) (ಉಡುಪಿ ತಾಲೂಕು) ಕಂದಾಯ ಗ್ರಾಮದ ಉಪಗ್ರಾಮವಾಗಿರುವ ಇದು ಅಲ್ಲಿರುವ ಮಹಾಲಿಂಗೇಶ್ವರ ದೇವಾಲಯದಿಂದಾಗಿ ಖ್ಯಾತಿ ಪಡೆದಿದೆ. ಖರಾಸುರನಿಂದ ಪ್ರತಿಷ್ಠಾಪಿತಗೊಂಡಿತೆಂದು ಹೇಳಲಾಗುವ ಈ ದೇವಾಲಯದ ಶಿವಲಿಂಗ ಹಾಗೂ ನಂದಿಗಳು ಉಲ್ಲೇಖಾರ್ಹವಾಗಿವೆ. ಅಲ್ಲದೆ ಮೊಗವೀರರು ಆರಾಧಿಸುವ ಇತ್ತೀಚಿನ ಮಹಾಲಕ್ಷ್ಮಿ ದೇವಾಲಯವು ಇಲ್ಲಿದೆ. ಸುಮಾರು ೧೫ ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ಗುಡಿ ವಿಶಿಷ್ಟವಾಗಿದೆ.

**ಉಡುಪಿ** (ಜನಸಂಖ್ಯೆ: ೧,೫೨,೬೪೬): ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದು, ೧೯೯೭ರ ಜಿಲ್ಲಾ ವಿಭಜನೆಯಿಂದಾಗಿ ನೂತನವಾಗಿ ಉಡುಪಿ ಜಿಲ್ಲೆಯು ಅಸ್ತಿತ್ವ ಪಡೆಯಿತು. ಇದರಿಂದಾಗಿ ಜಿಲ್ಲಾ ಕೇಂದ್ರವಾಗಿ ಮೇಲ್ದರ್ಜೆಗೇರಿರುವ ಉಡುಪಿ ಪಟ್ಟಣವು ರಾಜಧಾನಿ ಬೆಂಗಳೂರಿನಿಂದ ಪಶ್ಚಿಮಕ್ಕೆ ೪೧೫ ಕಿ.ಮೀ. ದೂರದಲ್ಲಿದ್ದು, ಮಧ್ವಾಚಾರ್ಯರು ಪ್ರತಿಷ್ಠಾಪಿಸಿದ ಶ್ರೀ ಕೃಷ್ಣಮಠ ಹಾಗೂ ಅಷ್ಟಮಠಗಳಿಂದಾಗಿ ಜಗತ್ಪ್ರಸಿದ್ಧವಾಗಿದೆ. ಹಿಂದೆ ಶಿವಳ್ಳಿಯ ಭಾಗವಾಗಿದ್ದ ಉಡುಪಿಯು ಮಧ್ವಾಚಾರ್ಯರ ಆಗಮನದಿಂದಾಗಿ ಪ್ರಮುಖ ವೈಷ್ಣವ ತೀರ್ಥಕ್ಷೇತ್ರವಾಗಿ ಪ್ರಾಮುಖ್ಯ ಪಡೆಯಲು ಸಾಧ್ಯವಾಯಿತು.

ಉಡುಪಿಯಲ್ಲಿ ಈವರೆಗೆ ಸುಮಾರು ೧೦-೧೭ನೇ ಶತಮಾನಕ್ಕೆ ಸೇರಿದ ೧೩ ಶಾಸನಗಳು ಪತ್ತೆಯಾಗಿದ್ದು, ಅವುಗಳ ನೆರವಿನಿಂದ ಉಡುಪಿಯ ಕೃಷ್ಣಮಠ ಹಾಗೂ ದೇವಾಲಯದ ಏಳು-ಬೀಳುಗಳೂ

ಸೇರಿದಂತೆ ಅನೇಕ ವಿಷಯಗಳನ್ನು ಅರಿಯಬಹುದಾಗಿದೆ. ಇಮ್ಮಡಿ ಹರಿಹರನ ಕಾಲಕ್ಕೆ ಸೇರಿದ ೧೩೬೫ರ ಶಾಸನದಿಂದ ಶ್ರೀಕೃಷ್ಣಮಠವು ಶಿವಳ್ಳಿಯ ಪೂರ್ವಭಾಗದಲ್ಲಿದ್ದ ಮೂಡ ನಿಡುಂಬೂರು ಗ್ರಾಮದ ಮಧ್ಯದಲ್ಲಿದ್ದ ಅಂಶ ಗೊತ್ತಾಗುತ್ತದೆ. 'ಶಿವ+ಹಳ್ಳಿ' ಶಿವಳ್ಳಿಯಾಯಿತೆಂದೂ ಹೇಳುವುದಿದೆ.

ಮಧ್ವಾಚಾರ್ಯರ ಆಗಮನಕ್ಕೆ ಮೊದಲು, ಉಡುಪಿಯು ಆರಂಭದಲ್ಲಿ ಜೈನಕೇಂದ್ರವಾಗಿದ್ದು, ಆನಂತರ ಶೈವಕೇಂದ್ರವಾಗಿ ಶಿ(ಸಿ)ವನಳ್ಳಿ ಗ್ರಾಮದ ಭಾಗವಾಗಿದ್ದು, ಕ್ರಮೇಣ ಶಿವಳ್ಳಿ ಎಂದು ರೂಪಾಂತರಗೊಂಡಿರ ಬಹುದೆಂಬ ಅಭಿಪ್ರಾಯವಿದೆ. ಸುಮಾರು ಎಂಟನೆಯ ಶತಮಾನದ ಮಧ್ಯಾವಧಿಗೆ ಸೇರಿದ ಬೆಳ್ಮಣ್ಣು ತಾಮ್ರಶಾಸನ, ಶಿವಳ್ಳಿಯ ಮಹಾಸಭೆಯ ಸ್ಥಾನಮಾನವನ್ನು ಬೆಳ್ಮಣ್ಣಿಗೂ ನೀಡಲು ಮುಂದಾದುದನ್ನು ದಾಖಲಿಸಿದೆ. ಉಡುಪಿಯ ರಥಬೀದಿಯ ಕೇಂದ್ರಭಾಗದಲ್ಲಿರುವ ಅನಂತೇಶ್ವರ ಹಾಗೂ ಚಂದ್ರಮೌಳೇಶ್ವರ ದೇವಾಲಯಗಳು ಉಡುಪಿಯ ಪ್ರಾಚೀನ ಆಲಯಗಳಾಗಿದ್ದು, ಮೂಲತಃ ಜೈನಬಸದಿಗಳಾಗಿದ್ದ ಇವು, ನಂತರದಲ್ಲಿ ಶೈವಸ್ಥಾನವಾಗಿರಬಹುದೆಂಬ ಅಭಿಪ್ರಾಯವೂ ವಿದ್ವಾಂಸರಲ್ಲಿದೆ. ಇವನ್ನು ಕ್ರಮವಾಗಿ ಎಂಟು ಹಾಗೂ ೧೧ನೆಯ ಶತಮಾನದಷ್ಟು ಹಿಂದಕ್ಕೆ ವಿದ್ವಾಂಸರು ಗುರುತಿಸಿದ್ದಾರೆ. ಆಲುಪರ ಕಾಲದ ಉದ್ಯಾವರದ ಶಾಸನಗಳಲ್ಲಿ ಶಿವಳ್ಳಿಯನ್ನು ವಾರಣಾಸಿಯಷ್ಟು ಪವಿತ್ರವೆಂದು ಪರಿಗಣಿಸಿರುವ ಅಂಶವನ್ನು ಗುರುತಿಸ ಬಹುದಾಗಿದೆ. ಅನಂತೇಶ್ವರ ಗುಡಿಯ ಪೂರ್ವಭಾಗದಲ್ಲಿ ಆಲುಪ ವಿಮಲಾದಿತ್ಯನ ಉಲ್ಲೇಖವಿರುವ ಶಾಸನವೊಂದಿದೆ. ನಂತರದಲ್ಲಿ ಚೈತನ್ಯ ಪುರಂದರದಾಸ ಹಾಗೂ ಕನಕದಾಸರು ಈ ಕ್ಷೇತ್ರವನ್ನು ಸಂದರ್ಶಿಸಿ ಕೃಷ್ಣನನ್ನು ಉದ್ದೇಶಿಸಿ ಕೀರ್ತನೆಗಳನ್ನು ರಚಿಸಿ ಹಾಡಿರುವುದು ಈ ಕ್ಷೇತ್ರದ ಮಹಿಮೆಗೆ ಕೈಗನ್ನಡಿಯಾಗಿದೆ.

'ಉಡುಪಿ' ನಾಮನಿಷ್ಪತ್ತಿ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ದಕ್ಷಬ್ರಹ್ಮನಿಂದ ಶಾಪಕ್ಕೆ ಈಡಾದ ಚಂದ್ರನು ಶಾಪನಿವಾರಣೆಗಾಗಿ ಇಲ್ಲಿ ಬಂದು ತಪವನ್ನಾಚರಿಸಿ, ಶಿವನ ಕೃಪೆಯಿಂದ ಶಾಪಮುಕ್ತನಾದ ಸ್ಥಳ ಇದೆಂಬ ಐತಿಹ್ಯವಿದ್ದು, ಸಂಸ್ಕೃತ ಭಾಷೆಯಲ್ಲಿ 'ಉಡುಪ' ಎಂದರೆ ನಕ್ಷತ್ರಗಳ ಒಡೆಯ ಎಂಬರ್ಥವಿದೆ. ನಕ್ಷತ್ರಗಳ ಒಡೆಯನಾದ ಚಂದ್ರ (ಉಡುಪ)ನು ತಪಸ್ಸು ಮಾಡಿದ ತಾಣವಾದ್ದರಿಂದ 'ಉಡುಪಿ' ಆಯಿತೆಂದು ಸ್ಥಳಪುರಾಣ ಹೇಳುತ್ತದೆ. ಉಡುಪ ಎಂದರೆ ನಾಗಸರ್ಪ ಎಂಬ ಅರ್ಥವೂ ಇದ್ದು, ನಾಗಾರಾಧನೆಗೆ ಈ ಸ್ಥಳವು ಹೆಸರಾಗಿದ್ದು, ಅದರಿಂದಾಗಿ 'ಉಡುಪಿ' ಎಂಬ ಹೆಸರು ಬಂದಿರಬಹುದೆಂದು ಪಿ.ಗುರುರಾಜಭಟ್ ಅಭಿಪ್ರಾಯಪಡುತ್ತಾರೆ. ತುಳುನಾಡಿನ ಸಪ್ತಕ್ಷೇತ್ರಗಳಿಗೆ ಕಿರೀಟಪ್ರಾಯವಾಗಿ, ಉಡುಪಿಯನ್ನು ಸಪ್ತಕ್ಷೇತ್ರ ಸ್ಮರಣಾ ಶ್ಲೋಕದಲ್ಲಿ ರೂಪ್ಯ(ರಜತ)ಪೀಠ ಎಂದು ಕರೆಯಲಾಗಿದೆ. ಯಾಗಕ್ಕಾಗಿ ಭೂಮಿಯನ್ನು ಊಳುವಾಗ ನೇಗಿಲ ಮೊನೆಗೆ ಸರ್ಪ ಸಿಲುಕಿದ್ದರಿಂದ ಉಂಟಾದ ಸರ್ಪದೋಷದ ನಿವಾರಣೆಗಾಗಿ ರಾಮಭೋಜರಾಜನು ಮಾಡಿಸಿದ ಬೆಳ್ಳಿಯ ಪೀಠವನ್ನು ಪರಶುರಾಮನೇ ಸ್ವೀಕರಿಸಿ ಅದರಲ್ಲಿ ತಾನೇ ಪ್ರತಿಷ್ಠಾಪಿತಗೊಂಡನಂತೆ. ಅದೇ ಕಾರಣಕ್ಕಾಗಿ ಉಡುಪಿಗೆ ಈ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಪ್ರಾಚೀನ ಶಾಸನಗಳಲ್ಲೂ 'ಉಡುಪಿ' ಎಂಬ ಉಲ್ಲೇಖವೇ ಇದ್ದು, ನಾರಾಯಣಪಂಡಿತರು, ತಮ್ಮ ಮಧ್ವವಿಜಯ (ಸುಮಾರು ೧೪ನೆಯ ಶತಮಾನ)ದಲ್ಲಿ ರಜತಪೀಠವನ್ನು ಆಡು ಮಾತಿನಲ್ಲಿ " 'ಒಡಿಪು' ಎಂದೂ ಕರೆಯುತ್ತಾರೆ" ಎಂದು ದಾಖಲಿಸಿದ್ದಾರೆ. 'ಉಡುಪಿ'ಗೆ ಮೂಲಪದವಾದ 'ಒಡಿಪು' ಕನ್ನಡದ 'ಒಡಪು' ಪದದಂತೆ ಒಡೆಯುವಿಕೆಯನ್ನು ಸೂಚಿಸುತ್ತದೆ. ಆದ್ದರಿಂದ ಈ ಒಡಿಪು ಹಾಗೂ ಒ(ವ)ಡಬಾಂಡೇಶ್ವರ ಸ್ಥಳನಾಮಗಳ ನಡುವಣ ಸಂಬಂಧವನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಬನ್ನಂಜೆ ಗೋವಿಂದಾಚಾರ್ಯರು ಅಭಿಪ್ರಾಯ ಪಟ್ಟಿದ್ದಾರೆ. ಇದೇ ಅಭಿಪ್ರಾಯಕ್ಕೆ ಕೆಮ್ತೂರು ರಘುಪತಿಭಟ್ ಇನ್ನಷ್ಟು ಒತ್ತು ನೀಡಿ 'ಉಡುಪಿ' ಪದ ನಿಷ್ಪತ್ತಿಯನ್ನು ವಿವೇಚಿಸಿದ್ದಾರೆ.

ಉಡುಪಿಯ ರಥಬೀದಿಯ ನಡುವೆ ಇರುವ ಅನಂತೇಶ್ವರ ದೇವಾಲಯವು ಸುಮಾರು ಎಂಟನೆಯ ಶತಮಾನದಷ್ಟು ಪುರಾತನವೆಂಬ ಅಭಿಪ್ರಾಯವಿದ್ದು, 'ಉಡುಪಿಯ ಮಹಾದೇವ' ಎಂಬುದು ಅದರ ಪ್ರಾಚೀನ ಹೆಸರಾಗಿದ್ದು, ೧೭ನೆಯ ಶತಮಾನದಿಂದ ಈಚೆಗೆ ಅನಂತೇಶ್ವರ ಎಂಬುದು ಹೆಚ್ಚು ಬಳಕೆಗೆ ಬಂದಿರುವಂತೆ ತೋರುತ್ತದೆ. ವೀರಬುಕ್ಕಣ್ಣೊಡೆಯನ ಆಳ್ವಿಕೆಯಲ್ಲಿ ಗೋಪರಸನು ಬಾರಕೂರು

ರಾಜ್ಯವನ್ನಾಳುತ್ತಿದ್ದಾಗ ನೀಡಲ್ಪಟ್ಟಿರುವ ಉಡುಪಿಯ ೧೩೬೬ರ ಶಾಸನವೊಂದರಲ್ಲಿ ಪಡುದೇವ ಹಾಗೂ ಮೂಡದೇವ ಎಂಬ ಹೆಸರಿನಲ್ಲಿ ಎರಡು ಶಿವಾಲಯಗಳು ಉಡುಪಿಯಲ್ಲಿದ್ದ ಉಲ್ಲೇಖ ದೊರೆಯುತ್ತಿದ್ದು, ಅವುಗಳ ಪೂಜಾವಿಧಿಗೆಂದು ದತ್ತಿಬಿಟ್ಟ ಅಂಶ ದಾಖಲಾಗಿದೆ. ಮಿಗಿಲಾಗಿ, ಈ ದೇವಾಲಯಗಳಲ್ಲಿ ಪಡುವದೇವರಿಗೆ ಸೋವಲದೇವಿಯ ಸಾಮ್ಯಕ್ಕೆ ಸೇರಿದ್ದ ಭೂಮಿಯನ್ನು ಖರೀದಿಸಿ ವಿಠಪ್ಪದಂಡನಾಯಕನು ದತ್ತಿಬಿಟ್ಟಿದ್ದು, ಅವಳ ಮರಣಾನಂತರ ಮಲ್ಲಣ್ಣ ದಂಡನಾಯಕನು ಮೂಡದೇವರ ಪೂಜೆಗೂ ವ್ಯವಸ್ಥೆ ಮಾಡಿದ ಅಂಶವನ್ನೂ ಈ ಶಾಸನ ದಾಖಲಿಸಿದೆ. ಅಲ್ಲದೇ ಈ ಶಾಸನದಲ್ಲಿ ತೊನಸೆಯ ದೇವರ ಉಲ್ಲೇಖವೂ ಇದೆ. ಪಡುದೇವ ಅನಂತೇಶ್ವರನಾದರೆ ಮೂಡದೇವ ಚಂದ್ರೇಶ್ವರನಾಗಿದ್ದು, ಮಧ್ವವಿಜಯದಲ್ಲಿ ಮೂಡದೇವರ ಗುಡಿಯನ್ನು ಮಹೇಂದ್ರಾದ್ರಿಗಾಲಯ ಎಂದು ಹೆಸರಿಸಲಾಗಿದೆ. ಅನಂತೇಶ್ವರನ ಕೃಪೆಯಿಂದಾಗಿ ೧೨ ವರ್ಷ ತಪಸ್ಸು ಮಾಡಿದ, ಮಧ್ಯಗೇಹಭಟ್ಟರಿಗೆ ಮಧ್ವಾಚಾರ್ಯರು ಜನಿಸಿದರೆಂಬ ಐತಿಹ್ಯವಿದೆ. ಈ ಗುಡಿಯ ಗುರುಕುಲದಲ್ಲಿ ಮಧ್ವಾಚಾರ್ಯರು ಶಿಷ್ಯರಿಗೆ ಐತರೇಯೋಪ ನಿಷತ್ತನ್ನು ಪಾಠ ಮಾಡುತ್ತಿದ್ದಾಗ ಮುಗಿಲಿನಿಂದ ಪುಷ್ಪವೃಷ್ಟಿಯಾಯಿತು ಎಂದು ಆಚಾರ್ಯರ ಜೀವನ ಚರಿತ್ರೆ ಬರೆದ ನಾರಾಯಣ ಪಂಡಿತಾಚಾರ್ಯರು 'ಮಧ್ವವಿಜಯ'ದಲ್ಲಿ ಉಲ್ಲೇಖಿಸಿದ್ದಾರೆ. ಆಚಾರ್ಯರು ಅಂದು ಕೂತಿದ್ದ ಶಿಲಾಫಲಕಕ್ಕೆ ಈಗಲೂ ಪೂಜೆ ನಡೆಯುತ್ತಿದೆ. ಪೂಜೆ ಸಲ್ಲುವ ಶಿಲಾಫಲಕಕ್ಕೆ ಕಲ್ಲಿನ ಗುಡಿಯಿದೆ. ಗುಡಿಯೊಳಗೆ ವಿಗ್ರಹವಿಲ್ಲ, ಶಿಲಾಫಲಕಕ್ಕೇ ಪೂಜೆ. ಗುಡಿಯ ಹೊರಗೆ ಬಾಗಿಲಿನ ಮೇಲುಗಡೆ ಆಚಾರ್ಯರ ಸುಂದರವಾದ ಶಿಲ್ಪವಿದೆ. ಪ್ರದಕ್ಷಿಣಾಪಥವನ್ನೂ ಹೊಂದಿರುವ ಈ ದೇವಾಲಯವು ಗಜಪೃಷ್ಠಾಕಾರದ ತಳವಿನ್ಯಾಸವನ್ನುಳ್ಳ ವಿಶಾಲ ರಚನೆಯಾಗಿದ್ದು ಆಕರ್ಷಕವಾಗಿದೆ. ಪ್ರಧಾನ ಗರ್ಭಗೃಹದಲ್ಲಿ ಅನಂತೇಶ್ವರ (ಅನಂತಾಸನ) ಲಿಂಗವಿದ್ದು, ಶಿವಲಿಂಗದಲ್ಲೇ ಅನಂತ (ಸರ್ಪ)ನನ್ನು ಆಸನವನ್ನಾಗಿಯುಳ್ಳ ಮಹಾವಿಷ್ಣು (ಪರಶುರಾಮ)ವು ಅಂತರ್ನಿಹಿತನಾಗಿದ್ದಾನೆಂದು ವೈಷ್ಣವರು ಅಭಿಪ್ರಾಯ ಪಡುತ್ತಾರೆ. ಈ ದೇವಾಲಯದ ನವರಂಗದ ಕಂಬಗಳು ಬೃಹತ್ ಗಾತ್ರದವಾಗಿದ್ದು, ಈ ದೇವಾಲಯಕ್ಕೆ ಎರಡು ಅಂತಸ್ತಿನ ಮಾಡುಗಳಿದ್ದು, ಮೇಲಿನ ಮಾಡನ್ನು ದಪ್ಪದಾದ ಹಾಗೂ ಹಿರಿದಾದ ಕಗ್ಗಲ್ಲಿನ ಚಪ್ಪಡಿಗಳಿಂದ ಇಳಿಜಾರಾಗಿ ಮುಚ್ಚಲಾಗಿದೆ. ಗುಡಿಯ ಭಿತ್ತಿಯನ್ನು ಇತ್ತೀಚಿನ ದಶಕಗಳಲ್ಲಿ ರಚಿಸಿರುವ ವರ್ಣಚಿತ್ರಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯದಲ್ಲಿರುವ ಪ್ರಧಾನ ಬಲಿಪೀಠವು ಸುಮಾರು ೧೦ ಅಡಿ ಎತ್ತರವಿದ್ದು, ದೇವಾಲಯದ ಮುಂದಿರುವ ೪೦ ಅಡಿ ಎತ್ತರದ ಶಿಲಾಸ್ತಂಭವು ವಿಜಯನಗರಕಾಲದ್ದೆಂದು ಪಿ. ಗುರುರಾಜಭಟ್ ಅಭಿಪ್ರಾಯಪಟ್ಟಿದ್ದಾರೆ. ಅನಂತೇಶ್ವರನ ದೇವಾಲಯದ ಆವರಣದಲ್ಲೇ ಪ್ರಸನ್ನ ಸೋಮೇಶ್ವರ ಹಾಗೂ ಅಯ್ಯಪ್ಪದೇವರ ಸನ್ನಿಧಿಗಳಿವೆ. ಅನಂತೇಶ್ವರನ ಐದು ದಿನಗಳ ವಾರ್ಷಿಕ ಜಾತ್ರೆಯಲ್ಲಿ ಶಿವರಾತ್ರಿಯಾದ ಐದನೆ ದಿನದಂದು ರಥೋತ್ಸವವಿರುತ್ತದೆ. ಅನಂತೇಶ್ವರ ಜಾತ್ರೆಗೆ ಬ್ರಹ್ಮರಥವನ್ನು ಕೃಷ್ಣಮಠದ ವತಿಯಿಂದ ಕಟ್ಟಿಸಿ ಅಲಂಕಾರ ಮಾಡಿಸಿ ಕೊಡುವ ಸಂಪ್ರದಾಯವಿದೆ. ಅನಂತನ ವ್ರತದಂದು ದೊಡ್ಡಹೂವಿನ ಪೂಜೆಯನ್ನು ಇಲ್ಲಿ ನಡೆಸಲಾಗುತ್ತದೆ. ಪರ್ಯಾಯಪೀಠಸ್ಥ ಯತಿಗಳು ದ್ವಾದಶಿಯ ಪ್ರದೋಷಕಾಲದಲ್ಲಿ ಕೃಷ್ಣಪೂಜೆಯ ನಂತರ, ಸಕಲ ಗೌರವಗಳೊಡನೆ ಇಲ್ಲಿಗೆ ಬಂದು ಅನಂತೇಶ್ವರ ಹಾಗೂ ಮಧ್ವಾಚಾರ್ಯರ ಸನ್ನಿಧಿಗಳ ದರ್ಶನ ಪಡೆದು ಹೋಗುತ್ತಾರೆ. ಉಳಿದ ಯತಿಗಳು ಉಡುಪಿಯಲ್ಲಿದ್ದಾಗ ದಿನದಲ್ಲೊಮ್ಮೆ ಇಲ್ಲಿಗೆ ಬಂದು ಹೋಗುವ ಸಂಪ್ರದಾಯವಿದೆ. ಕೃಷ್ಣಮಠಕ್ಕೂ ಅನಂತೇಶ್ವರ–ಚಂದ್ರಮೌಳೇಶ್ವರ ಗುಡಿಗಳಿಗೂ ಹಿಂದಿನಿಂದಲೂ ಸೌಹಾರ್ದಯುತ ಸಂಬಂಧವಿದ್ದು, ಶೈವ–ವೈಷ್ಣವ ಹೊಂದಾಣಿಕೆಗೆ ಇದೊಂದು ಉತ್ತಮ ನಿದರ್ಶನವಾಗಿದೆ. ಅನಂತೇಶ್ವರ–ಚಂದ್ರಮೌಳೇಶ್ವರರ ಅವಭೃತಾದಿ ಉತ್ಸವಾದಿಗಳಿಗೆ ಕೃಷ್ಣಮಠದ ಮಧ್ವಸರೋವರವನ್ನೇ ಬಳಸಲಾಗುತ್ತಿದ್ದು, ಕೃಷ್ಣಮಠದ ಉತ್ಸವಗಳಿಗೆ ಈ ದೇವರುಗಳನ್ನೂ ಬರಮಾಡಿಕೊಳ್ಳಲಾಗುತ್ತದೆ. ಒಂದೇ ರಥದಲ್ಲಿ ಅನಂತೇಶ್ವರ ಚಂದ್ರಮೌಳೇಶ್ವರರನ್ನು ಕೂರಿಸಿ ಎಳೆಯುವಾಗ ಕೃಷ್ಣದೇವರ ರಥ ಅದನ್ನು ಹಿಂಬಾಲಿಸುತ್ತದೆ. ಸಪ್ತೋತ್ಸವದಂದು ಮೂರು ರಥಗಳನ್ನು ಎಳೆಯುವಾಗ ಆಂಜನೇಯನ ರಥ ಮುಂದಿರುತ್ತದೆ. ಇಲ್ಲಿಯ ಚಂದ್ರಮೌಳೇಶ್ವರ ದೇವಾಲಯವು ಸುಮಾರು ೧೧ನೆಯ ಶತಮಾನಕ್ಕೆ ಸೇರಿದ್ದು, ಆ ಸ್ಥಾನವು ಹಿಂದೆ ಅನಂತೇಶ್ವರ ಗುಡಿಯ ಪುಷ್ಕರಿಣಿಯಾಗಿತ್ತೆಂದೂ ಅಲ್ಲಿ

ಚಂದ್ರೇಶ್ವರನು ಮೂಡಿದ್ದರಿಂದ ಪುಷ್ಕರಿಣಿಯು ದೇವಾಲಯವಾಗಿ ಪರಿವರ್ತಿತವಾಯಿತೆಂಬ ಅಭಿಪ್ರಾಯವಿದ್ದು, ಈ ಗುಡಿಯು ನೆಲಮಟ್ಟದಿಂದ ಕೊಂಚ ತಗ್ಗಿನಲ್ಲಿದೆ. ಅನಂತೇಶ್ವರ ದೇವಾಲಯದಿಂದ ಎರಡು ಚದರ ಮೈಲಿ ಪ್ರದೇಶದಲ್ಲಿ ನಾಲ್ಕು ದುರ್ಗಾಲಯ (ಕಡಿಯಾಳಿ, ಪುತ್ತೂರು ಕನ್ನರ್ಪಾಡಿ ಬೈಲೂರು) ಹಾಗೂ ನಾಲ್ಕು ಸ್ಕಂಧಾಲಯ (ತಾಂಗೋಡು, ಮಾಂಗೋಡು, ಅರಿತೋಡು ಹಾಗೂ ಮುಚ್ಚಿಲಕೋಡು)ಗಳಿವೆ. ಪೂರ್ವಾದಿ ನಾಲ್ಕು ದಿಕ್ಕುಗಳು ಶಿವಪತ್ನಿ (ದುರ್ಗಿ)ಯ ಸ್ಥಾನಗಳಾದರೆ, ಆಗ್ನೇಯಾದಿ ನಾಲ್ಕು ದಿಕ್ಕುಗಳು ಶಿವಪುತ್ರ ಸ್ಕಂದನ ಆಲಯಗಳಾಗಿವೆ.

ಅನಂತೇಶ್ವರ ಹಾಗೂ ಚಂದ್ರಮೌಳೇಶ್ವರ ಗುಡಿಗಳನ್ನು ಸುತ್ತುವರಿದಂತೆ ಚೌಕಾಕಾರದಲ್ಲಿರುವ ವಿಶಾಲವಾದ ಮಾರ್ಗವೇ ರಥವೀದಿಯಾಗಿದ್ದು, ದೇವರ ರಥ, ಉತ್ಸವಗಳು, ಪ್ರದಕ್ಷಿಣೆ ಬರಲು ಅನುಕೂಲವಾಗುವಂತೆ ಇದನ್ನು ರೂಪಿಸಲಾಗಿದ್ದು, ಇತ್ತೀಚೆಗೆ ಇದು ವಾಣಿಜ್ಯ ಸಂಕೀರ್ಣವಾಗಿ ಬೆಳೆದಿದೆ. ರಥಬೀದಿಯ ಪ್ರದಕ್ಷಿಣ ಪಥದಲ್ಲಿಯೇ ಕೃಷ್ಣಮಠ ಹಾಗೂ ಅಷ್ಟಮಠ ಕಟ್ಟಡಗಳಿವೆ. ಅಲ್ಲದೆ ಮಠಗಳಿಗೆ ಸೇರಿದ ಛತ್ರಗಳೂ ಇಲ್ಲಿವೆ. ಮಧ್ವಾಚಾರ್ಯರ ಕಾಲದಲ್ಲಿ ಅಷ್ಟಯತಿಗಳು ಕೃಷ್ಣದೇವರ ಮಠದಲ್ಲೇ ವಾಸಿಸುತ್ತಿದ್ದು, ನಂತರದಲ್ಲಿ ರಥಬೀದಿಯಲ್ಲಿ ಸ್ವತಂತ್ರ ಮಠಗಳು ತಲೆಎತ್ತಿದವೆಂದು ಹೇಳಲಾಗುತ್ತದೆ. ಅಲ್ಲದೆ ಉಡುಪಿ ಸೇರಿದಂತೆ ನೆರೆಹೊರೆಯ ಗ್ರಾಮಗಳಲ್ಲೂ ಇವುಗಳಿಗೆ ಸೇರಿದ ಶಾಖಾಮಠಗಳು ಸ್ಥಾಪಿಸಲ್ಪಟ್ಟವು. ಅದರಂತೆ ಉಡುಪಿಯಲ್ಲಿ ಕಾಣಿಯೂರು ಮಠ, ಸೋದೆ (ಕುಂಭಾಸಿ)ಮಠ, ಪುತ್ತಿಗೆಮಠ, ಆದಮಾರು ಮಠ, ಪೇಜಾವರ ಮಠ, ಫಲಿಮಾರು ಮಠ, ಕೃಷ್ಣಾಪುರ ಮಠ, ಶೀರೂರು ಮಠ ಎಂಬ ಅಷ್ಟಮಠಗಳನ್ನು ಪ್ರದಕ್ಷಿಣ ಕ್ರಮದಲ್ಲಿ ಕಾಣಬಹುದಾಗಿದೆ. ಇವುಗಳಲ್ಲಿ ಪುತ್ತಿಗೆ, ಅದಮಾರು, ಫಲಿಮಾರು ಹಾಗೂ ಶೀರೂರುಗಳು ಉಡುಪಿ ತಾಲೂಕಿನಲ್ಲಿವೆ. ಅಷ್ಟಮಠಗಳಲ್ಲೇ ಒಂದಕ್ಕೊಂದು ಬೆಂಬಲವಾಗಿರುವಂತೆ ಎರಡೆರಡು ಮಠಗಳನ್ನು ಜೋಡಿಸಿ (ಫಲಿಮಾರು–ಅದಮಾರು, ಕೃಷ್ಣಾಪುರ–ಪುತ್ತಿಗೆ, ಶೀರೂರು–ಸೋದೆ, ಕಾಣಿಯೂರು–ಪೇಜಾವರ) ನಾಲ್ಕು ದ್ವಂದ್ವ ಮಠಗಳನ್ನು ರೂಪಿಸಲಾಗಿದೆ. ಕೃಷ್ಣ, ಎಲ್ಲಾ ಮಠಗಳಿಗೂ ಸಮಾನ ಆರಾಧ್ಯದೇವರಾದರೂ ಮಧ್ವಾಚಾರ್ಯರು ಒಂದೊಂದು ಮಠಕ್ಕೂ ಪ್ರತ್ಯೇಕ ಪಟ್ಟದದೇವರ ಉಪಾಸನಾ ಮೂರ್ತಿಯನ್ನು ನೀಡಿದ್ದು, ಅವನ್ನು ಆಯಾ ಮಠದಲ್ಲಿ ಆರಾಧಿಸಲಾಗುತ್ತದೆ. ಅದರಂತೆ ನರಸಿಂಹ (ಕಾಣಿಯೂರು), ವಿಠಲ (ಪುತ್ತಿಗೆ, ಶೀರೂರು, ಪೇಜಾವರ) ಕಾಳಿಂಗಮರ್ಧನ ಕೃಷ್ಣ (ಕೃಷ್ಣಾಪುರ, ಅದಮಾರು) ಭೂವರಾಹ (ಸೊದೆ) ಹಾಗೂ ಶ್ರೀರಾಮ (ಫಲಿಮಾರು)ಆಯಾ ಮಠದ ಪಟ್ಟದದೇವರುಗಳಾಗಿವೆ. ಪ್ರತಿಯೊಂದು ಅಷ್ಟಮಠದ ಯತಿವರ್ಯರು ಕೃಷ್ಣಮಠದ ಮಧ್ವಪ್ರತಿಷ್ಠಿತ ಕೃಷ್ಣದೇವರನ್ನು ಆರಂಭದಲ್ಲಿ ಎರಡೆರಡು ತಿಂಗಳು ಪೂಜಿಸುವ ವ್ಯವಸ್ಥೆ ಇತ್ತು. ಮುಂದೆ ವಾದಿರಾಜ ತೀರ್ಥರು ಇದನ್ನು ಸರದಿಯ ಮೇಲೆ ಎರಡೆರಡು ವರ್ಷ ಪೂಜಿಸಲು ಅನುಕೂಲವಾಗುವಂತ ಪರ್ಯಾಯ ಕಟ್ಟಳೆಯನ್ನು ಸುಮಾರು ೧೫೨೨–೨೩ರಲ್ಲಿ ರೂಪಿಸಿದ್ದರೆಂದು ತಿಳಿದುಬರುತ್ತದೆ. ಈ ಮಠಗಳ ಅನುಪಮ ಕಾಷ್ಠಶಿಲ್ಪ ವೈಭವವನ್ನು ಕಣ್ಣಾರೆ ನೋಡಿಯೇ ಆಸ್ವಾದಿಸಬೇಕು. ಅಲ್ಲದೇ ಈ ಪರಿಸರದಲ್ಲಿರುವ ಭಂಡಾರಕೇರಿ ಮಠ, ವ್ಯಾಸರಾಯಮಠ, ಭೀಮನಕಟ್ಟೆ ಮಠ, ಉತ್ತರಾದಿಮಠ ಹಾಗೂ ರಾಘವೇಂದ್ರ ಮಠಗಳು ಇತ್ತೀಚೆಗೆ ನವೀಕರಣಗೊಂಡಿವೆ.

ಆದಿ ಉಡುಪಿಯಲ್ಲಿರುವ ಕಂಗುಮಠ, ಮೂಲತಃ ಬಾಳಗಾರು ಮಠಕ್ಕೆ ಸೇರಿದ್ದು, ಉಡುಪಿಯ ೧೩೬೬ರ ಶಾಸನದಲ್ಲಿ ಉಡುಪಿಯ ದೇವರ ಉಲ್ಲೇಖವಿದೆಯಾದರೂ ಉಡುಪಿಯ ಶ್ರೀ ಕೃಷ್ಣದೇವರ ಮೊದಲ ನೇರ ಉಲ್ಲೇಖ ಕಂಡುಬರುವುದು ೧೩೯೫ರ ಉಡುಪಿ ಶಾಸನದಲ್ಲೇ. ಇಮ್ಮಡಿ ವೀರಹರಿಹರನ ಆಳ್ವಿಕೆಯಲ್ಲಿ ಹೆಗಡೆ ಸಂಕರಸನು ಬಾರಕೂರು ರಾಜ್ಯವನ್ನಾಳುತ್ತಿದ್ದಾಗ ಶಿವಳ್ಳಿಯ ಮೂಡ ನಿಡಂಬೂರ ಮಧ್ಯದ ಉಡುಪಿಯ ಸ್ಥಾನದ ಶ್ರೀಕೃಷ್ಣ ದೇವರಿಗೆ ಅಮೃತಪಡಿಗೆಂದು ದತ್ತಿಬಿಟ್ಟ ಅಂಶವನ್ನು ದಾಖಲಿಸಿರುವ ಈ ಶಾಸನದಲ್ಲಿ ಕೋಟೆಯ ಉಲ್ಲೇಖವೂ ಇದೆ. ಇಮ್ಮಡಿ ಹರಿಹರನ ಕಾಲಕ್ಕೆ ಸೇರಿದ ಇನ್ನೆರಡು ಶಾಸನಗಳು ಪ್ರಥಮೋತ್ಕರುಷೆಯ ವಿದ್ಯಾಮೋದತೀರ್ಥ ಶ್ರೀಪಾದರೇ ಮೊದಲಾದ ಎಂಟು ಉತ್ಕರುಷೆಯವರು ಆರಾಧಿಸುವ ಕೃಷ್ಣದೇವರ ನಂದಾದೀಪಗಳಿಗೆಂದು ೧೦೦ ಕಾಟಿಗದ್ಯಾಣವನ್ನು ದಾನ ಬಿಟ್ಟ ಅಂಶವನ್ನು

ದಾಖಲಿಸುತ್ತದೆ. ಇಲ್ಲಿ ಉಲ್ಲೇಖಿತಗೊಂಡಿರುವ 'ಎಂಟು ಉತ್ಕರುಷೆಯರು' ಎಂಬ ಪ್ರಯೋಗ, ಅಷ್ಟಮಠಗಳನ್ನು ಸೂಚಿಸುತ್ತದೆ.

ಉಡುಪಿ ಕೃಷ್ಣಮಠದ ಉತ್ತರ ಭಿತ್ತಿಯಲ್ಲಿ ಸೇರಿರುವ ೧೪೩೬ರ ಶಾಸನ, ಪ್ರೌಢದೇವರಾಯನ ಆಳ್ವಿಕೆಯಲ್ಲಿ ಬಾರಕೂರು ರಾಜ್ಯವನ್ನಾಳುತ್ತಿದ್ದ ಅಣ್ಣಪ್ಪ ಒಡೆಯನ ಧಾಳಿಯಿಂದಾಗಿ, ಶಿವಳ್ಳಿ ಗ್ರಾಮವು ಹಾಳಾದಾಗ, ಅನ್ಯಮತಿಯರ ತಪ್ಪಿನಿಂದಾಗಿ ಕೃಷ್ಣನ ಪ್ರತಿಮಾ ಚಲನೆಯಾಗಿದ್ದರಿಂದ, ಬಾರಕೂರಿನ ಹತ್ತು ಕೇರಿಯವರು ಶಿವಳ್ಳಿ ಗ್ರಾಮದವರನ್ನು ಸಂತೈಸಿ, ಆ ದೇವರ ಕಟ್ಟಳೆಯವರ ಕೋರಿಕೆಯಂತೆ ಹಾಗೂ ಅಣ್ಣಪ್ಪೊಡೆಯನ ನಿರೂಪದಂತೆ, ಸಿಂಗರಸನು ವಿವಿಧ ಗದ್ದೆಗಳನ್ನು ನಿರ್ದಿಷ್ಟ ಸಂಖ್ಯೆಯ ಕೊಯ್ಲು ಹಾಗೂ ೧೨ ಕಾಟಿ ಗದ್ಯಾಣಗಳನ್ನೂ ದತ್ತಿ ಬಿಟ್ಟಿರುವುದು ಉಲ್ಲೇಖಾರ್ಹವಾಗಿದೆ. ಅಲ್ಲೇ ಮಠದ ಸರೋವರದ ಬಳಿ ಇರುವ ೧೪೭೫ರ ಶಾಸನ ಕುಂದ ಹೆಗ್ಗಡೆ, ಮರ್ದ ಹೆಗ್ಗಡೆ, ಕಿಂನ್ನಿಕ ಹೆಗ್ಗಡೆ ಹಾಗೂ ಚೌಟರ ನಡುವಣ ಒಡಂಬಡಿಕೆ ದಾಖಲೆಯಾಗಿದೆ. ಕೃಷ್ಣಮಠದಲ್ಲಿರುವ ೧೬೧೪ರ ಶಾಸನದಿಂದ, ಕೆಳದಿ ವೆಂಕಟಪ್ಪನಾಯಕನು ತುಳುರಾಜ್ಯವನ್ನು ವಿಜಯನಗರದ ಸಾಮಂತನಾಗಿ ಆಳುತ್ತಿದ್ದಾಗ, ರಾಮಕೃಷ್ಣಪ್ಪ ಒಡೆಯನು ಬಾರಕೂರು ರಾಜ್ಯವನ್ನಾಳುತ್ತಿದ್ದಾಗ ಮರದಿಂದ ಮಾಡಿದ್ದ ಮಠದ ಕಟ್ಟಡವನ್ನು ಶಿಲಾಮಯಗೊಳಿಸುವ ಸಂದರ್ಭದಲ್ಲಿ ಉಡುಪಿಯ ಕೃಷ್ಣದೇವರನ್ನು ಹೊರಮಂಟಪದಲ್ಲಿಟ್ಟು ಪೂಜೆ ಮುಂದುವರಿಸಿ, ಗರ್ಭಗೃಹ ಹಾಗೂ ಮುಂದಣ ಮಠವನ್ನು ಶಿಲಾಮಯಗೊಳಿಸಿ, ತಾಮ್ರದ ಹೊದಿಕೆ ಮಾಡಿಸಿ, ಕಳಸಾರೋಹಣಗೈದು ಕೃಷ್ಣನನ್ನು ಮೂಲನೆಲೆಯಲ್ಲಿ ಪುನರ್‌ಪ್ರತಿಷ್ಠಾಪಿಸಿದ ಅಂಶ ಗೊತ್ತಾಗುತ್ತಿದ್ದು, ಆ ಸಂದರ್ಭದಲ್ಲಿ ವಾದಿರಾಜ ತೀರ್ಥರ ಶಿಷ್ಯರಾದ ವೇದವೇದ್ಯತೀರ್ಥರು ಪರ್ಯಾಯಪೀಠವನ್ನು ಅಲಂಕರಿಸಿದ್ದರೆಂದೂ ಶಾಸನದಿಂದ ಗ್ರಹಿಸಬಹುದಾಗಿದೆ. ಅಲ್ಲದೆ ಕೆಳದಿ ವೆಂಕಟಪ್ಪನಾಯಕನು, ಬಾರಕೂರು ರಾಜ್ಯದಲ್ಲಿದ್ದ ೪೦ ನಾಡೊಳಗಣ ಹೂವಿನಕೆರೆ ಗ್ರಾಮವನ್ನು ಸರ್ವಮಾನ್ಯವಾಗಿ ದತ್ತಿಬಿಟ್ಟ ಅಂಶವೂ ಅದರಲ್ಲಿದೆ. ಅದೇ ವರ್ಷದಲ್ಲಿ ನೀಡಲ್ಪಟ್ಟಿರುವ ಇನ್ನೆರಡು ಶಾಸನಗಳು ವಿದ್ಯಾಧೀಶತೀರ್ಥರ ಶಿಷ್ಯ ವಿದ್ಯೋಪದೇಶ ತೀರ್ಥ ಹಾಗೂ ವಾದಿರಾಜತೀರ್ಥರ ಶಿಷ್ಯ ವೇದವಿದ್ಯಾತೀರ್ಥರು ಉಡುಪಿಯ ಕೃಷ್ಣನಿಗೆ ಹಾಗೂ ಉಡುಪಿಯ ಗುರುಗಳ ದಶಮಿಗೆಂದು ದಾನಬಿಟ್ಟಿದ್ದನ್ನು ದಾಖಲಿಸಿವೆ. ಅದರಲ್ಲೂ ಒಂದು ಶಾಸನ, ದಾಸರಗೋವಿಂದಪ್ರಭು ಕೃಷ್ಣಗುಡಿಯನ್ನು ಗುಂಡೋತ್ತರ ತಳಕಲ್ಲು, ಪಾಣಿಪೀಠ, ಚೌಕದ ಭಿತ್ತಿ, ದ್ವಾರಬಂಧ, ತೊಲೆ ಮುಚ್ಚಳಯಾದಿಯಾಗಿ ಜೀರ್ಣೋದ್ಧಾರಕ್ಕೆ ತಗುಲಿದ ವೆಚ್ಚವನ್ನು ಭರಿಸುವ ಮೂಲಕ ತನ್ನ ತಂದೆ ತಾಯಿಯ ಪುಣ್ಯ ಹಾಗೂ ಮಕ್ಕಳ ಶ್ರೇಯೋಭಿವೃದ್ಧಿಯ ಫಲಾಪೇಕ್ಷೆಯನ್ನು ಬಯಸಿದ ಅಂಶ ಉಲ್ಲೇಖಾರ್ಹವಾಗಿದೆ. ಅಲ್ಲೇ ಇರುವ ಇನ್ನೊಂದು ಶಾಸನ, ಅವನ ತಂದೆ ದಾಸರ ದಾಮರಸಪ್ರಭು ದೇವರ ಪೂಜೆಗೆಂದು ವ್ಯವಸ್ಥೆ ಮಾಡಿ ದತ್ತಿ ಬಿಟ್ಟ ಅಂಶವನ್ನು ಅರುಹುತ್ತದೆ. ಇದರಿಂದ ಕೃಷ್ಣನ ಗುಡಿಯು ವಿವಿಧ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರುವ ಅಂಶ ಸ್ಪಷ್ಟವಾಗುತ್ತದೆ. ಮಠದ ಬೃಂದಾವನ ಪೀಠದ ಮೇಲಿರುವ ಶಾಸನ ಮಲ್ಲಪ್ಪೊಡೆಯನು ಬಾರಕೂರಿನಿಂದ ಆಳುತ್ತಿರುವಾಗ ಯಾದವೇಂದ್ರತೀರ್ಥರನ್ನು ಉಲ್ಲೇಖಿಸುತ್ತಾ, ಭೋಜನಶಾಲೆ ನಿರ್ಮಿಸಿ, ಮಧ್ವಸರದ (ಮಧ್ವತೀರ್ಥ) ಉತ್ತರ ಭಾಗದ ಭೂಮಿಯನ್ನು ದತ್ತಿಬಿಟ್ಟು, ದೇವರ ಮುಂಭಾಗದಲ್ಲಿ ತಾಮ್ರದ ಹೊದಿಕೆಯುಳ್ಳ ಮಂಟಪವನ್ನು ಕಟ್ಟಿಸಿ, ಕಂಚಿನ ತೊಳಸಿ ವೃಂದಾವನವನ್ನು ಪ್ರತಿಷ್ಠಾಪಿಸಿದ ಅಂಶವನ್ನು ದಾಖಲಿಸಿದೆ. ಆನಂತರದಲ್ಲಿ ಅಷ್ಟಮಠಗಳು ಪರ್ಯಾಯ ಅವಧಿಯಲ್ಲಿ ಕೃಷ್ಣಮಠದ ಅಭಿವೃದ್ಧಿಗೆ ನಿರಂತರ ಕ್ರಮ ಕೈಗೊಂಡಿವೆ. ಉಡುಪಿಯ ಹೃದಯದಂತಿರುವ ಕೃಷ್ಣಮಠದ ಹೊರಗಿನಿಂದಲೇ ಶ್ರೀಕೃಷ್ಣನ ದರ್ಶನ ಮಾಡಲು ಸದಾಕಾಲ ಅನುಕೂಲವಾಗುವಂತೆ ಪಶ್ಚಿಮ ಭಾಗದಲ್ಲಿ 'ಕನಕನ ಕಿಂಡಿ'ಯೊಂದಿದೆ. ಗುಡಿಯ ಪಶ್ಚಿಮ ಭಾಗದಲ್ಲಿ ನಿಂತು ಹಾಡಿದ ಕನಕದಾಸರ ಭಕ್ತಿಗೆ ಒಲಿದ ಕೃಷ್ಣನು ತಟಕ್ಕನೆ ಪಶ್ಚಿಮಾಭಿಮುಖನಾದಾಗ, ಆ ಭಾಗದ ಗೋಡೆಯೂ ಒಡೆದು, ಕಿಂಡಿಯ ಮೂಲಕ ಕನಕದಾಸರಿಗೆ ಕೃಷ್ಣನ ದರ್ಶನವಾಯಿತೆಂಬ ಪ್ರತೀತಿ ಇದೆ. (ವಾಸ್ತವವಾಗಿ ಮಧ್ವಾಚಾರ್ಯರು ಕೃಷ್ಣನನ್ನು ಪ್ರತಿಷ್ಠಾಪಿಸಿದ್ದೇ ಪಶ್ಚಿಮಾಭಿಮುಖವಾಗಿ ಎಂದು ಹಳೆಯ ದಾಖಲೆಗಳಿಂದ ತಿಳಿಯುತ್ತದೆ. ಗುಡಿಯ ವಾಸ್ತು ರಚನೆ, ಪಶ್ಚಿಮದಲ್ಲಿರುವ ಮುಖಮಂಟಪ, ತುಳಸೀಕಟ್ಟೆ ಎಲ್ಲವೂ, ಕೃಷ್ಣ ಪಶ್ಚಿಮಾಭಿ

ಮುಖನಾಗಿದ್ದ ಎನ್ನುವುದನ್ನೇ ಸಮರ್ಥಿಸುತ್ತವೆ.) ಈ ರೀತಿ ಕನಕದಾಸರು ಕೃಷ್ಣದರ್ಶನ ಪಡೆದ ಕನಕನ ಕಿಂಡಿಗೆ ಆ ನಂತರದಲ್ಲಿ ಕಟಾಂಜನ ರೂಪಿಸಿ, ಎಲ್ಲಾ ಭಕ್ತರ ದರ್ಶನಕ್ಕಾಗಿ ಅದನ್ನು ಶಾಶ್ವತವಾಗಿ ಉಳಿಸಿಕೊಳ್ಳಲಾಗಿದ್ದು, ಅದರ ಮುಂದೆ ಮೊದಲು ಕನಕನ ಗುಡಿಯಿದ್ದ ಜಾಗದಲ್ಲಿ ಅನಂತರ ಮಂಟಪ ವೊಂದನ್ನು ರಚಿಸಿ ಅದರಲ್ಲಿ ಕನಕಮೂರ್ತಿಯನ್ನೂ ಪ್ರತಿಷ್ಠಾಪಿಸಲಾಗಿತ್ತು. ಇತ್ತೀಚೆಗೆ ಹಳೆಯ ಗೋಪುರವನ್ನು ನವೀಕರಿಸಿ ಕನಕಗೋಪುರ ಎಂದೇ ಹೆಸರಿಡಲಾಗಿದೆ. ದೇವರ ದರ್ಶನಕ್ಕೆ ಬರುವ ಭಕ್ತರು, ಆ ಕಿಂಡಿಯ ಮೂಲಕ ಕೃಷ್ಣನ ದರ್ಶನವನ್ನು ದೂರದಿಂದಲೇ ಪಡೆದು ದಕ್ಷಿಣದ್ವಾರದಿಂದ ಪೂರ್ಣ ಕೃಷ್ಣದರ್ಶನಕ್ಕೆ ಒಳಕ್ಕೆ ಹೋಗುವ ಕ್ರಮ ಈಗಲೂ ಉಳಿದಿದೆ. ಕನಕದಾಸರಿಂದಾಗಿ ಕೃಷ್ಣನಿಗೆ ಪಂಚಭಕ್ಷ್ಯ ಪರಮಾನ್ನಗಳ ಜೊತೆಗೆ ಅಂಬಲಿ–ಅಕ್ಕಿ ರೊಟ್ಟಿಯನ್ನು ಅನುದಿನವೂ ಸಮರ್ಪಿಸುವ ಅಪರೂಪದ ಕ್ರಮದ ಬಗ್ಗೆ ಬನ್ನಂಜೆ ಗೋವಿಂದಾಚಾರ್ಯರು ದಾಖಲಿಸಿದ್ದಾರೆ.

ವಿಶಾಲವಾದ ಕೃಷ್ಣಮಠಕ್ಕೆ ಹೊಂದಿಕೊಂಡಂತೆ ಪೂರ್ವಭಾಗದಲ್ಲಿ ಮಧ್ವಸರೋವರ ಇದೆ. ಆದರೆ ಇದು ಮೈಸೂರು ಅರಸರ ಕಾಲದ ನಿರ್ಮಾಣವೆಂಬುದಕ್ಕೆ ಸನ್ನದು ಇದೆ ಎಂಬ ಅಭಿಪ್ರಾಯವೂ ಇದೆ. ಸರೋವರದ ನಡುವೆ ಮಂಟಪವಿದ್ದು, ತಲುಪಲು ಸೇತುವೆಯಿದೆ. ಮಠದ ಪ್ರಧಾನ ಗರ್ಭಗೃಹದಲ್ಲಿ ಸಾಲಿಗ್ರಾಮ ಶಿಲೆಯಿಂದ ಮಾಡಿರುವ ಆರಾಧನಾ ಶಿಲ್ಪವನ್ನು ಕೈಲಿ ಹಗ್ಗ, ಕಡೆಗೋಲು (ಮಂತು) ಗಳನ್ನು ಹಿಡಿದ ದ್ವಿಬಾಹು ಕೃಷ್ಣನ ಶಿಲ್ಪವೆಂದೇ ಶತಮಾನಗಳಿಂದ ನಂಬಿಕೊಂಡು ಪೂಜಿಸಲಾಗುತ್ತಿದೆ. ವಾದಿರಾಜರು ಈ ವಿಗ್ರಹವನ್ನು 'ಮಂಥಪಾಶಧರ' ಕೃಷ್ಣ ಎಂದೇ ಸ್ತುತಿಸಿದ್ದಾರೆ. ಆದ್ದರಿಂದ ಇದು ಸ್ಕಂದನ ವಿಗ್ರಹವಿರಬಹುದು ಎಂಬ ಕೆಲವರ ಅನುಮಾನವು ನಿರಾಧಾರವೆಂಬ ಅಭಿಪ್ರಾಯ ಕೆಲವು ವಿದ್ವಾಂಸರಲ್ಲಿದೆ. ಸೂಕ್ತ. ಈ ವಿಗ್ರಹ ವಡಭಾಂಡೇಶ್ವರದ ಕಡಲಲ್ಲಿ ಮಧ್ವಾಚಾರ್ಯರಿಗೆ ದೊರೆತದ್ದು ಎಂದು ಐತಿಹ್ಯವಿದೆ. ವಡಭಾಂಡೇಶ್ವರದಲ್ಲಿರುವ ಶಿಲ್ಪವೂ ಶೂಲಪಾಣಿ ಸ್ಕಂದನದೆಂದು ಹೇಳಲಾಗುತ್ತದೆ. ಅಮೃತಶಿಲೆ ಹಾಗೂ ಕೃಷ್ಣಕಾಂತ ಶಿಲೆಯನ್ನು ಬಳಸಿ ಕೃಷ್ಣಮಠದ ಒಳಭಾಗವನ್ನೆಲ್ಲ ನಾಜೂಕುಗೊಳಿಸಲಾಗಿದ್ದು, ಕೃಷ್ಣ ದರ್ಶನಕ್ಕೆ ಹೊರಗೆ ಕನಕನ ಕಿಂಡಿಯಾದರೆ, ಒಳಗೆ ನವಗ್ರಹಕಿಂಡಿ ಇದೆ. ಕೃಷ್ಣನ ಗುಡಿಯ ಎದುರು ಭಾಗದಲ್ಲಿ ಮುಖ್ಯಪ್ರಾಣದೇವರು ಹಾಗೂ ಗರುಡನ ಸನ್ನಿಧಿಗಳಿದ್ದು, ಅವನ್ನು ವಾದಿರಾಜರೇ ಅಯೋಧ್ಯೆಯಿಂದ ತಂದು ಪ್ರತಿಷ್ಠಾಪಿಸಿದರೆಂದು ಹೇಳಲಾಗುತ್ತದೆ. ಗರ್ಭಗೃಹದ ಪೂರ್ವದ್ವಾರದಲ್ಲಿ ಗರ್ಭಗುಡಿಗೆ ಪ್ರವೇಶಿಸುವ ಉತ್ತರದ್ವಾರದ ಪಕ್ಕದಲ್ಲೆ ವಾದಿರಾಜರು ಸ್ಥಾಪಿಸಿರುವ ಮಧ್ವಾಚಾರ್ಯರ ಸನ್ನಿಧಿಯಿದೆ. ಕೃಷ್ಣಮಠದ ಸೂರ್ಯ ಶಾಲೆಯ ಕಂಬದ ಮೇಲೆ ಭೀಮ, ಹನುಮ, ಮಧ್ವರನ್ನು ಒಂದೇ ಸಾಲಿನಲ್ಲಿ ಕೆತ್ತಲಾಗಿದ್ದು, ಬಹಳ ಮನೋಜ್ಞವಾಗಿದೆ. ಚಂದ್ರಶಾಲೆಯ ಬೋದಿಗೆಗಳ ಮೇಲೆ ಅಶ್ವ, ಸರ್ಪ, ಮಕರ, ಪಕ್ಷಿ ಮುಂತಾದ ಅಪೂರ್ವ ಕಲ್ಪನಾ ಶಿಲ್ಪಗಳಿವೆ. ಕೃಷ್ಣಮಠದಲ್ಲಿ ಹಲವು ಭಾಗಗಳಿದ್ದು, ಬಡಗುಮಾಳಿಗೆಯಲ್ಲಿ ಪರ್ಯಾಯಯತಿಗಳ ವಸತಿ ನೆಲೆಯಿದ್ದು, ಆಡಳಿತಕಚೇರಿ, ಉಗ್ರಾಣ, ಪಾಕಶಾಲೆ, ಭೋಜನಶಾಲೆ, ಗೋಶಾಲೆ ಮುಂತಾದವೂ ಅಲ್ಲಿವೆ. ಕೃಷ್ಣಮಠದ ಗುಡಿಯೊಳಗೆ ಇನ್ನೊಂದು ಕೃಷ್ಣವಿಗ್ರಹವು 'ಶಂಕರ ವಿಜಯ' ಗ್ರಂಥದ ಪ್ರಕಾರ ಆದಿಶಂಕರಾಚಾರ್ಯರ ಶಿಷ್ಯರಲ್ಲೊಬ್ಬರು ಆದಿ ಉಡುಪಿಯ ಕಂಗುಮಠದಲ್ಲಿ ಪ್ರತಿಷ್ಠಾಪಿಸಿದ್ದ ಪ್ರತಿಮೆಯಾಗಿದ್ದು, ಕಂಗುಮಠ ಶಿಥಿಲಗೊಂಡಾಗ, ಅಲ್ಲಿದ್ದ ಕೃಷ್ಣನ ಈ ಮೂರ್ತಿಯನ್ನು ಮಠಕ್ಕೆ ಒಪ್ಪಿಸಲಾಗಿದ್ದು, ಅಂದಿನಿಂದ ಈ ಮೂರ್ತಿಗೂ ಪರ್ಯಾಯಯತಿಗಳಿಂದ ಪೂಜೆ ಸಲ್ಲುತ್ತಿದೆ. ಮಠದ ವಸಂತಮಹಲ್ ಪರಿಸರದಲ್ಲಿರುವ ಸುಬ್ರಹ್ಮಣ್ಯ ದೇವಾಲಯವನ್ನು ವಾದಿರಾಜ ತೀರ್ಥರು ನಿರ್ಮಾಣ ಮಾಡಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ನಿಧಿಸಂಬಂಧಿ ಐತಿಹ್ಯವಿದೆ. ಅಲ್ಲದೆ ಉಡುಪಿಯಲ್ಲೇ ಸಮಾಧಿ ಹೊಂದಿದ ಅಷ್ಟಮಠ ಯತಿಗಳ ವೃಂದಾವನಗಳೂ ಅಲ್ಲೆ ಸಮೀಪದಲ್ಲಿವೆ. ಅವುಗಳಲ್ಲಿ ಒಂದರ ಮೇಲೆ ಹುಲಿಕೊಂದ ಸ್ವಾಮಿಗಳ ಕೆತ್ತನೆ ಇದೆ. ಬದಿಯಲ್ಲೇ ಅಶ್ವತ್ಥಕಟ್ಟೆ ಹಾಗೂ ನಾಗರಕಟ್ಟೆಗಳಿವೆ.

ಕೃಷ್ಣ (ಗುಡಿ) ಮಠದಲ್ಲಿ ದಿನವೂ ಜಾತ್ರೆ ಉತ್ಸವಗಳೇ. ಅವುಗಳಲ್ಲಿ ಪ್ರಧಾನವಾದುದು ಸಪ್ತೋತ್ಸವ ವೆಂಬ ಏಳು ದಿನಗಳ ವಾರ್ಷಿಕ ಜಾತ್ರೆ, ಮಧ್ವನವಮಿಯಂದು ಆಚಾರ್ಯರ ಪುಣ್ಯದಿನ, ಶ್ರಾವಣ ಮಾಸದಲ್ಲಿ

ಕೃಷ್ಣನ ಬಾಲಲೀಲೆಯನ್ನು ಅನುಕರಿಸುವಂತೆ ಗೋವಳ ವೇಷಧಾರಿಗಳು ಮೊಸರು ಮಡಕೆಯನ್ನು ತಿವಿದು ಕೆಡವುವ ಸಂಭ್ರಮದ ವಿಟ್ಲಪಿಂಡಿ ಎಂಬ ಕೃಷ್ಣಾಷ್ಟಮಿ ಉತ್ಸವ, ಅನಂತೋತ್ಸವ, ಲಕ್ಷದೀಪೋತ್ಸವ ಮತ್ತು ಎರಡು ವರ್ಷಗಳಿಗೊಮ್ಮೆ ವಾರ್ಷಿಕ ಜಾತ್ರೆಯೊಂದಿಗೆ ಕೂಡಿಕೊಳ್ಳುವ ಪರ್ಯಾಯ ಮಹೋತ್ಸವ ಉಡುಪಿ ಕೃಷ್ಣನ ಪ್ರಮುಖ ಜಾತ್ರೋತ್ಸವಗಳಾಗಿವೆ. ಎರಡು ವರ್ಷಗಳಿಗೊಮ್ಮೆ ಜರುಗುವ ಈ ಪರ್ಯಾಯ ಪೀಠಾರೋಹಣ ಸಂಪ್ರದಾಯವನ್ನು ಫಲಿಮಾರು ಮಠವು ಸುಮಾರು ೧೫೨೨ರಲ್ಲಿ ಆರಂಭಿಸಿದ ಅಂಶವನ್ನು ಸಂಶೋಧಕರು ಈಗಾಗಲೇ ಬೆಳಕಿಗೆ ತಂದಿದ್ದಾರೆ. ಇದೇ ರೀತಿ ೧೬೧೪ರ ಇನ್ನೊಂದು ಶಾಸನ. ವಾದಿರಾಜತೀರ್ಥ ಶ್ರೀಪಾದಗಳ ಶಿಷ್ಯರಾದ ವೇದವೇದ್ಯತೀರ್ಥರು ಪೂಜಾಪರ್ಯಾಯದಲ್ಲಿದ್ದ ಅಂಶವನ್ನು ದಾಖಲಿಸಿದೆ. ಅದರಂತೆ ಈವರೆಗೆ ಒಂದೊಂದು ಮಠಕ್ಕೂ ಅಂತಹ ೩೦ ಪರ್ಯಾಯಗಳು ಸಂದಿದ್ದು, ೨೦೦೨ರಲ್ಲಿ ನಡೆದ ಫಲಿಮಾರು ಮಠದ ಪರ್ಯಾಯದಿಂದ ೩೧ನೆಯ ಪರ್ಯಾಯ ಚಕ್ರ ಪ್ರಾರಂಭವಾಗಿದೆ. ಈ ಮಹೋತ್ಸವವು ವಾರ್ಷಿಕ ಜಾತ್ರೆಯ ಜೊತೆಯಲ್ಲೇ ಜನವರಿ ತಿಂಗಳಲ್ಲಿ ಜರುಗುತ್ತಿದ್ದು, ೨೦೦೮ರ ಜನವರಿ ೧೮ರಂದು ಜರುಗಿದ ಪರ್ಯಾಯೋತ್ಸವದಲ್ಲಿ ಪುತ್ತಿಗೆ ಮಠಾಧೀಶರು ಪರ್ಯಾಯ ಸಿಂಹಾಸನಾರೋಹಣ ಮಾಡಿದರು.

ಉಡುಪಿಯ ಪರ್ಯಾಯಯೋತ್ಸವವನ್ನು ಮೈಸೂರಿನ ದಸರಾದೊಂದಿಗೆ ಹೋಲಿಸಬಹುದಾಗಿದೆ. ಪ್ರತೀ ಪರ್ಯಾಯಕ್ಕೆ ೧೩ ತಿಂಗಳು ಮೊದಲೇ ಪರ್ಯಾಯವನ್ನು ಏರಲಿರುವ ಯತಿಗಳು ಬಾಳೆಮುಹೂರ್ತ ವನ್ನೂ, ೧೧ ತಿಂಗಳಿದೆಯೆನ್ನುವಾಗ ಅಕ್ಕಿ ಮುಹೂರ್ತವನ್ನೂ ಏಳು ತಿಂಗಳಿದೆಯೆನ್ನುವಾಗ ಕಟ್ಟಿಗೆ ಮುಹೂರ್ತವನ್ನೂ (ಆಗ ಸಂಗ್ರಹಿಸ್ಪಡುವ ಸೌದೆಯನ್ನು ಶ್ರೀಕೃಷ್ಣನ ರಥಗೋಪುರ ಮಾದರಿಯಲ್ಲಿ ಜೋಡಿಸುವುದೊಂದು ವಿಶೇಷ) ಹಾಗೂ ಒಂದು ತಿಂಗಳಿದೆಯೆನ್ನುವಾಗ ಭತ್ತದ ಮುಹೂರ್ತವನ್ನೂ ಸಂಪನ್ನಗೊಳಿಸುವ ಪರ್ಯಾಯಪೂರ್ವ ಸಿದ್ಧತೆಗೆ ಮುಂದಾಗುತ್ತಾರೆ. ಜೊತೆಗೆ ಪರ್ಯಾಯ ಇನ್ನೂ ಎರಡು ತಿಂಗಳಿರುವಂತೆ ಪರ್ಯಾಯಪೂರ್ವ ಸಂಚಾರ ಕೈಗೊಂಡು ಕನ್ಯಾಕುಮಾರಿಯಿಂದ ಬದರಿಯವರೆಗೆ ದೇಶದ ಪ್ರಸಿದ್ಧ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿ ಪರ್ಯಾಯಕ್ಕೆ ಒಂದೆರಡು ವಾರ ಮೊದಲೆ ಪುರಪ್ರವೇಶಿಸಿ ಅನಂತೇಶ್ವರ, ಚಂದ್ರಮೌಳೇಶ್ವರ, ಕೃಷ್ಣದೇವರ ದರ್ಶನ ಪಡೆದು ತಮ್ಮ ಮಠವನ್ನು ಪ್ರವೇಶಿಸುತ್ತಾರೆ. ಪರ್ಯಾಯೋತ್ಸವದ ಹಿಂದಿನ ದಿನ ರಾತ್ರಿಯೇ ಯತಿಗಳು ೧೦ ಕಿ.ಮೀ. ದೂರದ ದಂಡತೀರ್ಥ ಮಠಕ್ಕೆ ಹೋಗಿ ಅಲ್ಲಿಯ ಪುಷ್ಕರಣಿಯಲ್ಲಿ ಮಿಂದು ಶುಚಿರ್ಭೂತರಾಗಿ ಬೆಳಗಿನ ಜಾವ ನಾಲ್ಕು ಗಂಟೆಗೆ ಉಡುಪಿಯ ಜೋಡುಕಟ್ಟೆಗೆ ಆಗಮಿಸುತ್ತಾರೆ. ಅವರನ್ನೂ ಇತರ ಯತಿಗಳನ್ನೂ ಮೇನೆ ಮೆರವಣಿಗೆಯಲ್ಲಿ ರಥದ ಬೀದಿಗೆ ಕರೆ ತರಲಾಗುತ್ತದೆ. ರಥದ ಬೀದಿಯಲ್ಲಿ ನಡೆಮಡಿಯ ಮೇಲೆ ಒಂದು ಪ್ರದಕ್ಷಿಣೆ ಹಾಕಿದ ನಂತರ, ಪರ್ಯಾಯ ವೇರುವ ಯತಿಗಳು ಕನಕನ ಕಿಂಡಿಯಲ್ಲಿ ಕೃಷ್ಣನ ದರ್ಶನ ಪಡೆದು, ಅನಂತರ ಅನಂತೇಶ್ವರ, ಚಂದ್ರೇಶ್ವರ ದೇವರ ದರ್ಶನ ಪಡೆದು ಕೃಷ್ಣಮಠಕ್ಕೆ ಆಗಮಿಸುತ್ತಾರೆ. ಆಗ ಅವರನ್ನು ಪೀಠ ಒಪ್ಪಿಸುವ ಯತಿಗಳು ಸ್ವಾಗತಿಸಿ ಒಳಕ್ಕೆ ಕರೆದೊಯ್ದು, ಮಧ್ವ ಸರೋವರದಲ್ಲಿ ಕಾಲ್ತೊಳೆದುಕೊಂಡು ಕೃಷ್ಣ ಮಂದಿರ ಪ್ರವೇಶಿಸಿ, ಸ್ವಾಮಿಗೆ ಪೂಜಿಸಿ, ಗಂಧ ಪುಷ್ಪಗಳಿಂದ ಗೌರವಿಸಲ್ಪಟ್ಟ ನಂತರ ಪ್ರಾಣದೇವರ ದರ್ಶನ ಪಡೆದು, ಮಧ್ವರ ಗುಡಿಯ ಮಗ್ಗುಲಲ್ಲಿರುವ ಸರ್ವಜ್ಞಪೀಠದ ಬಳಿಗೆ ಬಂದಾಗ ಪರ್ಯಾಯ ಪೀಠವನ್ನೊಪ್ಪಿಸುವವರು ನೂತನವಾಗಿ ಪರ್ಯಾಯವನ್ನು ಏರುವ ಯತಿವರ್ಯರ ಕೈಹಿಡಿದು, ಆ ಪೀಠದ ಮೇಲೆ ಕೂಡಿಸುವ ಕ್ಷಣವೇ ಪರ್ಯಾಯ ಸಿಂಹಾಸನಾರೋಹಣದ ಸುಕ್ಷಣವಾಗಿದ್ದು, ಅನಂತರ ರಾಜಾಂಗಣದಲ್ಲಿ ಪರ್ಯಾಯ ಸ್ವಾಮಿಗಳ ದರ್ಬಾರು ನಡೆಯುತ್ತದೆ. ಈ ಸಂಬಂಧ ನಡೆಯುವ ಪರ್ಯಾಯ ಮೆರವಣಿಗೆಯ ಐಸಿರಿ ಭಕ್ತರಲ್ಲಿ ಅವರ್ಣನೀಯ ಆನಂದವನ್ನುಂಟು ಮಾಡುತ್ತದೆ.

ಉಡುಪಿಯಲ್ಲಿ ಗೌಡಸಾರಸ್ವತರ ಲಕ್ಷ್ಮೀವೆಂಕಟೇಶ ದೇವಾಲಯವು ಭವ್ಯವೂ ವಿಶಾಲವೂ ಆಗಿದ್ದು, ಆವರಣದಲ್ಲಿ ಪುಷ್ಕರಿಣಿಯೂ ಇದೆ. ಇಲ್ಲಿಯ ಶೋಕಮಾತೆಯ ದೇವಮಂದಿರ (೧೮೮೦), ಕ್ಯಾಥೊಲಿಕ್ ಇಗರ್ಜಿಯಾಗಿದ್ದು, ಇತ್ತೀಚೆಗೆ ನವೀಕೃತಗೊಂಡಿದೆ (೧೯೮೪). ಉಡುಪಿಯ ಎಂ.ಜಿ.ಎಂ ಕಾಲೇಜು ಆವರಣದಲ್ಲಿರುವ ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ (೧೯೬೫), ಗೋವಿಂದ ಪೈ ಸ್ಮಾರಕ

ವಸ್ತು ಸಂಗ್ರಹಾಲಯ (೧೯೭೨), ಹಾಗೂ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ (೧೯೮೪)ಗಳು ಜಿಲ್ಲೆಗೇ ಕಳಶಪ್ರಾಯವಾಗಿದೆ. ***ಕನ್ನರ್ಪಾಡಿ :*** ಉಡುಪಿ ಪಟ್ಟಣದ ಹೊರವಲಯಕ್ಕೆ ಸೇರಿ ಹೋಗಿರುವ ಕಡೆಕಾರು (ಜನಸಂಖ್ಯೆ: ೪,೩೨೩) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ ಇದಾಗಿದ್ದು, ಅಲ್ಲಿರುವ ದುರ್ಗಾಲಯದಿಂದಾಗಿ ಪ್ರಸಿದ್ಧವಾಗಿದೆ. ಉಡುಪಿ ಪಟ್ಟಣ ಪ್ರದೇಶದ ಗೋಪುರದ್ವಾರದ ಸಮೀಪವಿರುವ ಈ ದುರ್ಗಾಲಯದಲ್ಲಿಯ ದೇವಿಯನ್ನು ಜಯದುರ್ಗೆ ಎಂದು ಕರೆಯಲಾಗುತ್ತಿದ್ದು, ಸ್ಥಾನಕಭಂಗಿಯಲ್ಲಿರುವ ಈ ದೇವಿಯ ಶಿಲ್ಪವು ಆಕರ್ಷಕವಾಗಿದೆ. ಬಳಿಯಲ್ಲಿರುವ ಕರ್ಣಪುಷ್ಕರಣಿ ಆಕರ್ಷಕವಾಗಿದೆ. ವಾದಿರಾಜರು ತಮ್ಮ ಸ್ತೋತ್ರರತ್ನಮಾಲೆಯಲ್ಲಿ ಈಕೆಯನ್ನು ಸ್ತುತಿಸಿದ್ದಾರೆ. ಪರ್ಯಾಯಕ್ಕೆ ಕೂರುವ ಯತಿಗಳು, ಅದಕ್ಕೆ ಮುನ್ನ ಇಲ್ಲಿಗೆ ಬಂದು ದೇವಿಯ ದರ್ಶನ ಪಡೆದುಕೊಂಡು ಹೋಗುವ ಸಂಪ್ರದಾಯವಿದೆ. *ಹೂಡೆ–ಬೇಂಗ್ರೆ ಕಡಲತೀರ :* ಕೆಮ್ಮರ ಬಳಿಯ ಹೂಡೆಯಿಂದ ಬೆಂಗ್ರೆಗೆ ಹೋಗುವ ಮೂರು ಕಿ.ಮೀ.ಉದ್ದನೆಯ ಕಡಲತೀರದ ಮಾರ್ಗ, ಮರವಂತೆಯಂತೆ ಸುಂದರವಾಗಿದೆ. ಒಂದು ಬದಿಯಲ್ಲಿ ಸಮುದ್ರ ಮತ್ತೊಂದು ಬದಿಯಲ್ಲಿ ಸಮುದ್ರ ಸೇರಲೆಂದು ಹರಿಯುತ್ತಿರುವ ನದಿ, ನಡುವೆ ಕಿರಿದಾದ ಜನದಟ್ಟಣೆಯ ಕಡಲತೀರದ ಮಾರ್ಗ. ಹೂಡೆ–ಬೆಂಗ್ರೆಗೆ ಉಡುಪಿಯಿಂದ ಸಾರಿಗೆ ಸೌಕರ್ಯ ಲಭ್ಯವಿದೆ. ಬೆಂಗ್ರೆಯ ಬಳಿ ನದಿ ದಾಟಿ ಹಂಗಾರಕಟ್ಟೆಗೆ ಹೋಗಿ ಬರಲು ಬೋಟ್ ಸೌಲಭ್ಯವಿದ್ದು ಈ ತಾಣವನ್ನು ಪ್ರವಾಸೋದ್ಯಮ ದೃಷ್ಟಿಯಿಂದ ಅಭಿವೃದ್ಧಿ ಪಡಿಸುವ ಅಗತ್ಯವಿದೆ. ***ಶಿವಳ್ಳಿ :*** ಉಡುಪಿ ಪಟ್ಟಣದಿಂದ ಮೂರು ಕಿ.ಮೀ. ದಕ್ಷಿಣಕ್ಕಿರುವ ಇದು ಹಿಂದೊಂದು ಅಗ್ರಹಾರವಾಗಿದ್ದು, ಶಿವಳ್ಳಿ ಬ್ರಾಹ್ಮಣ ವರ್ಗದ ವಸತಿ ಕೇಂದ್ರವಾಗಿತ್ತು. ಹಿಂದೆ ಉಡುಪಿ ಕೂಡ ಶಿವಳ್ಳಿಯ ಭಾಗವಾಗಿತ್ತು. ಆದರಿಂದ ಇದು ಉಡುಪಿ ಪಟ್ಟಣದಲ್ಲಿ ವಿಲೀನವಾಗಿದೆ.

ಶಿವಳ್ಳಿ ಗ್ರಾಮದ ಭಾಗವಾಗಿದ್ದ *ಮಣಿಪಾಲವು* ಉಡುಪಿ ಪಟ್ಟಣದಿಂದ ಮೂರು ಕಿ.ಮೀ. ಪೂರ್ವದಲ್ಲಿದ್ದು, ಮಣಿಪಾಲ್ ಅಕಾಡೆಮಿ ಆಫ್ ಎಜುಕೇಷನ್ ಶಿಕ್ಷಣ ಸಂಸ್ಥೆ (೧೯೪೨) ವೈವಿಧ್ಯಮಯ ಶೈಕ್ಷಣಿಕ ಚಟುವಟಿಕೆಗಳಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿರುವ ಕಸ್ತೂರ್ ಬಾ ವೈದ್ಯಕೀಯ ಕಾಲೇಜು ಆಸ್ಪತ್ರೆ, ಹಾಗೂ ವೈದ್ಯಕೀಯ ವಸ್ತುಸಂಗ್ರಹಾಲಯಗಳು ಉಲ್ಲೇಖಾರ್ಹವಾಗಿವೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕ್‌ನ ಕೇಂದ್ರ ಕಚೇರಿ ಇಲ್ಲಿದೆ. ಉದಯವಾಣಿ ಪತ್ರಿಕೆಯ ಕೇಂದ್ರ ಕಚೇರಿಯೂ ಇಲ್ಲಿದೆ. ಮಣಿಪಾಲದಲ್ಲಿ ಇತ್ತೀಚಿನದಾದ ವೇಣುಗೋಪಾಲಕೃಷ್ಣ (೧೯೭೩)ನ ದೇವಾಲಯವಿದೆ. ಈ ದೇವಾಲಯದ ನಿರ್ಮಾಣದಲ್ಲಿ ಇಸ್ಲಾಂ ಹಾಗೂ ಕ್ರೈಸ್ತ ವಾಸ್ತುಶಿಲ್ಪ ಲಕ್ಷಣವನ್ನು ಅಳವಡಿಸಲಾಗಿದ್ದು, ಒಳಗಿನ ನವರಂಗ ಬಹಳ ವಿಶಿಷ್ಟವಾಗಿದೆ. ಇಲ್ಲಿಯ ಜೂಬ್ಲಿ ಚರ್ಚು ಪ್ರಾಟೆಸ್ಟಂಟ್ ಪಂಥೀಯರ ಆರಾಧನಾ ಕೇಂದ್ರವಾಗಿದ್ದು, ಆಕರ್ಷಕವಾಗಿದೆ. ***ನಿಡಂಬೂರು :*** ಉಡುಪಿ ಪಟ್ಟಣದಿಂದ ಮೂರು ಕಿ.ಮೀ. ಪಶ್ಚಿಮಕ್ಕೆ ಇರುವ ಇದಿಂದು ಉಡುಪಿ ಪಟ್ಟಣದ ಹೊರವಲಯದ ಭಾಗವಾಗಿದೆ. ಹಿಂದೆ ಇದು ಸ್ಥಳೀಯ ಬಲ್ಲಾಳ ಅರಸರ ಆಡಳಿತ ಕೇಂದ್ರವಾಗಿದ್ದು, ವಾದಿರಾಜಯತಿಗಳು ನಿಡಂಬೂರು ಬೀಡಿನ ಬಲ್ಲಾಳರಿಗೆ ಪ್ರಾಣದೇವರ ಮೂರ್ತಿಯನ್ನು ಕರುಣಿಸಿದ್ದು, ಆ ಮೂರ್ತಿಯನ್ನು ಪರ್ಯಾಯ ಪೀಠಾರೋಹಣಕ್ಕೆ ಮೊದಲು ಆರಾಧಿಸುವ ಸಂಪ್ರದಾಯವಿದೆ. *ಕಡಿಯಾಳಿ :* ಉಡುಪಿ ಪಟ್ಟಣದಿಂದ ಮಣಿಪಾಲಕ್ಕೆ ಹೋಗುವ ಮಾರ್ಗದಲ್ಲಿರುವ ಇದಿಂದು ಉಡುಪಿಯ ಭಾಗವಾಗಿದೆ. ಹಿಂದಿನ ದಿನಗಳಲ್ಲಿ ಇದೇ ಕಡೆಯ ಹಳ್ಳಿಯಾಗಿದ್ದುದರಿಂದ ಅದಕ್ಕೆ ಈ ಹೆಸರು ಬಂದಿದೆ. ಅಲ್ಲಿರುವ ಮಹಿಷಾಸುರ ಮರ್ಧಿನಿ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೧ನೆಯ ಶತಮಾನಕ್ಕೆ ಸೇರಿದ ಈ ದೇವಾಲಯವು ನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. ***ಅಂಬಲಪಾಡಿ*** (ಜನಸಂಖ್ಯೆ: ೧,೬೭೫): ಉಡುಪಿ ಪಟ್ಟಣದಿಂದ ನಾಲ್ಕು ಕಿ.ಮೀ. ಪಶ್ಚಿಮಕ್ಕೆ ಇರುವ ಈ ಗ್ರಾಮದವರೆಗೆ ಉಡುಪಿ ಪಟ್ಟಣದ ಹೊರವಲಯವು ವ್ಯಾಪಿಸಿರುವುದರಿಂದ ಇದಿಂದು ಉಡುಪಿಯ ಭಾಗವೇ ಆಗಿಹೋಗಿದೆ. ಇಲ್ಲಿರುವ ಜನಾರ್ದನ ದೇವಾಲಯವು ಪ್ರಾಚೀನದಾಗಿದ್ದು, ಅಲ್ಲಿರುವ ಲಕ್ಷ್ಮೀಜನಾರ್ದನ ಶಿಲ್ಪದಿಂದಾಗಿ ಉಲ್ಲೇಖಾರ್ಹ ವಾಗಿದೆ. ಈ ಗುಡಿಯನ್ನು ೧೫೭೧ರಲ್ಲಿ ಶಿಲಾಮಯಗೊಳಿಸಿದ ಶ್ರೀಧರ ನಿಡಂಬೂರು ಎಂಬ ದಂಡ ನಾಯಕನು ದತ್ತಿ ಬಿಟ್ಟ ಅಂಶವನ್ನು ಶಾಸನವೊಂದು ದಾಖಲಿಸಿದೆ. ಇಲ್ಲಿರುವ ಮಹಾಕಾಳಿ ದೇವಾಲಯದಲ್ಲಿ,

ಮಹಾಕಾಳಿಯ ಸುಮಾರು ಐದು ಅಡಿ ಎತ್ತರದ ಮರದ ಮೂರ್ತಿ ಇದ್ದು, ಇದು ಸುಮಾರು ೧೬ನೇ ಶತಮಾನದ ರಚನೆಯೆಂದು ಹೇಳಲಾಗುತ್ತದೆ.

**ಉದ್ಯಾವರ** (ಜನಸಂಖ್ಯೆ: ೧೧,೩೮೬):ಉಡುಪಿ ಪಟ್ಟಣದಿಂದ ನಾಲ್ಕು ಕಿ.ಮೀ ನೈಋತ್ಯಕ್ಕೆ ಪಾಪನಾಶಿನಿ (ಉದ್ಯಾವರ) ಹೊಳೆಯ ದಂಡೆಯಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಆಲುಪರ ಆಳ್ವಿಕೆಯಲ್ಲಿ ಆರಂಭಿಕ ರಾಜಧಾನಿಯಾಗಿ ಮೆರೆದ ಐತಿಹಾಸಿಕ ಸ್ಥಳ. ಮಿಗಿಲಾಗಿ ಕ್ರಿ.ಪೂ.೩೦೦ರಷ್ಟು ಹಿಂದೆಯೇ ಜನವಸತಿಯಿಂದ ಕೂಡಿದ್ದ ಪ್ರಮುಖ ಸ್ಥಳ ಇದಾಗಿದ್ದು ದೂರದ ಮೆಡಿಟರೇನಿಯನ್ ಪ್ರದೇಶದ ಜನರೊಂದಿಗೆ ಸಾಗರೋತ್ತರ ಸಂಪರ್ಕವನ್ನು ಕ್ರಿ.ಶ.ದ ಆರಂಭದಿಂದಲೂ ಹೊಂದಿದ್ದ ವಿಷಯ ೧೯೬೮ರ ಉತ್ಖನನದಿಂದಾಗಿ ಮನವರಿಕೆಯಾಗಿರುವ ಅಂಶವನ್ನು ಪುರಾತತ್ವಜ್ಞರು ಈಗಾಗಲೇ ಮುಂದಿಟ್ಟಿದ್ದಾರೆ. ಪ್ರಾಚೀನ ಶಾಸನಗಳಲ್ಲಿ ಉದಯಪುರ, ಉದೇವುರ ಎಂದೇ ಉಲ್ಲೇಖಿತಗೊಂಡಿರುವ ಇದು, ಆಲುಪರಸರ ಆಳ್ವಿಕೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದು, ಅವರ ರಾಜಧಾನಿ ಪಟ್ಟಣವೂ ಆಗಿತ್ತು. ಆದರೆ ಇಂದು ಅದರ ಕುರುಹಾಗಿ ಶಾಸನ–ವೀರಗಲ್ಲುಗಳಷ್ಟೇ ಉಳಿದಿವೆ. ಪ್ರಾಚೀನ ದೇವಾಲಯ, ಮಸೀದಿ–ದರ್ಗಾ, ಇಗರ್ಜಿಗಳನ್ನುಳ್ಳ ಈ ಊರು, ಸ್ಥಳೀಯವಾಗಿ ನಾರಾಯಣಚಾರ್ಯರು ೧೮೮೭ರಲ್ಲಿ ಪ್ರಾರಂಭಿಸಿದ ಉದ್ಯಾವರ ಪಂಚಾಂಗದಿಂದಾಗಿಯೂ ಪ್ರಸಿದ್ಧಿಯಲ್ಲಿದೆ. ಇಲ್ಲಿಂದ ಈವರೆಗೆ ೧೮ ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಆಲುಪರಸರಿಗೆ ಸೇರಿದ ಆರು ವೀರಗಲ್ಲುಗಳು ಲಭಿಸಿದ್ದು, ಅವರ ಅಂತಃಕಲಹದ ಬಗ್ಗೆ ಸುಳಿವನ್ನು ನೀಡುತ್ತಿದ್ದು, ರಣಸಾಗರ ಶ್ವೇತವಾಹನ, ಮಾರಮ್ಮ ಹಾಗೂ ಪೃಥ್ವಿಸಾಗರರ ಉಲ್ಲೇಖವನ್ನೂ ಹೊಂದಿವೆ. ಸುಮಾರು ೧೦ನೆಯ ಶತಮಾನದ ಶಾಸನವೊಂದರಲ್ಲಿ ಶಂಭುಲಿಂಗ ದೇವರನ್ನು ಚೆಂಬುಕಲ್ಲ ಭಟ್ಟಾರಕನೆಂದೇ ಹೆಸರಿಸಲಾಗಿದೆ.

ಉದ್ಯಾವರಕ್ಕೆ ಸುಮಾರು ಎರಡು ಕಿ.ಮೀ. ಅಂತರದಲ್ಲಿರುವ ಚೆಂಬು(ಶಂಭು)ಕಲ್ಲು ಬೆಟ್ಟದ ಮೇಲೆ ಮಾರ್ಕಂಡೇಯ ಪ್ರತಿಷ್ಠಿತ ಶಿವಲಿಂಗವಿದ್ದು, ಅದನ್ನು ಶಂಭುಶೈಲೇಶ್ವರನೆಂದು ಕರೆಯಲಾಗುತ್ತಿದ್ದು, ಐತಿಹಾಸಿಕವಾಗಿ ಅದನ್ನು ಸುಮಾರು ಐದನೆಯ ಶತಮಾನಕ್ಕೆ ಗುರುತಿಸಬಹುದೆಂದು ಹೇಳಲಾಗುತ್ತದೆ. ಪ್ರಾಚೀನ ಆಲುಪ ಶಾಸನಗಳಲ್ಲೂ ಇದರ ಉಲ್ಲೇಖವಿದ್ದು, ಜಿಲ್ಲೆಯ ಪ್ರಾಚೀನ ಶಿವಾಲಯ ಎಂಬ ಹೆಗ್ಗಳಿಕೆ ಇದಕ್ಕೆ ಸಲ್ಲುತ್ತದೆಂಬ ಅಭಿಪ್ರಾಯವೂ ಇದೆ. ಈ ಗುಡಿಯ ಮಗ್ಗುಲಲ್ಲೇ ಇರುವ ಪ್ರಸನ್ನ ಸೋಮೇಶ್ವರ ಗುಡಿಯು ಗಜಪೃಷ್ಠಾಕಾರದ ರಚನೆಯಾಗಿದ್ದು, ಮೂಲಲಿಂಗವನ್ನು ನೂತನವಾಗಿ ಬದಲಾಯಿಸಲಾಗಿದೆ. ಈ ಬೆಟ್ಟದ ಸುತ್ತ ಸಿದ್ಧ–ಕನ್ಯಾ–ಹೇರಂಬ–ತೀರ್ಥಗಳಿವೆ. ಇಲ್ಲಿಯ ಶಂಭುಲಿಂಗನ ಗುಡಿಯ ಬಳಿಯ ಇಮ್ಮಡಿ ದೇವರಾಯನ ಕಾಲದ ೧೪೨೯ರ ಶಾಸನದಲ್ಲಿ ವೀರಭದ್ರ ದೇವರ ಉಲ್ಲೇಖವಿದ್ದು, ಕೃಷ್ಣದೇವರಾಯನ ಕಾಲದ ಇನ್ನೊಂದು ಶಾಸನದಲ್ಲಿ ವೀರಭದ್ರ–ವಿನಾಯಕ ದೇವರ ನಂದಾದೀಪಕ್ಕೆಂದು ೨೮ ಮೂಡೆ ಅಕ್ಕಿಯನ್ನು ದತ್ತಿ ಬಿಟ್ಟ ಉಲ್ಲೇಖವಿದೆ. ಬೆಟ್ಟದ ಬುಡದಲ್ಲಿ ವೀರಭದ್ರ ದುರ್ಗಾಪರಮೇಶ್ವರಿಯರನ್ನೊಳಗೊಂಡಂತೆ ಭೂತಾಲಯಗಳ ಸಮೂಹವಿದೆ. ಅಲ್ಲಿಯ ಮೂರ್ತಿಗಳೂ ಪೊಳಲಿಯಂತೆಯೇ ಮೃಣ್ಮಯಮೂರ್ತಿಗಳಾಗಿದ್ದು, ಗರ್ಭಗುಡಿಯ ಗೋಡೆಗೇ ಹೊಂದಿಕೊಂಡಂತೆ ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿಯರು ಗದ್ದುಗೆಯ ಮೇಲೆ ಆಸೀನರಾಗಿದ್ದು ಕ್ರಮವಾಗಿ ವೃಷಭ, ಗರುಡ ಹಾಗೂ ಹಂಸವಾಹಿನಿಯರಾಗಿದ್ದಾರೆ. ಅಲ್ಲೇ ಪ್ರತ್ಯೇಕವಾಗಿ ದ್ವಾದಶಭುಜ ವೀರಭದ್ರನ ಚಂದನದ ಮೂರ್ತಿಯಿದೆ. ಮಕರಮಾಸದಲ್ಲಿ ಜರುಗುವ ಅವನ ಜಾತ್ರೆಯಲ್ಲಿ ನಡೆಯುವ 'ಕಲ್ಲೊಡೋತ್ಸವ' ವಿಶೇಷವಾಗಿರುತ್ತಾರೆ. ಗುಡಿಯ ಹೊರ ಆವರಣದಲ್ಲಿ ಭದ್ರಕಾಳಿಯ ಮೃಣ್ಮಯಮೂರ್ತಿ ಇದ್ದು, ಅಮೃತ ಸೇವೆಯ ಭಾಗವಾಗಿ ಹರಕೆ ಹೊತ್ತ ಭಕ್ತರು, ಅವಳ ಮುಂದಿರುವ ಕೊಳಗ ಗಾತ್ರದ ಗುಳಿಯಲ್ಲಿ ಕಳ್ಳನ್ನು (ಸರಾಯಿ) ಅರ್ಪಿಸುತ್ತಾರೆ. ಇವಳಿಗೆ ಜಾತ್ರೆ ಕಾಲದಲ್ಲಿ ಹಿಂದೆ ಕಳಿಕಲ್ಲಾಡ ಎಂಬ ಸೇವೆಯೇ ನಡೆಯುತ್ತಿದ್ದು, ಆಗ ಬೀದಿಯಲ್ಲಿ ಕಳ್ಳಿನ ಜರಿಯೇ ಹರಿದು ಹೋಗುತ್ತಿತ್ತೆಂದು ತಿಳಿದುಬರುತ್ತದೆ. ಇಲ್ಲಿ ಪಂಜುರ್ಲಿ ಭೂತಸ್ಥಾನವೂ ಇದೆ.

ಉದ್ಯಾವರದ ಸಿದ್ಧಿವಿನಾಯಕನ ಗುಡಿ ಪರಿಸರದಲ್ಲಿ ಇತಿಹಾಸ ಆರಂಭ ಕಾಲದ ಕುರುಹುಗಳಿದ್ದು, ಆ ಗುಡಿಯು ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ದೇವರ

ಜಾತ್ರೆಯು ಮಹಾಶಿವರಾತ್ರಿಯಾದ ಏಳನೆಯ ದಿನದಂದು ಜರುಗುವ ರಥೋತ್ಸವದೊಂದಿಗೆ ಉತ್ತುಂಗಕ್ಕೇರುತ್ತಿದ್ದು, ಅವಭೃತಕ್ಕೆ ವಿನಾಯಕನನ್ನು ಕಡೆಕಾರು ಗ್ರಾಮದ ಕೆರೆಗೆ ಕರೆದೊಯ್ಯುವ ಸಂಪ್ರದಾಯವಿದೆ. ಇಲ್ಲಿ ದೇವರಿಗೆ ಚೌತಿಯಂದು ನಡೆಯುವ ದೋಣಿಪಂಚಕಜ್ಜಾಯ ಸೇವೆಗೆಂದೇ ಮೊದಲಿದ್ದ ಮರದ ದೋಣಿಗೆ ಬದಲು ಸ್ಟೀಲ್ ದೋಣಿಯೊಂದನ್ನು ಈಗ ಬಳಸಲಾಗುತ್ತಿದೆ. ಉದ್ಯಾವರದಲ್ಲಿರುವ ಗೌಡಸಾರಸ್ವತರ ವೀರವಿಠಲ ದೇವಾಲಯವೂ ಆಕರ್ಷಕವಾಗಿದೆ. ಉಳಿದಂತೆ ಸಂಪಿಗೆನಗರದಲ್ಲಿ ದತ್ತಾತ್ರೇಯ ಗುಡಿ, ಅಣ್ಣಾಚಾರ್ಯರ ಮಠ ಹಾಗೂ ಸೋದೆ ಶಾಖಾ ಮಠಗಳಿದ್ದು, ಮುಸ್ಲಿಮರ ಸಿದ್ಧಿಕ್ ಎ ಅಕ್ಬರ್ ಮಸೀದಿ ಹಾಗೂ ಕ್ರೈಸ್ತರ ಸಂತ ಫ್ರಾನ್ಸಿಸ್ ಕ್ಸೇವಿಯರ್ ಇಗರ್ಜಿ ಮುಂತಾದವುಗಳಿವೆ. ಸಮೀಪದ ಕುತ್ಪಾಡಿ ಗ್ರಾಮದ ಮಾಂಗೋಡು ಸುಬ್ರಹ್ಮಣ್ಯಗುಡಿ ಪ್ರಮುಖವಾಗಿದ್ದು, ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ.

**ಉಪ್ಪಿನಕುದ್ರು** (ಜನಸಂಖ್ಯೆ:೨,೫೩೮) : ತಾಲೂಕು ಕೇಂದ್ರ ಕುಂದಾಪುರದಿಂದ ಮೂರು ಕಿ.ಮೀ. ಉತ್ತರಕ್ಕೆ ಇರುವ ಇದು ಗಂಗೊಳ್ಳಿ ನದಿಯಿಂದ ಆವೃತವಾಗಿರುವ ದ್ವೀಪ. ಕೆಳದಿ ನಾಯಕರ ಕಾಲದಲ್ಲಿ ಉಪ್ಪನ್ನು ಇಲ್ಲಿಂದ ಬಿದನೂರು ಮುಂತಾದ ಸ್ಥಳಗಳಿಗೆ ರಫ್ತು ಮಾಡಲಾಗುತ್ತಿತ್ತು. ಪ್ರಾಚೀನ ಕಾಲಕ್ಕೆ ಸೇರಿದ ವಾಸುದೇವ, ಗೋಪಾಲಕೃಷ್ಣ, ಗಣಪತಿ, ಬ್ರಹ್ಮದೇವ, ನರಸಿಂಹ ಮುಂತಾದ ಕಿರುಗುಡಿಗಳು ಇಲ್ಲಿವೆ. ಶಂಖ, ಕಪ್ಪೆಚಿಪ್ಪು, ಕವಡೆ, ಮುಂತಾದವು ಇಲ್ಲಿ ಯಥೇಚ್ಛವಾಗಿ ಲಭಿಸುತ್ತವೆ.

**ಉಪ್ಪುಂದ** (ಜನಸಂಖ್ಯೆ: ೬,೨೪೩): ತಾಲೂಕು ಕೇಂದ್ರ ಕುಂದಾಪುರದಿಂದ ೨೮ ಕಿ.ಮೀ. ಉತ್ತರಕ್ಕೆ ಸಮುದ್ರತೀರದಲ್ಲಿರುವ ಊರು. ಪ್ರಾಚೀನ ಶಾಸನಗಳಲ್ಲಿ ಉಪ್ಪುಗುಂದ ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿರುವ ಪುರಾತನ ದುರ್ಗಾಪರಮೇಶ್ವರಿ ಗುಡಿ ಹಾಗೂ ಅಲ್ಲಿರುವ ಶಾಸನಗಳಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿಯ ೧೩೧೭, ೧೩೭೭, ೧೪೪೬, ೧೪೮೨, ೧೪೫೧ರ ಶಾಸನಗಳಲ್ಲಿ ದುರ್ಗಾಪರಮೇಶ್ವರಿಗೆ ನೀಡಿದ ದತ್ತಿಯ ವಿವರ ಲಭಿಸುತ್ತಿದೆ. ಊರ ಸಮುದ್ರ ತೀರದಲ್ಲಿರುವ ತೆಂಗಿನ ತೋಪು (ಅಮ್ಮನವರ ತಪ್ಪಲು), ಕೊಲ್ಲೂರು ಮೂಕಾಂಬಿಕೆಯ ಕೃಪೆಗೆ ಒಳಪಟ್ಟಿದ್ದು, ಇಲ್ಲಿರುವ ಕೊಲ್ಲೂರಮ್ಮನ ಕಾಯಿ ಭಂಡಾರಕ್ಕೆ ಭಕ್ತರಿಂದ ಸಲ್ಲಿಸಲ್ಪಟ್ಟ ತೆಂಗಿನಕಾಯಿಗಳನ್ನು ಕೊಲ್ಲೂರಿನ ದೇವಸ್ಥಾನಕ್ಕೆ ಮುಟ್ಟಿಸುವ ವ್ಯವಸ್ಥೆ ಈಗಲೂ ನಡೆದುಕೊಂಡು ಬಂದಿದೆ. ಮೀನುಗಾರಿಕೆ ಸ್ಥಳೀಯರ ಪ್ರಮುಖ ಉದ್ಯಮವಾಗಿದ್ದು, ಮೀನುಗಾರರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇಲ್ಲಿಯ ಶ್ರೀದುರ್ಗಾಂಬಿಕಾ ಕೃಪಾಶ್ರಿತ ಯಕ್ಷಗಾನ ಬೊಂಬೆಯಾಟ ಮಂಡಳಿಯು ಹಲವಾರು ಪ್ರಯೋಗಗಳ ಮೂಲಕ ಹೆಚ್ಚು ಪ್ರಸಿದ್ಧವಾಗುತ್ತಿದ್ದು, ಸಾಕ್ಷರತಾ ಆಂದೋಲನಕ್ಕೂ ಇದನ್ನು ಮಾಧ್ಯಮವಾಗಿ ಬಳಸಿಕೊಳ್ಳಲಾಗುತ್ತಿದೆ.

**ಉಳಿಯಾರಗೋಳಿ** (ಜನಸಂಖ್ಯೆ: ೫,೧೬೩): ಉಡುಪಿ ಪಟ್ಟಣದಿಂದ ೧೦ ಕಿ.ಮೀ ದೂರದಲ್ಲಿರುವ ಈ ಗ್ರಾಮವು ಅಲ್ಲಿರುವ ದಂಡತೀರ್ಥಮಠದಿಂದಾಗಿ ಪ್ರಸಿದ್ಧವಾಗಿದೆ. ದಂಡತೀರ್ಥ ಸರೋವರದ ಬಳಿಯಿರುವ ದಂಡತೀರ್ಥಮಠದಲ್ಲಿ ಮುಖ್ಯ ಪ್ರಾಣದೇವರ ಗುಡಿಯೂ ಇದೆ. ಮಧ್ವಾಚಾರ್ಯರಿಗಿಂತಲೂ ಪೂರ್ವಕಾಲಕ್ಕೆ ಸೇರಿದ ಈ ಮಠವು ಮಹತ್ವದ್ದಾಗಿದ್ದು, ಉಡುಪಿಯ ಶ್ರೀ ಕೃಷ್ಣಮಠದ ಪರ್ಯಾಯ ಪೀಠಾರೋಹಣಕ್ಕೆ ಮುನ್ನ ಪೀಠಾರೋಹಣ ಮಾಡುವ ಯತಿಗಳು ಇಲ್ಲಿಗೆ ಬಂದು ದಂಡತೀರ್ಥದಲ್ಲಿ ಮಿಂದು ಪಟ್ಟಸ್ನಾನ ಪೂರೈಸಿಕೊಂಡು ಹೋಗುವ ಕಟ್ಟಳೆಯಿದೆ. ಆಚಾರ್ಯ ಮಧ್ವರು ಇಲ್ಲೇ ಸ್ವಲ್ಪಕಾಲ ವಿದ್ಯಾರ್ಜನೆ ಮಾಡಿದ್ದು, ಆ ಸಂದರ್ಭದಲ್ಲಿ ಬಾಲಕ ಮಧ್ವರು ಗುರುಗಳ ಜೀವನೋಪಾಯಕ್ಕೆ ನೆರವಾಗಲೆಂದು ತಮ್ಮ ಪಾಶದಂಡದಿಂದ ಈ ಸರೋವರದೊಳಗೊಂದು ರೇಖೆ ಎಳೆದು ಮೇಲೇರಿ ಬರುತ್ತಿದ್ದಂತೆ, ಜಲಾಶಯ ಉಕ್ಕಿ ಹರಿದು ಜಲಸಮೃದ್ಧಿವುಂಟಾದ ಕಾರಣ ಇದಕ್ಕೆ ದಂಡತೀರ್ಥ ಎಂಬ ಹೆಸರು ಬಂದಿದೆ. ಮಠದಲ್ಲಿರುವ ಸಿಂಹಾಸನದ ಮೇಲೆ ಆದಿಮಠದ ಸೀತಾರಾಮಲಕ್ಷ್ಮಣ ಮೂರ್ತಿ ಇದ್ದು, ಮಧ್ವಾಚಾರ್ಯರು ಈ ಮಠಕ್ಕೆ ನೀಡಿದ ಕುಂಜಿ ಗೋಪಾಲಕೃಷ್ಣ ಶಿಲ್ಪದ ಎರಡು ಕೈಯಲ್ಲೂ ಬೆಣ್ಣೆ ಮುದ್ದೆ ಇದೆ.

**ಎ(ಯ)ರ್ಮಾಳ :** ಉಡುಪಿ ಪಟ್ಟಣದಿಂದ ೧೯ ಕಿ.ಮೀ. ದೂರದಲ್ಲಿರುವ ಎರ್ಮಾಳವು ಹಿಂದೆ ಬಡ ಮತ್ತು ತೆಂಕು ಎಂಬ ಎರಡು ಗ್ರಾಮಗಳನ್ನು ಒಳಗೊಂಡ ಪುಟ್ಟ ಪಾಳೇಪಟ್ಟಾಗಿದ್ದು, ಮಾರಮ್ಮ ಹೆಗ್ಗಡೆಗಳು

ಎಂಬ ಜೈನ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರದ ಸಾಮಂತರಾಗಿದ್ದ ಇವರಲ್ಲಿ ಮಾರಮ್ಮ ಹೆಗ್ಗಡೆ ಎಂಬ ಅರಸನ ಉಲ್ಲೇಖ ೧೪೦೨ರ ಶಾಸನವೊಂದರಲ್ಲಿ ಕಂಡು ಬರುತ್ತದೆ. ಮಹಿಷರೂಪಿ ಅಸುರನನ್ನು ದೇವಿಯು ಕೊಂದುದರಿಂದ ಎರ್ಮಾಳ ಎಂಬ ಹೆಸರು ಈ ಸ್ಥಳಕ್ಕೆ ಬಂದಿದೆ ಎಂದು ಹೇಳಲಾಗುತ್ತದೆ. ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಜನಾರ್ದನ ಗುಡಿ ಮುಂದಿರುವ ೧೪೦೨ರ ಶಾಸನ ಜನಾರ್ದನ ದೇವರ ಪೂಜಾವಿಧಿಯ ನಿರ್ವಹಣೆಗೆಂದು ಗಣಪಯ್ಯನು ಎರ್ಮಾಳು ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೇ, ಅಲ್ಲೇ ಇರುವ ಇನ್ನೊಂದು ಶಾಸನ ದೇವರ ವಿವಿಧ ಸೇವೆ ಹಾಗೂ ಧರ್ಮಸತ್ರಗಳಿಗೆಂದು ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಎರ್ಮಾಳದಲ್ಲಿರುವ ಜನಾರ್ದನ ದೇವಾಲಯವು ತೆಂಕ-ಬಡ ಗ್ರಾಮಗಳ ಸಂಗಮ ಸ್ಥಳದಲ್ಲಿದೆ. ಇದನ್ನು ಮಧ್ವಾಚಾರ್ಯರು ಸ್ಥಾಪಿಸಿದ್ದೆಂದು ಹೇಳಲಾಗುತ್ತದೆ. ಬದಿಯಲ್ಲೇ ಆದಿ ಜನಾರ್ದನನ ಶಿಲ್ಪವೂ ಇದೆ. ಅಲ್ಲದೆ ಚಂದ್ರನಾಥ ತೀರ್ಥಂಕರ ಬಸದಿಯೂ ಇಲ್ಲಿದೆ. ವೀರಭದ್ರ ದೇವಾಲಯವೂ ಈ ಊರಿನಲ್ಲಿದೆ. ಅಲ್ಲದೆ ವಿವಿಧ ಕುಟುಂಬಗಳಿಗೆ ಸೇರಿದ ಪ್ರತ್ಯೇಕ ನಾಗಬನಗಳೂ ಇಲ್ಲಿವೆ. ಧನು ಸಂಕ್ರಮಣದ ಐದನೆಯ ದಿನದಂದು ಜನಾರ್ದನನ ವಾರ್ಷಿಕ ರಥೋತ್ಸವವಾಗುತ್ತದೆ.

**ಎಲ್ಲೂರು** (ಜನಸಂಖ್ಯೆ: ೫,೮೪೪)**:** ಉಡುಪಿ ಪಟ್ಟಣದಿಂದ ೧೦ಕಿ.ಮೀ. ಅಂತರದಲ್ಲಿರುವ ಇದು ಅಲ್ಲಿರುವ ಮಹಾತೋಭಾರ ವಿಶ್ವೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಅಲ್ಲದೆ ಎಲ್ಲೂರು ಗ್ರಾಮವು ಕುಂದ ಹೆಗ್ಗಡೆ ಎಂಬ ಅಧಿಪತಿಯ ಆಳ್ವಿಕೆಗೆ ಒಳಪಟ್ಟದ ಅಂಶವು ಸುಮಾರು ೧೬ನೆಯ ಶತಮಾನದ ಶಾಸನದಲ್ಲಿ ದಾಖಲಾಗಿರುವುದನ್ನು ಗುರುರಾಜಭಟ್ಟರು ಈಗಾಗಲೇ ಗುರುತಿಸಿದ್ದಾರೆ. ಆರು ಗ್ರಾಮಗಳಿಗೆ ಸೇರಿದ ಸೀಮೆ ದೇವಾಲಯ ಇದಾಗಿದ್ದು, ಕಾಶಿಕ್ಷೇತ್ರದಿಂದ ವಿಶ್ವೇಶ್ವರನೇ ಯಲ್ಲಾಪುರಕ್ಕೆ ಬಂದು ನೆಲೆಸಿದನೆಂದು ಸ್ಥಳಪುರಾಣ ಹೇಳುತ್ತದೆ. ಅದರಿಂದಾಗಿ ಇದು ದಕ್ಷಿಣಕಾಶಿ ಎಂದು ಪ್ರಸಿದ್ಧಿ ಪಡೆಯಿತೆಂದು ಹೇಳಲಾಗುತ್ತದೆ. ವಾದಿರಾಜರು ಎಲ್ಲೂರಿನ ವಿಶ್ವನಾಥ ನಂದಿಯರನ್ನು ಬಹುವಾಗಿ ಸ್ತುತಿಸಿದ್ದಾರೆ. ಈ ಆಲಯದಲ್ಲಿ ವಿಘ್ನೇಶ್ವರ, ನಂದಿ, ಅನ್ನಪೂರ್ಣ ಹಾಗೂ ಭಾಗೀರಥಿಯರ ಸನ್ನಿಧಿಗಳಿವೆ. ಗುಡಿಗೆ ಸಮೀಪವಿರುವ 'ದೇವರಕಾಡು' ಅರಣ್ಯಪ್ರದೇಶದಲ್ಲಿ ನಡುವೆ ವೀರಭದ್ರನ ಗುಡಿಯಿದೆ. ಈ ಗುಡಿಯ ಬದಿಯಲ್ಲೇ ಗಂಗಾ ಭಾಗೀರಥೀ ಸರೋವರವಿದೆ. ಅಲ್ಲೇ ಶಿವನು ಮೂಡಿದನೆಂದು ಹೇಳಲಾಗುವ ಒಂದು ಗುಹೆಗೂ ಕಾಶಿಕ್ಷೇತ್ರಕ್ಕೂ ಸುರಂಗಮಾರ್ಗವಿದೆ ಎಂಬ ಪ್ರತೀತಿ ಇದೆ. ನಾಗದೇವರು ಹಾಗೂ ಬ್ರಹ್ಮಲಿಂಗಗಳ ಸ್ಥಾನವೂ ಅಲ್ಲಿದೆ. ಸಿಯಾಳ ಅಭಿಷೇಕ ವಿಶ್ವೇಶ್ವರನಿಗೆ ಸಲ್ಲುವ ವಿಶೇಷ ಪೂಜೆಯಾಗಿದ್ದು, ಒಂದು ಮೈಲಿ ಸುತ್ತಳತೆಯಲ್ಲಿ ದೇವರಿಗೆ ಸಿಯಾಳ (ಎಳನೀರು)ವನ್ನು ಅರ್ಪಿಸದೆ ಯಾರೂ ಕುಡಿಯುವಂತಿಲ್ಲ. ಇಲ್ಲಿ ನಡೆಯುವ ಮಹಾಕಾಶಿಪೂಜೆ (೩-೪ ಲಕ್ಷ ರೂ. ವೆಚ್ಚದ್ದು) ಬಹಳ ವಿಶಿಷ್ಟವಾಗಿರುತ್ತದೆ.

**ಕಂದಾವರ** (ಜನಸಂಖ್ಯೆ: ೨,೯೩೭)**:** ಬಸರೂರಿಗೆ ಸುಮಾರು ಮೂರು ಕಿ.ಮೀ.ದೂರದಲ್ಲಿರುವ ಇದನ್ನು ಬಸರೂರಿನಿಂದ ಕಾಲ್ನಡಿಗೆಯಲ್ಲೇ ತಲುಪಬಹುದಾಗಿದೆ. ಹಿಂದೆ, ಅಹಿಚ್ಛತ್ರದಿಂದ ಬಂದ ಬ್ರಾಹ್ಮಣರು ಇಲ್ಲಿ ನೆಲೆಸಿದ ಪರಿಣಾಮವಾಗಿ ರೂಪುಗೊಂಡ ಪ್ರಮುಖ ಅಗ್ರಹಾರವಿದಾಗಿದ್ದು, ಕಂದಾವರಕ್ಕೆ ಸೇರಿದ ಉಳ್ಳೂರಿನ ಸುಬ್ರಹ್ಮಣ್ಯ ದೇವಾಲಯದಿಂದಾಗಿ ಇಂದು ಪ್ರಸಿದ್ಧವಾಗಿದೆ. ದೇವಾಲಯದ ಆವರಣದಲ್ಲೇ ಮಲೆಯಾಳಿ ಬೊಬ್ಬರ್ಯ, ರಕ್ತೇಶ್ವರಿ ಯಕ್ಷಿ, ಕ್ಷೇತ್ರಫಲ, ನಂದಿಗೋಣಾದಿಗಳ ಸ್ಥಾನಗಳಿವೆ. ಇಲ್ಲಿಯ ಸುಬ್ರಹ್ಮಣ್ಯ ದೇವಾಲಯದಲ್ಲಿ ಪ್ರತಿ ಸಂಕ್ರಾಂತಿಯಲ್ಲಿ ನಡೆಯುವ ಮೈದರ್ಶನಕ್ಕೆ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಬರುತ್ತಾರೆ. ಮಕರ ಸಂಕ್ರಾಂತಿಯಾದ ಎರಡು ದಿನಕ್ಕೆ ಇಲ್ಲಿ ರಥೋತ್ಸವವಾಗುತ್ತದೆ. ಮಾರ್ಗಶಿರ ಶುದ್ಧ ಷಷ್ಠಿಯಂದು ಷಷ್ಠಿ ಉತ್ಸವವಿರುತ್ತದೆ. ಆಗ ಭಕ್ತರು ಉರುಳುಸೇವೆ, ಮಡೆಸೇವೆಗಳನ್ನು ನೆರವೇರಿಸುತ್ತಾರೆ.

**ಕಟಪ್ಪಾಡಿ:** ಉಡುಪಿ ಪಟ್ಟಣದಿಂದ ಎರಡೂವರೆ ಕಿ.ಮೀ. ಉತ್ತರಕ್ಕೆ ಇರುವ ಇದು ಮಧ್ಯಯುಗದಲ್ಲಿ ಪಾಳೇಗಾರರ ಆಡಳಿತಕ್ಕೆ ಒಳಪಟ್ಟಿದ್ದ ರಾಜಧಾನಿ ಪಟ್ಟಣವಾಗಿತ್ತು. ಇಂದು ಮಟ್ಟು, ಏಣಗುಡ್ಡೆ, ಕೋಟೆ, ಮೂಡಬೆಟ್ಟುಗಳ ಮಧ್ಯದಲ್ಲಿ ಬೆಳೆದಿರುವ ಪೇಟೆಯಾಗಿದೆ. ಇಲ್ಲಿರುವ ವೆಂಕಟರಮಣ ದೇವಾಲಯವು

ಗೌಡಸಾರಸ್ವತ ಸಮಾಜಕ್ಕೆ ಸೇರಿದ್ದು ಭವ್ಯವಾಗಿದೆ. ಸುಮಾರು ೧೬ನೆಯ ಶತಮಾನಕ್ಕೆ ಸೇರಿದ ಈ ದೇವಾಲಯವನ್ನು ೧೮೧೬ರಲ್ಲಿ ಪುನರ್ ಜೀರ್ಣೋದ್ಧಾರ ಮಾಡಲಾಗಿದೆ. ಮಟ್ಟುವಿನಲ್ಲಿರುವ ಜನಾರ್ದನ ದೇವಾಲಯವು ಸುಮಾರು ೧೩ನೇ ಶತಮಾನದ ರಚನೆಯಾಗಿದ್ದು, ಗರ್ಭಗೃಹದಲ್ಲಿರುವ ಜನಾರ್ದನ ಮೂರ್ತಿಯು ಆಕರ್ಷಕವಾಗಿದೆ. ಇದೇ ಕಾಲಾವಧಿಗೆ ಸೇರಿದ ದುರ್ಗಾ ಹಾಗೂ ಮಹಾದೇವ ದೇವಾಲಯಗಳು ಏಣಗುಡ್ಡೆ ಪ್ರದೇಶದಲ್ಲಿದ್ದು, ಉಲ್ಲೇಖಾರ್ಹವಾಗಿವೆ. ಬಿಲ್ಲವ ಸಮಾಜದ ವಿಶ್ವನಾಥ ದೇವಾಲಯ ಹಾಗೂ ನಾರಾಯಣ ಗುರುಗಳ ಅಧ್ಯಾತ್ಮಿಕ ನಿಲಯಗಳೂ ಇಲ್ಲಿವೆ. ಅಲ್ಲದೆ ಕಾಳಿಕಾಂಬಿಕಾ ವಿಶ್ವಕರ್ಮೇಶ್ವರ ದೇವಾಲಯವು ಏಣಗುಡ್ಡೆಯಲ್ಲಿದೆ. ಮಿಗಿಲಾಗಿ ಆನೆಗುಂದಿ ಪೀಠದ ಗುರುಗಳಾಗಿದ್ದ ನಾಗೇಂದ್ರ ಸ್ವಾಮಿಗಳು ಇಲ್ಲೇ ಗತಿಸಿದ್ದು ಅವರ ಸಮಾಧಿಯೂ ಇಲ್ಲಿದೆ. ವೀರಸ್ತಂಭ ದುರ್ಗಾಪರಮೇಶ್ವರಿ ಎಂಬ ದೇವಾಲಯವೂ ಇಲ್ಲಿದೆ. ಅಲ್ಲದೇ ನಾಯಕ ಆಯುರ್ವೇದ ಆಶ್ರಮ ಖ್ಯಾತಿ ಪಡೆದಿದ್ದು, ಪಾಂಗಳ ಲಕ್ಷ್ಮೀನಾರಾಯಣ ನಾಯಕರು ಅದರ ಮೂಲ ಪುರುಷರಾಗಿದ್ದಾರೆ. ಇಲ್ಲಿಯ ಮೆಟ್ಟುಗುಳ್ಳ ಗುಂಡು ಬದನೆಕಾಯಿ ಕೃಷ್ಣನಿಗೆ ಅರ್ಪಿಸಲ್ಪಡುತ್ತಿದ್ದು, ವಾದಿರಾಜ್ಯಗುಳ್ಳ ಎಂದೂ ಪ್ರಸಿದ್ಧಿ ಪಡೆದಿದೆ.

**ಕನ್ಯಾನ** (ಜನಸಂಖ್ಯೆ: ೧೭೨೪): ತಾಲೂಕು ಕೇಂದ್ರ ಕುಂದಾಪುರಕ್ಕೆ ಅನತಿ ದೂರದಲ್ಲಿರುವ ಪ್ರಮುಖ ಚಾರಿತ್ರಿಕ ಸ್ಥಳ. ಪ್ರಾಚೀನ ಶಾಸನಗಳಲ್ಲಿ ಕನ್ಯಾನ, ರಾಜಾಡಿಕನ್ಯಾನ ಎಂದೇ ಉಲ್ಲೇಖಿತಗೊಂಡಿದ್ದು, ಹಿಂದೆ ಇದು ರಾಜಾವಾಡಿಯಾಗಿದ್ದ ಅಂಶ ಅದರಿಂದ ವೇದ್ಯವಾಗುತ್ತದೆ. ಇಲ್ಲಿಯ ಮಾರಮ್ಮನಗುಡಿ ಗದ್ದೆಯ ೧೩೪೮ರ ಶಾಸನದಲ್ಲಿ ಕಿಕ್ಕಾಯಿತಾಯಿ ಹಾಗೂ ಕುಮಾರ ದೇವಪ್ಪರು ದತ್ತಿ ಬಿಟ್ಟ ವಿವರವಿದೆ. ಕನ್ಯಾನದ ಮಹಾಜಗತ್ತಿಗೆ ರಾಜಾಡಿಬೆಲ್ಲತೂರ ಜನನಿಗಳು ಕೊಟ್ಟ ದತ್ತಿಯನ್ನು ೧೩೮೪ರ ಶಾಸನ ತಿಳಿಸಿದರೆ, ೧೪೯೮ರ ಇನ್ನೊಂದು ಶಾಸನ ತ್ರುಟಿತವಾಗಿರುವುದರಿಂದ ವಿವರ ಹಾಳಾಗಿದೆ. ಇಲ್ಲಿಯ ೧೪೭೪ರ ಶಾಸನದಲ್ಲಿ ಪಡುವಕೆರೆಯ ಮಹಾದೇವರ ೩೦ ದಿನದ ಪೂಜಾವ್ಯವಸ್ಥೆಯ ವಿವರವಿದೆ. ಗೋಪಾಲಕೃಷ್ಣಗುಡಿ ಮುಂದಿರುವ ೧೪೫೧ರ ಶಾಸನ ಹಿರಿಯರ ಮನೆ ಕಾಮವಟ್ಟದ ವಲ್ಲಭದೇವರಿಗೆ ರಾಜಾಡಿ ಕನ್ಯಾನದ ೧೨ ಮಂದಿ ಜನನಿ ಇಬ್ಬರು ಹೊರಗಿನ ಹೆಗ್ಗಡೆ ಹಾಗೂ ೫೨ ಮಂದಿ ಜಗತ್ತು ತಮ್ಮಲ್ಲಿ ಏಕಸ್ಥರಾಗಿ ಊರ ಕುಳಾದಾಯ ೮೪೦ (ಕಾಟಿಗದ್ಯಾಣ ೭೪೦ ಹಾಗೂ ಉಪಚಾರದ ಕಾಟಿಗದ್ಯಾಣ ೧೦೦)ರಲ್ಲಿ ಉಡುಗೊರೆ ಉತ್ಸವ ಕಾಟಿಗದ್ಯಾಣ ೮೦ಕಳೆದು ಉಳಿದ ೭೬೦ ಕಾಟಿಗದ್ಯಾಣವನ್ನು ಅವರಿಗೆ ದತ್ತಿಬಿಟ್ಟಿದ್ದನ್ನು ದಾಖಲಿಸಿದೆ.

**ಕಮಲಶಿಲೆ** (ಜನಸಂಖ್ಯೆ: ೧,೩೯೨): ತಾಲೂಕು ಕೇಂದ್ರ ಕುಂದಾಪುರದಿಂದ ೪೪ ಕಿ.ಮೀ ಈಶಾನ್ಯಕ್ಕೆ ಇರುವ ಪುರಾತನ ಶಕ್ತಿ ಆರಾಧನಾ ಕೇಂದ್ರ. ಶಂಕರ ನಾರಾಯಣಕ್ಕೆ ಕೇವಲ ಮೂರು ಕಿ.ಮೀ. ದೂರದಲ್ಲಿದ್ದು ಅಲ್ಲಿಯ ಬ್ರಾಹ್ಮಿ–ದುರ್ಗಾಪರಮೇಶ್ವರಿಯರ ದೇವಾಲಯವು, ಕುಬ್ಜ ಹಾಗೂ ನಾಗತೀರ್ಥಗಳ ಸಂಗಮ ಸ್ಥಳದಲ್ಲಿದ್ದು, ದೇವಿಯರು ಶಿವಲಿಂಗ ರೂಪಿಣಿಯರಾಗಿ ಆರಾಧಿಸಲ್ಪಡುತ್ತಿದ್ದಾರೆ. ಇಲ್ಲಿ ದೇವಿಯು ಬ್ರಾಹ್ಮಿ–ವೈಷ್ಣವಿ–ಮಹೇಶ್ವರಿಯರ ತ್ರಿಶಕ್ತಿ ಸಂಗಮವಾಗಿ ಆದಿಶಕ್ತಿ ಎಂದೂ ಕರೆಯಲ್ಪಟ್ಟಿದ್ದಾಳೆ. ಖರಾಸುರ–ರಟ್ಟಾಸುರರನ್ನು ಸಂಹರಿಸುವಲ್ಲಿ ಶಂಕರನಾರಾಯಣರಿಗೆ ಈ ದೇವಿ ನೆರವಾದಳೆಂದೂ, ಅಲ್ಲದೆ, ಕ್ರೂರರಾಕ್ಷಸನನ್ನು ತಾನೇ ಸಂಹರಿಸಿದಳೆಂದೂ ಸ್ಥಳ ಪುರಾಣದಲ್ಲಿ ಹೇಳಲಾಗುತ್ತದೆ. ಇವಳು ಇಲ್ಲಿ ಕಮಲಾಕಾರದ ಶಿಲೆಯ ಮೇಲೆ ಸ್ವಯಂಭೂಲಿಂಗವಾಗಿ ಮೂಡಿರುವುದರಿಂದ ಇದು ಕಮಲಶಿಲೆ ಎಂದು ಪ್ರಸಿದ್ಧಿಗೆ ಬಂದಿತೆಂಬ ಅಭಿಪ್ರಾಯವಿದೆ. ಆದರೆ ಪೌರಾಣಿಕವಾಗಿ ಕಂಜಶಿಲಾಪುರ ಎಂದು ಕರೆಯಲ್ಪಡುವ ಸ್ಥಳ ಇದಾಗಿದ್ದು, ಸನಿಹದಲ್ಲೇ ಇರುವ ಸುಪಾರ್ಶ್ವಗುಹೆ, ಈ ದೇವರ ಆದಿಸ್ಥಾನವೆಂಬ ಅಭಿಪ್ರಾಯವಿದ್ದು, ನಾಗತೀರ್ಥದ ಉಗಮ ಸ್ಥಾನ ಇದೆಂದೂ ಹೇಳಲಾಗುತ್ತದೆ.

ಈ ದೇವಾಲಯವು ಪ್ರಕೃತಿಯ ಮಡಿಲಲ್ಲಿದ್ದು, ಗುಡಿಯ ಹಿಂಬದಿಯಲ್ಲಿ ಬೆಟ್ಟವಿದೆ. ಗರ್ಭಗೃಹದಲ್ಲಿ ಸ್ವಯಂಭೂಲಿಂಗವಿದ್ದು, ಹಿಂಬದಿಯಲ್ಲಿ ಪದ್ಮಾಸೀನ ದೇವಿಯ ಪಂಚಲೋಹದ ಉತ್ಸವಮೂರ್ತಿಯೂ ಇದೆ. ಶಿವಲಿಂಗ–ಪಾಣಿಪೀಠಗಳನ್ನು ಮೃತ್ತಿಕಾಷ್ಟಬಂಧದಿಂದ ಪ್ರತೀ ಏಕಾದಶಿಯಲ್ಲಿ ಜೋಡಿಸಲಾಗುತ್ತಿದ್ದು, ಅದನ್ನೇ ಪ್ರಸಾದವಾಗಿ ಭಕ್ತರಿಗೆ ನೀಡಲಾಗುತ್ತದೆ. ಇತ್ತೀಚೆಗೆ ಶೃಂಗೇರಿಯ ಯತಿಗಳು ಶ್ರೀಚಕ್ರವನ್ನಿಲ್ಲಿ

ಪ್ರತಿಷ್ಠಾಪಿಸಿದ್ದಾರೆ. ಈ ದೇವಿಯ ಆಲಯದಲ್ಲಿ ಬೊಬ್ಬರ್ಯ (ರಾಹುತರಾಯ), ಮುಂಡಂತಾಯ, ವ್ಯಾಘ್ರದೇವರು, ರಕ್ತೇಶ್ವರ, ಹೊಸಮ್ಮ, ಸುಬ್ರಹ್ಮಣ್ಯ, ಈಶ್ವರ, ಗಣಪತಿ ಹಾಗೂ ವೀರಭದ್ರನ ಸನ್ನಿಧಿಗಳಿವೆ. ಇಲ್ಲಿಯ ಸುಬ್ರಹ್ಮಣ್ಯ ದೇವರ ಬಳಿ ಮೂರಾಳೆತ್ತರದ ಹುತ್ತವಿದ್ದು, ಬಳಿಯಿರುವ ವೀರಭದ್ರನ ಕಾಷ್ಠ ಮೂರ್ತಿಯೂ ಆಕರ್ಷಕವಾಗಿದೆ. ದೇವಾಲಯದಿಂದ ಒಂದು ಕಿ.ಮೀ. ಏರು ರಸ್ತೆಯಲ್ಲಿ ಸಾಗಿದರೆ ಎದುರಾಗುವುದೇ ಸುಪಾರ್ಶ್ವಗುಹೆ. ಜಿಲ್ಲೆಯ ಗುಹಾಲಯಗಳಲ್ಲೇ ಅತ್ಯಂತ ವಿಶಾಲವೆಂಬ ಹೆಗ್ಗಳಿಕೆ ಇದರದು. ಗುಹೆಯಲ್ಲಿ ಇಳಿದು ಹೋದರೆ, ಸುಮಾರು ಒಂದು ಫರ್ಲಾಂಗ್ ತಳದಲ್ಲಿ ಗದ್ದುಗೆಯ ಮೇಲೆ ಕಾಳಿ, ಲಕ್ಷ್ಮಿ, ಸರಸ್ವತಿಯರ ಪ್ರತ್ಯೇಕ ಲಿಂಗಗಳಿರುವುದು ಗೋಚರವಾಗುತ್ತದೆ. ಬಳಿಯಲ್ಲೆ ಕ್ಷೇತ್ರಪಾಲ ಭೈರವ (ಸಿದ್ಧೇಶ್ವರ) ನಿದ್ದಾನೆ. ಅಲ್ಲಿಂದ ಮತ್ತೂ ಕೆಳಕ್ಕೆ ಹೋದರೆ ನಾಗತೀರ್ಥದ ಉಗಮಸ್ಥಾನವನ್ನು ತಲುಪಬಹುದಾಗಿದೆ. ಈ ಗುಹೆಯಿರುವ ಸ್ಥಳದಲ್ಲಿ ಹುಲಿಚಾವಡಿ ಮುಂತಾದ ಪ್ರಾಚೀನ ಕಟ್ಟಡಾವಶೇಷಗಳಿವೆ. ಚೈತ್ರ ಮಾಸದ ಶುಕ್ಲಪಕ್ಷದ ಮೂಲಾ ನಕ್ಷತ್ರದಂದು ನಡೆಯುವ ವಾರ್ಷಿಕ ಜಾತ್ರೆಯಲ್ಲಿ ದೇವಿಯ ರಥೋತ್ಸವವಾಗುತ್ತದೆ. ಆ ಸಂದರ್ಭದಲ್ಲಿ ಬಳಸುವ ಸ್ಕಂದನ ಮಹಾರಥವು ಪೌರಾಣಿಕ ದೃಶ್ಯಾವಳಿಗಳಿಂದಾಗಿ ಆಕರ್ಷಕವಾಗಿದೆ. ಅಲ್ಲದೇ ವಿಜಯದಶಮಿಯ ಸಂದರ್ಭದಲ್ಲಿ ಚಿಕ್ಕ ರಥೋತ್ಸವವೂ ಇರುತ್ತದೆ. ಯಕ್ಷಗಾನ ಪ್ರಿಯೆಯಾದ ಈ ದೇವಿಯ ಹೆಸರಿನಲ್ಲೇ 'ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ' ಎಂಬ ಯಕ್ಷಗಾನ ಮೇಳವೂ ಇದೆ.

**ಕಲ್ಯಾಣಪುರ:** ತೊನ್ಸೆಮೂಡು ಕಂದಾಯ ಗ್ರಾಮ (ಜನಸಂಖ್ಯೆ: ೭,೪೯೭)ದ ಉಪಗ್ರಾಮವಾಗಿರುವ ಕಲ್ಯಾಣಪುರವು ತಾಲೂಕು ಕೇಂದ್ರ ಉಡುಪಿಯಿಂದ ಪಶ್ಚಿಮಕ್ಕೆ ಎಂಟು ಕಿ.ಮೀ ದೂರದಲ್ಲಿ ಕಲ್ಯಾಣಪುರ ಹೊಳೆ ಎಂದೂ ರೂಢಿಯಲ್ಲಿ ಕರೆಯುವ ಸ್ವರ್ಣಾನದಿಯ ತೀರದ ಮೇಲಿರುವ ಉಪಗ್ರಾಮ. ತುಳುನಾಡಿನ ಉತ್ತರಗಡಿ ಸ್ವರ್ಣನದಿಯಾಗಿದ್ದು, ಸ್ವರ್ಣನದಿಯ ಉತ್ತರಕ್ಕೆ ಕುಂದಗನ್ನಡ ಭಾಷೆ ರೂಢಿಯಲ್ಲಿದೆ. ವಿಜಯನಗರ ಹಾಗೂ ಕೆಳದಿ ಅರಸರ ಕಾಲದಲ್ಲಿ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದ ಇದು ನಂತರ ಬ್ರಿಟಿಷರ ಆಗಮನದಿಂದಾಗಿ ಕ್ಯಾಥೋಲಿಕ್ ಪಂಥದ ಪ್ರಮುಖ ಕ್ರೈಸ್ತ ಕೇಂದ್ರವಾಗಿ ರೂಪುಗೊಂಡು ಇಂದು ವಿದ್ಯಾ–ಸೇವಾ–ಭಕ್ತಿ ಕೇಂದ್ರಗಳ ತ್ರಿವೇಣಿ ಸಂಗಮವಾಗಿ ಒಡಮೂಡಿದೆ. ಇಲ್ಲಿರುವ ಮಿಲಾಗ್ರಿಸ್ ಇಗರ್ಜಿ, ಸುಮಾರು ೧೬೯೦ರಷ್ಟು ಪ್ರಾಚೀನದ್ದಾಗಿದ್ದು ಭವ್ಯವಾಗಿದೆ. ನಂತರದಲ್ಲಿ ಕ್ಯಾಥೋಲಿಕ್ ನಿರ್ಮಿಸಿಕೊಂಡಿರುವ ಮೌಂಟ್ ರೋಸರಿ ಚರ್ಚ್ (೧೮೩೭) ಕೂಡ ಆಕರ್ಷಕವಾಗಿದೆ. ಅಲ್ಲದೆ ಇಲ್ಲಿ ಗೊರೆಟ್ಟಿ ಆಸ್ಪತ್ರೆ, ಓಜ್ ನಾಮ್ ಹೋಮ್ ವೃದ್ಧಾಶ್ರಮಗಳ ಜೊತೆಗೆ ಕ್ರೈಸ್ತ ಶಾಲಾಕಾಲೇಜುಗಳಿವೆ. ಇತಿಹಾಸ ಸಂಶೋಧಕ ಪಿ. ಗುರುರಾಜಭಟ್ ಮಿಲಾಗ್ರಿಸ್ ಕಾಲೇಜಿನ ಪ್ರಾಚಾರ್ಯರಾಗಿ ಮಾಡಿರುವ ಸೇವೆ, ಕರಾವಳಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಸಂಶೋಧನೆ ಉಲ್ಲೇಖಾರ್ಹವಾಗಿದೆ.

**ಕಾಂತಾವರ** (ಜನಸಂಖ್ಯೆ: ೩,೫೦೪): ತಾಲೂಕು ಕೇಂದ್ರ ಕಾರ್ಕಳದಿಂದ ೧೪ ಕಿ.ಮೀ. ಈಶಾನ್ಯಕ್ಕೆ ಮೂಡಬಿದ್ರಿ ರಸ್ತೆಯಲ್ಲಿ ಸ್ವಲ್ಪ ಒಳಕ್ಕಾದಂತೆ ಇರುವ ಪ್ರಮುಖ ಸ್ಥಳ. ಮಧ್ಯಕಾಲೀನ ಶಾಸನಗಳಲ್ಲಿ ಕಾಂತಾರ ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಕಿನ್ನಿಕ ಹೆಗ್ಗಡೆ ಎಂಬ ಬಲ್ಲಾಳ ಜೈನ ಸಾಮಂತರಸರ ಆಡಳಿತ ಕೇಂದ್ರವಾಗಿ ಮಹತ್ವ ಪಡೆದಿದ್ದು ಬಾರಾಡಿ ಎಂಬಲ್ಲಿ ಅವರ ಅರಮನೆ ಇದೆ. ಇಲ್ಲಿರುವ ಕಾಂತೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. **"ಕಣ್ಣಿದ್ದವರಿಗೆ ಕಾಂತಾವರ, ಕಾಲಿದ್ದವರಿಗೆ ಕಾರಿಂಜಾ"** ಎಂಬ ಗಾದೆಯು ಈ ಭಾಗದಲ್ಲಿ ರೂಢಿಯಲ್ಲಿದೆ. ಇಲ್ಲಿಂದ ಈವರೆಗೆ ಹೊಯ್ಸಳ–ವಿಜಯನಗರ ಹಾಗೂ ಬ್ರಿಟೀಷ್ ಕಂಪೆನಿಯ ಆಡಳಿತಾವಧಿಗೆ ಸೇರಿದ ಏಳು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಮುಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ ಶಾಸನ, ಕಾಂತೇಶ್ವರ ದೇವರ ಗ್ರಾಮದ ನಾಲ್ಕು ಗೃಹಗಳ ನಿರ್ವಹಣೆಗೆಂದು ೧೦೧ ಗದ್ಯಾಣವನ್ನು ದಾನಬಿಟ್ಟ ಅಂಶವನ್ನು ದಾಖಲಿಸಿದರೆ, ವಿಜಯನಗರ ಕಾಲಕ್ಕೆ ಸೇರಿದ ನಾಲ್ಕು ಶಾಸನಗಳು ಈ ದೇಗುಲಕ್ಕೆ ವಿವಿಧ ಅರಸರು ನೀಡಿದ ದತ್ತಿಗಳಾಗಿವೆ. ಇಲ್ಲಿಯ ಫಲಿಮಾರು ಮಠದಲ್ಲಿರುವ ಇಮ್ಮಡಿ ದೇವರಾಯನ ೧೪೩೩ರ ಶಾಸನ ಕಾಂತಾರದ ಬಡಗಣ ಮಠದ ರಾಜರಾಜೇಶ್ವರಿತೀರ್ಥರ

ಭಿಕ್ಷಾಸ್ಥಾನಕ್ಕೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಇಲ್ಲಿಯ ಇನ್ನೊಂದು ಶಾಸನ ಬಾರಕೂರು ಗದ್ಯಾಣದ ಜೊತೆಗೆ 'ಬಾರಕೂರು ತಾರ' ಎಂಬ ಇನ್ನೊಂದು ನಾಣ್ಯವನ್ನು ಉಲ್ಲೇಖಿಸಿರುವುದು ಗಮನಾರ್ಹ. ಕಂಪೆನಿ ಆಡಳಿತಕ್ಕೆ ಸೇರಿದ ೧೮೪೯ರ ಶಾಸನ, ರೇವಣಪ್ಪ ಸಾಹೇಬರ ಕಾಲದಲ್ಲಿ ಈ ಗುಡಿಯ ಶಿಖರಗಳನ್ನು ಜೀರ್ಣೋದ್ಧಾರ ಮಾಡಿಸಿ, ಬ್ರಹ್ಮಕಳಸವನ್ನು ರಾಯನಾರಾಯಣ ತಂತ್ರಿಗಳು ಏರಿಸಿದ ಅಂಶವನ್ನು ದಾಖಲಿಸಿದೆ. ಇಲ್ಲಿಯ ಕಾಂತೇಶ್ವರ ದೇವಾಲಯ ಮೂರು ಅಂತಸ್ತುಗಳನ್ನುಳ್ಳ ಭವ್ಯ ಆಲಯ. ಈ ದೇವಾಲಯವು ವಿಶಾಲವಾಗಿದ್ದು, ಪ್ರಶಾಂತ ವಾತಾವರಣ ಎತ್ತರದ ಧ್ವಜಸ್ತಂಭ–ದೀಪಸ್ತಂಭಗಳಿಂದಾಗಿ ವೀಕ್ಷಕರಿಗೆ ಮುದ ನೀಡುತ್ತದೆ. ಸುಮಾರು ೯–೧೦ನೆಯ ಶತಮಾನದಷ್ಟು ಪುರಾತನವಾದ ಈ ದೇವಾಲಯವು ೯೮೫ ರವರೆಗೆ ಮೂರು ಬಾರಿ ಜೀರ್ಣೋದ್ಧಾರಗೊಂಡಿದೆ ಎಂದು ಎಂ. ಮುಕುಂದಪ್ರಭು ಅಭಿಪ್ರಾಯಪಡುತ್ತಾರೆ. ಮಿಗಿಲಾಗಿ ಕಾಂತಾವರದ ಮೊದಲ ಉಲ್ಲೇಖ ನೆರೆಯ ಬೆಳ್ಮಣ್ಣಿನ ಸುಮಾರು ಎಂಟನೆಯ ಶತಮಾನದ ತಾಮ್ರಶಾಸನದಲ್ಲಿರುವುದು ಉಲ್ಲೇಖಾರ್ಹ.

ಕಾಂತೇಶ್ವರ ದೇವಾಲಯವನ್ನು ಸ್ಥಳೀಯ ಜೈನ ಸಾಮಂತರಸರಾದ ಕಿನ್ನಿಕ ಹೆಗ್ಗಡೆ ವಂಶಸ್ಥರು ನಿರ್ಮಿಸಿದರೆಂಬ ಅಭಿಪ್ರಾಯವಿದೆ. ಗರ್ಭಗೃಹದಲ್ಲಿರುವ ಕಾಂತೇಶ್ವರ ಶಿವಲಿಂಗವು ವಿಶಿಷ್ಟವಾಗಿದೆ. ಪಾಣಿಪೀಠಕ್ಕೆ ಪಂಚಲೋಹವನ್ನು ಎರಕ ಹೊಯ್ದು ಸೇರಿಸಿದಂತೆ ತೋರುವ, ಸುಮಾರು ಮೂರು ಅಡಿ ಎತ್ತರದ ಕಾಂತಿಮಯ ಲಿಂಗ ಅದಾಗಿದ್ದು, ಪಾಣಿಪೀಠ–ಶಿವಲಿಂಗಗಳನ್ನು ಎರಕಹೊಯ್ದಿರುವ ಭಾಗದಲ್ಲಿ ಸುವರ್ಣ ಬಳೆಯಿದ್ದು, ಲಿಂಗಭಾಗವು ಮಂದವಾದ ಕವಚವೇ ಅಥವಾ ಏಕಘನಭಾಗವೇ ಹೇಗೆಂಬುದು ತಿಳಿಯುವುದಿಲ್ಲವೆಂದು ಕೆ. ಅನಂತರಾಮು ಅಭಿಪ್ರಾಯಪಡುತ್ತಾರೆ. ಸ್ಥಳೀಯವಾಗಿ ಉದ್ಭವಲಿಂಗವೆಂದೇ ಪರಿಗಣಿಸಲ್ಪಟ್ಟಿರುವ ಇದು ಮಿರಮಿರನೇ ಮಿಂಚುತ್ತಿದ್ದು ಹಾಲಿನ ಬಣ್ಣ ಮಿಣುಕು ಹೊಂಬಣ್ಣ, ನಸುಗೆಂಪೆಂಬಂತೆ ಅನುಕ್ರಮವಾಗಿ ತ್ರಿಕಾಲಗಳಲ್ಲಿ ತ್ರಿವರ್ಣಯುಕ್ತವಾಗಿ ಹೊಳೆಯುತ್ತದೆಂದು ಹೇಳಲಾಗುತ್ತದೆ. ನಂದಿಮಂಟಪದಲ್ಲಿರುವ ನಂದಿಯೂ ಕಲಾತ್ಮಕವಾಗಿದ್ದು, ಗುಡಿಯ ನವರಂಗದ ಛಾವಣಿಯಲ್ಲಿ ಕ್ಷೇತ್ರಪುರಾಣಕ್ಕೆ ಸಂಬಂಧಿಸಿದಂತೆ ಅಂಬರೀಷಮುನಿಯ ತಪೋದೃಶ್ಯವೂ ಸೇರಿದಂತೆ ಹಲವಾರು ವರ್ಣಚಿತ್ರಗಳಿದ್ದು, ಅವುಗಳಲ್ಲಿ ಹೆಚ್ಚಿನವನ್ನು ಸ್ಥಳೀಯ ಕಲಾವಿದರಾದ ಕೆ. ಆರ್. ಆಚಾರ್ಯ ರಚಿಸಿದ್ದಾರೆ. ಇಲ್ಲಿ ಹಿಂದೆ ಇದ್ದ ಅಲಂಕಾರಿಕ ದಾರುಶಿಲ್ಪಗಳು ಶಿಥಿಲಗೊಂಡಿದ್ದರೂ, ಅವನ್ನು ಜಗಲಿಯ ಮೇಲೆ ಜೋಡಿಸಿಡಲಾಗಿದೆ. ಅಲ್ಲಿರುವ ಯಾಳಿ, ಯೋಗನರಸಿಂಹ, ಮಹಾವಿಷ್ಣು, ಗೋಪಾಲಕೃಷ್ಣ, ಮದನಿಕೆ ವಿಗ್ರಹಗಳ ಮೇಲೆ ಕೇರಳ ಶಿಲ್ಪಶೈಲಿಯ ಪ್ರಭಾವವಿರುವಂತೆ ತೋರುತ್ತದೆ. ಈ ದೇವಾಲಯದಲ್ಲಿ ಅಣ್ಣಪ್ಪ ಪಂಜುರ್ಲಿ, ಸದಾಶಿವ, ಗಣಪತಿ, ಧರ್ಮಶಾಸ್ತ ಮುಂತಾದ ಪರಿವಾರದೇವತೆಗಳಿದ್ದು, ಬ್ರಹ್ಮರಾಕ್ಷಸನ ಸ್ಥಾನವೂ ಇದೆ. ಸ್ಥಳೀಯ ಬಲ್ಲಾಳರಸರ ವಂಶಸ್ಥರು, ಬಾರಾಡಿಯಲ್ಲಿ, ಸೂರ್ಯ–ಚಂದ್ರ ಜೋಡುಕರೆ ಕಂಬಳವನ್ನು ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ. ದೇವಾಲಯಕ್ಕೆ ಸೇರಿದ ಕಾಂತೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿಯು ಹವ್ಯಾಸಿ ಯಕ್ಷಗಾನ ತಂಡದ ಸದಸ್ಯರನ್ನು ತರಬೇತು ಮಾಡುವಲ್ಲಿ ಯಶಸ್ವಿಯಾಗಿದೆ. ಭಕ್ತರ ಯಕ್ಷಗಾನ ಸೇವೆಯಾಟದ ಹರಕೆಯನ್ನು ಪೂರೈಸುವುದು ಇವರ ಆದ್ಯ ಕರ್ತವ್ಯವಾಗಿದೆ. ಮಧ್ವಾಚಾರ್ಯರು ಕಾಂತಾವರಕ್ಕೆ ಭೇಟಿ ನೀಡಿದ್ದರೆಂಬುದಕ್ಕೆ ಐತಿಹ್ಯವೊಂದು ರೂಢಿಯಲ್ಲಿದ್ದು, ಕಾಂತಾವರದಲ್ಲಿ ಫಲಿಮಾರು ಶಾಖಾಮಠವಿದೆ.

**ಕಾರ್ಕಳ** (ಜನಸಂಖ್ಯೆ: ೨೫,೧೧೬) : ತಾಲೂಕು ಕೇಂದ್ರವೂ ಆಗಿರುವ ಕಾರ್ಕಳವು ಜಿಲ್ಲಾ ಕೇಂದ್ರ ಉಡುಪಿಯಿಂದ ಸು. ೨೪ ಕಿ.ಮೀ. ಆಗ್ನೇಯಕ್ಕೆ ಇರುವ ಜೈನ ಕಾಶಿ; ಶಿಲ್ಪಕಲಾಸಿರಿಯ ತವರು. ಅಲ್ಲಿರುವ ಬಾಹುಬಲಿಮೂರ್ತಿ, ಚತುರ್ಮುಖ ಬಸದಿಗಳಿಂದಾಗಿ ವಿಶ್ವಖ್ಯಾತಿ ಪಡೆದಿರುವ ಊರು. ಶಾಸನಗಳಲ್ಲಿ 'ಕಾರ್‌ಕಳ' 'ಕಾರ್ಕಳ' ಎಂದೇ ಉಲ್ಲೇಖಿತಗೊಂಡಿರುವ ಇದಕ್ಕೆ ಆ ಹೆಸರು ಬರಲು ಕರಿಯ ಕಲ್ಲು ಯಥೇಚ್ಛವಾಗಿ ಲಭಿಸುವುದು, ಇಲ್ಲವೇ ಅತಿಯಾಗಿ ಮಳೆ (ಕಾರ್ + ಕಳ) ಯಾಗುವುದೇ ಕಾರಣವೆಂದು ಹೇಳಲಾಗುತ್ತದೆ. ದೇಶವಿದೇಶಗಳಿಗೆ ವಿವಿಧ ಮೂರ್ತಿ ಶಿಲ್ಪಗಳನ್ನು ಒದಗಿಸುವ ಮೂಲಕ ಈಗಲೂ ಇದು ಜಗತ್ಪ್ರಸಿದ್ಧವಾಗಿದೆ. ತುಳುವಿನಲ್ಲಿ ಇದನ್ನು ಕಾರ್ಲ ಎಂದು ಕರೆಯುತ್ತಾರೆ. ಹಿರಿಯಂಗಡಿ ಬಳಿಯ ಪರ್ಪಲೆ

ಬೆಟ್ಟದ ನಡುವೆ ಇರುವ ಮುರಕಲ್ಲ ಗವಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ್ದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಈ ಭಾಗವನ್ನಾಳಿದ ಹೊಂಬುಚದ ಶಾಂತಾರ ರಾಜವಂಶ ಮೂಲದ ಭೈರರಸರು ಕೆರ್ವಾಸೆಯನ್ನು ರಾಜಧಾನಿಯನ್ನಾಗಿ ಹೊಂದಿದ್ದರೂ, ತಮ್ಮನ್ನು ಕಾರ್ಕಳದ ಭೈರರಸರೆಂದೇ ಕರೆದುಕೊಳ್ಳುವಷ್ಟು ಚಾರಿತ್ರಿಕ ಮಹತ್ವದ ಸ್ಥಳವಿದಾಗಿದೆ. ಅವರ ರಾಜಧಾನಿಯಾಗಿದ್ದ ಕೆರೆವಸೆಯಿಂದು ಬೆಟ್ಟಗುಡ್ಡಗಳ ನಡುವೆ ಸಾಧಾರಣ ಗ್ರಾಮವಾಗಿ ಉಳಿದಿದ್ದು, ಗತಕಾಲದ ಕುರುಹಾಗಿ ನೇಮಿನಾಥ ಹಾಗೂ ಚಂದ್ರನಾಥ ತೀರ್ಥಂಕರ ಬಸದಿಗಳನ್ನು ಅಲ್ಲಿ ನೋಡಬಹುದಾಗಿದೆ. ಮಧ್ಯಕಾಲೀನ ಯುಗದಲ್ಲಿ ಕಾರ್ಕಳ ಸೀಮೆಯನ್ನು ಆಳಿದ ಹೊಯ್ಸಳ ರಾಜ್ಯಪಾಲರು ಹಾಗೂ ಭೈರರಸರ ಸಿದ್ಧಿ–ಸಾಧನೆಗಳಿಗೆ ಕಾರ್ಕಳದ ಭವ್ಯಸ್ಮಾರಕಗಳು ಸಾಕ್ಷಿಯಾಗಿ ನಿಂತಿವೆ. ಹೊಯ್ಸಳ ರಾಜ್ಯಪಾಲ ಶಾಂತಾರ ಲೋಕನಾಥನ ಎರಡು ಶಾಸನಗಳು ಕಾರ್ಕಳದಲ್ಲಿದ್ದು ಹಿರಿಯಂಗಡಿಯ ಗುರುಗಳ ಬಸದಿ ಹಾಗೂ ಕಾಬೆಟ್ಟುವಿನ ವೇಣುಗೋಪಾಲಗುಡಿಗೆ ಸರ್ವಮಾನ್ಯ ದತ್ತಿಬಿಟ್ಟ ಅಂಶವನ್ನು ದಾಖಲಿಸಿವೆ. ಒಂದನೆಯ ಭೈರವ ರಾಯನಿಂದ (೧೪೦೦–೧೪೨೦) ಆರಂಭಗೊಂಡ ಭೈರರಸರ ಆಡಳಿತವೂ ಮುಮ್ಮಡಿ ಭೈರರಸನ (ಸು.೧೬೫೦)ವರೆಗೂ ಎರಡು ಶತಮಾನಗಳಿಗೂ ಅಧಿಕಾವಧಿ ವಿಸ್ತರಿಸಿತ್ತು. ಕಾರ್ಕಳದ ಒಂದನೆಯ ಭೈರರಸನಿಗೆ ಸಂಬಂಧಿಸಿದ ಇರ್ವತ್ತೂರು ಶಾಸನ (ಸು. ೧೪೦೦)ವನ್ನು ಪತ್ತೆಹಚ್ಚಿರುವ ಪಿ.ಎನ್.ನರಸಿಂಹಮೂರ್ತಿ, ಅದನ್ನಾಧರಿಸಿ ಒಂದನೆಯ ಭೈರವರಾಜನು ಕಾರ್ಕಳದಲ್ಲಿ ಅರಮನೆ ಹಾಗೂ ಬಸದಿಗಳನ್ನು ನಿರ್ಮಿಸಿದ್ದನೆಂಬ ತೀರ್ಮಾನಕ್ಕೆ ಬರುತ್ತಾರೆ. ಅಲ್ಲದೆ ಕಾರ್ಕಳಕ್ಕೆ ಪಾಂಡ್ಯನಗರಿ (ಬೆಟ್ಟದಂಗಡಿ) ಎಂಬ ಅಭಿದಾನವನ್ನೂ ನೀಡಲಾಗಿತ್ತೆಂದು ತಿಳಿದುಬರುತ್ತದೆ. ಕಾರ್ಕಳದ ಭೈರರಸರ ನಿಯಂತ್ರಣಕ್ಕೆ ಕಳಸ ಸೇರಿದಂತೆ ಬಾಳೆಹೊನ್ನೂರು ಭಾಗ, ಕಾರ್ಕಳ ಹಾಗೂ ಉಡುಪಿ ತಾಲೂಕುಗಳ ಕೆಲವು ಭಾಗಗಳೂ ಒಳಪಟ್ಟಿದ್ದವೆಂಬ ಅಭಿಪ್ರಾಯವಿದೆ.

ಕಾರ್ಕಳ ಪಟ್ಟಣಕ್ಕೆ ಕೀರ್ತಿಪ್ರಾಯವಾಗಿರುವ, ಬಾಹುಬಲಿ ಮೂರ್ತಿಯಿರುವ ಸುಮಾರು ೩೦೦ ಅಡಿ ಎತ್ತರದ ದೊಡ್ಡ (ಗುಮ್ಮಟ) ಬೆಟ್ಟದ ತಪ್ಪಲನ್ನು ತಲುಪಲು ವಿಶಾಲವಾದ ಆನೆಕೆರೆ (ಆನೆಕೆರೆಯೇ ಉದ್ಯಾವರ ನದಿಯ ಉಗಮಸ್ಥಾನ ಎಂಬ ಹೇಳಿಕೆಯೂ ಇದೆ) ಶೀಗಡಿಕೆರೆ ಮಾರ್ಗವಾಗಿ ಸಾಗುತ್ತಿದ್ದಂತೆ, ಶಿಖರಾಗ್ರದಲ್ಲಿ ದೂರದಿಂದಲೇ ಗೋಚರಿಸುವ ೪೨ ಅಡಿ ಎತ್ತರದ ಬಾಹುಬಲಿ ಮೂರ್ತಿಯು ಮೆಟ್ಟಿಲುಗಳನ್ನೇರಿ ಶಿಖರಾಗ್ರವನ್ನು ತಲುಪುತ್ತಿದ್ದಂತೆ, ಪೂರ್ಣ ಪ್ರಮಾಣದಲ್ಲಿ ಎದುರಾಗುತ್ತದೆ. ಏಕಶಿಲೆಯಲ್ಲಿ ರಚಿಸಲ್ಪಟ್ಟಿರುವ ಈ ಬೃಹತ್ ಶಿಲ್ಪವನ್ನು (ಬೃಹತ್ತತೆಯಲ್ಲಿ ಇದಕ್ಕೆ ಶ್ರವಣಬೆಳಗೊಳದ ಗೊಮ್ಮಟನ ನಂತರದ ಸ್ಥಾನ) ಅಭಿನವ ಚಾವುಂಡರಾಯನೆಂದೇ ಬಿರುದಾವಳಿಯನ್ನು ಧರಿಸಿದ್ದ ಮುಮ್ಮಡಿ ವೀರಪಾಂಡ್ಯ ದೇವನು(೧೪೨೦–೫೪)ದೂರದ ಹನಸೋಗೆಯ (ಕೆ.ಆರ್.ನಗರ ತಾ., ಮೈಸೂರು ಜಿಲ್ಲೆ) ಲಲಿತಕೀರ್ತಿ ಭಟ್ಟಾರಕರ ಆದೇಶದಂತೆ ೧೪೩೨ರಲ್ಲಿ ಪ್ರತಿಷ್ಟಾಪಿಸಿದ ಅಂಶ ಅಲ್ಲೇ ಇರುವ ಎರಡು ಶಾಸನಗಳಿಂದ ವೇದ್ಯವಾಗುತ್ತದೆ. ಮಿಗಿಲಾಗಿ ಈ ಮೂರ್ತಿಯ ಪ್ರತಿಷ್ಠಾಪನಾ ಮಹೋತ್ಸವಕ್ಕೆ ವಿಜಯನಗರದ ಸಾರ್ವಭೌಮ ಇಮ್ಮಡಿ ದೇವರಾಯ (೧೪೨೪–೪೬)ನೂ ಆಗಮಿಸಿದ್ದು ವಿಶೇಷವಾಗಿತ್ತು. ಆದರೆ ಶ್ರವಣಬೆಳಗೊಳದ ಬಾಹುಬಲಿ ಮೂರ್ತಿಯ ಸಂದರ್ಶನದಿಂದ ಪ್ರಭಾವಿತನಾಗಿದ್ದ ಮೂರನೆಯ ಪಾಂಡ್ಯಪ್ಪೊಡೆಯನು ಪ್ರತಿಷ್ಠಾಪಿಸಿದ ಈ ಮೂರ್ತಿಯು ಭವ್ಯತೆಯಲ್ಲಾಗಲಿ, ಸೌಂದರ್ಯದಲ್ಲಾಗಲಿ ಅದಕ್ಕೆ ಸರಿಗಟ್ಟಲಾಗದಿದ್ದರೂ ಮೊಗದಲ್ಲಿ ಪ್ರಸನ್ನತೆಯನ್ನೂ, ಅರೆತೆರೆದ ಕಂಗಳಲ್ಲಿ ಅಧ್ಯಾತ್ಮಿಕ ಹೊಳಪನ್ನು ತುಂಬುವಲ್ಲಿ ಶಿಲ್ಪಿ ಚತುರತೆ ಮೆರೆದಿದ್ದಾನೆ. ಸುಮಾರು ೮೦ ಟನ್ ಭಾರವಿರಬಹುದಾದ ಈ ಶಿಲ್ಪವನ್ನು ಪ್ರತ್ಯೇಕವಾಗಿ ಕಡೆದು, ಬೆಟ್ಟದ ಮೇಲಕ್ಕೇರಿಸಿ ತಂದು ನಿಲ್ಲಿಸಿರುವುದು ಅತಿಶಯದ ಕಾರ್ಯವೇ ಸರಿ. ಗೊಮ್ಮಟ ದರ್ಶನ ಪಡೆದ ಭಕ್ತರಿಗೆ ಅಲ್ಲಿಂದ ಕಾಣುವ ಕಾರ್ಕಳದ ಪ್ರಕೃತಿ ಸೌಂದರ್ಯ ಅನುಪಮವಾದುದು. ಬಾಹುಬಲಿ ಮೂರ್ತಿಯ ಮುಂದಿರುವ ಕಲಾತ್ಮಕವಾದ ಮಾನಸ್ತಂಭದ ಮೇಲ್ತುದಿಯ ಮಂಟಪದಲ್ಲಿ ಬ್ರಹ್ಮಯಕ್ಷನಿದ್ದು, ಈ ಬ್ರಹ್ಮಸ್ತಂಭವನ್ನು ಮುಮ್ಮಡಿ ವೀರಪಾಂಡ್ಯದೇವನೇ ೧೪೩೬ರಲ್ಲಿ ಮಾಡಿಸಿರುವ ಅಂಶ ಅದರ ಮೇಲಿರುವ

ಶಾಸನದಿಂದ ವ್ಯಕ್ತವಾಗುತ್ತದೆ. ಈತ ಕಾರ್ಕಳದ ವಿನಾಯಕಬೆಟ್ಟದ ವಿನಾಯಕ ಹಾಗೂ ಕಳಸೇಶ್ವರ ಸನ್ನಿಧಿಗೆ ದತ್ತಿಬಿಟ್ಟದ್ದಕ್ಕೆ ಶಾಸನಾಧಾರಗಳಿವೆ. ಸ್ವತಃ ಕವಿಯಾಗಿದ್ದ ಇವನ ಆಶ್ರಯದಲ್ಲಿದ್ದ ಜೈನಯತಿ ಕಲ್ಯಾಣಕೀರ್ತಿಯು ಸಂಸ್ಕೃತ–ಕನ್ನಡಗಳೆರಡರಲ್ಲೂ ಕೃತಿಗಳನ್ನು ರಚಿಸಿದ್ದಾನೆ.

ಕಾರ್ಕಳದ ಬಾಹುಬಲಿಗೆ ಅಂದಿನಿಂದಲೂ ದ್ವಾದಶ ವರ್ಷದ ಮಹಾಮಸ್ತಕಾಭಿಷೇಕವು ನಿರಂತರವಾಗಿ ನಡೆದುಕೊಂಡು ಬಂದಿದ್ದರೂ, ಅದಕ್ಕೆ ಸಂಬಂಧಿಸಿದಂತೆ ಮುಮ್ಮಡಿ ಭೈರವರಾಜನ ನೇತೃತ್ವದಲ್ಲಿ ೧೬೪೬ರಲ್ಲಿ ಜರುಗಿದ ಅಭಿಷೇಕವೇ ಲಭ್ಯವಿರುವ ಪ್ರಾಚೀನ ಉದಾಹರಣೆಯಾಗಿದ್ದು ಇದನ್ನು ಚದುರ ಚಂದ್ರಮ ಕವಿಯ ಹಾಡುಗಬ್ಬದಲ್ಲಿ ಸುಂದರವಾಗಿ ದಾಖಲಿಸಲಾಗಿದೆ. ಕಳೆದ ಶತಮಾನದಲ್ಲಿ ನಾಲ್ಕು ಬಾರಿ ಮಹಾಮಸ್ತಕಾಭಿಷೇಕ ನಡೆದಿರುವುದಕ್ಕೆ ದಾಖಲೆ ಇದ್ದು, ಇತ್ತೀಚೆಗೆ ಅಂದರೆ ೨೦೦೩ರಲ್ಲಿ ಅತ್ಯಂತ ವೈಭವದಿಂದ ಮಹಾಮಸ್ತಕಾಭಿಷೇಕವನ್ನು ನೆರವೇರಿಸಲಾಯಿತು. ಒಟ್ಟು ಹತ್ತು ದಿನ ನಡೆಯುವ ಮಹಾಮಸ್ತಕಾಭಿಷೇಕ ಮಹೋತ್ಸವದಲ್ಲಿ ತುಳುನಾಡಿನ ಸಂಪ್ರದಾಯದಂತೆ ಮೊದಲ ಒಂಭತ್ತು ದಿನ ರಾತ್ರಿಯಲ್ಲೇ ಅಭಿಷೇಕ ನಡೆಸಿ, ಹತ್ತ(ಕೊ)ನೆಯ ದಿನ ಹಗಲಿನಲ್ಲೇ ಮಹಾಮಸ್ತಕಾಭಿಷೇಕವನ್ನು ಮಾಡಲಾಗುತ್ತದೆ. ಆದರೆ, ವರ್ಷಂಪ್ರತಿ ಗೊಮ್ಮಟಬೆಟ್ಟದಲ್ಲಿ ರಥೋತ್ಸವವಾಗುತ್ತದೆ.

ಕಾರ್ಕಳದ ಗೊಮ್ಮಟಬೆಟ್ಟಕ್ಕೆ ಅನತಿದೂರದ ಚಿಕ್ಕಬೆಟ್ಟದಲ್ಲಿರುವ ಚತುರ್ಮುಖ ಬಸದಿಯು ಶಾಸನಗಳಲ್ಲಿ 'ತ್ರಿಭುವನತಿಲಕ ಜಿನಚೈತ್ಯಾಲಯ' ಎಂದೇ ಉಲ್ಲೇಖಿತಗೊಂಡಿದೆ. ಇಮ್ಮಡಿ ಭೈರವರಾಯ (೧೫೭೫–೧೬೦೦)ನು ಈ ಬಸದಿಯನ್ನು ೧೫೮೬ರಲ್ಲಿ ನಿರ್ಮಿಸಿದ್ದು, ಮೂಡಬಿದಿರೆಯ ಸಾವಿರ ಕಂಬದ ಬಸದಿಯ ಮಾದರಿಯಲ್ಲಿ ೧೦೮ ಕಂಬಗಳು ಹೊತ್ತು ನಿಂತಿರುವ ಈ ಚತುರ್ಮುಖ ಬಸದಿಯೂ ಅಷ್ಟೇ ಮಹತ್ವಪೂರ್ಣ ರಚನೆಯಾಗಿದೆ. ಈ ಬಸದಿಗೆ ನಾಲ್ಕು ದಿಕ್ಕಿನಲ್ಲೂ ಮಹಾದ್ವಾರಗಳಿದ್ದು, ಕಾರ್ಕಳದಲ್ಲಿ ಇದೆಯೆಂದು ಹೇಳಲಾಗುವ ೧೮ ಜೈನಬಸದಿಗಳಿಗೆ ಇದು ತಿಲಕಪ್ರಾಯವಾಗಿದೆ. ಗರ್ಭಗೃಹದಲ್ಲಿ ಪೀಠವಿದ್ದು, ನಾಲ್ಕು ದಿಕ್ಕಲ್ಲೂ ಅರನಾಥ, ಮಲ್ಲಿನಾಥ ಹಾಗೂ ಮುನಿಸುವ್ರತನಾಥ ತೀರ್ಥಂಕರರ ಮೂರ್ತಿಗಳಿರುವಂತೆ ಅದನ್ನು ಚಚ್ಚೌಕವಾಗಿ ನಿರ್ಮಿಸಲಾಗಿದ್ದು, ಒಂದೊಂದು ಪಾರ್ಶ್ವದಲ್ಲೂ ಮೇಲೆ ಹೇಳಿರುವಂತೆ ಮೂವರು ತೀರ್ಥಂಕರರಿದ್ದಾರೆ. ಸಮಭಂಗಿಯಲ್ಲಿ ನಿಂತಿರುವ ಆಳೆತ್ತರದ ಈ ಶಿಲ್ಪಗಳು ಅನನ್ಯವಾಗಿವೆ. ನಾಲ್ಕು ದಿಕ್ಕುಗಳಿಂದಲೂ ಭಕ್ತರು ಏಕಕಾಲದಲ್ಲಿ ಒಂದೇ ಬಗೆಯ ಮೂರು ದೇವರುಗಳ ದರ್ಶನ ಪಡೆಯುವ ಕೌಶಲ್ಯ ಉಲ್ಲೇಖಾರ್ಹವಾದುದು. ಅಲ್ಲದೆ ಬಸದಿಯ ಪಶ್ಚಿಮಭಾಗದಲ್ಲಿ ಚೌವ್ವೀಸ್ ತೀರ್ಥಂಕರ ಪ್ರತಿಮೆಗಳೊಂದಿಗೆ ಬ್ರಹ್ಮ ಪದ್ಮಾವತಿ ಯಕ್ಷ ಯಕ್ಷಿಯರನ್ನು ಪ್ರತಿಷ್ಠಾಪಿಸಿ, ಹೊಳೆಗಳ ನಡುವಣ ತೆಳ್ಳಾರೆ ಗ್ರಾಮದ ಭೂಮಿ ಹಾಗೂ ರಂಜಾಳ ನಲ್ಲೂರಿನ ಸಿದ್ದಾಯವನ್ನು (೨೩೮ ಗದ್ಯಾಣ) ಸರ್ವ ಮಾನ್ಯವಾಗಿ ದತ್ತಿ ಬಿಟ್ಟ ಅಂಶವನ್ನು ಅಲ್ಲೇ ಇರುವ ಶಾಸನ ಸಾರುತ್ತದೆ. ಈ ಬಸದಿಯ ಕಂಬ ಹಾಗೂ ಭಿತ್ತಿಗಳ ಮೇಲೆ ಆಕರ್ಷಕ ಉಬ್ಬುಶಿಲ್ಪಗಳಿದ್ದು, ರಾಮ, ಲಕ್ಷ್ಮಣ, ಗಣಪ, ಹನುಮಂತ, ಗರುಡ ಮುಂತಾದ ಹಿಂದೂ ದೇವತಾ ಉಬ್ಬು ಕೆತ್ತನೆಗಳಿರುವುದೊಂದು ವಿಶೇಷವಾಗಿದೆ. ಅಲ್ಲದೆ ಫಲಪುಷ್ಪ, ಪದ್ಮ, ಹೂಬಳ್ಳಿ, ನರ್ತಕಿ, ನಾಗಬಂಧ ಮುಂತಾದ ಕೆತ್ತನೆಗಳೂ ಗಮನ ಸೆಳೆಯುತ್ತವೆ. ಈ ಬಸದಿಯಲ್ಲಿರುವ ಶಾಸನದಲ್ಲಿ ಹಿರಿಯ ಅರಮನೆ, ಚಂದ್ರನಾಥ ಬಸದಿ ಹಾಗೂ ಗೋವರ್ಧನ ಗಿರಿಯ ಪಾರ್ಶ್ವನಾಥ ಬಸದಿಯ ಪ್ರಸ್ತಾಪವೂ ಇದೆ.

ಕಾರ್ಕಳದಲ್ಲಿರುವ ಜೈನರ ದಾನಶಾಲಾಮಠವು ವಿಶಾಲವಾಗಿದ್ದು, ಹನಸೋಗೆಯ ಲಲಿತಕೀರ್ತಿ ಭಟ್ಟಾರಕರ ಪರಂಪರೆಗೆ ಸೇರಿದ್ದಾಗಿದೆ. ಈ ಮಠಕ್ಕೆ ಸೇರಿದಂತೆ ಇರುವ ಜೈನ ಬಸದಿಯಲ್ಲಿ ಚಂದ್ರನಾಥ ತೀರ್ಥಂಕರ ಹಾಗೂ ಕೂಷ್ಮಾಂಡಿನಿ ಯಕ್ಷಿಯ ಶಿಲ್ಪಗಳಿವೆ. ಈ ಮಠದಲ್ಲಿ ಪ್ರಾಚೀನ ಗ್ರಂಥಗಳ ತಾಡವೋಲೆ ಸಂಗ್ರಹವಿದೆ. ಈ ಮಠದ ಸ್ಥಾಪನೆಗೆ ಸಂಬಂಧಿಸಿದಂತೆ ೧೫೦೪ರ ತಾಮ್ರಶಾಸನದಲ್ಲಿ ಕುತೂಹಲಕರ ಅಂಶವಿದೆ. ಆ ಪ್ರಕಾರ ಕಾರ್ಕಳದ ಹಿರಿಯ ಭೈರವರಾಜನು ಸೌಭಾಗ್ಯನೋಂಪಿ ವ್ರತಾಚರಣೆಗೆಂದು ಮೂಡಬಿದಿರೆಯ ಭಟ್ಟಾರಕರಿಗೆ ಬಿನ್ನವತ್ತಳೆ ಕಳುಹಿಸಿಕೊಟ್ಟನು. ಆದರೆ ಅದೇ ಸಂದರ್ಭದಲ್ಲಿ ಚೌಟರಸರೂ

ಇದೇ ವ್ರತವನ್ನು ನಡೆಸುತ್ತಿದ್ದುದರಿಂದ ತಮಗೆ ಬರಲಾಗುವುದಿಲ್ಲವೆಂದು ತಿಳಿಸಿ, ಹನಸೋಗೆಯಿಂದ ಬಂದಿದ್ದ ನಿರ್ವಾಣ ಮುನಿಗಳನ್ನು ಕಾರ್ಕಳಕ್ಕೆ ಕಳುಹಿಸಿಕೊಟ್ಟರಂತೆ. ಇದರಿಂದ ಕುಪಿತಗೊಂಡ ಭೈರರಾಜನು ಹನಸೋಗೆಯ ದಿಗಂಬರಸ್ವಾಮಿಗಳಿಗೆ ಕಾರ್ಕಳದ ನೇಮಿನಾಥ ಬಸದಿಯಲ್ಲಿ ಪಟ್ಟ ಕಟ್ಟಿ, ಮಠಸ್ಥಾಪಿಸಿ, ಉದ್ದೇಶಿತ ವ್ರತವನ್ನು ಪೂರ್ಣಗೊಳಿಸಿದನೆಂದು ತಿಳಿದುಬರುತ್ತದೆ. ಜೈನ ಶ್ರಾವಕಿಯರಿಗಾಗಿ ಭುಜಬಲಿ ಶ್ರಾವಿಕಾಶ್ರಮವಿಲ್ಲಿದೆ. ಅನಂತನ ನೋಂಪಿನಂದು ಕಾರ್ಕಳದ ಮಠಕ್ಕೆ ಬರುವ ನೆರೆಹೊರೆಯ ಗ್ರಾಮಗಳ ಶ್ರಾವಕರು ಈಗಲೂ ಮಠದಿಂದ ಹಿರಿಯಂಗಡಿಯವರೆಗೆ ರಾಜಬೀದಿಯಲ್ಲಿರುವ ೧೮ ಬಸದಿಗಳಿಗೂ ಭೇಟಿ ನೀಡಿ ದರ್ಶನ ಪಡೆಯುವ ಸಂಪ್ರದಾಯವಿದೆ. ಇಲ್ಲಿಯ ಅನಂತಶಯನ ದೇವಾಲಯವನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದ್ದು, ಮೂಲತಃ ಜೈನಬಸದಿಗಾಗಿ ನಿರ್ಮಾಣಗೊಂಡ ವಾಸ್ತುವೆಂದು ಹೇಳಲಾಗುತ್ತದಾದರೂ, ಅದನ್ನು ಖಚಿತಪಡಿಸುವ ನಿರ್ದಿಷ್ಟ ಕುರುಹುಗಳೇನೂ ಅಲ್ಲಿ ಕಂಡುಬರುವುದಿಲ್ಲ. ಭೈರರಸರ ಕಾಲದ ನಿರ್ಮಾಣವಾಗಿರುವ ಇದು ವಿಶಾಲವಾದ ಪ್ರಾಕಾರದ ನಡುವೆ ಇದ್ದು, ಗರ್ಭಗೃಹ, ಪ್ರದಕ್ಷಿಣಾಪಥ, ಅಂತರಾಳ, ನವರಂಗಗಳಿಂದ ಕೂಡಿದ್ದು, ಇಳಿಜಾರಾದ ಛಾವಣಿಯನ್ನೂ ಹೊಂದಿದೆ. ಗರ್ಭಗೃಹದಲ್ಲಿ, ಶಯನ ಭಂಗಿಯಲ್ಲಿ ಪವಡಿಸಿರುವ ಸು.೧೦ ಅಡಿ ಉದ್ದ ಎಂಟು ಅಡಿ ಎತ್ತರದ ಅನಂತಪದ್ಮನಾಭನ ಶಿಲ್ಪವು ಅತ್ಯದ್ಭುತ ಶಿಲ್ಪಕುಸುಮವಾಗಿದ್ದು, ದಕ್ಷಿಣ ಭಾರತದಲ್ಲೇ ಅಪರೂಪದ ಮೂರ್ತಿ ಎಂಬ ಹೆಗ್ಗಳಿಕೆಯನ್ನು ವಿದ್ವಾಂಸರಿಂದ ಪಡೆದಿದೆ. ಸಪ್ತಹೆಡೆಯನ್ನುಳ್ಳ ಆದಿಶೇಷನನ್ನೇ ಮೂರು ಸುತ್ತಿನ ಹಾಸಿಗೆಯನ್ನಾಗಿಸಿ ಕೊಂಡು ಮಲಗಿರುವ ವಿಷ್ಣುವಿನ ವಿಶ್ರಾಂತ ಕೈಗಳಲ್ಲಿದ್ದ ಗದಾಶಂಖಗಳನ್ನು ಮಗ್ಗುಲಲ್ಲೆ ತೋರಿಸಲಾಗಿದ್ದು, ಉಳಿದೆರಡರಲ್ಲಿ ಪದ್ಮ-ಚಕ್ರಾಯುಧಗಳಿವೆ. ಪಾದದ ಬಳಿ ಕುಳಿತಿರುವ ಶ್ರೀದೇವಿ-ಭೂದೇವಿಯರು, ಪತಿಯ ಪಾದಸೇವೆಯಲ್ಲಿ ಮಗ್ನರಾಗಿದ್ದಾರೆ. ವಿಷ್ಣುವಿನ ನಾಭಿಯಲ್ಲಿ ಚಿಗುರೊಡೆದಿರುವ ಅರಳಿದ ಕಮಲದ ಮಧ್ಯದಲ್ಲಿ ಚತುರ್ಮುಖ ಬ್ರಹ್ಮನು ಆಸೀನನಾಗಿದ್ದು, ಎರಡು ಕೈಗಳಿಂದ ವಂದಿಸುತ್ತಿದ್ದರೆ, ಉಳಿದೆರಡು ಕೈಗಳಲ್ಲಿ ವೇದಗಳನ್ನು ಹಿಡಿದಿದ್ದಾನೆ. ಸುಮಾರು ೧೫೬೭ರಲ್ಲಿ ಈ ದೇವಾಲಯವು ನಿರ್ಮಾಣಗೊಂಡಿತೆಂಬ ಅಭಿಪ್ರಾಯವಿದೆಯಾದರೂ, ಅಲ್ಲಿರುವ ಅನಂತಶಯನನ ಶಿಲ್ಪ ಸುಮಾರು ೧೨-೧೩ನೆ ಶತಮಾನಕ್ಕೆ ಸೇರಿದ ಪ್ರಾಚೀನ ಶಿಲ್ಪವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದೇ ಮಾದರಿಯ ಅನಂತಶಯನ ಶಿಲ್ಪವು ತಿರುವನಂತಪುರದಲ್ಲೂ ಇದೆ ಎಂಬ ಅಭಿಪ್ರಾಯವಿದೆ. ಈ ದೇವಾಲಯದ ಆವರಣದಲ್ಲಿರುವ ಹೇರಂಬ ಗಣಪತಿಯ ಲೋಹದ ದಶಭುಜ ಮೂರ್ತಿ, ಪದ್ಮನಾಭ, ವಾಸುದೇವ, ದಾಮೋದರ, ಸಂಕರ್ಷಣ ಮುಂತಾದ ಮೂರ್ತಿಗಳಿಗೆಂದೇ ಪ್ರತ್ಯೇಕ ಕಿರುಗುಡಿಗಳಿವೆ. ಈ ದೇವರ ಜಾತ್ರೆಯು ಚೈತ್ರ ಶುದ್ಧ ಪಂಚಮಿಯಿಂದ ಏಳು ದಿನಗಳ ಕಾಲ ಜರುಗುತ್ತವೆ. ಅಲ್ಲದೆ ದೀಪೋತ್ಸವ, ಅನಂತವ್ರತ, ರಥಸಪ್ತಮಿಗಳು ಇಲ್ಲಿಯ ಇತರ ವಿಶೇಷ ಪರ್ವಗಳಾಗಿವೆ.

ಕಾರ್ಕಳದ ಪೇಟೆಬೀದಿಯಲ್ಲಿರುವ ಭವ್ಯವಾದ ವೆಂಕಟರಮಣ ದೇವಾಲಯವು ವಿಶಾಲವಾಗಿದ್ದು ಶ್ರೀಮಂತವಾಗಿದೆ. ಗೌಡಸಾರಸ್ವತ ಬ್ರಾಹ್ಮಣರ ಆರಾಧ್ಯದೈವವಾಗಿರುವ ಇದನ್ನು 'ಪಶ್ಚಿಮ ತಿರುಪತಿ' ಎಂದೇ ಉತ್ಪ್ರೇಕ್ಷಿಸಲಾಗುತ್ತದೆ. ಇಲ್ಲಿಯ ಶ್ರೀನಿವಾಸ ಬಿಂಬ ತಿರುಪತಿಯಿಂದ ಭಕ್ತರ ಮೂಲಕ ಬಂದದ್ದೆಂದು ಹೇಳಲಾಗುತ್ತದೆ. ಗರ್ಭಗೃಹದಲ್ಲಿ ಶ್ರೀದೇವಿ-ಭೂದೇವಿಯರನ್ನೊಳಗೊಂಡ ತಿರುಮಲದೇವರಿದ್ದು, ಸಿಂಹಾಸನದ ಮೇಲೆ ಶ್ರೀನಿವಾಸ ಹಾಗೂ ವೆಂಕಟರಮಣರ ಪಂಚಲೋಹದ ಮೂರ್ತಿಗಳಿದ್ದು, ಮೊದಲಿನದು ಪಟ್ಟದ ದೇವರಾದರೆ, ಇನ್ನೊಂದು ಉತ್ಸವಮೂರ್ತಿಯಾಗಿದೆ. ಪ್ರಾಕಾರದ ನಾಲ್ಕೆಡೆಗಳಲ್ಲಿ ಹನುಮ, ಗರುಡ, ಗಣಪ ಹಾಗೂ ಲಕ್ಷ್ಮಿದೇವಿಯ ಕಿರುಗುಡಿಗಳಿವೆ. ಅದರಲ್ಲಿನ ಕೆಲವು ಶಿಲ್ಪಗಳು ಸ್ಥಳೀಯ ಶಿಲ್ಪಿ ರಂಜಾಳ ಗೋಪಾಲಶೆಣೈರವರ ಆಧುನಿಕ ಕೊಡುಗೆಗಳಾಗಿವೆ. ಕಾರ್ತಿಕ ಹುಣ್ಣಿಮೆಯಂದು ಈ ದೇವರಿಗೆ ನಡೆಯುವ ಲಕ್ಷದೀಪೋತ್ಸವವು ಒಂಬತ್ತು ದಿನಗಳ ಪರ್ವವಾಗಿದೆ. ಆ ಸಂದರ್ಭದಲ್ಲಿ ನಡೆಯುವ ಫಲಾವಳಿಸೇವೆ ವಿಶಿಷ್ಟವಾಗಿರುತ್ತದೆ. ವೈಶಾಖ ಶುದ್ಧ ಪ್ರತಿಪದದಂದು ಪ್ರಾರಂಭಗೊಂಡು ಏಳು ದಿನಗಳ ಕಾಲ ವರ್ಷಂಪ್ರತಿ ನಡೆಯುವ ಬ್ರಹ್ಮರಥೋತ್ಸವ ಸಮಯದಲ್ಲೂ ಈ ಸೇವೆಗೆ ಪ್ರಾಶಸ್ತ್ಯವಿರುತ್ತದೆ. ವರ್ಷದುದ್ದಕ್ಕೂ ಈ ದೇವರ ಸನ್ನಿಧಿಯಲ್ಲಿ ಸುಮಾರು ೫೦ಕ್ಕೂ ಹೆಚ್ಚು ಉತ್ಸವಗಳು. ೨೦ಕ್ಕೂ ಹೆಚ್ಚು

ಸಮಾರಾಧನೆಗಳೂ ನಡೆಯುತ್ತವೆ. ಅದರಲ್ಲೂ ವೈಶಾಖ ಶುದ್ಧ ತೃತೀಯದಂದು ವೆಂಕಟರಮಣನೇ ಮನೆಮನೆಗೆ ಹೋಗಿ, ತುಳಸಿಕಟ್ಟೆಮೇಲೆ ಕುಳಿತು, ಆರತಿ, ನೈವೇದ್ಯ ಸ್ವೀಕರಿಸುವ ಪದ್ಧತಿ ಅನನ್ಯವೇ. ಈ ದೇವರ ಅನನ್ಯ ಭಕ್ತರಾಗಿದ್ದ ಪಾವಂಜೆ ಲಕ್ಷ್ಮಿನಾರಾಣಪ್ಪಯ್ಯ (೧೮೫೪–೧೯೨೯) ಹಲವಾರು ಕೀರ್ತನೆಗಳನ್ನು ರಚಿಸಿ ಹಾಡಿದ್ದಾರೆ. ಈ ಗುಡಿಯ ಯಕ್ಷಗಾನ ಕಲಾಸಮಿತಿಯು ಯಕ್ಷಗಾನ–ತಾಳಮದ್ದಳೆಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ. ಕಾರ್ಕಳದಲ್ಲಿ ಮಹಾಮಾಯಾ, ಮುಖ್ಯಪ್ರಾಣ (ಆಂಜನೇಯ), ವೀರಭದ್ರ ಮುಂತಾದ ಗುಡಿಗಳಿವೆ. ಇಲ್ಲಿಯ ಮಹಾಮಾಯಾ ದೇವಾಲಯವು ತುಳುನಾಡಿನ ಪ್ರಮುಖ ಮಾರಿಗುಡಿ ಗಳಲ್ಲೊಂದಾಗಿದೆ. ಈ ದೇವಿಯ ಗದ್ದುಗೆಯನ್ನು ಕೆಳದಿಯ ಶಿವಪ್ಪನಾಯಕನು ಪ್ರತಿಷ್ಠಾಪಿಸಿದನೆಂದು ಹೇಳಲಾಗುತ್ತದೆ. ಹಿಂದೆ ಇಲ್ಲಿದ್ದ ಕೋಟೆಯೂ ಶಿಥಿಲವಾಗಿದ್ದು, ಮಾರಿ ಹಾಗೂ ಹನುಮಂತನ ಗುಡಿಗಳನ್ನು ನಂತರದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಹನುಮಂತನ ಗುಡಿಯಲ್ಲಿರುವ ಹನುಮಂತನ ಶಿಲ್ಪ ವಿಜಯನಗರ ಕಾಲದ್ದಾಗಿದೆ. ಮಾರಿಯ ವಾರ್ಷಿಕ ಜಾತ್ರೆಯಲ್ಲಿ ಅವಳನ್ನು ಅಟ್ಟಿಸಿಕೊಂಡು ಬರುವ ಕುಲದವರಿದ್ದು, ಅವರನ್ನು ರಣವೀರರಾಣೆಯರು ಎಂದು ಕರೆಯಲಾಗುತ್ತಿದ್ದು, ಇವರು ಮೂಲತಃ ರಾಣೆಬೆನ್ನೂರಿನವರೆಂದು ಹೇಳಲಾಗುತ್ತದೆ. ಇಲ್ಲಿ ಅವರೇ ನಿರ್ಮಿಸಿಕೊಂಡಿರುವ ಉಚ್ಚಂಗಿ ಅಮ್ಮನ ಗುಡಿಯೂ ಇದೆ.

ಇಲ್ಲಿ ವೀರಭದ್ರನ ಗುಡಿ ಹಾಗೂ ವಿರಕ್ತಮಠಗಳು ಇದ್ದರೂ ಇಂದು ವೀರಶೈವ ಕುಟುಂಬಗಳಿಲ್ಲ. ಕೆಳದಿನಾಯಕರ ಕಾಲದಲ್ಲಿ ನಿರ್ಮಾಣಗೊಂಡಿರುವ ವೀರಭದ್ರನ ಗುಡಿಯಲ್ಲಿ ಚತುರ್ಭುಜಧಾರಿ ವೀರಭದ್ರನ ಶಿಲ್ಪವಿದೆ. ಇದರ ಸಮೀಪವಿರುವ ಉಜ್ಜಯಿನಿ ಪರಂಪರೆಗೆ ಸೇರಿದ ವಿರಕ್ತಮಠದಲ್ಲೂ ವೀರಭದ್ರನ ಗುಡಿ ಇದೆ. ಹಿಂದೆ ತುಳು ನಾಡಿನಲ್ಲಿದ್ದ ೬೪ ವೀರಶೈವ ಮಠಗಳಲ್ಲಿ ಇದೂ ಒಂದೆಂದು ಹೇಳಲಾಗುತ್ತದೆ. ಕಾರ್ಕಳದ ಶಬರಿ ಆಶ್ರಮ ಗಾಂಧೀಜಿ ಬೆಂಬಲಿಗರ ನೆಲೆವೀಡಾಗಿತ್ತು. ಇಲ್ಲಿಯ ಭುವನೇಂದ್ರ ಕಾಲೇಜು ಸುಸಜ್ಜಿತವಾಗಿದ್ದು, ದೇಶ–ವಿದೇಶಗಳಿಂದ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಬರುತ್ತಾರೆ. ಕಾರ್ಕಳದ ಸಾಲ್ಮರ ಮಾರ್ಗದಲ್ಲಿರುವ ಜುಮ್ಮಾ ಮಸೀದಿಯು ೧೯೭೨ರಲ್ಲಿ ಜೀರ್ಣೋದ್ಧಾರಗೊಂಡಿದ್ದು, ಆಕರ್ಷಕ ವಾಗಿದೆ. ಇಲ್ಲಿಯ ಭಾರತ್ ಬೀಡಿ ವರ್ಕ್ಸ್ ತನ್ನ ೩೦ ಮಾರ್ಕಿನ ಬೀಡಿಗಳಿಂದಾಗಿ ದೇಶವಿದೇಶಗಳಲ್ಲಿ ಖ್ಯಾತಿಪಡೆದಿದ್ದು, ಎರಡು ಬಾರಿ ರಾಷ್ಟ್ರೀಯ ಪ್ರಶಸ್ತಿಯನ್ನೂ ಗಳಿಸಿದ್ದು, ಅದರ ಸಂಸ್ಥಾಪಕರಾದ ಮಂಜುನಾಥಪ್ಪ (೧೯೧೩–೮೭)ರಿಂದಾಗಿ ಕಾರ್ಕಳದ ಹಿರಿಮೆ ಹೆಚ್ಚಿದೆ. ಅವರ ಹೆಸರಿನಲ್ಲಿ ೧೯೮೦ರಲ್ಲಿ ಸ್ಥಾಪನೆಗೊಂಡಿರುವ 'ಮಂಜುನಾಥ ಪೈ ಸಾಂಸ್ಕೃತಿಕ ಪ್ರತಿಷ್ಠಾನ' ಸಾಂಸ್ಕೃತಿಕ ಚಟುವಟಿಕೆಗೆ ಮೀಸಲಾಗಿದೆ. ಚೋಳ್ಪಾಡಿಯ ವಿಜಯ ಶಿಲ್ಪಶಾಲೆಯು ಪ್ರಸಿದ್ಧ ಶಿಲ್ಪಕಲಾ ಕೋವಿದರಾದ ಕೆ.ಶಾಮರಾಯ ಆಚಾರ್ಯರಿಂದ ೧೯೭೦ರಲ್ಲಿ ಆರಂಭಗೊಂಡಿದ್ದು, ಈಗಲೂ ಕಾರ್ಯನಿರ್ವಹಿಸುತ್ತಿದೆ. ಅವರ ಶಿಷ್ಯರಾದ ಶೇಷಪ್ಪ ಆಚಾರ್ಯರು ಕಾರ್ಕಳದ ಪೆರ್ವಾಜೆಯಲ್ಲಿ ಕಾರ್ಯಾಗಾರವನ್ನು ಹೊಂದಿದ್ದಾರೆ. ಈ ಪರಿಸರದಲ್ಲಿರುವ ವಿಶ್ವಕರ್ಮ ಜನಾಂಗದವರು ಸಂಘಟಿತರಾಗಿ ಶಿಲ್ಪಕಲಾರಂಗಕ್ಕೆ ಅಮೂಲ್ಯ ಕೊಡುಗೆ ನೀಡುತ್ತಿದ್ದಾರೆ. ರೆಂಜಾಳ ಸಮೀಪದ ಬೋರುಕಟ್ಟೆ ಗ್ರಾಮದಲ್ಲಿರುವ ಬೃಹತ್ ಶಿಲಾಸಮಾಧಿಯನ್ನು ಸ್ಥಳೀಯವಾಗಿ ಪಾಂಡವರಕಲ್ಲು ಎಂದು ಕರೆಯಲಾಗುತ್ತಿದ್ದು, ಕಿಂಡಿಕೋಣೆ ಕಲ್ಗೋರಿಯಾಗಿರುವ ಇದಕ್ಕೆ ತೆಳುವಾದ ಕಲ್ಲುಹಾಸಿರುವ ಕಲ್ಲು ಚಪ್ಪರವಿದ್ದು, ಕಬ್ಬಿಣದ ಬಳಕೆಯು ಅವರಿಗೆ ಗೊತ್ತಿದ್ದ ಅಂಶವನ್ನೂ ಇದು ಸೂಚಿಸುತ್ತದೆ. ***ಹಿರಿಯಂಗಡಿ :*** ಇಂದು ಕಾರ್ಕಳ ಪಟ್ಟಣದ ಭಾಗವೇ ಆಗಿರುವ ಹಿರಿಯಂಗಡಿಗೆ ಭೈರರಸರ ಕಾಲದಲ್ಲಿ 'ಪಾಂಡ್ಯನಗರಿ' ಎಂದೇ ಕರೆಯಲ್ಪಡುತ್ತಿದ್ದು, ಜೈನಧರ್ಮೀಯರ ಪ್ರಮುಖ ನೆಲೆಯಾಗಿ ಹಿಂದೊಮ್ಮೆ ೭೭೦ ಶ್ರಾವಕರ ಮನೆಗಳನ್ನು ಹೊಂದಿದ್ದ ಜೈನಬೀಡಾಗಿತ್ತು. ಅದರಿಂದಾಗಿ ಇಂದಿಗೂ ಹಲ್ಲರ ಬಸದಿ, ನೇಮಿನಾಥ ಬಸದಿ, ಗುರುಬಸದಿ, ಅನಂತನಾಥ ಬಸದಿ, ಆನೆಕೆರೆಯ ಚತುರ್ಮುಖ ಬಸದಿ, ಮುಂತಾದ ಬಸದಿಗಳ ಸಾಲನ್ನೇ ಇಲ್ಲಿ ನೋಡಬಹುದಾಗಿದೆ. ಹಿರಿಯಂಗಡಿ ಪರಿಸರದಲ್ಲಿರುವ ಏಳು ಶಾಸನಗಳಿಂದ (೧೩೩೩ ರಿಂದ ೧೫೪೨ರ ಕಾಲಾವಧಿಗೆ ಸೇರಿವೆ) ಇಲ್ಲಿಯ ಜೈನಬಸದಿಗಳ ನಿರ್ಮಾಣ ಹಾಗೂ ಅಭಿವೃದ್ಧಿಯ ಬಗ್ಗೆ ಸ್ಪಷ್ಟ ಚಿತ್ರ ಲಭಿಸುತ್ತದೆ. ಗುರುಗಳ ಬಸ್ತಿ ಬಳಿ ಇರುವ ೧೩೩೪ರ ಶಾಸನದಿಂದ ಕಾರ್ಕಳದ ಸಮಸ್ತ

ಗುಡ್ಡಗಳು ಶಾಂತಿನಾಥ ಬಸದಿಯನ್ನು ನಿರ್ಮಿಸಿ ದತ್ತಿಬಿಟ್ಟ ಅಂಶ ವೇದ್ಯವಾಗುತ್ತದೆ. ಇಲ್ಲಿಯ ಗುರು ಬಸದಿಯಲ್ಲಿ ಏಕಪೀಠದ ಮೇಲೆ, ಧರ್ಮನಾಥ, ಶಾಂತಿನಾಥ ಹಾಗೂ ಕುಂದುನಾಥ ತೀರ್ಥಂಕರ ಶಿಲ್ಪಗಳಿದ್ದು, ಬಸದಿಯ ಮೇಲ್ನೆಲೆಯಲ್ಲಿ ಪಾರ್ಶ್ವನಾಥ ಬಿಂಬವಿದೆ. ಈ ಗುಡಿಯ ಪ್ರವೇಶದ್ವಾರದ ಶಿಲೆಯ ಮೇಲೆ ಹಲ್ಲಿಯೊಂದನ್ನು ಕಡೆದಿರುವುದು ಕುತೂಹಲದ ವಿಚಾರವಾಗಿದೆ. ಇದೇ ಪರಿಸರದಲ್ಲಿರುವ ಅನಂತನಾಥಬಸದಿಯಲ್ಲಿ ಅನಂತನಾಥ ತೀರ್ಥಂಕರನ ಶಿಲ್ಪವಿದ್ದು, ಅಲ್ಲೇ ನಿಶಿದಿಕಲ್ಲೂ ಕೂಡ ಇದೆ. ಇಲ್ಲಿಯ ಅಮ್ಮನವರ ಬಸ್ತಿ ಪರಿಸರದಲ್ಲಿರುವ ಎರಡು ಶಾಸನ (೧೪೭೫ ಹಾಗೂ ೧೫೮೯)ಗಳಿಂದ ಹಿಂದೆ ಇದಕ್ಕೆ ತೀರ್ಥಂಕರ ಬಸ್ತಿ ಎಂಬ ಹೆಸರಿದ್ದು, ಊರ ೧೨ ಸೆಟ್ಟಿಯರು ಚೌವ್ವೀಸ್ ತೀರ್ಥಂಕರರಿರುವ ಮುಖಮಂಟಪವನ್ನು ನಿರ್ಮಿಸಿದ ಅಂಶವನ್ನೂ ಹೇಳುತ್ತಾ ಹಿಂದೆ ಇದೊಂದು ವಿದ್ಯಾಕೇಂದ್ರವಾಗಿದ್ದು, ೫೦೦೦ ಹಲರ ಮಠದಲ್ಲಿದ್ದ ಓದಿಸುವಾತನಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಇಲ್ಲಿರುವ ಹಲ್ಲರ (ಹಲರ) ಬಸದಿಯು ಆದಿನಾಥನಿಂದ ಪಾಶ್ವನಾಥನವರೆಗಿನ ಚೌವ್ವೀಸ್ ತೀರ್ಥಂಕರರ ಶಿಲ್ಪಗಳನ್ನು ಹೊಂದಿದ್ದು, ಎಲ್ಲವೂ ಸುಮಾರು ಎರಡೂವರೆ ಅಡಿ ಎತ್ತರದ ಶಿಲ್ಪಗಳಾಗಿವೆ. ಕಾರ್ಕಳದ ಹಲರು ಈ ಬಸದಿಯನ್ನು ಕಟ್ಟಿಸಿದ್ದರಿಂದ ಅದಕ್ಕೆ ಆ ಹೆಸರು ಬಂದಿದೆ. ಅಲ್ಲೆ ಸರಸ್ವತಿ, ಪದ್ಮಾವತಿಯರ ಶಿಲ್ಪಗಳಿದ್ದು, ನಂದೀಶ್ವರ ಮಂಟಪವೆಂದು ಕರೆಯಲಾಗುವ ಲೋಹದ ಕಿರುಮಂಟಪದಲ್ಲಿ ೫೨ ಜಿನಬಿಂಬ ಗಳನ್ನು ನೋಡಬಹುದಾಗಿದೆ. ಅಲ್ಲದೆ ಶ್ರುತಸ್ಕಂದ, ಗಣಧರಪಾದ, ಧರ್ಮಚಕ್ರ, ಗೋಮುಖವೆಂಬ ತೀರ್ಥದಬಟ್ಟಲುಗಳಿವೆ.

ಇದರ ಸನಿಹದಲ್ಲೇ ಇರುವ ನೇಮಿನಾಥ ಬಸದಿಯು ಹಿರಿಯಂಗಡಿಯ ಬಸದಿಗಳಲ್ಲೇ ಅತ್ಯಂತ ವಿಶಾಲದ್ದಾಗಿದ್ದು, ಈ ಬಸದಿಯ ಬಳಿಯಿರುವ ಎರಡು ಶಾಸನಗಳಲ್ಲಿ ೧೪೬೭ರ ಶಾಸನ ನೇಮಿನಾಥ ಚೈತ್ಯಾಲಯದಲ್ಲಿ ಪಾಂಡ್ಯದೇವ ಒಡೆಯರ ಹೆಸರಲ್ಲಿ ಕಾರ್ತಿಕ ಪೂಜೆ ಹಾಗೂ ಪಾರ್ಶ್ವದೇವರ ಸೇವೆ ಗಳಿಗೆಂದು ದಾನಬಿಟ್ಟ ಅಂಶವನ್ನು ದಾಖಲಿಸಿದರೆ, ಇನ್ನೊಂದು ಶಾಸನ ಚೌಟರು, ಅಜಿಲರು ಶಿಶಿಲದರಸರು ಮುಂತಾದ ಸ್ಥಳೀಯ ಅರಸರ ನಡುವಣ ಒಡಂಬಡಿಕೆಯ ದಾಖಲೆಯಾಗಿದೆ. ಈ ಬಸದಿಯು ೧೫೩೯ರಲ್ಲಿ ನಿರ್ಮಿಸಲ್ಪಟ್ಟಿದ್ದು, ಗರ್ಭಗೃಹದಲ್ಲಿರುವ ಸುಮಾರು ಐದು ಅಡಿ ಎತ್ತರದ ನೇಮಿನಾಥನ ಬಿಂಬವು ಆಕರ್ಷಕವಾಗಿದೆ. ಈ ಬಸದಿಯಲ್ಲಿ ಕೂಷ್ಮಾಂಡಿನಿ ಯಕ್ಷಿಯ ಸನ್ನಿಧಿಯೂ ಇದೆ. ಹೊರಮಂಟಪದಲ್ಲಿ ಗಣಪತಿ, ಗರುಡ, ಕೃಷ್ಣ, ಹನುಮಂತ ಮುಂತಾದ ದೇವಾನುದೇವತೆಯರ ಉಬ್ಬು ಶಿಲ್ಪಗಳಿವೆ. ಅಲ್ಲದೆ ಕೊಡಮಂತಾಯ ದೈವದ ಖಡ್ಗ–ಗುರಾಣಿಗಳಿವೆ. ದೀಪೋತ್ಸವದ ಸಮಯದಲ್ಲಿ ಬಳಸಲ್ಪಡುವ ಮರದ ರತ್ನಮಾಲೆ ಪಟ್ಟಿಕೆಗಳಿವೆ. ಬಸದಿಯ ನೇಮಿನಾಥ ಶ್ರುತಭಂಡಾರದಲ್ಲಿ ಪ್ರಾಚೀನ ಓಲೆಗರಿ ಗ್ರಂಥಗಳ ಸಂಗ್ರಹವಿದೆ. ಈ ಬಸದಿಯ ಮುಂಭಾಗದಲ್ಲಿ, ಮೂರು ಹಂತದ ಎತ್ತರದ ಪೀಠದ ಮೇಲೆ ನಿಂತಿರುವ ಉತ್ತುಂಗ ಮಾನಸ್ತಂಭವು ಅತ್ಯಾಕರ್ಷಕವಾಗಿದೆ. ಸುಮಾರು ೫೪ ಅಡಿ ಎತ್ತರವಿರುವ ಈ ಏಕಶಿಲಾ ಮಾನಸ್ತಂಭವು, ಇಡಿ ದೇಶದಲ್ಲೇ ಅತ್ಯುನ್ನತವಾದ ಸ್ತಂಭವಾಗಿದ್ದು, ಇದನ್ನು ನಾಲ್ವಡಿ ಅಭಿನವ ಪಾಂಡ್ಯನ (೧೪೫೫–೭೫) ಕಾಲದಲ್ಲಿ ನಿರ್ಮಿಸಲಾಗಿದೆ. ಈ ಮಾನಸ್ತಂಭದ ಪ್ರಮಾಣಬದ್ಧತೆ, ಸೌಂದರ್ಯ ಶೀಲತೆಗಳನ್ನು ವಿದೇಶಿ ವಿದ್ವಾಂಸ ವಾಲ್‌ಹೌಸ್ ಅತಿಶಯವಾಗಿ ಹೊಗಳಿದ್ದಾನೆ. ದಾನಶಾಲಾಮಠದ ಸ್ವಾಮಿಗಳ ಪಟ್ಟಬಂಧ ಮಹೋತ್ಸವವು ಇಲ್ಲಿಯ ಭದ್ರಮಂಟಪದಲ್ಲೇ ನಡೆಯುತ್ತಿದ್ದು, ನಿಯಮದಂತೆ ಈ ಮಂಟಪಕ್ಕೆ ೧೨ ಕಂಬಗಳಿವೆ. ಇದೇ ಬಸದಿಯ ಎಡ–ಬಲ ಭಾಗಗಳಲ್ಲಿರುವ ತೀರ್ಥಂಕರ ಬಸದಿಗಳಲ್ಲಿ ಕ್ರಮವಾಗಿ ಚಂದ್ರನಾಥ ಹಾಗೂ ಆದಿನಾಥ ತೀರ್ಥಂಕರ ಶಿಲ್ಪಗಳಿವೆ. ಇಲ್ಲಿಯ ಆನೆಕೆರೆ ಚತುರ್ಮುಖ ಬಸದಿಯೂ ಸೇರಿದಂತೆ ಇತರ ಬಸದಿಗಳೂ ರಮ್ಯವಾದ ಪರ್ಪಲೆ ಬೆಟ್ಟವನ್ನು ಹಿನ್ನೆಲೆಯಾಗಿ ಹೊಂದಿದ್ದು, ಸುಂದರ ತಾಣದಲ್ಲಿವೆ. ಈ ಬೆಟ್ಟದ ಬುಡದಲ್ಲಿರುವ ವಿಸ್ತಾರವಾದೊಂದು ಗವಿಯಲ್ಲಿ ಸದಾಕಾಲ ಒರ್ತೆ ನೀರು ಚಿಮ್ಮುತ್ತಿರುತ್ತದೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಮಾನವರ ವಸತಿ ನೆಲೆ ಅದಾಗಿತ್ತೆಂಬ ಅಂಶವನ್ನು ಸಂಶೋಧಕರು ಈಗಾಗಲೇ ಬೆಳಕಿಗೆ ತಂದಿದ್ದಾರೆ. ಗುಹೆಯಲ್ಲಿ ಹಯಾತ್ ಖಲಂಧರ್ ಎಂಬ ಮುಸ್ಲಿಂ ಫಕೀರ ತಂಗಿದ್ದನೆಂಬ ಪ್ರತೀತಿ ಇದ್ದು, ಇದರಿಂದಾಗಿ ಆ ಗುಹೆಯನ್ನು ಪ್ರವೇಶಿಸುವ

ಭಕ್ತರು "ಹಯಾತ್ ಖಲಂದರ್, ಗುಫಾ ಕೆ ಅಂದರ್" ಎಂದು ಉಚ್ಚಾರಿಸುವುದು ಸರ್ವೇಸಾಮಾನ್ಯವಾಗಿದೆ. ನವದಂಪತಿಗಳು ಈ ಗವಿಗೆ ನಡೆದುಕೊಳ್ಳುತ್ತಾರೆ. ದ್ವೀಪದಂತೆ ತೋರುವ ಆನೆಕೆರೆಯಲ್ಲಿ ನಡುವೆ ಚಂದಲದೇವಿಯ ಕುಮಾರ ಶ್ರೀ ಪಾಂಡ್ಯಪ್ಪೊಡೆಯನು ಸುಮಾರು ೧೫೬೩ರಲ್ಲಿ ನಿರ್ಮಿಸಿದ ಚತುರ್ಮುಖ ಬಸದಿಯನ್ನು ನೋಡಬಹುದಾಗಿದೆ. ಆ ಬಸದಿಯಲ್ಲಿ ಪಾರ್ಶ್ವನಾಥ ಮುಖ್ಯವಾದ, ಎಲ್ಲಾ ಮೂರು ನೆಲೆಗಳಲ್ಲೂ ಪೂಜೆ ಪುರಸ್ಕಾರ ಜರುಗಲೆಂದು ರಂಜಾಳ-ನಲ್ಲೂರುಗಳಲ್ಲಿ ದತ್ತಿ ಬಿಟ್ಟ ಅಂಶವನ್ನು ಅಲ್ಲೇ ಇರುವ ೧೫೬೩ರ ಶಾಸನ ದಾಖಲಿಸಿದೆ. ಈ ಬಸದಿಯನ್ನು ಕಾಲ್ನಡಿಗೆಯಲ್ಲಿ ತಲುಪಲು ಅನುಕೂಲವಾಗುವಂತೆ ಕೆರೆಯ ನಡುವೆ ರಸ್ತೆಯನ್ನು ನಿರ್ಮಿಸಲಾಗಿದೆ. ಮಂಗಳೂರು ಹೆಂಚಿನ ಛಾವಣಿಯನ್ನು ಹೊಂದಿರುವ, ಮನೆಯಂತೆ ಗೋಚರಿಸುವ ಈ ಬಸದಿಯ ಗರ್ಭಗೃಹದಲ್ಲಿ ನಾಲ್ಕು ದಿಕ್ಕಿಗೆ ಮುಖ ಮಾಡಿ ನಿಂತಿರುವ ಆದಿನಾಥ, ಚಂದ್ರನಾಥ, ಶಾಂತಿನಾಥ ಹಾಗೂ ಮಹಾವೀರ ತೀರ್ಥಂಕರರ ಶಿಲ್ಪಗಳನ್ನು ನೋಡಬಹುದಾಗಿದೆ. ಇದನ್ನೂ ವರಂಗದ ಕೆರೆ ಬಸದಿಯಂತೆ ಸಂರಕ್ಷಿಸುವ ಅಗತ್ಯವಿದ್ದು, ದೋಣಿ ವಿಹಾರಕ್ಕೂ ಅವಕಾಶ ಕಲ್ಪಿಸಬಹುದಾಗಿದೆ. ಗುರುರಾಯರ ಬಸದಿಯ ಬಳಿಯಿರುವ ೧೫೮೨ರ ಶಾಸನದಲ್ಲಿ ಗುರುರಾಯ ಬಸದಿಯ ಚಂದ್ರನಾಥ ಸ್ವಾಮಿಯ ಪೂಜಾವಿಧಿಗೆಂದು ದಾನ ಬಿಟ್ಟಿದ್ದನ್ನು ದಾಖಲಿಸಿದೆ. ಮಂಗಳಪಾದೆ ಕಾರ್ಕಳದಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಮಂಗಳಪಾದೆಗೆ ರಾಮಸಮುದ್ರದ ಸನಿಹದಲ್ಲೇ ಸಾಗುವಾಗ, ಅದರ ವಿಸ್ತಾರ ವಿಸ್ಮಯಗೊಳಿಸುತ್ತದೆ. ಸುಮಾರು ೪೨ ಎಕರೆ ವ್ಯಾಪಿಸಿರುವ ಇದು ಸಮುದ್ರದಂತೆ ಗೋಚರಿಸುತ್ತಿದ್ದು, ಅದನ್ನು ವೀರಪಾಂಡ್ಯನು ತನ್ನ ಸೋದರ ರಾಮ ಒಡೆಯನ ಹೆಸರಲ್ಲಿ ಸುಮಾರು ೧೪೩೦ರಲ್ಲಿ ನಿರ್ಮಿಸಿದನೆಂಬ ಅಭಿಪ್ರಾಯವಿದೆ. ಗುಡ್ಡಗಳ ನಡುವೆ ರೂಪುಗೊಂಡಿರುವ ಈ ಕೆರೆ ನಯನಮನೋಹರವಾಗಿದ್ದು ಅದರ ಒಡ್ಡನ್ನು ಕಟ್ಟುವಲ್ಲಿ ಸ್ಥಳೀಯ ಅರಸನ ಸೋದರಿಯು ಆತ್ಮಾರ್ಪಣೆ ಮಾಡಿಕೊಂಡಳೆಂಬ ಐತಿಹ್ಯ ಇಲ್ಲಿ ಚಾಲ್ತಿಯಲ್ಲಿದೆ. ರಾಮಸಮುದ್ರ ಹಾಗೂ ಆನೆಕೆರೆಗಳಿಗೆ ಜುಲೈ-ಆಗಸ್ಟ್ ತಿಂಗಳಲ್ಲಿ ಕೊಕ್ಕರೆಗಳು ಹಿಂಡಿಂಡಾಗಿ ಬಂದು ಮೊಟ್ಟೆಯಿಟ್ಟು ಮರಿಮಾಡಿಕೊಂಡು ಸಂಭ್ರಮದಿಂದಿರುವ ನೋಟ ವೀಕ್ಷಕರಿಗೆ ಮುದನೀಡುತ್ತದೆ. 'ಮುಂಡುಗ' ಎಂಬ ಮುಳ್ಳುಪೊದೆಯನ್ನು ಆಶ್ರಯಿಸಿ ಅವು ಜೀವಿಸುವುದರಿಂದ ಆ ಸಸ್ಯದ ರಕ್ಷಣೆಗೆ ಮುಂದಾಗುವ ಅಗತ್ಯವಿದೆ ಎಂಬ ಅಭಿಪ್ರಾಯ ಸ್ಥಳೀಯರಲ್ಲಿದೆ. ಇದನ್ನು ಸುಂದರ ಪಕ್ಷಿಧಾಮವನ್ನಾಗಿಸುವ ನಿಟ್ಟಿನಲ್ಲಿ ಸ್ಥಳೀಯ ಆಡಳಿತ ಮುಂದಾಗಬೇಕಾಗಿದೆ. ರಾಮಸಮುದ್ರಕ್ಕೆ ಅನತಿ ದೂರದಲ್ಲೇ ಇರುವ **'ಮಂಗಳಪಾದೆ'**ಯು ಕರಿಯ ಕಗ್ಗಲ್ಲಿನ ಬೆಟ್ಟಗಳಿರುವ ವಿಶಾಲ ಪ್ರದೇಶ: ನಸುನೀಲವರ್ಣದ ಈ ಶಿಲೆಗಳೇ ಕಾರ್ಕಳ-ಮೂಡಬಿದ್ರೆ ಪರಿಸರದ ಶಿಲ್ಪಕಲಾ ಐಸಿರಿಗೆ ಹಿಂದೆ ಕಾರಣವಾಗಿದ್ದು, ಇಂದು ದೇಶ-ವಿದೇಶಗಳಿಗೂ ಇಲ್ಲಿಂದಲೇ ಸಾವಿರಾರು ಕಲಾಕೃತಿಗಳು ರಫ್ತಾಗುತ್ತಿವೆ. ಧರ್ಮಸ್ಥಳದ ಬಾಹುಬಲಿ, ಫಿರೋಜಾಬಾದಿನ ಬಾಹುಬಲಿ, ದೆಹಲಿಯ ಕುತುಬ್‌ಮಿನಾರ್ ಗುಡ್ಡದ ಮಹಾವೀರ, ಜಪಾನಿನ ಅವಲೋಕಿತೇಶ್ವರ (೬೬ ಅಡಿ) ಸೇರಿದಂತೆ ವಿವಿಧ ಧರ್ಮದ ಸಾವಿರಾರು ಮೂರ್ತಿ-ಶಿಲ್ಪಗಳು ಮಂಗಳಪಾದೆಯ ಶಿಲಾರಾಶಿಯಲ್ಲಿ ತಮಿಳುನಾಡಿನ ಶಿಲ್ಪಿಗಳ ಕೈಯಲ್ಲಿ ಅರಳಿ ದೇಶ-ವಿದೇಶಗಳನ್ನು ತಲುಪುವ ಮೂಲಕ ಕಾರ್ಕಳಕ್ಕೆ ಖ್ಯಾತಿಯನ್ನು ತಂದಿವೆ. ಈ ಶಿಲಾಕಮ್ಮಟದ ಸೂತ್ರಧಾರಿ ರಂಜಾಳ ಗೋಪಾಲಶೆಣೈರವರಾಗಿದ್ದು, ಇಂದು ಅವರ ವಂಶಸ್ಥರು ಅದೇ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. **ಕೆರೆವಸೆ** (ಜನಸಂಖ್ಯೆ: ೨,೬೪೯): ತಾಲೂಕು ಕೇಂದ್ರ ಕಾರ್ಕಳದಿಂದ ೧೨ ಕಿ.ಮೀ ಉತ್ತರದಲ್ಲಿರುವ ಈ ಗ್ರಾಮವು ಹಿಂದೆ ಜೈನಧರ್ಮಿಯರ ವಸತಿ ನೆಲೆಯಾಗಿತ್ತು. ಅಲ್ಲಿರುವ ಜಿನ ಬಸದಿಯಿಂದಾಗಿ ಖ್ಯಾತಿ ಪಡೆದಿದೆ. ಹಿಂದೆ ಇದು ಭೈರರಸರ ರಾಜಧಾನಿಯಾಗಿ ಸ್ವಲ್ಪ ಕಾಲ ಮೆರೆದಿತ್ತು.

**ಕಾಪು** : ತಾಲೂಕು ಕೇಂದ್ರ ಉಡುಪಿಯಿಂದ ೧೨ ಕಿ.ಮೀ. ದಕ್ಷಿಣಕ್ಕೆ ಇರುವ ಹೋಬಳಿ ಕೇಂದ್ರ. ಪ್ರಮುಖ ಶಕ್ತಿ ಆರಾಧನಾ ಕೇಂದ್ರ. ಕಾಪು ಎಂಬುದು ಹಿಂದೆ ಸೀಮೆಗೆ ಇದ್ದ ಹೆಸರಾಗಿದ್ದು, ಐದು ಗ್ರಾಮಗಳನ್ನು ಒಳಗೊಂಡಿತ್ತು. ಕಾಪುವಿನಲ್ಲಿ ಒಟ್ಟು ನಾಲ್ಕು ಮಾರಿಗುಡಿಗಳಿವೆ. ಅವುಗಳನ್ನು ಕ್ರಮವಾಗಿ ಮಲ್ಲಾರು ಮಾರಿಗುಡಿ, ಹಳೆ ಮಾರಿಗುಡಿ, ಹೊಸ ಮಾರಿಗುಡಿ ದೇವಸ್ಥಾನ (ಪಡುಗ್ರಾಮ) ಹಾಗೂ

ಕಲ್ಯಮಾರಿಗುಡಿ ಎಂದು ಕರೆಯಲಾಗುತ್ತದೆ. ಅವುಗಳಲ್ಲಿ ಕೊನೆಯ ಮೂರು ಜನಪ್ರಿಯವಾಗಿವೆ. ತತ್ಪರಿಣಾಮವಾಗಿ ಇಲ್ಲಿ ಸುಗ್ಗಿ, ಆಟಿ, ಹಾಗೂ ಜಾರ್ದೆಎಂಬ ತುಳುಮಾಸಗಳಲ್ಲಿ ಮೂರು ಮಾರಿ ಜಾತ್ರೆಗಳಾಗುತ್ತವೆ. ಇವುಗಳಲ್ಲಿ ಸುಗ್ಗಿ ಮಾರಿಜಾತ್ರೆಯೇ ದೊಡ್ಡದು. ಅಲ್ಲದೆ ಇಲ್ಲಿ ನವರಾತ್ರಿಯನ್ನೂ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಜಾತ್ರೆ ಸಂದರ್ಭದಲ್ಲಿ ದೇವಿಯರನ್ನು ಜನಾರ್ದನ ಸನ್ನಿಧಿಯಿಂದ ಮೆರವಣಿಗೆಯಲ್ಲಿ ಕರೆತರುವುದರೊಂದಿಗೆ ಜಾತ್ರೆ ಆರಂಭವಾಗುತ್ತದೆ. ಮೂರು ಮಾರಿ ಮೂರ್ತಿ, ಮೂರು ರಥ, ಮೂರು ಮೆರವಣಿಗೆ ಎಲ್ಲವೂ ಜನಾರ್ದನನ ಸನ್ನಿಧಿಯಲ್ಲಿ ಒಟ್ಟುಗೂಡಿ, ತಂತಮ್ಮ ಸ್ಥಾನಗಳಿಗೆ ಮರಳಿ ಬರುವ ದೃಶ್ಯ ವಿಶಿಷ್ಟವಾಗಿರುತ್ತದೆ. ಈ ಜಾತ್ರೆಗಳ ಜೊತೆಗೆ ಮಾರಿಜಾತ್ರೆಯ ಖರ್ಚನ್ನು ಇಡಿಯಾಗಿ ವಹಿಸಿಕೊಂಡು ಹರಕೆಯ ರೂಪದಲ್ಲಿ ಜಾತ್ರೆಯನ್ನು ಭಕ್ತರು ನಡೆಸುವ ಸಂಪ್ರದಾಯವೂ ಇದೆ. ಅದನ್ನು ಹರಕೆ ಮಾರಿಪೂಜೆ ಎಂದು ಕರೆಯಲಾಗುತ್ತದೆ. ಇದನ್ನು ಪ್ರತಿ ೧೫ ದಿನಗಳಿಗೊಂದರಂತೆ ಎಡೆಬಿಡದೆ ನಡೆಸುವ ಸಂಪ್ರದಾಯ ರೂಢಿಯಲ್ಲಿದೆ. ಆಗ ಹೊರಗೆ ಹೆಚ್ಚಿನ ಗೌಜಿರುವುದಿಲ್ಲ. ಇಲ್ಲಿ ಗೌಡಸಾರಸ್ವತರ ವೆಂಕಟರಮಣ ದೇವಾಲಯವಿದ್ದು, ಹಳೆಮಾರಿಯಮ್ಮ, ಇಲ್ಲಿಂದ ಅಲಂಕೃತಗೊಂಡು ಮೆರವಣಿಗೆ ಹೊರಡುತ್ತಾಳೆ. ಮೂರನೆಯ ಮಾರಿಗುಡಿ(ಕಲ್ಯ) ಎದುರಿಗೆ ಆದಿಶಕ್ತಿ ಹಾಗೂ ವೀರಭದ್ರರ ದೇವಾಲಯಗಳಿವೆ.

ಸುಮಾರು ಎಂಟನೆಯ ಶತಮಾನದ ಶಾಸನಗಳಲ್ಲೂ 'ಕಾಪು' ಎಂದೇ ಉಲ್ಲೇಖಗೊಂಡಿರುವ ಈ ಊರು ಮರ್ದ ಹೆಗ್ಗಡೆ ಎಂಬ ಪಟ್ಟನಾಮವನ್ನುಳ್ಳ ಕಿರಿಯರಸರ ರಾಜಮನೆತನವೊಂದಕ್ಕೆ ರಾಜಧಾನಿಯಾಗಿತ್ತು. ಹಿಂದೆ ಈ ರಾಜ್ಯವು ಏಳು ಗ್ರಾಮಗಳನ್ನು ಒಳಗೊಂಡಿದ್ದು, ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಎರಡು ವೀರಗಲ್ಲುಗಳಾಗಿದ್ದು, ಮರ್ದಹೆಗ್ಗಡೆ ಹಾಗೂ ಕಾರ್ಕಳದ ಭೈರರಸರ ನಡುವಣ ಕಾಳಗಕ್ಕೆ ಸಂಬಂಧಿಸಿದ್ದಾಗಿವೆ. ಇಲ್ಲಿಯ ೧೩೨೫ರ ಶಾಸನ ಸಿಂಗಣ್ಣಸಾಹಣಿಯ ದತ್ತಿಯನ್ನು ಉಲ್ಲೇಖಿಸಿದರೆ ೧೪೯೯ರ ಇನ್ನೊಂದೂ ದತ್ತಿ ಶಾಸನವಾಗಿದ್ದು, ಸುಮಾರು ೧೫೫೮ರ ಶಾಸನವೊಂದರಲ್ಲಿ 'ಕಾಪಿನ ರಾಜ್ಯ' ಎಂಬ ಉಲ್ಲೇಖವಿದೆ. ಇಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ತೀರ್ಥಂಕರ ಬಸದಿ ಹಾಗೂ ವಾಸುದೇವ ದೇವಸ್ಥಾನಗಳಿವೆ. ಈ ಪರಿಸರದಲ್ಲಿ ಮುಸ್ಲಿಮರ ನಾಲ್ಕಾರು ಮಸೀದಿಗಳಿವೆ. ಮಲ್ಲಾರು ಗ್ರಾಮದಲ್ಲಿ ಪ್ರಾಚೀನ ಜನಾರ್ದನ ದೇವಾಲಯವಿದೆ. ಪರಶುರಾಮ ಪ್ರತಿಷ್ಠಾಪಿತವೆಂದು ಹೇಳಲಾಗುವ ಈ ಗುಡಿಯ ಪ್ರವೇಶಗೋಪುರ ಆಕರ್ಷಕವಾಗಿದೆ.

**ಕಿರುಮಂಜೇಶ್ವರ** (ಜನಸಂಖ್ಯೆ: ೭,೩೭೮) : ತಾಲೂಕು ಕೇಂದ್ರ ಕುಂದಾಪುರದಿಂದ ೨೨ ಕಿ.ಮೀ. ವಾಯವ್ಯಕ್ಕೆ ಸಮುದ್ರದಂಚಲ್ಲಿ ಇರುವ ಇದು ಅಲ್ಲಿರುವ ಕಿರುಮಂಜೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಅಲ್ಲದೆ ಪ್ರಾಚೀನ ಅಗಸ್ತ್ಯೇಶ್ವರ ದೇವಾಲಯವೂ ಇಲ್ಲಿದ್ದು, ಹಿಂದೆ ಇದೊಂದು ಅಗ್ರಹಾರವಾಗಿತ್ತು.

**ಕುಂಜೂರು :** ಎಲ್ಲೂರು (ಜನಸಂಖ್ಯೆ: ೫೮೪೪) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ ಇದಾಗಿದ್ದು, ಹಿಂದೆ ಋಷಿಮುನಿಗಳು ಯಾಗ–ಯಜ್ಞ ಮಾಡಿದ ಪವಿತ್ರತಾಣ ಎಂಬ ಪ್ರತೀತಿ ಇದ್ದು, ಕುಂಡಂತಾಯ, ಅಗ್ಗಿತ್ತಾಯ ಮುಂತಾದ ಕುಟುಂಬನಾಮಗಳು ಈ ಭಾಗದಲ್ಲಿ ಈಗಲೂ ರೂಢಿಯಲ್ಲಿವೆ. ಕುಂಜೂರು ಸಮೀಪದ ಕಾನನದ ನಡುವೆ ವಾರಾಣಾಸಿ ಹೊಳೆಯ ಆಚೆ ದಡದಲ್ಲಿರುವ ದುರ್ಗಾಲಯದಿಂದಾಗಿ ಪ್ರಸಿದ್ಧವಾಗಿದೆ. ವಿಶಾಲವೂ ಭವ್ಯವೂ ಆದ ದೇವಾಲಯದ ಗರ್ಭಗುಡಿಯಲ್ಲಿರುವ ದುರ್ಗಾದೇವಿಯ ಶಿಲ್ಪವು, ನೀಲಾವರದ ಮೂರ್ತಿಯನ್ನೇ ಹೋಲುವ ಅಪರೂಪದ ಪ್ರಾಚೀನ ಶಿಲ್ಪವೆಂದು ಪಿ.ಗುರುರಾಜಭಟ್ಟರು ಅಭಿಪ್ರಾಯಪಡುತ್ತಾರೆ. ಪುತ್ತೂರು ತಾಲೂಕಿ(ದಕ್ಷಿಣ ಕನ್ನಡ)ನ ಕುಂಜೂರಿನಲ್ಲೂ ಮಹಿಷಾಸುರಮರ್ದಿನಿಯ ವಿಲಕ್ಷಣ ಮೂರ್ತಿಯಿರುವ ಅಂಶವನ್ನು ವೈ. ಉಮಾನಾಥ ಶೆಣೈ ದಾಖಲಿಸಿದ್ದಾರೆ. ಭಾರ್ಗವಮುನಿ ಪ್ರತಿಷ್ಠಿತವೆಂದು ಹೇಳಲಾಗುವ ಈ ದುರ್ಗೆಯ ವಾರ್ಷಿಕ ರಥೋತ್ಸವವು ವಿಜೃಂಭಣೆಯಿಂದ ಜರುಗುತ್ತದೆ.

**ಕುಂದಾಪುರ** (ಜನಸಂಖ್ಯೆ: ೨೮,೫೯೧) : ತಾಲೂಕು ಕೇಂದ್ರವಾಗಿರುವ ಕುಂದಾಪುರವು ಉಪವಿಭಾಗಿಯ ಕೇಂದ್ರವೂ ಆಗಿದ್ದು, ಜಿಲ್ಲಾ ಕೇಂದ್ರ ಉಡುಪಿಯಿಂದ ಉತ್ತರಕ್ಕೆ ೩೬ ಕಿ.ಮೀ. ದೂರದಲ್ಲಿದೆ. ಇಂದು ಪುರಸಭೆಯ ಆಡಳಿತಕ್ಕೊಳಪಟ್ಟಿರುವ ಈ ಪಟ್ಟಣವು ಹಿಂದೆ ಪ್ರಮುಖ ಸ್ಥಳವಾಗಿದ್ದು, ಅಲ್ಲಿರುವ ಕುಂದೇಶ್ವರ ದೇವಾಲಯದಿಂದಾಗಿ ಖ್ಯಾತಿ ಪಡೆದಿದೆ. ಹದಿಮೂರನೆಯ ಶತಮಾನದ ಶಾಸನಗಳಲ್ಲೂ 'ಕುಂದಾಪುರ' ಎಂದೇ ಉಲ್ಲೇಖಿತಗೊಂಡಿದ್ದು, ಊರಿಗೆ ಆ ಹೆಸರು ಬರಲು ಆಳುಪ ಕುಂದವರ್ಮ ಕಾರಣನೆಂಬ ಅಭಿಪ್ರಾಯವೂ ಸೇರಿದಂತೆ, ವಿಭಿನ್ನ ವಿವರಣೆಗಳಿವೆ. ಕುಂದಮಲ್ಲಿಗೆ ಎಂಬ ಹೂವಿನಿಂದಾಗಿ ಇಲ್ಲವೇ ಮರಳುದಿಣ್ಣೆಯ ಮೇಲಿರುವ ಊರು ಎಂಬ ಅರ್ಥದಲ್ಲಿ ಈ ಹೆಸರು ಬಂದಿದೆ ಎಂಬ ವಾದವೂ ಇದೆ. ಕುಂದಾಪುರವು ಐದು ನದಿಗಳು ಸಾಗರವನ್ನು ಸೇರುವ ಅಳಿವೆ ಬಾಯಲ್ಲಿರುವುದು ಗಮನಾರ್ಹ. 'ಕುಂದಾಪುರ' ದ ಮೊದಲ ಉಲ್ಲೇಖ ಕುಂದೇಶ್ವರ ಗುಡಿ ಆವರಣದಲ್ಲಿರುವ ೧೨೬೨ರ ಶಾಸನದಲ್ಲಿ ಕಂಡುಬರುತ್ತದೆ.

ಕುಂದಾಪುರದ ಕೇಂದ್ರಬಿಂದುವಾದ ಕುಂದೇಶ್ವರ ದೇವಾಲಯವು ಸುಮಾರು ೫೨ ಅಡಿ ಎತ್ತರದ ದ್ರಾವಿಡ ಶೈಲಿಯ ಆಕರ್ಷಕ ದ್ವಾರಗೋಪುರವನ್ನು ಹೊಂದಿರುವ ವಿಶಾಲಗುಡಿಯಾಗಿದೆ. ಗರ್ಭಗೃಹದಲ್ಲಿ ಅಪರೂಪದ್ದೆಂದು ಹೇಳಲಾಗುವ ಕುಂದೇಶ್ವರ ಲಿಂಗವಿದ್ದು, ನಂದಿಮಂಟಪದಲ್ಲಿ ನಂದಿಯ ಕಲಾತ್ಮಕವಾದ ಶಿಲ್ಪವಿದೆ. ಗುಡಿಯ ಆವರಣದಲ್ಲಿ ಪಾರ್ವತಿ ಮತ್ತು ಗಣಪತಿಯ ಪ್ರತ್ಯೇಕ ಸನ್ನಿಧಿಗಳಿವೆ. ಪೇಟೆಬೀದಿಯಲ್ಲಿ ದೈವಜ್ಞಬ್ರಾಹ್ಮಣ ಸಮಾಜಕ್ಕೆ ಸೇರಿದ ಲಕ್ಷ್ಮೀನಾರಾಯಣ ದೇವಾಲಯವಿದೆ. ಗರ್ಭಗೃಹದಲ್ಲಿ ಪಂಚಫಣಿ ಸರ್ಪಛಾಯೆಯಲ್ಲಿ ವಿರಾಜಿಸುತ್ತಿರುವ ಲಕ್ಷ್ಮೀನಾರಾಯಣದೇವರ ಮೂರ್ತಿಯು ವಿಶಿಷ್ಟವಾದುದೆಂದು ಕೆ. ಅನಂತರಾಮು ದಾಖಲಿಸಿದ್ದಾರೆ. ದೇವಾಲಯದಲ್ಲಿ ನವಗ್ರಹಸ್ಥಾನವಿದೆ. ಇದೇ ರೀತಿ ಪೇಟೆಯ ವೆಂಕಟರಮಣ ದೇವಾಲಯವೂ ಭವ್ಯವಾಗಿದ್ದು, ಗೌಡಸಾರಸ್ವತ ಬ್ರಾಹ್ಮಣರು ಆರಾಧಿಸುವ ತಾಣವಾಗಿದ್ದು, ವಿಶಾಲವಾಗಿದೆ. ಕುಂದೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ ರಾಘವೇಂದ್ರ ಸ್ವಾಮಿಗಳ ಬೃಂದಾವನವಿದೆ. ಖಾರ್ವಿಕೇರಿಯ ದಿಕ್ಕಿನಲ್ಲಿ ಸೇರ್ವೆಗಾರ ಸಮಾಜಕ್ಕೆ ಸೇರಿದ ಇತ್ತೀಚಿನದಾದ ಸೀತಾರಾಮಚಂದ್ರ ದೇವಾಲಯವಿದೆ. ಖಾರ್ವೇಕೇರಿಯಲ್ಲಿ ಮಹಾಕಾಳಿ ದೇವಾಲಯವಿದೆ. ಇದಕ್ಕೆ ಸನಿಹದಲ್ಲೇ ಪಂಚಗಂಗಾವಾಳಿ ತೀರದುದ್ದಕ್ಕೂ ಕಪ್ಪೆಚಿಪ್ಪು ಸಂಗ್ರಹಿಸುವ ಪುಟ್ಟ ಪುಟ್ಟ ದೋಣಿಗಳ ಸಾಲನ್ನು ಕಾಣಬಹುದಾಗಿದೆ. ತಾಲೂಕು ಕಚೇರಿಯ ಬಳಿ ಇರುವ ವೀರಗಲ್ಲು ಅಪರೂಪವಾಗಿದ್ದು ವಿಶಿಷ್ಟವಾಗಿದೆ.

ಕುಂದಾಪುರದಲ್ಲಿ ಮೈಲಾರೇಶ್ವರ ಮಠ, ಜಂಗಮರ ಮಠ, ರಾಯಪ್ಪನ ಮಠ, ವ್ಯಾಸರಾಜರ ಮಠ, ಬಾಸರಿ ಮಠ ಮುಂತಾದ ಮಠಗಳಿವೆ. ಅಲ್ಲದೆ ಚಿಕ್ಕಮ್ಮ, ರಕ್ತೇಶ್ವರಿ, ಸೀತಾಳಮ್ಮ, ಜಟ್ಟಿಗೇಶ್ವರ, ಉಮ್ಮೆಲ್ತಿ, ನಾಗಬೊಬ್ಬರ್ಯ ಮುಂತಾದ ದೈವಸ್ಥಾನಗಳಿವೆ. ಇಲ್ಲಿ ಕ್ರೈಸ್ತರ ರೋಸರಿ ಇಗರ್ಜಿ, ಪ್ರಾಟೆಸ್ಟೆಂಟ್ ಚರ್ಚು, ಹಜರತ್ ಸುಲ್ತಾನ್ ಸೈಯ್ಯದ್ ಯೂಸುಫ್ ವಲಿಯುಲ್ಲಾ ರಿಫಾಯಿ ಸಂತನ ದರ್ಗಾ ಇದ್ದು, ವರ್ಷಂಪ್ರತಿ ರಬಿವುಲ್ ಆಖೈರ್ ಚಾಂದ್ ಎಂಟರಂದು ಉರುಸು ಜರುಗುತ್ತದೆ.

**ಕುಂಭಾಸಿ** (ಜನಸಂಖ್ಯೆ: ೪,೭೬೧) ತಾಲೂಕು ಕೇಂದ್ರ ಕುಂದಾಪುರದಿಂದ ಒಂಭತ್ತು ಕಿ.ಮೀ. ದಕ್ಷಿಣಕ್ಕೆ ರಾಷ್ಟ್ರೀಯ ಹೆದ್ದಾರಿ ೧೫ರ ಅಂಚಲ್ಲಿರುವ ಯಾತ್ರಾಸ್ಥಳ. ಪರಶುರಾಮ ಕ್ಷೇತ್ರದ ಸಪ್ತ ಕ್ಷೇತ್ರಗಳಲ್ಲಿ ಇದೂ ಒಂದು. ಭೀಮನ ಕೈಯಲ್ಲಿ ಕುಂಬಾಸುರನು ಹತನಾದ ಸ್ಥಳ ಇದಾದುರಿಂದ ಆ ಹೆಸರು ಬಂದಿದೆಯೆಂಬ ಪೌರಾಣಿಕ ನಂಬಿಕೆ ಇದ್ದು, ಶಾಸನಗಳಲ್ಲಿ 'ಕುಂಭಾಶಿ' ಎಂದೇ ಇದು ಉಲ್ಲೇಖಿತಗೊಂಡಿದೆ. ಇಲ್ಲಿಂದ ವರದಿಯಾಗಿರುವ ಶಾಸನಗಳಲ್ಲಿ ೧೪೬೭ರ ಶಾಸನ, ಕುಂಭಾಶಿಯ ಮಹಾದೇವರ ನಿತ್ಯಕಟ್ಟಳೆ, ಪಂಜಿನೆಣ್ಣೆಗಳಿಗೆಂದು ನಗದು ದಾನ ನೀಡಿದ್ದನ್ನು ಹೇಳಿದರೆ, ೧೫೬೨ರ ಶಾಸನ ಕುಂಭಾಸಿಯ ಉಮಾಮಹೇಶ್ವರ ಲಕ್ಷ್ಮೀನಾರಾಯಣ ಗುಡಿ, ಮಠ ಹಾಗೂ ಛತ್ರಗಳಿಗೆ ದತ್ತಿಬಿಟ್ಟಿದ್ದನ್ನೂ ದಾಖಲಿಸಿದೆ. ಇಲ್ಲಿಯ ಹರಿಹರ ಹಾಗೂ ಆನೆಗುಡ್ಡೆ ವಿನಾಯಕ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿರುವ ಇದು ಚತುರ್ಯುಗ ಕ್ಷೇತ್ರವೆಂದೂ ಖ್ಯಾತಿ ಪಡೆದಿದ್ದು, ಕ್ರಮವಾಗಿ ಹರಿಹರ, ಮಧುವನ, ಗೌತಮ ಹಾಗೂ

ಕುಂಭಾಸಿ ಕ್ಷೇತ್ರವೆಂದು ಕರೆಯಲ್ಪಟ್ಟಿತ್ತೆಂದು ಹೇಳಲಾಗುತ್ತದೆ. ಇಲ್ಲಿಯ ಆನೆಗುಡ್ಡೆಯ ತಪ್ಪಲಿನಲ್ಲಿರುವ ಹರಿಹರ ದೇವಾಲಯವು ಜಲಭರಿತವಾಗಿದ್ದು, ಗರ್ಭಗೃಹದ ಜಲಕುಂಡಿಕೆಯಲ್ಲಿ ಹರಿ–ಹರರು ನೆಲೆಸಿದ್ದಾರೆಂಬ ಪ್ರತೀತಿ ಇದ್ದು, ಆ ಜಲಕುಂಡವು ಗೌತಮರ ಕಮಂಡಲವೆಂದೂ ಅದರಲ್ಲಿ ಸಾಕ್ಷಾತ್ ಗಂಗಾದೇವಿಯೇ ಜಲರೂಪಿಯಾಗಿ ನೆಲೆಸಿದ್ದಾಳೆಂದೂ ಕ್ಷೇತ್ರ ಪುರಾಣವು ಹೇಳುತ್ತದೆ. ಕುಂಭದಲ್ಲಿ ಗಂಗಾದೇವಿ ನೆಲೆಯಾದುದರಿಂದ ಕಾಶಿಕ್ಷೇತ್ರವೇ ನೆಲೆಗೊಂಡಂತಾಗಿ, ಇದರಿಂದಾಗಿ ಕುಂಭಕಾಶಿ ಎಂದು ಕರೆಯಲ್ಪಟ್ಟು, ಅದೇ ಕುಂಬಾಸಿ ಆಯಿತೆಂದು ಹೇಳಲಾಗುತ್ತದೆ. ಭಕ್ತರ ಪೂಜೆಗೆಂದು ಹರಿ–ಹರರ ಲೋಹದ ಬಿಂಬಗಳನ್ನು ಕಂಬಗಳ ಮೇಲೆ ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಆವರಣದಲ್ಲೇ ಮಧ್ಯಮ ಗಾತ್ರದ ಸೂರ್ಯ ಹಾಗೂ ಚಂದ್ರ ಪುಷ್ಕರಣಿಗಳಿವೆ. ಅಂಬಿಕೆಯ ಕಾರ್ಯಸಾಧನೆಗಾಗಿ ಭೂಲೋಕಕ್ಕೆ ಬಂದ ವಿನಾಯಕನು ನೆಲೆಯಾದ ಗುಡ್ಡವೇ ಆನೆಗುಡ್ಡೆ ಎಂದು ಹೆಸರಾಯಿತೆಂದು ಹೇಳಲಾಗುತ್ತದೆ.

ಹರಿಹರ ದೇವಾಲಯದಿಂದ ಸ್ವಲ್ಪ ಮೇಲಕ್ಕಾದಂತೆ ಆದಿಸ್ಥಾನವೆಂದು ಹೇಳಲಾಗುವ ಸೂರ್ಯದೇವಾಲಯವು ಪುರಾತನದ್ದಾದರೂ, ಸರಳವಾಗಿದ್ದು, ಒಳಗೆ ನಾಲ್ಕಡಿ ಎತ್ತರದ ಆದಿತ್ಯ ಬಿಂಬವಿದೆ. ಚತುರ್ಭುಜಧಾರಿ ಸೂರ್ಯನ ಎರಡೂ ಮುಂಗೈಗಳಲ್ಲಿ ಕಮಲಗಳಿವೆ. ಹರಿಹರ ಗುಡಿಯ ದಕ್ಷಿಣ ಭಾಗದ ಕಿರುಗುಡಿಯಲ್ಲಿ ಕೇಶವ ಶಿಲ್ಪವಿದೆ. ಅಲ್ಲೆ ಕುಂಭಾಸಿ ಮಠವೂ ಇದೆ. ಇಲ್ಲಿಯ ಹರಿಹರ ದೇವಾಲಯವು ಮೂಲತಃ ಮಹಾಲಿಂಗೇಶ್ವರ ಗುಡಿಯಾಗಿದ್ದು, ಇದನ್ನು ಮಧ್ಯಕಾಲೀನ ಶಾಸನಗಳಲ್ಲಿ ಮಹಾದೇವನೆಂದೇ ಉಲ್ಲೇಖಿಸಲಾಗಿದ್ದು, ನಂತರದಲ್ಲಿ ಹರಿಹರ ದೇವಾಲಯವಾಗಿ ಪರಿವರ್ತಿಸಲ್ಪಟ್ಟಿರಬೇಕೆಂದು, ಗುರುರಾಜಭಟ್ಟರೂ ಸೇರಿದಂತೆ ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ನಾಗಾಚಲ ಎಂದೂ ಪೌರಾಣಿಕವಾಗಿ ಕರೆಯಲ್ಪಡುವ ಆನೆಗುಡ್ಡೆಯ ಮೇಲಿರುವ ವಿನಾಯಕ ದೇವಾಲಯದಲ್ಲಿ ಉದ್ಭವಮೂರ್ತಿ ವಿನಾಯಕನನ್ನು ಆರಾಧಿಸಲಾಗುತ್ತದೆ. ಗಣಪತಿಗೆ ಪ್ರಿಯವಾದ ಗರಿಕೆ ಹುಲ್ಲನ್ನು ಇಲ್ಲಿ ಹರಕೆ ಸಲ್ಲಿಸುವ ಸಂಪ್ರದಾಯವಿದೆ. ಜೀರ್ಣೋದ್ಧಾರಗೊಂಡಿರುವ ಈ ದೇವಾಲಯದ ಭಿತ್ತಿಯಲ್ಲಿ ಪುರಾಣ ಕಥನಶಿಲ್ಪಗಳಿದ್ದು, ಹಾಳಾಗದಿರಲೆಂದು ಗಾಜಿನ ಕವಚವನ್ನು ಹಾಕಲಾಗಿದೆ. ಈ ಪರಿಸರದಲ್ಲಿ ನೂತನ ಕಲ್ಪನೆಯಿಂದ ಕೂಡಿದ ಗಣಪತಿ ಶಿಲ್ಪಗಳಿವೆ. ಬದಿಯಲ್ಲಿರುವ ಕಾರಂತ ವನ ಆಕರ್ಷಕವಾಗಿದೆ. ಈ ದೇವರ ಜಾತ್ರೆಯು ಮಾರ್ಗಶಿರ ಶುದ್ಧ ಚತುರ್ಥಿಯಂದು ವಿಜೃಂಭಣೆಯಿಂದ ಜರುಗುತ್ತದೆ. ಈ ಪರಿಸರದಲ್ಲಿದ್ದ ಪಾಂಡವರ ಪಾತ್ರೆ, ಒಲೆ ಎಂದು ಹೇಳುವ ಕುರುಹುಗಳಿಂದು ಕಣ್ಮರೆಯಾಗಿದ್ದರೂ, ಹಿಂದೆ ಇದು ಶಿಲಾಯುಗ ಸಂಸ್ಕೃತಿಯ ನೆಲೆಯಾಗಿತ್ತೆಂದು ತರ್ಕಿಸಲು ಅವಕಾಶವಿದೆ.

**ಕುಡಚಾದ್ರಿ :** ಪಶ್ಚಿಮ ಘಟ್ಟದಲ್ಲಿರುವ ಉನ್ನತ ಗಿರಿಶ್ರೇಣಿ ಇದಾಗಿದ್ದು, ಕುಂದಾಪುರ ತಾಲೂಕು ಹಾಗೂ ಶಿವಮೊಗ್ಗ ಜಿಲ್ಲೆಗಳ ನಡುವಣ ಗಡಿಯಾಗಿದೆ. ಸಮುದ್ರಮಟ್ಟದಿಂದ ಸುಮಾರು ೪,೪೧೧ ಅಡಿ ಎತ್ತರ ದಲ್ಲಿರುವ ಇದು ಭೂ ಮಟ್ಟದಿಂದ ೨೦೦೦ ಅಡಿ ಎತ್ತರವಿದೆ. ಶಿವಮೊಗ್ಗ ಭಾಗದಲ್ಲಿ ದಟ್ಟವಾದ ಅರಣ್ಯದಿಂದ ಆವೃತವಾಗಿರುವ ಈ ಗಿರಿಯ ಪಶ್ಚಿಮ ಭಾಗದಲ್ಲೂ ಕಾನನವಿದ್ದು, ಜಿಲ್ಲೆಯಲ್ಲಿ ಸುಮಾರು ೪೦೦೦ ಅಡಿಗಳಷ್ಟು ಇಳಿಕೆಯು ಕಂಡು ಬರುತ್ತದೆ. ಕೊಲ್ಲೂರಿನಿಂದ ಕೊಡಚಾದ್ರಿಗೆ ೨೨ ಕಿ.ಮೀ ಕ್ರಮಿಸಿ ತಲುಪಬಹುದಾಗಿದ್ದು, ಕೊಲ್ಲೂರಿನಿಂದ ನಾಗೋಡಿಯವರೆಗೂ ಬಸ್ಸುಮಾರ್ಗದಲ್ಲೂ, ಮುಂದೆ ಕಾಲ್ನಡಿಗೆಯಲ್ಲೂ ಸಾಗಿ ಕೊಡಚಾದ್ರಿಯ ಶಿರವನ್ನು ತಲುಪಿದಾಗ ಕಾಣಸಿಗುವ ರುದ್ರಗಂಭೀರ ಪ್ರಾಕೃತಿಕ ದೃಶ್ಯ ಮೈನಡುಗಿಸುತ್ತದೆ. ಸೂರ್ಯೋದಯದ ಸೊಬಗನ್ನು ಸವಿಯಲು ಸೂಕ್ತವಾದ ವೆಂಕಟರಾಯನದುರ್ಗ, ಸೂರ್ಯಾಸ್ತವನ್ನು ವೀಕ್ಷಿಸಲು ಸೂಕ್ತವಾದ ಸರ್ವಜ್ಞ ಪೀಠಗಳು ಇಲ್ಲಿನ ವಿಶೇಷವಾಗಿದೆ. ಈ ಗಿರಿಯ ನಡು ಮಧ್ಯಭಾಗದಲ್ಲಿರುವ ಹುಲಿದೇವನ ಗುಡಿಯಲ್ಲಿ ೩೨ ಕೈಗಳನ್ನುಳ್ಳ ಹುಲಿದೇವನ ಶಿಲ್ಪವಿರುವುದಾಗಿ ಹೇಳಲಾಗುತ್ತದೆ. ಈ ಗಿರಿಯ ತಪ್ಪಲಿನಲ್ಲಿ ಅಂಬವನ ಎಂಬ ದಟ್ಟವನವಿದ್ದು, ದುರ್ಗಾಲಯವೂ ಇದೆ. ಬೆಟ್ಟದ ತುತ್ತತುದಿಯಿಂದ ಪಶ್ಚಿಮಘಟ್ಟ, ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವಿಹಂಗಮ ನೋಟವನ್ನು ಕಾಣಬಹುದಾಗಿದೆ. ಆಯುರ್ವೇದ ಸಸ್ಯಗಳ ಆಗರವಾಗಿರುವ ಈ ಗಿರಿಶ್ರೇಣಿಯ ಬುಡದಲ್ಲಿ ಕಾಳಭೈರವ

ಹಾಗೂ ಉಮಾಮಹೇಶ್ವರಿಯ ದೇವಾಲಯಗಳಿವೆ. ಈ ಗುಡಿಗಳ ನಡುವೆ ಸರೋವರವೊಂದಿದ್ದು, ಸೌರ್ಪಣಿಕಾ ನದಿಯ ಉಗಮಸ್ಥಾನ ಅದೇ ಆಗಿದೆ. ಆದಿಶಂಕರರು ದೇವಿಯನ್ನು ಧ್ಯಾನಿಸಿ, ದೇವಿ ಕೃಪಾಕಟಾಕ್ಷವನ್ನು ಪಡೆದದ್ದು ಇಲ್ಲೇ ಎಂಬ ಅಭಿಪ್ರಾಯವೂ ಇದೆ.

**ಕೊಲ್ಲೂರು** (ಜನಸಂಖ್ಯೆ: ೨,೭೩೧) : ತಾಲೂಕು ಕೇಂದ್ರ ಕುಂದಾಪುರದಿಂದ ೪೨ ಕಿ.ಮೀ. ದೂರದಲ್ಲಿರುವ ಪ್ರಮುಖ ಧಾರ್ಮಿಕ ಕೇಂದ್ರ. ಮೋಕ್ಷದಾಯಕ ಸಪ್ತಕ್ಷೇತ್ರಗಳಲ್ಲೊಂದು ಎಂದೇ ಖ್ಯಾತಿ ಪಡೆದಿದ್ದು, ಮೂಕಾಂಬಿಕಾ, ಜಡ್ಕಲ್, ಭದ್ರಗೂಡಿ ಮುಂತಾದ ದಟ್ಟವಾದ ಗಿರಿಅರಣ್ಯಗಳ ನಡುವೆ ಸೌಪರ್ಣಿಕಾ (ಕೊಲ್ಲೂರು)ನದಿ ತೀರದ ಮೇಲಿದ್ದು, ಮೂಕಾಂಬಿಕಾ ದೇವಿಯ ನೆಲೆಯಾಗಿದೆ. ಆಲಯಾಶ್ರಿತ ಗ್ರಾಮವಾದ ಇದನ್ನು ಕೇರಳಿಯರು **'ಮೂಕಾಂಬಾ'** ಎಂದೇ ಕರೆಯುತ್ತಾರೆ. ಸರ್ವಸಿದ್ಧಿಕ್ಷೇತ್ರವೆಂದೂ ಕರೆಯಲ್ಪಡುವ ಇಲ್ಲಿನ ದೇವಿಯ ಆಲಯಕ್ಕೆ ಆದಿಶಂಕರರು ಭೇಟಿ ನೀಡಿದ್ದರೆಂಬ ಸ್ಥಳೀಯ ಐತಿಹ್ಯವಿದ್ದು, ದೇವಿಯ ಪಂಚಲೋಹದ ವಿಗ್ರಹವನ್ನು ಮಾಡಿಸಿ ಚಕ್ರಯಂತ್ರಸಹಿತ ಶಾಸ್ತ್ರೋಕ್ತವಾಗಿ ಅಲ್ಲಿ ಪ್ರತಿಷ್ಠಾಪಿಸಿದರೆಂದೂ ಹೇಳಲಾಗುತ್ತದೆ. ಅಲ್ಲದೆ ವಾದಿರಾಜರು ಇಲ್ಲಿಗೆ ಭೇಟಿ ನೀಡಿದ್ದು ಈ ದೇವಿಯನ್ನು ತಮ್ಮ ತೀರ್ಥ ಪ್ರಬಂಧದ ಗ್ರಂಥದಲ್ಲಿ ಸ್ತುತಿಸಿದ್ದಾರೆ. ಹೊನ್ನಕಂಬಳಿ ಅರಸನಾದ ವೆಂಕಣ್ಣ ಸಾವಂತನು ಸುಮಾರು ೧೨೧೮ರಲ್ಲಿ ಇಲ್ಲಿ ಶಿಲಾ ಆಲಯವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಹೊನ್ನಕಂಬಳಿ ಅರಸರ ಕಾಲದಲ್ಲಿ ಇದೊಂದು ದೊಡ್ಡ ಪಟ್ಟಣವಾಗಿತ್ತೆಂದು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ವಿಜಯನಗರ, ಕೆಳದಿ ಹಾಗೂ ಹೊನ್ನಕಂಬಳಿ ಅರಸರ ರಾಜಾಶ್ರಯವನ್ನು ಪಡೆಯುವ ಮೂಲಕ ಈ ದೇವಾಲಯವು ವೈಭವೋಪೇತವಾಗಿ ಬೆಳೆಯಲು ಸಾಧ್ಯವಾಯಿತು. ಮೂಕಾಂಬಿಕಾ ಗುಡಿಯ ಛತ್ರದ ಬಳಿಯಿರುವ ೧೪೭೮ರ ಶಾಸನ ಅವಳನ್ನು, ಪರ್ವತಕ್ಕೆ ಅಧಿದೇವತೆಯಾದ ಆದಿಶಕ್ತಿ ಜ್ಯೋತಿರ್ಲಿಂಗ ಪ್ರಕಟಿತ ಮೂರ್ತಿಯಾದ ಕೊಲ್ಲೂರ ಮೂಕಾಂಬಿಕೆ ಎಂದು ಕರೆದಿದ್ದು, ಕೊಲ್ಲೂರ ದುರ್ಗಾಧಿಪತಿಯಾದ ಹೊನ್ನಕಂಬಳಿ ಬಂಕಿಯರಸರು ದೇವಿಯ ಸೇವೆಗೆಂದೂ, ಮೊದವಂತೆ ಬಳಿಯ ಎಕ್ಕನಾಥಿಗೆ ಭೂದಾನ ನೀಡಿ ವಾದ್ಯ, ಹಲಗೆ ಮದ್ದಳೆ ಕಿರುಗಳೆ, ಜೇಗತಗಳಿಗೆಂದು ದುಗಾಣಿಯನ್ನು ಬಿಟ್ಟಿದ್ದನ್ನು ದಾಖಲಿಸಿದೆ. ದೇವಿಯ ಭಂಡಾರದಲ್ಲಿ ವಿವಿಧ ಕಾಲಕ್ಕೆ ಸೇರಿದ ಅಮೂಲ್ಯ ಆಭರಣ ಸಂಗ್ರಹವಿದೆ. ಸಮೀಪದ ಕೊಡಚಾದ್ರಿಯೇ ಮೂಕಾಂಬಿಕೆಯ ಮೂಲಸ್ಥಾನ ಎಂಬ ನಂಬಿಕೆಯಿದೆ. ಹಿಂದೆ ಮಹಾರಣ್ಯಪುರ ಎಂದೇ ಪ್ರಸಿದ್ಧವಾಗಿದ್ದ ಈ ಪ್ರದೇಶದಲ್ಲಿ ಕೊಲನೆಂಬ ಮುನಿಯು ನದಿತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ, ಕಂಬಾಸುರನು ಆದಿಶಕ್ತಿಯನ್ನು ಆರಾಧಿಸಿ, ಪುರುಷನಿಂದ ತನಗೆ ಮರಣ ಒದಗಬಾರದೆಂಬ ವರವನ್ನು ಪಡೆದು ಮೆರೆಯುತ್ತಿದ್ದನಂತೆ. ಇವನಿಂದ ರಕ್ಷಿಸುವಂತೆ ದೇವತೆಗಳು ಶಿವನನ್ನು ಕೋರಿಕೊಂಡರಂತೆ. ಏತನ್ಮಧ್ಯೆ ಗುರು ಶುಕ್ರಾಚಾರ್ಯರ ಸಲಹೆಯಂತೆ ಶಿವನನ್ನು ಓಲೈಸಿ, ಮಹಿಳೆಯಿಂದಲೂ ತನಗೆ ಮರಣ ಒದಗಬಾರದೆಂಬ ವರ ಪಡೆಯಲು ಮುಂದಾದ ರಕ್ಕಸನ ಮೇಲೆ ದೇವಿಯು ಪ್ರಭಾವ ಬೀರಿದಾಗ ಶಿವನ ಆಕ್ರೋಶಕ್ಕೆ ತುತ್ತಾದ ಅವನಿಗೆ ಮೂಕನಾಗಲೆಂದೇ ಶಿವ ಶಾಪಕೊಟ್ಟನಂತೆ. ತನ್ನ ಈ ಸಂಕಷ್ಟಕ್ಕೆ ದೇವತೆಗಳೇ ಕಾರಣವೆಂದರಿತು ಅವರ ಮೇಲೇರಿ ಹೋದ ಮೂಕಾಸುರನನ್ನು, ಕೋಲ ಮುನಿಯ ಕೋರಿಕೆಯಂತೆ ಆದಿಶಕ್ತಿಯೇ ವಧಿಸುವ ಮೂಲಕ ಮೂಕಾಂಬಿಕೆಯಾಗಿ ಸ್ವಯಂಭುಜ್ಯೋತಿರ್ಲಿಂಗ ರೂಪದಲ್ಲಿ ಮಹಾರಣ್ಯಪುರದಲ್ಲಿ ನೆಲೆಸಿದಳಂತೆ. ಕೋಲ ಮುನಿಯಿಂದಾಗಿ ದೇವಿಯು ನೆಲೆಯೂರಿದ ಈ ಊರಿಗೆ ಕೋಲೂರು, ಕೋಲ್ಲೂರು ಎಂಬ ಹೆಸರು ಬಂತೆಂದು ಹೇಳಲಾಗುತ್ತದೆ. ಆದರೆ ಶಕ್ತಿ ದೇವತೆಯ ಆರಾಧಕರಾದ ಕೌಳರಿಂದ ಈ ಊರಿಗೆ ಕೊಲ್ಲೂರು ಎಂಬ ಹೆಸರು ಬಂದಿರಬೇಕೆಂದು ಎಸ್.ರಂಗನಾಥಶರ್ಮ ಅಭಿಪ್ರಾಯಪಡುತ್ತಾರೆ.

ಕರಾವಳಿ ಭಾಗದ ಇತರ ದೇವಾಲಯಗಳಂತೇ ಇರುವ ಈ ದೇವಾಲಯದ ಮಗ್ಗುಲಲ್ಲಿ ಅಗ್ನಿತೀರ್ಥ ಎಂಬ ಕಿರುತೊರೆಯು ಹರಿಯುತ್ತದೆ. ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಸ್ವಯಂಭುಲಿಂಗವಿದ್ದು, ಹಿಂಬದಿಯಲ್ಲಿ ಸುಮಾರು ಮೂರು ಅಡಿ ಎತ್ತರದ ಶಂಖಚಕ್ರವರದಾಭಯ ಹಸ್ತಗಳಿಂದ ಕೂಡಿದ ಪದ್ಮಾಸೀನ ಭಂಗಿಯ ದೇವಿಯ ಪಂಚಲೋಹದ ಆಕರ್ಷಕ ಪ್ರತಿಮೆ ಇದೆ. ಇದನ್ನು ಸುಮಾರು ೮–೯ನೆಯ ಶತಮಾನದ ಮೂರ್ತಿ ಎಂದು ಪಿ. ಗುರುರಾಜಭಟ್ ಅಭಿಪ್ರಾಯಪಡುತ್ತಾರೆ. ಪ್ರಸ್ತುತ ಇಲ್ಲಿ ಪೂಜೆ

ಗೊಳ್ಳುತ್ತಿರುವ ಮೂಕಾಂಬಿಕೆಯ ಅಂಡಾಕಾರದ ಸ್ವಯಂಭೂಲಿಂಗದಲ್ಲಿ ಶಕ್ತಿ–ಶಿವರಿಬ್ಬರೂ ನೆಲೆಗೊಂಡಿದ್ದಾರೆಂಬ ಅಭಿಪ್ರಾಯವಿದೆ.

ದೇವಾಲಯಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಸೌಪರ್ಣಿಕಾ ನದಿಯು ಹರಿಯುತ್ತಿದ್ದು, ಕ್ಷೇತ್ರವನ್ನು ಪವಿತ್ರಗೊಳಿಸಿದೆ. ಈ ದೇವಾಲಯವನ್ನು ಆನೆಬಾಗಿಲು, ಬಡಗುಬಾಗಿಲು, ಕಂಚಿನ ಬಾಗಿಲು ಮುಂತಾದ ಮಹಾದ್ವಾರಗಳ ಮೂಲಕ ಪ್ರವೇಶಿಸಿದರೆ, ಎದುರಾಗುವುದೇ ಮೂಕಾಂಬಿಕಾ ಸನ್ನಿಧಾನ. ದೇವಾಲಯದ ಪ್ರಾಕಾರದಲ್ಲಿ ಸುಬ್ರಹ್ಮಣ್ಯ, ವೀರಭದ್ರ, ಪ್ರಾಣಲಿಂಗೇಶ್ವರ, ಪಾರ್ಥೇಶ್ವರ, ಪಂಚಮುಖಿ ಗಣಪ, ಚಂದ್ರಮೌಳೇಶ್ವರ, ನಂಜುಂಡೇಶ್ವರ, ಆಂಜನೇಯ, ಮಹಾವಿಷ್ಣು, ಗೋಪಾಲಕೃಷ್ಣ, ದಶಭುಜ ಗಣಪ ಮುಂತಾದ ಕಿರುಗುಡಿಗಳಿವೆ. ಇಲ್ಲಿಯ ಚಂದ್ರಮೌಳೀಶ್ವರ, ಆದಿಶಂಕರ ಪ್ರತಿಷ್ಠಿತವೆಂದೂ, ಅವರು ಕುಳಿತು ಧ್ಯಾನ ಮಾಡಿದ ಸ್ಥಳವನ್ನು ಶಂಕರಪೀಠವೆಂದೂ ಕರೆಯಲಾಗುತ್ತದೆ. ಆವರಣದಲ್ಲಿ ಚೌಡೇಶ್ವರಿಯ ಆಲಯವೂ ಇದೆ. ಅಲ್ಲೇ ರಂಜಣಿಗೆ ಎಂದು ಕರೆಯಲಾಗುವ ಮಣ್ಣಿನ ಭಾರಿ ಗುಡಾಣಗಳು ಗಮನ ಸೆಳೆಯುತ್ತವೆ. ಇಲ್ಲಿರುವ ಕ್ಷೇತ್ರ ಪುರೋಹಿತರ ವ್ಯವಸ್ಥೆ ಬಹಳ ವಿಶಿಷ್ಟವಾಗಿದೆ. ಬರುವ ಯಾತ್ರಾರ್ಥಿಗಳಿಗೆ ಇಲ್ಲಿ ಮಧ್ಯಾಹ್ನ ಉಚಿತ ಪ್ರಸಾದ ವ್ಯವಸ್ಥೆ ಇದ್ದು, ವಸತಿ ಸೌಕರ್ಯವೂ ಲಭ್ಯವಿದೆ. ದೇವಿಯ ಬ್ರಹ್ಮರಥೋತ್ಸವವು ಎಂಟು ದಿನಗಳ ಸಂಭ್ರಮದ ಜಾತ್ರೆಯಾಗಿದ್ದು, ಫಾಲ್ಗುಣ ಕೃಷ್ಣಾಷ್ಟಮಿ ಮೂಲಾ ನಕ್ಷತ್ರದಂದು ಆರು ಚಕ್ರದಿಂದ ಕೂಡಿದ ನೂತನವಾಗಿ ಸಿದ್ಧಪಡಿಸಿದ ಆಕರ್ಷಕ ರಥದಲ್ಲಿ ದೇವಿಯನ್ನು ಕೂರಿಸಿದ ತೇರೆಳೆಯಲಾಗುತ್ತದೆ. ನವರಾತ್ರಿಯಲ್ಲೂ ಅದ್ದೂರಿಯ ಮಹೋತ್ಸವವಿಲ್ಲಿರುತ್ತದೆ.

ಊರ ಪ್ರವೇಶದಲ್ಲಿರುವ ಸಿದ್ಧೇಶ್ವರ ದೇವಾಲಯದ ಬಳಿ ಶುಕ್ಲತೀರ್ಥವಿದ್ದು, ಸಿದ್ಧೇಶ್ವರ ಆಲಯವು ಮೂಕಾಂಬಿಕೆಯ ಗಂಡನ ಮನೆ ಎಂದು ಹೇಳಲಾಗುತ್ತದೆ. ವಿಜಯದಶಮಿಯಂದು ದೇವಿಯ ಉತ್ಸವವು ಈ ಗುಡಿಗೆ ಬಂದು ಹೋಗುವುದು ರೂಢಿಯಲ್ಲಿದೆ. ಇಲ್ಲಿ ಶಂಕರಾನಂದಾಶ್ರಮ ಸೇರಿದಂತೆ ಹಲವಾರು ಆಶ್ರಮಗಳಿವೆ. ಅಲ್ಲದೆ ನಿತ್ಯಾನಂದ ಮಠವಿದೆ. ದೇವಾಲಯದಿಂದ ನದಿಗೆ ಹೋಗುವ ಮಾರ್ಗದಲ್ಲೂ ಅನೇಕ ಆಶ್ರಮಗಳಿದ್ದು, ಇಸ್ಕಾನ್‌ನ ಶಾಖೆಯೊಂದಿದೆ. ಬಾಣಿಕಡು ಎಂಬಲ್ಲಿ ನಾಗರಗವಿ ಇದ್ದು, ಸೌಪರ್ಣಿಕಾ ನದಿಯು ೬೪ ದಿವ್ಯತೀರ್ಥಗಳ ತಾಣ ಎಂಬ ಪೌರಾಣಿಕ ನಂಬಿಕೆ ಇದೆ. *ಅರಸಿನಗುಂಡಿ ಜಲಪಾತ :* ನಾಗೋಡ ಗ್ರಾಮಕ್ಕೆ ಸೇರಿದ ದಳಿ/ಅರಸಿನಗುಂಡಿ ಉಪಗ್ರಾಮದ ಸನಿಹದಲ್ಲಿ ಹರಿದಿರುವ ಸೌಪರ್ಣಿಕ ನದಿಯು ಸುಮಾರು ೨೦೦ ಅಡಿ ಎತ್ತರದಿಂದ ಧುಮುಕುವ ರುದ್ರರಮಣೀಯ ದೃಶ್ಯ ವೀಕ್ಷಕರವನ್ನು ಮೂಕವಿಸ್ಮಿತರನ್ನಾಗಿಸುತ್ತದೆ.

**ಕೋಟ :** ತಾಲೂಕು ಕೇಂದ್ರ ಉಡುಪಿಯಿಂದ ೨೫ ಕಿ.ಮೀ. ಉತ್ತರಕ್ಕೆ ಹಾಗೂ ಕುಂದಾಪುರದಿಂದ ೧೨ ಕಿ.ಮೀ. ದಕ್ಷಿಣಕ್ಕೆ ಇರುವ *ಗಿಳಿಯಾರು* (ಜನಸಂಖ್ಯೆ: ೩,೮೩) ಕಂದಾಯ ಗ್ರಾಮಕ್ಕೆ (ಜನಸಂಖ್ಯೆ: ೩,೮೩) ಸೇರಿದ ಉಪಗ್ರಾಮ. ಅಲ್ಲಿರುವ ಗಜಪೃಷ್ಠಾಕಾರದ ಹಿರೇಮಹಾಲಿಂಗೇಶ್ವರ ಗುಡಿ ಹಾಗೂ ರಾಜಶೇಖರ ದೇವಾಲಯಗಳಿಂದಾಗಿ ಪ್ರಸಿದ್ಧವಾಗಿದೆ. ಖರಾಸುರ ಪ್ರತಿಷ್ಠಿತವೆಂದು ಹೇಳಲಾಗುವ ಹಿರೇಮಹಾಲಿಂಗೇಶ್ವರವು ಹೆಸರಿಗೆ ತಕ್ಕಂತೆ ಹಿರಿದಾದ ದೇವಾಲಯವಾಗಿದ್ದು, ಗರ್ಭಗೃಹದಲ್ಲಿ ಬೃಹತ್ತಾದ ಶಿವಲಿಂಗವಿದ್ದು, ದೇವರ ವಾರ್ಷಿಕ ಜಾತ್ರೆಯಾಗುತ್ತದೆ. ಇದೇ ರೀತಿ ಪ್ರಾಚೀನವಾದ ರಾಜಶೇಖರ ದೇವಾಲಯವನ್ನು ಧರ್ಮಸ್ಥಳದ ಧರ್ಮೋತ್ಥಾನ ಸಮಿತಿಯವರು ಪುನರ್ ಜೀರ್ಣೋದ್ಧಾರ ಮಾಡಿದ್ದಾರೆ. ಇಲ್ಲಿಯ ಅಮೃತೇಶ್ವರಿಯು 'ಹಲವು ಮಕ್ಕಳ ತಾಯಿ' ಎಂಬ ವಿಶೇಷಣವನ್ನು ಪಡೆದಿದ್ದು, ಸಂತಾನ ದೇವತೆಯಾಗಿ ಪ್ರಸಿದ್ಧಳಾಗಿದ್ದಾಳೆ. ಗರ್ಭಗುಡಿಯಲ್ಲಿ ಅಮೃತೇಶ್ವರಿಯ ಶಿಲ್ಪವಿದ್ದು, ಬಳಿಯಲ್ಲೇ ಮಾರಿಯ ಮೂರ್ತಿಯೂ ಇದೆ. ಗುಡಿ ಹೊರಗೆ ಎದುರಲ್ಲೇ ರಕ್ತೇಶ್ವರಿ ವಿಗ್ರಹವಿದೆ. ಈ ದೇವಿಗೆ ಹಾಲುಹಬ್ಬದ ಸಂದರ್ಭದಲ್ಲಿ ನಡೆಯುವ ಡಕ್ಕೆ ಬಲಿ, ಗೆಂಡೆಸೇವೆಗಳು ಉಲ್ಲೇಖಾರ್ಹವಾಗಿದ್ದು, ಆಗ ಸಾವಿರಾರು ಮಹಿಳೆಯರು ಕೊಂಡ ಹಾಯುತ್ತಾರೆ. ಜೋಗಿಗಳು ಈ ದೇವಿಯ ಅರ್ಚಕರಾಗಿದ್ದು, ಕದ್ರಿ ಮಠದೊಂದಿಗೆ ಸಂಪರ್ಕವಿದೆ. ಅಮೃತೇಶ್ವರಿ ಯಕ್ಷಗಾನ ಮಂಡಳಿಯು "ಅಮೃತೇಶ್ವರಿ ಮಹಾತ್ಮೆ" ನಾಟಕವನ್ನು ಭಕ್ತರ

ಕೋರಿಕೆಯಂತೆ ಹರಕೆ ನಡೆಸಿಕೊಡುತ್ತದೆ. ಗೌಡಸಾರಸ್ವತರಿಗೆ ಸೇರಿದ ಇಲ್ಲಿಯ ಕಾಶಿಮಠದಲ್ಲಿ ನಡೆಯುವ ಕಾಮದಹನ ವಿಶಿಷ್ಟವಾಗಿರುತ್ತದೆ. ಎಂಟು ದಿನ ನಡೆಯುವ ಆ ಸಂಭ್ರಮದಲ್ಲಿ ಎಂಟನೆಯ ದಿನ ಕೂಡುವ ವಿಟ್ಲ ಪಿಂಡಿಯು ಇದಕ್ಕೆ ಮೆರಗು ನೀಡುತ್ತದೆ. ಶಿವರಾಮಕಾರಂತರು ಈ ಗ್ರಾಮದವರಾಗಿದ್ದು, ಅವರಿದ್ದ 'ಸುಹಾಸ ನಿವಾಸ' ಇಲ್ಲಿದೆ.

**ಕೋಟೇಶ್ವರ** (ಜನಸಂಖ್ಯೆ: ೮,೯೬೦) : ಇದು ತಾಲೂಕು ಕೇಂದ್ರ ಕುಂದಾಪುರದಿಂದ ನಾಲ್ಕು ಕಿ.ಮೀ. ದೂರದಲ್ಲಿದ್ದು ಪರಶುರಾಮ ಸೃಷ್ಟಿಯ ಸಪ್ತಕ್ಷೇತ್ರಗಳಲ್ಲೊಂದಾಗಿರುವ ತೀರ್ಥಸ್ಥಳವೆಂಬ ಸ್ಥಳೀಯ ನಂಬಿಕೆ ಇದೆ. ಅಲ್ಲಿರುವ ಕೋಟಿಲಿಂಗೇಶ್ವರ ದೇವಾಲಯವು, ಸಹ್ಯಾದ್ರಿ ಖಂಡದಲ್ಲಿ ಕೋಟೇಶ್ವರ ಎಂದೂ, ಊರು ಧ್ವಜಪುರವೆಂದೂ ಉಲ್ಲೇಖಿತಗೊಂಡಿದ್ದು, ಶಾಸನಗಳಲ್ಲಿ ಕುಡುಕೂರ ಕೋಟೇಶ್ವರ, ಕೋಟೀಶ್ವರ ಎಂಬ ರೂಪಗಳು ಕಂಡುಬರುತ್ತವೆ. ಇದರಿಂದ 'ಕುಡಕೂರು', ಗ್ರಾಮದ ಹೆಸರಾಗಿದ್ದು ಅಲ್ಲಿಯ ಕೋಟೇಶ್ವರ ಗುಡಿಯ ಹೆಸರೇ ಕ್ರಮೇಣ ಊರಿಗೂ ಅನ್ವಯವಾಗಿದೆ. ಇಲ್ಲಿಂದ ಈವರೆಗೆ ಹತ್ತಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ. ಕೋಟೇಶ್ವರ ಗುಡಿ ಮುಂದಿರುವ ೧೨೬೨–೬೩ರ ಶಾಸನಗಳಿಂದ ಪಾಂಡ್ಯ ದೇವಾಳುಪೇಂದ್ರನು ರಾಜಧಾನಿ ಬಾರಕನ್ಯಾಪುರ(ಬಾರಕೂರು)ದಿಂದ ಆಳುತ್ತಿದ್ದಾಗ ಪಿರಿಯರಸಿಯು ಬಿಟ್ಟ ದತ್ತಿಗಳು ವೇದ್ಯವಾಗುತ್ತದೆ. ಅಲ್ಲೇ ಇರುವ ೧೩೬೫, ೧೩೬೭, ೧೩೭೪, ೧೩೭೮, ೧೪೧೧, ೧೪೭೮, ೧೫೪೬ ಹಾಗೂ ೧೫೬೨ರ ಶಾಸನಗಳಿಂದ ಈ ಗುಡಿಗಿದ್ದ ಸಾಂಸ್ಕೃತಿಕ ಮಹತ್ವದ ಅರಿವಾಗುತ್ತದೆ. ಅದರಲ್ಲೂ ೧೩೭೪ರ ಶಾಸನ, ನಂದಿನಾಥ, ಭೃಂಗೀನಾಥ ವೀರಭದ್ರ ದೇವರುಗಳ ಬಗ್ಗೆ ಉಲ್ಲೇಖಿಸುತ್ತಾ ಉಭಯ ಜಂಗಮರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ೧೩೭೮ರ ಶಾಸನ, ದೇವರ ಕನಕದಂಡದ ಚವಕ, ಸದಕಗಳ ಬಗ್ಗೆ ತಿಳಿಸುತ್ತದೆ. ಇಲ್ಲಿಯ ೧೫೪೬ರ ಶಾಸನ ದೇವರ ತುಡಿಯ ಹಬ್ಬದ ಸಂದರ್ಭದಲ್ಲಿ ತುಳುರಾಜ್ಯ ನೆರೆದಿದ್ದಾಗ ನಡೆದ ಗಲಭೆಯಲ್ಲಿ ಬ್ರಾಹ್ಮಣ–ಶೂದ್ರರ ಹೆಣಗಳು ದೇವಸ್ಥಾನದೊಳಗೆ ಬಿದ್ದು, ಗೋಹತ್ಯೆಯಾಗಿ, ನೈರ್ಮಲ್ಯವಾಗಿ ಆರು ತಿಂಗಳು ನಿಂತುಹೋಗಿದ್ದ ಪೂಜೆಯನ್ನು ಪ್ರಾಯಶ್ಚಿತ ಮಾಡಿ, ಶುದ್ಧೀಕರಿಸಿ, ಪುನರಾರಂಭಿಸಲು ಅನುವು ಮಾಡಿಕೊಟ್ಟ ಯಕಥಾಳಖಾನವೊತಯನನ್ನು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ. ಇಲ್ಲಿಯ ೧೫೬೨ರ ಶಾಸನದಲ್ಲಿ ಅಕ್ಕಸಾಲಿಯ ಮಠ–ಪಾದುಕೆ, ಉಮಾಮಹೇಶ್ವರ ದೇವರುಗಳ ನಿರ್ವಹಣೆಗೆಂದು ದಾನ ಬಿಟ್ಟ ಉಲ್ಲೇಖವಿದೆ. ಕೋಟೇಶ್ವರ ದೇವಾಲಯವು ಸೋಪಾನದಿಂದ ಕೂಡಿದ ಕೋಟಿತೀರ್ಥ ಎಂಬ ವಿಶಾಲವಾದ ಸರೋವರದ ಸನಿಹದಲ್ಲಿದ್ದು, ದಂಡೆಯ ಮೇಲೆ ಕಿರುಗುಡಿಗಳಿವೆ. ಚತುರ್ಯುಗಗಳಲ್ಲೂ ಪೂಜಿತಗೊಂಡಿರುವುದೆಂದು ಹೇಳಲಾಗುವ ಈ ವಿಶಾಲ ದೇವಾಲಯದ ಪ್ರಾಚೀನತೆಯನ್ನು ಸುಮಾರು ಎಂಟನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಲಾಗುತ್ತಾದರೂ ಇದರ ಮೊದಲ ಉಲ್ಲೇಖ ೧೩೨೪ರ ಶಾಸನದಲ್ಲಿ ಲಭಿಸುತ್ತದೆ. ಬಸರೂರಿನ ವಸುಮಹಾರಾಜನು ಸಂತಾನ ಪ್ರಾಪ್ತಿಗಾಗಿ ಹರಕೆ ಹೊತ್ತು ಈ ಗುಡಿಯನ್ನು ನಿರ್ಮಿಸಿದನೆಂದು ಸ್ಥಳಪುರಾಣದಲ್ಲಿ ದಾಖಲಿಸಲಾಗಿದೆ. ಗರ್ಭಗೃಹದ ಕಂಡಿಕೆಯಲ್ಲಿರುವ ಹಲವು ಲಿಂಗಗಳ ಒಕ್ಕೂಟವೇ ಕೋಟಿಲಿಂಗೇಶ್ವರನ ಸನ್ನಿಧಿಯಾಗಿದೆ. ಗುಡಿಯ ದ್ವಾರಪಾಲಕರ ಲೋಹದ ಬಿಂಬಗಳು ಆಕರ್ಷಕವಾಗಿವೆ. ಈ ದೇವರ ರಥೋತ್ಸವವು ಜರುಗಿದ ಮೇಲೆ ಕುಂದಾಪುರ ಪರಿಸರದ ಇತರ ರಥೋತ್ಸವಗಳು ಜರುಗುವುದು ವಾಡಿಕೆ. ದೇವಾಲಯದ ಮುಂದೆ ಸುಮಾರು ೧೧೪ ಹಸ್ತ ಪ್ರಮಾಣದ ಧ್ವಜಸ್ಥಂಭವಿದೆ. ಕಲಾವಂತಿಕೆಯಿಂದ ಕೂಡಿದ ಈ ದೇವರ ಬೃಹತ್ ರಥವನ್ನು ಕಾರ್ತಿಕ ಹುಣ್ಣಿಮೆಯಂದು ಎಳೆಯಲಾಗುತ್ತದೆ. ಆ ಸಂದರ್ಭದಲ್ಲಿ ನಡೆಯುವ ಕೋಡಿಹಬ್ಬ ವಿಶಿಷ್ಟವಾಗಿರುತ್ತದೆ. ಕಬ್ಬಿನ ಜಲ್ಲೆಯ ಮಾರಾಟ ಈ ಜಾತ್ರೆಯ ವೈಶಿಷ್ಟ್ಯವಾಗಿದೆ. ವಾದಿರಾಜತೀರ್ಥರು ಇಲ್ಲಿಗೆ ಬಂದಿದ್ದರೆಂದು ಹೇಳಲಾಗುತ್ತದೆ. ದೀಪಾವಳಿ ಸಂದರ್ಭದಲ್ಲಿ ಜರುಗುವ ಶಿಖರ ದೀಪೋತ್ಸವ ಇಲ್ಲಿನ ಇನ್ನೊಂದು ಆಕರ್ಷಣೆಯಾಗಿದೆ.

**ಗಂಗೊಳ್ಳಿ** (ಜನಸಂಖ್ಯೆ: ೧೨,೮೯೦): ತಾಲೂಕು ಕೇಂದ್ರ ಕುಂದಾಪುರದಿಂದ ಮೂರು ಕಿ.ಮೀ. ಉತ್ತರಕ್ಕೆ, ಪಂಚನದಿಗಳು ಸಾಗರವನ್ನು ಸೇರುವ ಸ್ಥಳದಲ್ಲಿರುವ ಪ್ರಮುಖ ಸ್ಥಳ. ಅದರಿಂದಾಗಿ ಈ ಪರಿಸರದಲ್ಲಿ

ಉಪ್ಪಿನ ಕುದ್ರು, ಕನ್ನಡ ಕುದ್ರು, ಹೇರಿಕುದ್ರು, ಬಬ್ಬುಕುದ್ರಿ ಮುಂತಾದ ನಡುಗಡ್ಡೆಗಳಿವೆ. ಇಲ್ಲಿರುವ ವೀರೇಶ್ವರ ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದ್ದು, ಆಕರ್ಷಕವಾದ ಗೋಪುರವನ್ನು ನಿರ್ಮಿಸ ಲಾಗಿದೆ. ಗರ್ಭಗೃಹದಲ್ಲಿ ವೀರೇಶ್ವರನ ಬೃಹತ್‌ಲಿಂಗವಿದ್ದು, ಬದಿಯ ಇನ್ನೊಂದು ಗರ್ಭಗೃಹದಲ್ಲಿ ಉಮಾಮಹೇಶ್ವರ ಲಿಂಗವಿದೆ. ಪೇಟೆಬೀದಿಯಲ್ಲಿ ಗೌಡಸಾರಸ್ವತರ ವಿಠಲ–ರುಕ್ಮಾಯಿ ಹಾಗೂ ಅಂಬಿಕಾ ದೇವಾಲಯ, ಹಾಗೂ ಖಾರ್ವಿಸಮಾಜದವರ ಕಲೈಕಾರಮಠ (ನಗರ ಮಹಾಕಾಳಿಯ ಗುಡಿ)ಗಳಿವೆ. ಅಲ್ಲದೆ ಈ ಮಠದಲ್ಲಿ ಕಲ್ಕುಟಿ ದೈವದ ಪ್ರತ್ಯೇಕ ಸ್ಥಾನವಿದೆ. ಕಾನೋಜಿ ಕಾಂಪೌಂಡಿನಲ್ಲಿರುವ ಮಾರಿ ಗುಡಿಯಲ್ಲಿ ಮಾಘಮಾಸದಲ್ಲಿ ನಡೆಯುವ ವಾರ್ಷಿಕಪೂಜೆಯು ಬಹಳ ವಿಶಿಷ್ಟವಾಗಿರುತ್ತದೆ. ಮಲ್ಯರ ಮಠ ಎಂದೂ ಕರೆಯಲಾಗುವ ವೆಂಕಟರಮಣ ದೇವಾಲಯವೂ ಗೌಡಸಾರಸ್ವತರ ಇನ್ನೊಂದು ದೇವಾಲಯವಾಗಿದ್ದು, ಮೇಲುಗಂಗೊಳ್ಳಿಯಲ್ಲಿದೆ. ಇಲ್ಲಿ ಪ್ರತಿಯೊಂದು ಸಮಾಜಕ್ಕೂ ಸೇರಿದ ಪ್ರತ್ಯೇಕ ದೇವಾಲಯಗಳಿವೆ. ಮುಸ್ಲಿಮರ ಏಳೆಂಟು ಮಸೀದಿಗಳಿದ್ದು, ಅವುಗಳಲ್ಲೊಂದಾದ ಜುಮ್ಮಾಮಸೀದಿಯು ವಿಶಾಲವಾಗಿದೆ. ಅಲ್ಲದೆ ದಾವಲ್ ಫೀರ್, ಬಚ್ಚುಪೀರ್, ಜಂಗಲ್‌ಪೀರ್ ಮುಂತಾದ ಸೂಫಿ ಸಂತರ ದರ್ಗಾಗಳಿದ್ದು, ಪ್ರತ್ಯೇಕ ವಾರ್ಷಿಕ ಉರುಸ್‌ಗಳನ್ನು ಆಚರಿಸಲಾಗುತ್ತದೆ. ಸಮುದ್ರ ತೀರದಲ್ಲಿರುವ ಇಮ್ಯಾಕ್ಯುಲೇಟ್ ಕಂಸೆಪ್ಷನ್ ಆಫ್ ದಿ ಬ್ಲೆಸ್ಡ್ ವರ್ಜಿನ್ ಮೇರಿಯ ಇಗರ್ಜಿಯಲ್ಲಿ ಪ್ರತಿ ವರ್ಷ ಡಿಸೆಂಬರ್ ತಿಂಗಳ ಮೊದಲ ಬುಧವಾರದಂದು ವಾರ್ಷಿಕ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇಗರ್ಜಿಯ ಒಳಗೆ ಕನ್ಯೆ ಮೇರಿಯಮ್ಮನ ಮೂರ್ತಿ ಹಾಗೂ ಇತರ ಕ್ರೈಸ್ತ ಸಂತರ ಮೂರ್ತಿಗಳಿವೆ. ಅಲ್ಲದೆ ಆ್ಯಡಂ ಈವ್ ಪ್ರಸಂಗವನ್ನುಳ್ಳ ವಿಶಿಷ್ಟವಾದೊಂದು ಚಿತ್ರವೂ ಇಲ್ಲಿದೆ. ಇದು ಕ್ರೈಸ್ತ ಮಿಶನರಿಗಳ ಪ್ರಮುಖ ನೆಲೆಗಳಲ್ಲಿ ಒಂದಾಗಿದ್ದು, ಬಹಳ ಹಿಂದೆಯೇ ಇಲ್ಲಿ ತಳವೂರಿದ ಅವರು ಸ್ಥಳೀಯರೊಂದಿಗೆ ಧಾರ್ಮಿಕ ಕಾರಣಕ್ಕಾಗಿ ಘರ್ಷಣೆಗಿಳಿದಾಗ ಕೆಳದಿ ವೀರಭದ್ರನಾಯಕನು ಅದನ್ನು ಬಗೆಹರಿಸಿದಾಗ ಅಲ್ಲೊಂದು ಚರ್ಚು ಸ್ಥಾಪನೆಗೊಂಡಿತಂತೆ. ಆದರೆ ಮುಂದೆ ಕೆಳದಿ ಶಿವಪ್ಪನಾಯಕನು ಗಂಗೊಳ್ಳಿಯನ್ನು ವಶಪಡಿಸಿಕೊಂಡು ಆ ಚರ್ಚನ್ನು ಒಡೆಸಿ ಹಾಕಿದನೆಂದು ತಿಳಿದುಬರುತ್ತದೆ. ಹೀಗೆ ಏಳು–ಬೀಳುಗಳನ್ನು ಕಂಡ ಈ ಚರ್ಚು ಟಿಪ್ಪು ಮರಣಾನಂತರ ಪುನರ್ ನಿರ್ಮಾಣಗೊಂಡು ಇಂದಿನ ಸ್ಥಿತಿಯಲ್ಲಿ ಉಳಿದು ಬಂದಿದೆ. ಸಮುದ್ರ ತೀರದಲ್ಲಿ ಲೈಟ್‌ಹೌಸ್ (ದೀಪಸ್ತಂಭ) ಇದೆ. ಅದೇ ಪರಿಸರದಲ್ಲಿರುವ ಕೋಟೆಗುಡ್ಡ ಎಂಬ ಸ್ಥಳದಲ್ಲಿ ಪ್ರಾಚೀನ ಕಾಲದ ಕುರುಹುಗಳಿವೆ. ಅಲ್ಲೆ ಸಣ್ಣ ಪ್ರಮಾಣದ ಬಂದರಿದ್ದು, ವಿಶೇಷವಾಗಿ ಮೀನುಗಾರಿಕೆಗೆ ಬಳಕೆಯಾಗುತ್ತಿದೆ. ಮೀನುಗಾರಿಕೆಗೂ ಇದು ಹೆಸರಾಗಿದ್ದು, ಖಾರ್ವಿ ಜನಾಂಗದವರು ಇಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದಾರೆ.

**ಗುಡ್ಡೆಟ್ಟು :** ತಾಲೂಕು ಕೇಂದ್ರ ಕುಂದಾಪುರದಿಂದ ಒಂಭತ್ತು ಕಿ.ಮೀ. ಆಗ್ನೇಯಕ್ಕೆ ಯಡ್ಯಾಡಿ–ಮತ್ಯಾಡಿ (೨,೬೧೦) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮ. ಪ್ರಕೃತಿ ನಿರ್ಮಿತ ಗುಹಾಂತರ್ಗತ ಗಣಪತಿಯಿಂದಾಗಿ ಇದಿಂದು ಪ್ರಸಿದ್ಧವಾಗಿದೆ. ಆನೆಯಾಕಾರದ ಕಿರುಗುಡ್ಡದ ಬುಡದಲ್ಲೊಂದು ವಿಚಿತ್ರಗವಿ ಇದೆ. ಆ ಗವಿಯ ಪೊಟರೆಯಲ್ಲೊಂದು ಮಡುವಿನಲ್ಲಿ ಸ್ವಯಂಭು ಗಣಪತಿ ಉದ್ಭವಿಸಿರು ವನೆಂಬ ಪ್ರತೀತಿ ಇದೆ. ಈ ಗಣಪತಿಯು ಗರ್ಭಗೃಹಕ್ಕೆ ಹಿಂದೆ ಭಕ್ತರು ಪ್ರತೀ ೧೫ ದಿನಗಳಿಗೊಮ್ಮೆ ಮಾಡಿಸುವ ಆಯಿರಕೊಡ (೧೦೦೦ ಕೊಡ) ಸೇವೆಯನ್ನು ಈಗ ಪ್ರತಿನಿತ್ಯ ಎರಡು ಬಾರಿ, ವರ್ಷದುದ್ದಕ್ಕೂ ನಡೆಸುವ ಸೌಲಭ್ಯವಿದ್ದರೂ ಈ ಸೇವೆ ಸಲ್ಲಿಸಲು ಒಂದೂವರೆ ವರ್ಷ ಕಾಯುವ ಪರಿಸ್ಥಿತಿ ಭಕ್ತರದ್ದಾಗಿದೆ. ನಿರಂತರ ಜಲಸೇವೆಯಿಂದಾಗಿ ಈ ಗಣಪನು ಸದಾ ಜಲಾವೃತನಾಗಿರುತ್ತಾನೆ. ಈ ಗುಡಿಯ ಸಮೀಪದಲ್ಲೇ ನರಸಿಂಹತೀರ್ಥ ಎಂಬ ಸಣ್ಣ ಜರಿ ಹರಿಯುತ್ತದೆ. ಗಣಪತಿಯು ಜಲಾಧಿವಾಸಿಯಾದುದಕ್ಕೂ ಶಿವನ ತ್ರಿಪುರಾಂತಕ ದಹನಕ್ಕೂ ಸಂಬಂಧಿಸಿದಂತೆ ಬಹಳ ವಿಚಿತ್ರವಾದ ಐತಿಹ್ಯವೊಂದನ್ನು ಸ್ಥಳೀಯವಾಗಿ ಹೇಳಲಾಗುತ್ತದೆ. ಈ ಪರಿಸರದಲ್ಲಿ ಪ್ರತೀ ಮೂರು ಮೈಲಿಗೊಂದೊಂದು ಗಣಪತಿ ಸನ್ನಿಧಿ ಇದ್ದು, ಆಚ್ರಾಡಿ, ಉಪ್ಲಾಡಿ, ನಾಗರಮಠ, ಕೊಳನಕಲ್, ಬಾರಕೂರು, ಮಾಬುಕಳ, ಬಾಳಕುದ್ರು, ಮುಂತಾದೆಡೆ ಗಣನಾಥ ಸ್ಥಾನಗಳಿವೆ.

**ಚಿತ್ರಪಾಡಿ:** ಉಡುಪಿ ಪಟ್ಟಣದಿಂದ ೨೪ಕಿ.ಮೀ. ಉತ್ತರಕ್ಕೆ ಇರುವ ಇದು ಹಿಂದೆ ಸ್ಥಳೀಯ ಬಲ್ಲಾಳ ಅರಸರ ಆಡಳಿತ ಕೇಂದ್ರವಾಗಿ ಮಹತ್ವ ಪಡೆದಿದ್ದು, ರಾಜಕೀಯ ಪ್ರಾಮುಖ್ಯತೆ ಗಳಿಸಿತ್ತು.

**ತಿಂಗಳೆ** : ತಾಲೂಕು ಕೇಂದ್ರ ಕಾರ್ಕಳದಿಂದ ೩೫ ಕಿ.ಮೀ ದೂರದಲ್ಲಿ ಸೀತಾನದಿಯ ದಡದಲ್ಲಿ ಪರ್ವತದ ನಡುವೆ ಇರುವ ನಡ್ಪಾಲು (ಜನಸಂಖ್ಯೆ: ೨,೫೭೮) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮ. ಹಿಂದೆ ಇದು ತಿಂಗಳೆ ಹೆಗ್ಗಡೆಗಳೆಂಬ ಪುಟ್ಟ ಸಾಮಂತರಸರ ಪಾಳೆಯಪಟ್ಟಾಗಿದ್ದು, ಟಿಪ್ಪುವಿನ ದಂಡನ್ನು ಹಿಮ್ಮೆಟ್ಟಿಸಿದವರೆಂಬ ಹೆಗ್ಗಳಿಕೆ ಅವರಿಗಿತ್ತು. ಈ ಅರಸರ ಬೀಡಿನ ಚಾವಡಿಯಲ್ಲಿ ಬೈದರ್ಕಳು ಮತ್ತು ಶಿವರಾಯ ದೈವಗಳ ಸ್ಥಾನವಿದೆ. *ಕೂಡ್ಲುತೀರ್ಥ:* ಸೀತಾನದಿಯು ಸುಮಾರು ೩೦೦ ಮೀ. ಎತ್ತರದಿಂದ ಜಲಪಾತವಾಗಿ ಧುಮುಕಿ, ರೂಪಿಸಿರುವ ಕೂಡ್ಲುತೀರ್ಥಕ್ಕೆ ತಿಂಗಳೆ ಮಾರ್ಗವಾಗಿಯೂ ಹೋಗಬಹುದಾಗಿದೆ. ಹೆಬ್ರಿಯಿಂದ ಪರ್ವತ ಗ್ರಾಮಗಳಾದ ಕಬ್ಬಿನಾಲೆ–ಕುಚ್ಚೂರು ಮಾರ್ಗವಾಗಿ ಸಾಗಿ, ತಿಂಗಳಮಕ್ಕಿ, ಮಸೆಕಲ್ಲು ಗುಡ್ಡಗಳನ್ನು ಏರಿ **"ಕೂಡ್ಲು"** ಉಪಗ್ರಾಮ ತಲುಪಿದರೆ ಎದುರಾಗುವುದೆ ಈ ಜಲಪಾತವಾಗಿದ್ದು, ಅತ್ಯಂತ ಮನೋಹರವಾಗಿದೆ. ಕೂಡ್ಲುತೀರ್ಥವು ಸೀತಾನದಿಯ ಉಗಮಸ್ಥಾನವಾಗಿದೆ.

**ತೆಳ್ಳಾರು** : ತಾಲೂಕು ಕೇಂದ್ರ ಕಾರ್ಕಳಕ್ಕೆ ಸುಮಾರು ೭ ಕಿ.ಮೀ. ದೂರದಲ್ಲಿರುವ ಇದು, ಅಲ್ಲಿರುವ ಜಲದುರ್ಗಾ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಅರಣ್ಯದಲ್ಲಿರುವ ಈ ದೇವಾಲಯದ ಸಮೀಪ ವಿರುವ ನಾಗಬನದಲ್ಲಿನ ವೃಕ್ಷಗಳ ಬೇರುಗಳೇ ನಾಗರಕಲ್ಲಂತೆ ಗೋಚರಿಸುವುದೊಂದು ಚೋದ್ಯವೇ ಸರಿ. ಆಸೀನ ಭಂಗಿಯಲ್ಲಿರುವ ದುರ್ಗಾದೇವಿಯ ಈ ಪುಟ್ಟ ಬಿಂಬವು ವಿಶಿಷ್ಟವಾಗಿದ್ದು, ದೇವಿಯ ಬಲಗೈಲಿ ಕಮಲವಿದ್ದು ಎಡ ಕಂಕುಳಲ್ಲಿ ಮಗುವೊಂದಿದೆ. ಇದನ್ನು ಎಲ್ಲೋರಾ–ಅಜಂತಾ ಗುಹಾಲಯಗಳಲ್ಲಿ ಕಾಣಸಿಗುವ ಹಾರೀತಿ ದೇವಿಯ ಶಿಲ್ಪದೊಡನೆ ಸಮೀಕರಿಸಲು ಪಿ.ಎನ್. ನರಸಿಂಹಮೂರ್ತಿ ಯತ್ನಿಸಿದ್ದಾರೆ. ಆದರೆ, ಶಿಲ್ಪ ಲಕ್ಷಣವು ಅಂಬಿಕಾಯಕ್ಷಿಯನ್ನು ಸೂಚಿಸುವಂತಿದೆ. ಮಕ್ಕಳಾಗದವರು ಈ ದೇವಿಗೆ ನಡೆದುಕೊಳ್ಳುತ್ತಾರೆ. **ತೊಟ್ಟಂ:** ತೆಂಕನಿಡಿಯೂರಿನ ಉಪಗ್ರಾಮವಾಗಿರುವ ಇದು ಕ್ರೈಸ್ತರ ನೆಲೆಯಾಗಿದ್ದು, ಅಲ್ಲಿರುವ ಸಂತ ಆನ್ಸ್ ಇಗರ್ಜಿಯನ್ನು ನಂತರದಲ್ಲಿ ಪುನರ್ನಿರ್ಮಾಣ ಮಾಡಲಾಗಿದ್ದು, ಜೊತೆಗೆ ಹಳೆಯ ಚರ್ಚು ಕೂಡ ಇದೆ.

**ತೊಡ್ಡಳ್ಳಿ :** ಎಡ್ತರೆ(ಜನಸಂಖ್ಯೆ: ೯,೧೭೦) ಕಂದಾಯ ಗ್ರಾಮದ ಉಪಗ್ರಾಮವಾಗಿರುವ ಇದು ತಾಲೂಕು ಕೇಂದ್ರ ಕುಂದಾಪುರದಿಂದ ಒಂಭತ್ತು ಕಿ.ಮೀ. ಈಶಾನ್ಯಕ್ಕೆ ಶಿರೂರು–ಭಟ್ಕಳ ರಸ್ತೆಯಲ್ಲಿ ವನಮಧ್ಯದಲ್ಲಿರುವ ಧಾರ್ಮಿಕ ಕೇಂದ್ರ. ಅಲ್ಲಿರುವ ಈಶ್ವರ ದೇವಾಲಯ ಹಾಗೂ ವಾಸುದೇವ ಗುಡಿಗಳನ್ನಿಂದು ಜೀರ್ಣೋದ್ಧಾರ ಮಾಡಲಾಗಿದೆ. ಇದಕ್ಕೆ ಸನಿಹದಲ್ಲಿ ಕೋಸಳ್ಳಿ ಅಬ್ಬೀ ಜಲಪಾತವಿದ್ದು, ಶಂಕದಗುಂಡಿ ನದಿಯ ಉಗಮಸ್ಥಾನವಾಗಿದೆ.

**ನಂದಳಿಕೆ** (ಜನಸಂಖ್ಯೆ: ೩,೨೭೦) : ತಾಲೂಕು ಕೇಂದ್ರ ಕಾರ್ಕಳದಿಂದ ೨೦ ಕಿ.ಮೀ. ಪಶ್ಚಿಮಕ್ಕೆ ಬೆಳ್ಮಣ್ಣು ಸಮೀಪ ಇರುವ ಈ ಗ್ರಾಮವು ಅಧ್ಭುತ ರಾಮಾಯಣ, ರಾಮಾಶ್ವಮೇಧ, ರಾಮಪಟ್ಟಾಭಿಷೇಕ ಕಾವ್ಯಗಳನ್ನು ರಚಿಸಿರುವ ಮುದ್ದಣ ಕಾವ್ಯನಾಮಾಂಕಿತ ಲಕ್ಷ್ಮೀನಾರಾಣಪ್ಪ (೧೮೭೦–೧೯೦೧)ನ ಜನ್ಮಸ್ಥಳ. ಅಲ್ಲದೇ ಮೈಸೂರು ಸಂಸ್ಥಾನದಲ್ಲಿ ಸಂಗೀತ ವಿದ್ವಾಂಸರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಬಿಡಾರಂ ಕೃಷ್ಣಪ್ಪನವರು, ನಂದಳಿಕೆಯ ಯಕ್ಷಗಾನ ಕಲಾವಿದ ವಿಶ್ವನಾಥಯ್ಯನವರ ಮಗ. ಮಿಗಿಲಾಗಿ ಚಾರಿತ್ರಿಕ ಮಹತ್ವವನ್ನೂ ಹೊಂದಿರುವ ಸ್ಥಳವಿದಾಗಿದ್ದು, ಹಿಂದೆ 'ನಂದಳಿಕೆಯ ಹೆಗ್ಗಡೆ' ಇಲ್ಲವೇ 'ಕಿನ್ಯಕ ಹೆಗ್ಗಡೆ'ಗಳೆಂದೇ ಖ್ಯಾತರಾಗಿದ್ದ ಪಾಳೇಗಾರರ ಕೇಂದ್ರಸ್ಥಾನವಾಗಿತ್ತು. ನಂದಳಿಕೆ ಗ್ರಾಮದಲ್ಲಿರುವ ಪೆರ್ಗಡೆ ವಂಶಸ್ಥರ ಚಾವಡಿ ಅರಮನೆಯಲ್ಲಿ ಅವರ ವಂಶಜರು ಈಗಲೂ ವಾಸವಿದ್ದಾರೆ. ಅರಮನೆಯಲ್ಲಿ ದೊಡ್ಡಪಟ್ಟದ ಮಂಚ ಚಿಕ್ಕಪಟ್ಟದ ಮಂಚ, ಅಬ್ಬಗೆ–ದಾರಗೆಯರ ಮಂಚ, ಮರ್ದ ಹೆಗ್ಗಡೆ ಸಂಬಂಧಿತ ಖಡ್ಗ (ಇರ್ಬಾಯ), ಈಟಿ ಮುಂತಾದವುಗಳಿದ್ದು ಅರಮನೆಯ ಛಾವಣಿಯು ಸುಂದರವಾದ ಕಾಷ್ಟಶಿಲ್ಪಗಳಿಂದ ಶೋಭಿಸುತ್ತಿದೆ.

ಅರಮನೆ ಪರಿಸರದಲ್ಲಿ 'ಸುಂದರಕೆರೆ' ಎಂಬ ಹೆಸರಿನ ಆಕರ್ಷಕವಾದ ಕಲ್ಯಾಣಿ, ಪೆರ್ಗಡೆ-ಪೆರ್ಗಡ್ತಿಯರ ಕಲಾತ್ಮಕ ಸಮಾಧಿ ಹಾಗೂ ಅವರ ಆರಾಧ್ಯದೈವ ಮಹಾಲಿಂಗೇಶ್ವರ ದೇವಾಲಯಗಳಿವೆ. ಈ ದೇವಾಲಯದ ಆವರಣದಲ್ಲಿರುವ ನಾಗರಕಲ್ಲೊಂದು ಬಹಳ ವಿಶಿಷ್ಟವಾಗಿದ್ದು, ಅದರಲ್ಲಿ ನಾಗಮಂಡಲದಲ್ಲಿ ಬಿಡಿಸಲಾಗುವ ಕಾಲು (೧/೪) ಮಂಡಲದ ಕೆತ್ತನೆ ಇದೆ ಎಂದು ಪಿ. ಗುರುರಾಜಭಟ್ಟರು ಅಭಿಪ್ರಾಯಪಡುತ್ತಾರೆ. ಗುಡಿಯ ಹೊರ ಅಂಕಣದ ಕೋಣೆ (ಪ್ರತಿಮಾಗೃಹ)ಯೊಂದರಲ್ಲಿ, ಪೆರ್ಗಡೆ-ಪೆರ್ಗಡ್ತಿಯರ ನೆನಪಾಗಿ ಕೆತ್ತಿಸಿಟ್ಟಿರುವ ಹತ್ತಾರು ಆಕರ್ಷಕ ಕಾಷ್ಠಮೂರ್ತಿಗಳಿವೆ. ಅಲ್ಲದೆ ಈ ದೇವಾಲಯದಲ್ಲೇ ಸಿರಿದೈವಗಳಾದ ಅಬ್ಬಗೆ-ದಾರಗೆಯರನ್ನೂ ಆರಾಧಿಸಲಾಗುತ್ತಿದ್ದು, ನೆರೆಯ ಕೆದಿಂಜೆ ಗ್ರಾಮದಲ್ಲಿದ್ದ 'ಸೊನ್ನೆ' ಎಂಬ ಹೆಣ್ಣುಮಗಳ ಮಕ್ಕಳಾಗಿ ಈ ಸಿರಿದೈವಗಳು ಜನಿಸಿದರೆಂದು ಹೇಳಲಾಗುತ್ತದೆ. ಮೇಷ ಮಾಸದ ಹದಿನೆಂಟನೆಯ ದಿನದಂದು 'ರಾಶಿಪೂಜೆ' ಎಂಬ ಹೆಸರಿನಲ್ಲಿ ಅಬ್ಬಗೆ-ದಾರಗೆಯರ ಹುಟ್ಟು ಹಬ್ಬವನ್ನು, ಸುಗ್ಗಿಮಾಸದ ಹುಣ್ಣಿಮೆಯಂದು ಅವರ ಅಯನೋತ್ಸವವನ್ನೂ ಆಚರಿಸಲಾಗುತ್ತದೆ. ಆ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಕ್ಷಗಾನ ಪ್ರಸಂಗವನ್ನು ಆಡಿಸಲಾಗುತ್ತದೆ. ಮಹಾ ಲಿಂಗೇಶ್ವರನ ವಾರ್ಷಿಕ ರಥೋತ್ಸವವಿರುತ್ತದೆ. ಪಣಂಬೂರಿನ ಮರ್ದಪೆರ್ಗಡೆ ಹಾಗೂ ನಂದಳಿಕೆಯ ಮಂಜಯ್ಯಪೆರ್ಗಡೆ ನಡುವೆ ನಡೆದ ಕದನದಲ್ಲಿ 'ಅಬ್ಬಗೆ-ದಾರಗೆ' ಸಿರಿದೈವಗಳ ಕೃಪೆಯಿಂದಾಗಿ, ನಂದಳಿಕೆಯ ಮೇಲೇರಿ ಬಂದಿದ್ದ ಮರ್ದಪೆರ್ಗಡೆಯು ಆಯುಧಗಳನ್ನು ಬೀಸೊಗೆದು ಪಲಾಯನ ಮಾಡಿದನೆಂಬ ಅಭಿಪ್ರಾಯವಿದ್ದು, ಅದರ ಕುರುಹಾಗಿ ಒಂದೆರಡು ಖಡ್ಗಗಳು ಈಗಲೂ ನಂದಳಿಕೆಯ ಅರಮನೆಯಲ್ಲಿವೆ. ನಂದಳಿಕೆಯಲ್ಲಿ ಕವಿ ಮುದ್ದಣ ವಾಸವಾಗಿದ್ದ ಮನೆಯ ನಿವೇಶನ, ಕಲಿತ ಶಾಲೆ ಹಾಗೂ ಸಮಾಧಿಗಳಿದ್ದು, ಅವುಗಳ ರಕ್ಷಣೆಗಾಗಿ 'ಮುದ್ದಣ ಸ್ಮಾರಕ ಮಿತ್ರಮಂಡಳಿ'ಯೊಂದು ೧೯೮೨ರಿಂದ ಕಾರ್ಯಪ್ರವೃತ್ತ ವಾಗಿದ್ದು, ಸಾಹಿತ್ಯ ಮತ್ತು ಸಾಂಸ್ಕೃತಿಕ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

**ನಂದಿಕೂರು** (ಜನಸಂಖ್ಯೆ: ೨,೯೩೨) : ಉಡುಪಿ ಪಟ್ಟಣದಿಂದ ೨೮ ಕಿ.ಮೀ. ದಕ್ಷಿಣಕ್ಕೆ ಪಡುಬಿದ್ರೆ-ಕಾರ್ಕಳ ರಸ್ತೆಯಲ್ಲಿರುವ ಸ್ಥಳ. ವಿದ್ಯುತ್ ಉತ್ಪಾದನೆಗೆಂದು ಅಲ್ಲಿ ೧೯೮೭ರಷ್ಟು ಹಿಂದೆಯೇ ಕೇಂದ್ರ ಸರ್ಕಾರವು ಹಮ್ಮಿಕೊಂಡಿದ್ದ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ನಿನಿಂದಾಗಿ ಮಹತ್ವ ಪಡೆದಿತ್ತು. ವರ್ಷಕ್ಕೆ ಸುಮಾರು ೨೪೨೦ ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸುವ ಈ ಯೋಜನೆಗೆ ೮೯೭ ಕೋಟಿ ರೂ.ಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿತ್ತು. ಇದು ಪೂರ್ಣಗೊಂಡಿದ್ದಲ್ಲಿ ಇಡೀ ದೇಶಕ್ಕೆ ಅತಿ ದೊಡ್ಡ ಶಾಖೋತ್ಪನ್ನ ವಿದ್ಯುತ್ ಸ್ಥಾವರವಾಗುತ್ತಿತ್ತು. ಆದರೆ ಇದರಿಂದಾಗುವ ಹಾನಿಯಿಂದಾಗಿ ಈ ಯೋಜನೆಯು ಅನುಷ್ಠಾನಗೊಳ್ಳದಿರುವಂತೆ ಮಾಡಲು ಸ್ಥಳೀಯರು ಕೆ. ಶಿವರಾಮ ಕಾರಂತ ಮುಂತಾದವರ ಮುಂದಾಳತ್ವದಲ್ಲಿ ದೊಡ್ಡ ಪ್ರಮಾಣದ ಹೋರಾಟವನ್ನು ಮಾಡಬೇಕಾಯಿತು. ಆದರೆ ಅಮೇರಿಕ ಮೂಲದ ಕೊಜೆಟ್ರಿಂಕ್ಸ್ ಕಂಪೆನಿಯೊಂದಿಗೆ ರಾಜ್ಯ ಸರ್ಕಾರವು ೧೦೦೦ ಮೆ.ವಾ. ಸಾಮರ್ಥ್ಯದ ಸ್ಥಾವರವನ್ನು ಸ್ಥಾಪಿಸಲು ಒಪ್ಪಂದ ಮಾಡಿಕೊಂಡಿತ್ತಾದರೂ, ಸ್ಥಳೀಯ ವಿರೋಧದಿಂದಾಗಿ ಅದೂ ಸ್ಥಗಿತಗೊಂಡಿತು. ಆದರೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮುಂದಾಗಿರುವ ನಾಗಾರ್ಜುನ ಕಂಪೆನಿಯ ವಿರುದ್ಧ ಜನಾಂದೋಲನ ಮುಂದುವರಿದಿದೆ. ನಂದಕೂರಿನ ರಾಜಮಾರ್ಗದಲ್ಲಿ ಒಂದು ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ರಾಮ ದೇವಾಲಯ (೧೯೬೭) ಆಕರ್ಷಕವಾಗಿದ್ದು ಖಾಸಗಿ ಕುಟುಂಬವೊಂದರ ನಿಯಂತ್ರಣದಲ್ಲಿ ಅಚ್ಚುಕಟ್ಟಾಗಿ ನಡೆದುಕೊಂಡು ಹೋಗುತ್ತಿದೆ. ಇಲ್ಲಿಗೆ ಅನತಿ ದೂರದ ವನಮಧ್ಯದಲ್ಲಿ ಸುಂದರವಾದ ದುರ್ಗಾಪರಮೇಶ್ವರಿ ದೇವಾಲಯವಿದೆ.

**ನಯಂಪಳ್ಳಿ :** ಉಡುಪಿ ಪಟ್ಟಣದಿಂದ ಆರು ಕಿ.ಮೀ. ದೂರದಲ್ಲಿ, ಉಡುಪಿ-ಕುಂದಾಪುರ ರಸ್ತೆಯಲ್ಲಿರುವ ಪ್ರಮುಖ ಸ್ಥಳ. ಸುಂದರ ಪ್ರಕೃತಿ ಸಿರಿಯ ನಡುವೆ ಕಲ್ಯಾಣಪುರ ಹೊಳೆಯ ದಂಡೆಯ ಮೇಲೆ ಉತ್ತರಾಭಿಮುಖವಾಗಿ ನಿಂತಿರುವ ಗೋಪಾಲಕೃಷ್ಣನ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ವಿಜಯನಗರದ ಉತ್ತರಾರ್ಧ ಕಾಲಕ್ಕೆ ಸೇರಿದ ಈ ದೇವಾಲಯದಲ್ಲಿ ಗೋಪಾಲಕೃಷ್ಣನ ಸುಂದರ ಶಿಲ್ಪವಿದೆ.

**ನೀಲಾವರ** (ಜನಸಂಖ್ಯೆ: ೩,೬೨೪): ತಾಲೂಕು ಕೇಂದ್ರ ಉಡುಪಿಯಿಂದ ೧೮ ಕಿ.ಮೀ ಉತ್ತರಕ್ಕೆ ಹಾಗೂ ಬ್ರಹ್ಮಾವರಕ್ಕೆ ನಾಲ್ಕೂವರೆ ಕಿ.ಮೀ. ಅಂತರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಕುಂಜಾಲುಪೇಟೆ ಗಡಿಯಲ್ಲಿರುವ ಇದು ಪುರಾಣಪ್ರಸಿದ್ಧ ಮಹಿಷಮರ್ಧಿನಿ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಸೀತಾನದಿಯ ದಡದಲ್ಲಿರುವ ಈ ಊರಿನ ರಥದ ಬೀದಿಯ ದುರ್ಗಾಭಗವತಿ ಗುಡಿಯು ಆಲುಪ, ಹೊಯ್ಸಳ ಹಾಗೂ ವಿಜಯನಗರದರಸರ ದಾನದತ್ತಿಗಳಿಂದ ಪೋಷಿಸಲ್ಪಟ್ಟಿದ್ದ ಅಂಶ ಅವರ ಕಾಲದ ಶಾಸನಗಳಿಂದ ವೇದ್ಯವಾಗುತ್ತದೆ. ಆಲುಪದೊರೆ ವೀರಪಾಂಡ್ಯನು, ೧೨೫೮ರಲ್ಲಿ ನೀಡಿರುವ ದತ್ತಿಯಲ್ಲಿ ಇದರ ಮೊದಲ ಉಲ್ಲೇಖವಿದ್ದು, ಇತರ ಶಾಸನಗಳಲ್ಲಿ ಊರಿನ ಹೆಸರು ನೀರುವಾರ, ನೀರುವಾರ ಮುನ್ನೂರು, ನೀರುವಾರ ಪಂಚಮಿಗ್ರಾಮ ಎಂದೆಲ್ಲ ದಾಖಲಿಸಲ್ಪಟ್ಟಿದ್ದು, ಊರ ಉತ್ತರಕ್ಕೆ ಸೀತಾನದಿಯು ಹರಿದಿರುವುದರಿಂದ ನೀರುವಾರ ಎಂಬ ಹೆಸರು ಬಂದು ಮುಂದೆ ಅದೇ ನೀರಾವರ–ನೀಲಾವರ ಆಗಿರುವಂತೆ ತೋರುತ್ತದೆ. ಇಲ್ಲಿಯ ಮಹಿಷಮರ್ದಿನಿ ಗುಡಿ ಮುಂದಿರುವ ೧೩೩೩ರ ಶಾಸನ ಮುಮ್ಮಡಿ ಬಲ್ಲಾಳನ ಪಿರಿಯರಸಿ ಚಿಕ್ಕಾಯಿತಾಯಿಯನ್ನು ಉಲ್ಲೇಖಿಸುತ್ತಿದ್ದು ಮಹಾಪ್ರಧಾನ ವೈಜಪ್ಪ ದಂಡನಾಯಕನ ಕಾಲದಲ್ಲಿ ನಾಗರಸನು ದುರ್ಗಾಭಗವತಿಗೆ ೧೦ ಗದ್ಯಾಣವನ್ನು ದತ್ತಿನೀಡಿದ್ದನ್ನು ದಾಖಲಿಸಿದರೆ ೧೩೮೭ರ ಇನ್ನೊಂದು ಶಾಸನ ಬೈಚಣ್ಣ ಮುಂತಾದ ನಾಲ್ವರು ಭಗವತಿ ಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿ ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಇಲ್ಲಿಯ ೧೪೦೭ರ ಶಾಸನದಲ್ಲಿ ನೀರವಾರದ ೧೬ ಜಗತ್ತು, ೩೦೦ ಪಾದಾಳಿ ಸೂಲಪಾಣಿಗಳು ದುರ್ಗಾದೇವಿಯ ನೈವೇದ್ಯಕ್ಕೆಂದು ದತ್ತಿಬಿಟ್ಟ ಉಲ್ಲೇಖವಿದೆ. ಅದೇ ೧೪೬೪ರ ಇನ್ನೊಂದು ಶಾಸನ ನೆರೆಯ ಮಾಳ ಗ್ರಾಮದ ೧೪ ಜಗತ್ತು, ಮುನ್ನೂರಕ್ಕೆ ಕಾರ್ತಿಕ ತಿಂಗಳಲ್ಲಿ ದತ್ತಿಬಿಟ್ಟ ಅಂಶ ತಿಳಿಸುತ್ತಿದ್ದು ವಿಶಿಷ್ಟವಾಗಿದೆ. ದುರ್ಗಿಯು ಮಹಿಷಾಸುರನನ್ನು ಸಂಹರಿಸಿದ್ದು ಇಲ್ಲೇ ಎಂಬ ಹೇಳಿಕೆಯಿದ್ದು, ಇಲ್ಲಿಯ ಮಹಿಷಮರ್ಧಿನಿ ಶಿಲ್ಪವೂ ಆಕರ್ಷಕವಾಗಿದೆ. ಹಿಂದೆ ಇದು ಗಾಲವ ಮುನಿಗಳ ತಪೋಭೂಮಿಯಾಗಿದ್ದು ಅವರೇ ಈ ದೇವಿಯನ್ನಿಲ್ಲಿ ಪ್ರತಿಷ್ಠಾಪಿಸಿದರೆಂಬ ಐತಿಹ್ಯವಿದೆ. ಅವರ ನೆನಪಾಗಿ, ಸೀತಾನದಿಯ ಸ್ಥಾನಘಟ್ಟವನ್ನು ಗಾಲವತೀರ್ಥ ಎಂದೇ ಕರೆಯಲಾಗಿದೆ. ಅಷ್ಟಕುಲದ ಬ್ರಾಹ್ಮಣರಿಗೆ ದುರ್ಗಾದೇವಿ ಕುಲದೇವತೆಯಾಗಿದ್ದು, ದೇವಾಲಯದಲ್ಲಿ ವಿನಾಯಕ, ಷಣ್ಮುಖ, ವ್ಯಾಘ್ರಚಾಮುಂಡಿ, ವೀರಭದ್ರ, ಕಲ್ಕುಡ ಹಾಗೂ ಕ್ಷೇತ್ರಪಾಲಾದಿ ಬಿಂಬಗಳಿವೆ. ಇಲ್ಲಿರುವ ವೀರಭದ್ರನ ಮೂರ್ತಿಯು ಶ್ರೀಗಂಧದ್ದಾಗಿದ್ದು, (೧೯೯೩) ಅಪೂರ್ವವಾಗಿದೆ. ಚೈತ್ರಮಾಸದ ಪೌರ್ಣಮಿಯಿಂದ ಐದು ದಿನಗಳ ಜಾತ್ರೆ ಇಲ್ಲಾಗುತ್ತದೆ. ಇದು ಸುಬ್ರಹ್ಮಣ್ಯ ಕ್ಷೇತ್ರವೂ ಆಗಿರುವುದರಿಂದ, ಮಾರ್ಗಶಿರ ಮಾಸದಲ್ಲಿ ಷಷ್ಠಿ ಜಾತ್ರೆಯಾಗುತ್ತದೆ. ***ಪಂಚಮಿಕಾನ:*** ಊರಿಗೆ ಅನತಿದೂರದಲ್ಲಿ ಸೀತಾನದಿ ದಂಡೆಯಲ್ಲಿರುವ ಈ ಕ್ಷೇತ್ರ, ಕಾಡಿನ ಮಧ್ಯದಲ್ಲಿದ್ದು ನಾಗ ವಿಗ್ರಹಗಳಿವೆ.

**ಪಡುಬಿದಿರೆ :** ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಇದು ಪ್ರಮುಖ ಪೇಟೆಸ್ಥಳವಾಗಿದ್ದು, ಉಡುಪಿ ಪಟ್ಟಣದಿಂದ ೨೦ಕಿ.ಮೀ. ದೂರದಲ್ಲಿದ್ದು, ನಡ್ಸಾಲು (ಜನಸಂಖ್ಯೆ: ೧೦,೯೮೭) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮ. ಅಲ್ಲಿಯ ಖಡ್ಗೇಶ್ವರಿ ಬ್ರಹ್ಮಸ್ಥಾನದಲ್ಲಿ ಎರಡು ವರ್ಷಕ್ಕೊಮ್ಮೆ ಜರುಗುವ ಡಕ್ಕೆ ಬಲಿಯಿಂದಾಗಿ ಪ್ರಸಿದ್ಧವಾಗಿದೆ. ಉಡುಪಿಯಲ್ಲಿ ಪರ್ಯಾಯ ನಡೆಯುವ ವರ್ಷ ಇಲ್ಲಿ ಡಕ್ಕೆ ಬಲಿಯಿಲ್ಲ, ಪಡುಬಿದ್ರಿಯಲ್ಲಿ ಡಕ್ಕೆ ಬಲಿ ನಡೆಯುವ ವರ್ಷ ಉಡುಪಿಯಲ್ಲಿ ಪರ್ಯಾಯವಿಲ್ಲ, ಎನ್ನುವ ಮಾತು ಈ ಭಾಗದಲ್ಲಿ ರೂಢಿಯಲ್ಲಿದೆ. ಖಡ್ಗೇಶ್ವರಿ ಬ್ರಹ್ಮಸ್ಥಾನವು ಕಾಡಿನಲ್ಲಿದ್ದು, ಮರಗಳು ಪರಸ್ಪರ ಹೆಣೆದುಕೊಂಡು ದಟ್ಟವಾದ ನೆರಳನ್ನು ರೂಪಿಸಿದ್ದು, ಸಹಜ ಸೌಂದರ್ಯವನ್ನು ಒದಗಿಸಿವೆ. ಖಡ್ಗೇಶ್ವರಿಯ ನೆಲೆಯು ಪುಟ್ಟ ಗೂಡಾಗಿದ್ದು, ಅಲ್ಲೇ ನಾಗಾಸ್ಥಾನವೂ ಇದೆ. ಡಕ್ಕೆ ಬಲಿಯು ಎರಡು ವರ್ಷಗಳಿಗೊಮ್ಮೆ ಸಾಮಾನ್ಯವಾಗಿ ಫೆಬ್ರವರಿ ತಿಂಗಳೂ ಪೂರ್ತಾ ಹರಕೆ ರೂಪದಲ್ಲಿ ಭಕ್ತರಿಂದ ಸಲ್ಲಿಸಲ್ಪಡುತ್ತಿದ್ದು, ಅದಕ್ಕೆ ಸುಮಾರು ಒಂದು ಲಕ್ಷ ರೂ.ಗಳು ಖರ್ಚಾಗುತ್ತದೆಂದು ಹೇಳಲಾಗುತ್ತದೆ. ಊರಲ್ಲಿರುವ ಮಹಾಲಿಂಗೇಶ್ವರ ದೇವಾಲಯವು ಪ್ರಾಚೀನ ಅರಮನೆಯಂತೆ ಗೋಚರಿಸುತ್ತಿದ್ದು, ಆಕರ್ಷಕವಾಗಿದೆ. ಈ ಗುಡಿಯಲ್ಲಿರುವ ಗಣಪತಿಗೆ ರೈತರು ಸಲ್ಲಿಸುವ ಕಟ್ಟದಪ್ಪ (ಕಟಾಹಾಪೂಪ) ಸೇವೆ ಅಪೂರ್ವದ್ದಾಗಿದೆ. ಅಪ್ಪ ಎಂಬ ತಿನಿಸನ್ನು ತಯಾರಿಸಿ, ಗಣಪತಿ ಗರ್ಪಿಸಿ, ಭಕ್ತರಿಗೆ ಹಂಚುವುದೇ ಆ ಸೇವೆಯಾಗಿದೆ.

**ಪಾಜಕ :** ದ್ವೈತತತ್ವ ಸಿದ್ಧಾಂತದ ಪ್ರತಿಪಾದಕರಾದ ಮಧ್ವಾಚಾರ್ಯರು ಜನಿಸಿದ ಸ್ಥಳ. ಉಡುಪಿ ಪಟ್ಟಣದಿಂದ ೧೨ ಕಿ.ಮಿ ಆಗ್ನೇಯದಲ್ಲಿರುವ ಬೆಳ್ಳೆ (ಜನಸಂಖ್ಯೆ: ೪,೭೪೪) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ. ಸಾಂಪ್ರದಾಯಿಕವಾಗಿ, ವಾಯುದೇವನ ಮೂರನೆಯ ಅವತಾರವೆಂದು ಹೇಳಲಾಗುವ ಮಧ್ವಾಚಾರ್ಯರ ಜೀವಿತ ಅವಧಿಗೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ವಿದ್ವಾಂಸರಲ್ಲಿ ಒಂದು ವರ್ಗ ಮಧ್ವಾಚಾರ್ಯರ ಕಾಲವನ್ನು ೧೧೯೯–೧೨೭೮ ಎಂದು ಒಪ್ಪಿದ್ದರೆ, ಬನ್ನಂಜೆಯವರು ೧೨೩೮–೧೩೧೭ಕ್ಕೆ ನಿಗದಿಪಡಿಸಿದ್ದಾರೆ. ಮಧ್ವ ವಿರಚಿತ 'ಮಹಾಭಾರತ ತಾತ್ಪರ್ಯ ನಿರ್ಣಯ'ವನ್ನು ಆಧರಿಸಿ, ಪ್ರಬಂಜನಾಚಾರ್ಯರು ಆಚಾರ್ಯರ ಕಾಲವನ್ನು ೧೨೦೦–೮೦ ಎಂದು ನಿಗದಿಪಡಿಸಿದ್ದಾರೆ. ಇಲ್ಲಿಯ ನಡಿಲ್ಲಾಯ ಮನೆತನದ ನಾರಾಯಣ ಭಟ್ಟ (ಮಧ್ಯಗೇಹಭಟ್ಟ) ವೇದವತಿ ದಂಪತಿಗಳಿಗೆ ಜನಿಸಿದ, (೧೨೩೮) ಅವರ ಪೂರ್ವಾಶ್ರಮ ಹೆಸರು ವಾಸುದೇವ. ಉಡುಪಿಯ ಅನಂತೇಶ್ವರ ದೇವಾಲಯದಲ್ಲಿ ಅದ್ವೈತಿ ಅಚ್ಯುತಪ್ರಜ್ಞರ ಶಿಷ್ಯರಾಗಿ ಸನ್ಯಾಸದೀಕ್ಷೆ ಪಡೆದು ಪೂರ್ಣಪ್ರಜ್ಞರೆಂಬ ಹೆಸರು ಪಡೆದರು. ಮುಂದೆ ಆನಂದತೀರ್ಥರೆನಿಸಿ ಮಧ್ವ ಎಂಬ ಹೆಸರಿನಿಂದಲೂ ಖ್ಯಾತಿಪಡೆದು ದ್ವೈತಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ನೂತನ ಸಿದ್ಧಾಂತದ ಹರಿಕಾರರಾದರು. ಸುಮಾರು ಐವತ್ತು ಗ್ರಂಥಗಳನ್ನು ರಚಿಸಿದ್ದ ಅವರ ಸಮಗ್ರ ಸಾಹಿತ್ಯ ಸೃಷ್ಟಿಯನ್ನು ಸರ್ವಮೂಲ ಗ್ರಂಥಗಳೆಂದೂ ಕರೆಯಲಾಗುತ್ತಿದ್ದು ಅವರು ಕನ್ನಡಿಗರೆಂಬುದು ಹೆಮ್ಮೆಯ ವಿಷಯವೆಂದು ಬನ್ನಂಜೆ ಗೋವಿಂದಾಚಾರ್ಯರು ದಾಖಲಿಸಿದ್ದಾರೆ. ಎರಡು ಬಾರಿ ಭರತಖಂಡದ ವಿವಿಧೆಡೆ ಸಂಚರಿಸಿ ಧರ್ಮಪ್ರಸಾರ ಮಾಡಿದ ಇವರು ಉಡುಪಿಯಲ್ಲಿ ಶ್ರೀಕೃಷ್ಣಮಠ ಮಂದಿರಗಳನ್ನು ಸ್ಥಾಪಿಸುವ ಮೂಲಕ ಭಕ್ತಿಪಂಥಕ್ಕೆ ಒತ್ತು ನೀಡಿದರು. ಶ್ರೀಕೃಷ್ಣನ ಆರಾಧನಾ ಕೈಂಕರ್ಯಗಳಿಗೆಂದು ಎಂಟು ಮಂದಿ ಪ್ರಿಯಶಿಷ್ಯರಿಗೆ ಸನ್ಯಾಸ ದೀಕ್ಷೆ ನೀಡಿದರು. ತತ್ಸಂಬಂಧವಾಗಿ ಎಂಟು ಮಠಗಳನ್ನು ನಂತರದಲ್ಲಿ ಆರಂಭಿಸಲಾಯಿತು. ಇಂದಿಗೂ ಈ ಅಷ್ಟಮಠಪರಂಪರೆ ಉಡುಪಿಯಲ್ಲಿ ನಡೆದುಕೊಂಡು ಬರುವ ಮೂಲಕ ಉಡುಪಿಯನ್ನು ಪ್ರಧಾನ ಕೃಷ್ಣಭಕ್ತಿ ಕೇಂದ್ರವನ್ನಾಗಿ ರೂಪುಗೊಳಿಸಿದೆ.

ಪಾಜಕದ ಮಠವೇ ಮಧ್ವಾಚಾರ್ಯರು ಹುಟ್ಟಿದ ಸ್ಥಳ. ಇಲ್ಲಿರುವ ವಾಸುದೇವತೀರ್ಥ ಪುಷ್ಕರಣಿಯು ಅವರ ಸೃಷ್ಟಿ ಎಂಬ ಅಭಿಪ್ರಾಯವಿದ್ದು, ಅವರು 'ಒಣರೆಂಬೆ ಚಿಗುರೊಡೆದ' ಪವಾಡ ಮಾಡಿದ್ದು ಇಲ್ಲೇ ಎಂದು ಹೇಳಲಾಗುತ್ತದೆ. ಆಚಾರ್ಯರು ಹಾಲು ಮೊಸರುಗಳ ಗಡಿಗೆ ಮೇಲೆ ಮುಚ್ಚಿಟ್ಟರೆಂದು ಹೇಳಲಾಗುವ ಬೃಹತ್ತಾದ ಹಾಸುಗಲ್ಲುಗಳು ಇಲ್ಲಿವೆ. ಮಠದಲ್ಲಿ ಅನಂತಪದ್ಮನಾಭನ ಮೂರ್ತಿ ಇದ್ದು, ಅದನ್ನು ಮಧ್ಯಗೇಹಭಟ್ಟರು ಪೂಜಿಸುತ್ತಿದ್ದರೆಂದು ತಿಳಿದುಬರುತ್ತದೆ. ಪಾಜಕ ಕ್ಷೇತ್ರದ ಮಠದ ಸನ್ನಿಧಿಯಲ್ಲಿ ವಾದಿರಾಜರು ಸ್ಥಾಪಿಸಿ ಪೂಜಿಸಿದ ಮಧ್ವಾಚಾರ್ಯರ ಶಿಲಾಮೂರ್ತಿ ಇದೆ. ಶ್ರೀಕೃಷ್ಣಮಠದ ಸರ್ವಜ್ಞ (ಪರ್ಯಾಯ)ಪೀಠವೇರುವ ಮೊದಲು, ಪರ್ಯಾಯ ಸಂಚಾರದ ಅಂಗವಾಗಿ ಯತಿಗಳು ಈ ಕ್ಷೇತ್ರವನ್ನೂ ಸಂದರ್ಶಿಸಿ ಪೂಜೆ ಸಲ್ಲಿಸುತ್ತಾರೆ. ಬೆಟ್ಟದಲ್ಲಿರುವ ದುರ್ಗೆಯು ಕೃಷ್ಣನ ಸೋದರಿಯಾದ್ದರಿಂದ ಉಡುಪಿಯಲ್ಲಿ ಕೃಷ್ಣದರ್ಶನ ಮಾಡಿ, ಕುಂಜಾರಿಗೆ ಬಂದು ದುರ್ಗಿಯ ದರ್ಶನ ಮಾಡುವುದರೊಂದಿಗೆ ಯಾತ್ರೆ ಪೂರ್ಣಗೊಳ್ಳುತ್ತದೆಂಬ ನಂಬಿಕೆ ಭಕ್ತರಲ್ಲಿದೆ. ಫಲಿಮಾರು, ಪೇಜಾವರ ಮತ್ತು ಅದಮಾರು ಮಠಗಳು ಸಂಯುಕ್ತವಾಗಿ ಪಾಜಕ ಪ್ರತಿಷ್ಠಾನವನ್ನು ಇಲ್ಲಿ ಸ್ಥಾಪಿಸಿ ಕಾರ್ಯನಿರ್ವಹಿಸುತ್ತಿವೆ. ಪಡುಬೆಳ್ಳೆಯಲ್ಲಿರುವ ಮಹಾಲಿಂಗೇಶ್ವರ ದೇವಾಲಯವು ಜೀರ್ಣೋದ್ಧಾರಗೊಂಡಿದ್ದು, ಆಕರ್ಷಕವಾಗಿದೆ.

ನೆರೆಯ ಕುರ್ಕಾಲು ಗ್ರಾಮವು ನೂತನ ಶಿಲಾಯುಗ ಸಂಸ್ಕೃತಿಯ ನೆಲೆಯೂ ಆಗಿದ್ದು, ಇಲ್ಲಿರುವ ಕುಂಜಾರಗಿರಿ ಬೆಟ್ಟಕ್ಕೆ ದುರ್ಗಾ ಬೆಟ್ಟ, ವಿಮಾನಗಿರಿ ಎಂಬ ಹೆಸರುಗಳೂ ಇದ್ದು, ಬೆಟ್ಟದ ಮೇಲೆ ದುರ್ಗಾಲಯವಿದೆ. ಕಂಸನು, ಕೊಲ್ಲಲು ಯತ್ನಿಸಿ ಬಂಡೆಗೆ ಅಪ್ಪಳಿಸಿದ ಶಿಶು ಸಾಕ್ಷಾತ್ ದುರ್ಗಾದೇವಿಯೇ ಆಗಿದ್ದು, ಅವಳನ್ನೇ ಪರಶುರಾಮನು ಇಲ್ಲಿ ನೆಲೆಗೊಳಿಸಿದ್ದಾನೆಂಬ ಹೇಳಿಕೆ ಇದ್ದು, ಪ್ರತಿಷ್ಠಾಕಾಲದಲ್ಲಿ ಮುನಿಸಿಕೊಂಡು ಬರದೆ ಇದ್ದ ವರುಣನನ್ನು ಬಾಣ ಪ್ರಯೋಗದಿಂದ ಬರುವಂತೆ ಪರಶುರಾಮನು ಮಾಡಿದನೆಂದೂ ಆಗ ಹುಟ್ಟಿದ ತೀರ್ಥಗಳೇ ಈ ಗಿರಿಯ ನಾಲ್ಕು ದಿಕ್ಕುಗಳಲ್ಲಿರುವ ಪರಶು–ಧನುಸ್ಸು–

ಗದಾ–ಹಾಗೂ ಬಾಣ ತೀರ್ಥಗಳೆಂಬ ನಂಬಿಕೆ ರೂಢಿಯಲ್ಲಿದೆ. ಕನ್ನಿಕಾಪೂಜೆ ಇಲ್ಲಿನ ವಿಶೇಷವಾಗಿದೆ. ದುರ್ಗಾಬೆಟ್ಟದ ಎದುರಿಗೇ ಪರಶುರಾಮನ ಬೆಟ್ಟ ಅದರ ಮೇಲೆ ಜಿಲ್ಲೆಯಲ್ಲೇ ಅಪೂರ್ವವಾದ ಪರಶುರಾಮ ದೇವಾಲಯ.

**ಪುತ್ತಿಗೆ:** ಬೊಮ್ಮರಬೆಟ್ಟು (ಜನಸಂಖ್ಯೆ: ೭,೮೫೩) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ ಇದಾಗಿದ್ದು, ಉಡುಪಿ ಪಟ್ಟಣದಿಂದ ಸ್ವಲ್ಪ ದೂರದಲ್ಲಿದೆ. ಸುಮಾರು ೧೪ನೆಯ ಶತಮಾನಕ್ಕೆ ಸೇರಿದ ಶಾಸನದಲ್ಲಿ ಪುತ್ತಿಗೆ ಗ್ರಾಮದ ಉಲ್ಲೇಖವಿದೆಯಾದರೂ ವಿವರ ಹಾಳಾಗಿದೆ. ಮಠದ ಆವರಣದಲ್ಲಿರುವ ೧೫೯೯ರ ಶಾಸನ, ರಘುನಾಥ ವಡೆಯರು ಆರಾಧಿಸುವ ಕೃಷ್ಣದೇವರ ಸೇವೆಗೆ ಉದಯಂಗಲ ನಾಡ ಪುತ್ತೆಯವೂರಲ್ಲಿ ದತ್ತಿ ಬಿಟ್ಟಿದ್ದನ್ನು ದಾಖಲಿಸಿದ್ದು ಸಾಂದರ್ಭಿಕವಾಗಿ ಅರಮನೆಯ ಪ್ರಸ್ತಾಪವೂ ಇದೆ. ಉಡುಪಿ ಅಷ್ಟಮಠಗಳಲ್ಲೊಂದಾದ ಪುತ್ತಿಗೆ ಮಠದ ಮೂಲಸ್ಥಾನ ಇದಾಗಿದ್ದು, ಸ್ವರ್ಣಾನದಿಯ ದಂಡೆಯ ಮೇಲಿದೆ. ಮಧ್ವಾಚಾರ್ಯರ ನೇರ ಶಿಷ್ಯರಲ್ಲಿ ನಾಲ್ಕನೆಯವರಾದ ಉಪೇಂದ್ರತೀರ್ಥರು ಪುತ್ತಿಗೆ ಮಠದ ಮೂಲಯತಿಗಳಾಗಿದ್ದು, ಈ ಮಠಕ್ಕೆ ಮಧ್ವಾಚಾರ್ಯರು ನೀಡಿದ್ದ ಮೂರ್ತಿ ವಿಠಲದೇವರದಾಗಿದ್ದು, ಮಠದ ಸಿಂಹಾಸನದ ಮೇಲೆ ರಾಮಸೀತಾಲಕ್ಷ್ಮಣ ಹಾಗೂ ಲಕ್ಷ್ಮೀನರಸಿಂಹ ಮೂರ್ತಿಗಳಿವೆ. ಇದರ ಎದುರಲ್ಲಿನ ಗುಡಿಯಲ್ಲಿ ಮುಖ್ಯಪ್ರಾಣ ದೇವರ ಲೋಹದ ಪ್ರತಿಮೆಯಿದೆ. ಮಠದ ಕಾಷ್ಠಸ್ತಂಭವೊಂದ ರಲ್ಲಿರುವ **'ಕಂಬದ ಗಣಪತಿ'** ವಿಶಿಷ್ಟವಾಗಿದೆ. ನದಿಯ ತೀರದಲ್ಲಿ ಹಿಂದಿನ ಯತಿಗಳಿಗೆ ಸೇರಿದ ನಾಲ್ಕು ವೃಂದಾವನಗಳಿವೆ. ಮಠದ ಸಮೀಪದಲ್ಲಿರುವ ವಿಷ್ಣುಮೂರ್ತಿಯ ಕಿರುಗುಡಿಯಲ್ಲಿ ಜನಾರ್ದನನ ಶಿಲ್ಪವಿದ್ದು, ಇಲ್ಲಿ ಸಣ್ಣ ಜಾತ್ರೆಯು ವರ್ಷಕ್ಕೊಮ್ಮೆ ನಡೆಯುತ್ತದೆ. ಬೊಮ್ಮರಬೆಟ್ಟಿನ ಮೂಲಮಠದಲ್ಲಿರುವ ಸುಮಾರು ೧೫ನೇ ಶತಮಾನದ ಶಾಸನ ಪಾಂಡಿ ಸಾವಂತರು, ಮಠ ಕಟ್ಟಿಸಿ, ಜನಾರ್ಧನನನ್ನು ಪ್ರತಿಷ್ಠಾಪಿಸಿ ಧರ್ಮ ಬಿಟ್ಟಿದ್ದನ್ನು ದಾಖಲಿಸಿದೆ.

**ಪೆರ್ಡೂರು** (ಜನಸಂಖ್ಯೆ: ೧೦,೫೬೫): ಉಡುಪಿ ಪಟ್ಟಣದಿಂದ ೨೦ ಕಿ.ಮೀ. ದೂರದಲ್ಲಿರುವ ಇದು ಅನಂತಪದ್ಮನಾಭ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಪೆರ್ಡೂರಿನಲ್ಲಿರುವ ೧೪೦೬ರ ಬುಕ್ಕನ ಶಾಸನ, ಶೃಂಗೇರಿಯ ನರಸಿಂಹ ಭಾರತಿಗಳ ಪುಸ್ತಕ ಭಂಡಾರದ ಜೀರ್ಣೋದ್ಧಾರಕ್ಕೆಂದು ೧೭೦ ಗದ್ಯಾಣಗಳನ್ನೂ ಬ್ರಹ್ಮಾವರ ಹಾಗೂ ಬೆಳಂಜೆಯ ೧೫೦ ಕಾಟಿಗದ್ಯಾಣಗಳ ಜೊತೆಗೆ ಸಿಂಗೇರಿಯ ಪುರಾಣಿಕಕವಿ ಕೃಷ್ಣರ ಜೀವನೋಪಾಯಕ್ಕೆಂದು ೨೦ ಕಾಟಿಗದ್ಯಾಣಗಳನ್ನು ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಊರ ಪೇಟೆಯ ಮಧ್ಯದ ರಥಬೀದಿಯಲ್ಲಿರುವ ಈ ದೇವಾಲಯ ಭವ್ಯವಾಗಿದೆ. ಈ ದೇವಾಲಯವು ಬೆಳಗಿನ ಜಾವದಲ್ಲಿ ತೆರೆಯಲ್ಪಟ್ಟರೆ ರಾತ್ರಿ ಪೂಜೆ ಸಲ್ಲುವವರೆಗೆ ತೆರೆದೇ ಇರುತ್ತದೆ. ಪ್ರಧಾನ ಗರ್ಭಗೃಹದಲ್ಲಿರುವ ಶಿಲ್ಪವು ಶೇಷಶಯನ ಭಂಗಿಯದಾಗಿರದೆ ಜನಾರ್ದನ ರೂಪದಲ್ಲಿದ್ದು, ಚತುರ್ಭುಜಧಾರಿ ವಿಷ್ಣುವು ಶಂಖ–ಚಕ್ರ–ಗದಾ–ಪದ್ಮಗಳಿಂದ ಶೋಭಿತನಾಗಿದ್ದಾನೆ. ವಿಷ್ಣುವಿನಲ್ಲೇ ಲಕ್ಷ್ಮೀ ಅಂತರ್ಗತಳಾಗಿರುವ ಕುರುಹಾಗಿ ಸ್ವಾಮಿಯ ಆಭರಣಗಳಲ್ಲಿ ಒಂದು ಮೂಗುತಿಯೂ ಇದೆ. ಇಲ್ಲಿ ನಂದಿಗೋಣ, ಖಡ್ಗರಾವಣ, ಬೊಬ್ಬರ್ಯ ಮುಂತಾದ ದೈವಗಳ ಸ್ಥಾನವಿದೆ. ದೇವರಿಗೆ ಕದಳಿ ಸೇವೆ ಮಾಡಿಸುವುದು ಇಲ್ಲಿನ ವಿಶೇಷವಾಗಿದ್ದು, ಸ್ವಾಮಿಗೆ ಸುವರ್ಣಕದಳಿಮಾಲೆಯೇ ಹಾರವಾಗಿದೆ. ಮೀನಸಂಕ್ರಾಂತಿಯಂದು ಆರಂಭವಾಗುವ ಐದು ದಿನಗಳ ವಾರ್ಷಿಕ ಜಾತ್ರೆಯನ್ನು ಭೌತಿಕೋತ್ಸವವೆಂದು ಕರೆಯಲಾಗುತ್ತದೆ. ಆಗ ದೊಡ್ಡ ರಥವನ್ನು ಎಳೆದರೆ ಮಳೆಗಾಲ ಹೊರತುಪಡಿಸಿ ಉಳಿದ ಎಂಟು ತಿಂಗಳೂ ಸಂಕ್ರಮಣದಂದು ಚಿಕ್ಕ ಜಾತ್ರೆ ಇರುತ್ತದೆ. ಈ ದೇವರ ನಿತ್ಯೋತ್ಸವ ಮಾಸೋತ್ಸವ, ವಾರ್ಷಿಕೋತ್ಸವಗಳಿಗೆಂದೇ ಮಾಡಿರುವ ನೇಮ ಕಟ್ಟಳೆಗಳು ಇಂದಿಗೂ ಮುಂದುವರಿದುಕೊಂಡು ಬಂದಿವೆ. ಈ ದೇವರ ಕಟ್ಟಿಗೆ ಒಳಪಟ್ಟ ಪೆರ್ಡೂರು ಗ್ರಾಮದ ವಿವಿಧ ಉಪಗ್ರಾಮಗಳಲ್ಲಿ ಕಲ್ಲುಮಠ, ನೆಲ್ಲಿಮಠ, ಹೆಬ್ಬಾರುಮಠ, ಪಡಪೊಳ್ಳಿಮಠ, ಕುಕ್ಕುಂಡಿಮಠ, ಪಾಡಿಗಾರುಮಠ, ಮಡ್ಡಮೇಶ್ವರಮಠ ಹಾಗೂ ಮಂಚಾಲುಮಠಗಳೆಂಬ ಅಷ್ಟಮಠಗಳಿವೆ. ಸಾಹಸ ಕ್ರೀಡಾಪಟುವಾಗಿರುವ ವಿಘ್ನೇಶಕುಮಾರ್ ಪೆರ್ಡೂರಿನವರು.

**ಫಲಿಮಾರು** (ಜನಸಂಖ್ಯೆ: ೩,೪೧೧): ಉಡುಪಿ ಪಟ್ಟಣದಿಂದ ಅನತಿ ದೂರದಲ್ಲಿರುವ ಇದು ಅಲ್ಲಿರುವ ಉಡುಪಿ ಅಷ್ಟಮಠಗಳಲ್ಲೊಂದರಿಂದಾಗಿ ಪ್ರಸಿದ್ಧವಾಗಿದೆ. ಊರ ಪೇಟೆಯಲ್ಲಿರುವ ಮಹಾಲಿಂಗೇಶ್ವರ ದೇವಾಲಯವು ವಿಶಾಲವಾಗಿದ್ದು, ಭವ್ಯವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇಲ್ಲಿಯ ಜನಾರ್ದನ ದೇವಾಲಯ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾಗಿದ್ದು, ಗರ್ಭಗುಡಿಯಲ್ಲಿ ಜನಾರ್ದನನ ಸುಂದರ ಶಿಲ್ಪವಿದೆ. ಬರಮಾಡಿನಲ್ಲಿ ಸುಬ್ರಹ್ಮಣ್ಯ ಗುಡಿ, ಮೂಡುಫಲಿಮಾರಿನಲ್ಲಿ ಬ್ರಹ್ಮಲಿಂಗೇಶ್ವರ, ಗೌಡಸಾರಸ್ವತರ ಕೃಷ್ಣ ಅನಂತೇಶ್ವರ ಮುಂತಾದ ದೇವಾಲಯಗಳಿವೆ. ಇಲ್ಲಿ ಶುಕ್ರವಾರದಂದು ವಾರದ ಸಂತೆಯಾಗುತ್ತಿದ್ದು, ಅದರಿಂದಾಗಿ ಊರಿಗೆ ಫಲಿಮಾರು ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ. ಫಲಿಮಾರಿನ ವಿಷ್ಣುಗುಡಿಯ ಬಳಿಯಿರುವ ೧೪೦೧ರ ಶಾಸನ ಇಮ್ಮಡಿ ಹರಿಹರನ ಕಾಲಕ್ಕೆ ಸೇರಿದ್ದು, ವಿವರ ಹಾಳಾಗಿದ್ದು ವೀರಾಚಾರಿಯ ಮಗ ನಂಬಿಯಾಚಾರಿಯ ಉಲ್ಲೇಖವಷ್ಟೇ ಉಳಿದಿದೆ. ಇಲ್ಲಿಯ ಫಲಿಮಾರು ಶಾಖಾಮಠ ಉಡುಪಿಯ ಅಷ್ಟಮಠಗಳಲ್ಲಿ ಒಂದಾಗಿದ್ದು, ಮಧ್ವಾಚಾರ್ಯರ ನೇರ ಶಿಷ್ಯರಲ್ಲಿ ಪ್ರಥಮರಾದ ಹೃಷಿಕೇಶತೀರ್ಥರು ಈ ಮಠದ ಆದಿಯತಿಗಳಾಗಿದ್ದು, ಮಠದ ಸಮೀಪದಲ್ಲೇ ಶಾಂಭವಿ ನದಿಯು ಹರಿಯುತ್ತದೆ. ಪುಷ್ಪಗಳಿಂದ ಕೂಡಿದ ಉದ್ಯಾನವನದ ನಡುವೆ ಇರುವ ಮಠವು ಆಕರ್ಷಕವಾಗಿದ್ದು, ಇದನ್ನು ಸುಮಾರು ೧೭೨೦ರಲ್ಲಿದ್ದ ರಘುಪುಂಗವತೀರ್ಥರ ಕಾಲದಲ್ಲಿ ಪುನರ್ನಿರ್ಮಾಣ ಮಾಡಲಾಗಿದೆ. ಈ ಮಠಕ್ಕೆ ಅಷ್ಟೋತ್ಕೃಷ್ಟ ಮಠ ಎಂಬ ಬಿರುದಿದ್ದು, ಮಠದ ಮೂಲ ದೇವರು ಶ್ರೀರಾಮಚಂದ್ರನಾಗಿದ್ದಾನೆ. ವೇದವ್ಯಾಸರು ಹಾಗೂ ಮುಖ್ಯ ಪ್ರಾಣದೇವರುಗಳನ್ನು ಮಠದ ದೇವಗುಡಿಯ ಸಿಂಹಾಸನದಲ್ಲಿಟ್ಟು ಪೂಜಿಸಲಾಗುತ್ತಿದೆ. ಹಿಂದಿನ ಹತ್ತು ಯತಿಗಳ ವೃಂದಾವನಗಳು ಮಠದ ಆವರಣದಲ್ಲಿದ್ದು, ವೇದವ್ಯಾಸತೀರ್ಥ ಪುಷ್ಕರಿಣಿಯೂ ಇಲ್ಲಿದೆ.

**ಬಂಟಕಲ್ಲು:** ಉಡುಪಿ ಪಟ್ಟಣಕ್ಕೆ ಸ್ವಲ್ಪ ದೂರದಲ್ಲಿರುವ ಇದು ಶಿರ್ವ ಕಂದಾಯ ಗ್ರಾಮ (ಜನಸಂಖ್ಯೆ: ೧೩,೭೮೧)ಕ್ಕೆ ಸೇರಿದ ಉಪಗ್ರಾಮವಾಗಿದ್ದು, ಅಲ್ಲಿರುವ ದುರ್ಗಾಪರಮೇಶ್ವರಿ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಸುಮಾರು ೧೯೪೨ರಲ್ಲಿ ನಿರ್ಮಾಣಗೊಂಡಿರುವ ಈ ಗುಡಿಯಲ್ಲಿ ರಾಜಾಪುರ ಸಾರಸ್ವತರು ಪ್ರತಿಷ್ಠಾಪಿಸಿರುವ ದುರ್ಗೆ ಇದ್ದು, ಪಾಕಶಾಲೆಯಲ್ಲಿರುವ ರಾಮ-ಲಕ್ಷ್ಮಣ-ಸೀತಾ ಕಡಾಯಿಗಳು ಉಲ್ಲೇಖಾರ್ಹವಾಗಿವೆ. ರಾಮನವಮಿಯ ಮಾರನೆಯ ದಿನ ಇಲ್ಲಿ ರಥೋತ್ಸವವಿರುತ್ತದೆ. ಗುಡಿಯ ಹೊರಗೆ ವನಮಧ್ಯದಲ್ಲಿ ವೃಕ್ಷವೊಂದಕ್ಕೆ ಸೇರಿಕೊಂಡಿರುವ ವೀರನೊಬ್ಬನ ಉಬ್ಬುಶಿಲ್ಪವುಳ್ಳ ವೀರಗಲ್ಲನ್ನು ಬಂಟನಕಲ್ಲು (ಬಂಟೇಶ್ವರ) ಎಂದು ಕರೆಯಲಾಗುತ್ತದೆ. ಕಲ್ಲಿನ ಹಿಂಬದಿಯಲ್ಲಿದ್ದ ಶಾಸನವೂ ಸವೆದು ಹಾಳಾಗಿದೆ. ಬಂಟಕಲ್ಲಿಗೆ ಹೋಗುವ ಮಾರ್ಗದಲ್ಲಿರುವ **'ಕೃಷ್ಣಚ್ಛಾಯಾ'** ಎಂಬ ಆಧುನಿಕ ಬಂಗಲೆಯು ಭವ್ಯವಾಗಿದ್ದು, ನೇಪಾಳಿ ಕುಟುಂಬವೊಂದರ ಖಾಸಗಿ ಒಡೆತನಕ್ಕೊಳಪಟ್ಟಿದೆ. ***ಮಂಚಕಲ್ಲು:*** ಇದು ಶಿರ್ವಕ್ಕೆ ಸೇರಿದ ಇನ್ನೊಂದು ಉಪಗ್ರಾಮವಾಗಿದ್ದು, ಶಾಂತಿಗ್ರಾಮಕ್ಕೆ ಹೋಗುವ ಅಡ್ಡರಸ್ತೆಯಲ್ಲಿರುವ ಹೋಲಿಕ್ರಾಸ್ ಇಗರ್ಜಿ ಆಕರ್ಷಕವಾಗಿದ್ದು, ಸ್ಥಳೀಯವಾಗಿ ಅದನ್ನು ವೆಲ್ಲಂಕಣಿ ಅಮ್ಮನ ಚರ್ಚೆಂದು ಕರೆಯಲಾಗುತ್ತದೆ. ಮಂಚನಕಲ್ಲು, ಶಿರ್ವದ ಪೇಟೆತಾಣವಾಗಿದ್ದು, ಈ ಪರಿಸರವು ಮಲ್ಲಿಗೆ ಹೂವಿಗೆ ಪ್ರಸಿದ್ಧವಾಗಿದ್ದು, ದೇಶವಿದೇಶಗಳಿಗೆ ರಫ್ತಾಗುವ ಅದರ ಕೃಷಿಯಲ್ಲಿ ಕ್ರೈಸ್ತರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಲ್ಲಿಯ ನ್ಯಾರ್ಮ-ಜಾರಂದಾಯ ಗ್ರಾಮದೈವ ಸನ್ನಿಧಿಯಲ್ಲಿ ಆಣೆ ಪ್ರಮಾಣಗಳು ಜರುಗುತ್ತವೆ. ಇಲ್ಲಿರುವ ಅವರ್ ಲೇಡಿ ಆಫ್ ಹೆಲ್ತ್ ಚರ್ಚು ಸಂತ ಮೇರಿಯದಾಗಿದ್ದು, ಆಕರ್ಷಕವಾಗಿದೆ.

**ಬನ್ನಂಜೆ** : ಸ್ಥಳೀಯ ಬಿಲ್ಲವ ಸೇವಾ ಸಂಘ (೧೯೪೨)ದವರು ಕಳೆದು ಶತಮಾನದಲ್ಲಿ ಸ್ಥಾಪಿಸಿಕೊಂಡಿರುವ ಬ್ರಹ್ಮಶ್ರೀ ಇಲ್ಲಿ ನಾರಾಯಣ ಗುರುಮಂದಿರ ಹಾಗೂ ಇತರ ಕಟ್ಟಡಗಳು ಆಕರ್ಷಕವಾಗಿವೆ. ಬನ್ನಂಜೆಯಲ್ಲಿ ಪ್ರಾಚೀನ ಕಾಲಕ್ಕೆ ಸೇರಿದ ಮಹಾಲಿಂಗೇಶ್ವರ ದೇವಾಲಯವಿದ್ದು, ಮಧ್ವಾಚಾರ್ಯರು ಅದನ್ನು ಸಂದರ್ಶಿಸಿದ್ದರೆಂದು ಹೇಳಲಾಗುತ್ತದೆ. ಪ್ರಸಿದ್ಧ ವಿದ್ವಾಂಸರಾದ ಗೋವಿಂದಾಚಾರ್ಯರು ಬನ್ನಂಜೆಯವರು.

**ಬ್ರಹ್ಮಾವರ** : ತಾಲೂಕು ಕೇಂದ್ರ ಉಡುಪಿಯಿಂದ ೧೩ ಕಿ.ಮೀ. ದೂರದಲ್ಲಿರುವ ಚಾಂತಾರು (ಜನಸಂಖ್ಯೆ: ೪,೭೦೬) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮವಾಗಿದ್ದ ಇದಿಂದು ಪ್ರಮುಖ ಹೋಬಳಿ ಕೇಂದ್ರವಾಗಿದೆ.

ಸಿರಿಯನ್ ಕ್ರಿಶ್ಚಿಯನ್ನರ ಪ್ರಮುಖ ನೆಲೆಗಳಲ್ಲೊಂದು, ಮಿಗಿಲಾಗಿ ಅಲ್ಲಿರುವ ಮಹಾಲಿಂಗೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ರಥಬೀದಿಯಲ್ಲಿರುವ ಮಹಾಲಿಂಗೇಶ್ವರ ದೇವಾಲಯವು ಸುಮಾರು ೯ನೇ ಶತಮಾನಕ್ಕೆ ಸೇರಿದ ಪುರಾತನ ಆಲಯವಾಗಿದ್ದು, ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿದೆ. ಸುಮಾರು ೧೧-೧೨ ಶತಮಾನಕ್ಕಾಗಲೇ ಬ್ರಹ್ಮಾವರವು ಅಗ್ರಹಾರವಾಗಿ ಖ್ಯಾತಿ ಪಡೆದಿದ್ದು, ಶಾಸನಗಳಲ್ಲಿ ಬ್ರಹ್ಮಪುರ ಎಂದೇ ಉಲ್ಲೇಖಿತಗೊಂಡಿದೆ. ಗೌಡಸಾರಸ್ವತರ ಲಕ್ಷ್ಮೀವೆಂಕಟರಮಣ ದೇವಾಲಯವೂ ಊರ ರಥದ ಬೀದಿಯಲ್ಲಿದ್ದು ಆಕರ್ಷಕವಾಗಿದೆ. ಇಲ್ಲಿಯ ಸೇಂಟ್ ಮೇರಿ ಚರ್ಚ್ (೧೮೮೮) ಆಕರ್ಷಕವಾಗಿದೆ. ಇದನ್ನು ೧೯೪೭ರಲ್ಲಿ ನವೀಕರಿಸಿ ಸೇಂಟ್ ಮೇರಿಸ್ ಆರ್ಥೋಡಾಕ್ಸ್ ಸಿರಿಯನ್ ಕೆಥೆಡ್ರಲ್ ಎಂದು ಹೆಸರಿಡಲಾಗಿದೆ. ಯಕ್ಷಗಾನಕ್ಕೆ ಈ ಊರು ಹೆಸರಾಗಿದ್ದು, ಕಲಾವಿದರಲ್ಲಿ ಉಪ್ಪೂರುಶೇಷರ ಹೆಸರು ಉಲ್ಲೇಖಾರ್ಹ. ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ಮಂಗಳೂರು ಆಕಾಶವಾಣಿ ರಿಲೇ ಕೇಂದ್ರ, ಸಕ್ಕರೆ ಕಾರ್ಖಾನೆ, ಹೆಂಚಿನ ಕಾರ್ಖಾನೆ, ಹಗ್ಗದ ಕಾರ್ಖಾನೆ, ಎಣ್ಣೆ ಮಿಲ್ಲು, ಮುಂತಾದವು ಈ ಪರಿಸರವನ್ನು ಸಮೃದ್ಧಗೊಳಿಸಿವೆ. ***ಚಾಂತಾರು*** (ಜನಸಂಖ್ಯೆ: ೪೭೦೬) : ಬ್ರಹ್ಮಾವರಕ್ಕೆ ಸನಿಹದಲ್ಲಿರುವ ಇದು ಬ್ರಹ್ಮ ಬೈದರ್ಕಳ ಗರ(ರೋ)ಡಿಯಿಂದಾಗಿ ಪ್ರಸಿದ್ಧವಾಗಿದೆ. ಅಲ್ಲದೆ ಚ್ಯವನ ಋಷಿಗಳು ತಪಸ್ಸು ಮಾಡಿದ ಸ್ಥಳ ಇದಾಗಿದ್ದು, ಅದರ ಕುರುಹಾಗಿ ಇಲ್ಲೊಂದು ಗವಿಯೂ ಇದೆ. ಇತ್ತೀಚೆಗೆ ನವೀಕರಿಸಲ್ಪಟ್ಟಿರುವ ಗರಡಿಯು ಆಕರ್ಷಕವಾಗಿದ್ದು, ಒಂದು ಗುಡಿಯಲ್ಲಿ ಕೋಟಿಚೆನ್ನಯ, ದೇಯಿಬೈದೇತಿ, ಮೈಂದಾಳ್ತಿ, ಪೆರುಮಲೆಬಲ್ಲಾಳ, ದೇವಬಲ್ಲಾಳು, ಕಾಂಜವ, ಮರ್ಲಚಿಕ್ಕು, ಜೋಗಿಪುರುಷ, ಕುರುಕುಲು, ಬಾಲಕಂದ ಮುಂತಾದ ದೈವಗಳಿದ್ದರೆ, ಇನ್ನೊಂದರಲ್ಲಿ ಶಿವರಾಯ ಚೌಂಡಿಯರಿದ್ದಾರೆ. ಇವೆಲ್ಲವೂ ಮೆಕ್ಕೆಕಟ್ಟೆಯಲ್ಲಿರುವ ಮರದಿಂದ ಮಾಡಿದ ವರ್ಣಮಯ ಪಾಪೆಗಳು. ಪ್ರತಿವರ್ಷ ಈ ದೈವಸ್ಥಾನದಲ್ಲಿ ನೇಮೋತ್ಸವವನ್ನು ಆಚರಿಸಲಾಗುತ್ತದೆ. ಇಲ್ಲಿಯ ಶಂಕರನಾರಾಯಣ ಗುಡಿ ಬಳಿಯಿರುವ ೧೪೦೪ರ ಶಾಸನದಲ್ಲಿ ಬ್ರಹ್ಮಾವರದ ನಿಡುವಪಳ್ಳಿಯ ಅಹಿತಾಗ್ನಿ ದೇಗುಲದ ಶಂಕರನಾರಾಯಣ ದೇವರ ಸ್ಥಾನಕ್ಕೆ ವಿದ್ಯಾರಣ್ಯರ ಶಿಷ್ಯ ಶಂಕರಾರಣ್ಯರಿಗೆ ದತ್ತಿಬಿಟ್ಟ ಉಲ್ಲೇಖವಿದೆ. ***ಭದ್ರಗಿರಿ:*** ಬೈಕಾಡಿ (ಜನಸಂಖ್ಯೆ: ೩,೧೪೭) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮವಾಗಿದ್ದು, ತಾಲೂಕು ಕೇಂದ್ರ ಉಡುಪಿಯಿಂದ ಉತ್ತರಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಸ್ವರ್ಣ ನದಿಯ ಶಾಖೆಗಳ ಕೂಡಲ ತಾಣದಲ್ಲಿರುವ ಇದು ಹರಿಕಥಾ ಕೀರ್ತನಕಾರರಾದ ಅಚ್ಯುತದಾಸ್ ಹಾಗೂ ಕೇಶವದಾಸ ಸೋದರರಿಂದಾಗಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದೆ. ಊರ ಸಮೀಪದ ಗುಡ್ಡದ ಮೇಲೆ ವೀರವಿಠಲ ದೇವಾಲಯವಿದೆ. ವಿಠಲ ಮೂರ್ತಿಯು ಕಿರಿದಾಗಿದ್ದರೂ ಆಕರ್ಷಕವಾಗಿದೆ. ಸನಿಹದ ಬೈಕಾಡಿ ಗ್ರಾಮದ ವ್ಯಾಪ್ತಿಯಲ್ಲಿ ಸಕ್ಕರೆ ಕಾರ್ಖಾನೆಯೂ ಇದೆ.

**ಬಸರೂರು** (ಜನಸಂಖ್ಯೆ: ೬,೫೩೨) : ತಾಲೂಕು ಕೇಂದ್ರ ಕುಂದಾಪುರದಿಂದ ಆರು ಕಿ.ಮೀ. ಪೂರ್ವಕ್ಕೆ ವಾರಾಹಿ ನದಿಯ ತೀರದಲ್ಲಿರುವ ಚಾರಿತ್ರಿಕ ಮಹತ್ವದ ವಾಣಿಜ್ಯ ಕೇಂದ್ರವಾಗಿದ್ದು, ಸುಮಾರು ಎರಡು ಸಾವಿರ ವರ್ಷಗಳಷ್ಟು ಸುದೀರ್ಘ ಇತಿಹಾಸವನ್ನು ಹೊಂದಿದೆ. ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳನ್ನೂ ವಿದ್ವಾಂಸರು ಈ ಪರಿಸರದಲ್ಲಿ ಪತ್ತೆಹಚ್ಚಿದ್ದಾರೆ. ಹಿಂದೆ ಈ ಪಟ್ಟಣವು ಪ್ರಮುಖ ಬಂದರಾಗಿ ಅರೇಬಿಯಾ, ಈಜಿಪ್ಟ್ ಮುಂತಾದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು. ಗ್ರೀಕ್ ಪ್ರವಾಸಿ ಟಾಲೆಮಿ ಉಲ್ಲೇಖಿಸುವ 'ಬರಾಸೆ', ಬಸರೂರನ್ನೇ ಕುರಿತದ್ದೆಂಬ ಅಭಿಪ್ರಾಯವಿದೆ. ಮಧ್ಯಯುಗದಲ್ಲಿ ಬಾರ್ಬೋಸಾ, ಪಾಯಿಸ್ ಮುಂತಾದ ವಿದೇಶಿ ಪ್ರವಾಸಿಗರು ಈ ಪಟ್ಟಣಕ್ಕೆ ಭೇಟಿ ನೀಡಿದ್ದು, ಮೆಚ್ಚುಗೆಯ ಮಾತುಗಳನ್ನಾಡಿದ್ದು, ಮಹತ್ವದ ಅಂಶಗಳನ್ನು ದಾಖಲಿಸಿದ್ದಾರೆ.

ಈ ಊರಿನ ಮೊದಲ ಉಲ್ಲೇಖ, ಭುಜಬಲ ವೀರಕವಿಯಾಳ್ವೆಂದ್ರದೇವನ ೧೧೫೫ರ ಬಸರೂರು ಶಾಸನದಲ್ಲಿ 'ಹೊಸಪಟ್ಟಣ ಬಸುರಪುರ' ರೂಪದಲ್ಲೂ, ವೀರಕುಲಶೇಖರನ ೧೧೭೫ರ ಇನ್ನೊಂದು ಶಾಸನದಲ್ಲಿ 'ಬಸುರೂರ ಪಟ್ಟಣ' ರೂಪದಲ್ಲೂ ದೊರೆತರೆ, ೧೪೪೪ರ ಮತ್ತೊಂದು ಶಾಸನದಿಂದ 'ಧರ್ಮಪಟ್ಟಣ' ಎಂಬ ಅಭಿದಾನವೂ ಇದಕ್ಕಿದ್ದ ಅಂಶ ವೇದ್ಯವಾಗುತ್ತದೆ. ಪೋರ್ಚುಗೀಸರ ಬಾಯಲ್ಲಿ

'ಬಸರೂರು' 'ಬಾರ್ಸೆಲೋರ್' ಎಂದಾಯಿತು. ಆದರೆ ಸ್ಥಳಪುರಾಣಗಳಲ್ಲಿ ಇದು 'ವಸುಪುರ' ಎಂದು ಕರೆಯಲ್ಪಟ್ಟಿದ್ದು, ಚೇದಿದೇಶದ ವಸುಮಹಾರಾಜನು ಇಲ್ಲಿ ರಾಜ್ಯ ಸ್ಥಾಪನೆ ಮಾಡಿದುದರಿಂದ ಅದಕ್ಕೆ 'ವಸುಪುರ' ಎಂಬ ಹೆಸರು ಬಂತೆಂದು ಹೇಳಲಾಗುತ್ತದೆ. ಬಸರೂರಿನಲ್ಲಿ ಪತ್ತೆಯಾಗಿರುವ ಸುಮಾರು ೧೨–೧೮ನೇ ಶತಮಾನಕ್ಕೆ ಸೇರಿದ ೩೦ಕ್ಕೂ ಹೆಚ್ಚು ಶಾಸನಗಳಿಂದ ಅದರ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬಹುದಾಗಿದೆ. ಬಸರೂರು, ಹಿಂದೆ ಏಳು ಕೇರಿಗಳನ್ನು ಹೊಂದಿದ್ದ ಪಟ್ಟಣವಾಗಿದ್ದು, ಪ್ರತಿಯೊಂದು ಕೇರಿಯಲ್ಲೂ ಕೆರೆ, ದೇವಸ್ಥಾನ, ಮಠ, ಸತ್ರ, ಶಾಲೆ, ವರ್ತಕ ಸಂಘಗಳಿದ್ದು, ವಿವಿಧ ರಾಜಮನೆತನಗಳ ಆಡಳಿತಾವಧಿಯಲ್ಲಿ ಪ್ರಮುಖ ನೆಲೆಯಾಗಿದ್ದು, ಬೊಕ್ಕಸಕ್ಕೆ ಒಳ್ಳೆಯ ಆದಾಯ ಸಂದಾಯವಾಗುತ್ತಿತ್ತು. ವ್ಯಾಪಾರದ ಸಲುವಾಗಿ ಬಂದ ಪೋರ್ಚುಗೀಸರು ಇಲ್ಲಿ ವ್ಯವಹಾರ ವಹಿವಾಟು ನಡೆಸಿದರೆ, ಡಚ್ಚರು ಕೋಠಿಯನ್ನೇ ಕಟ್ಟಿಕೊಂಡಿದ್ದರು. ಬ್ರಿಟಿಷರಂತೂ ಕೇಳುವುದೇ ಬೇಡ. ಟಿಪ್ಪುಸುಲ್ತಾನನೂ ಈ ಪಟ್ಟಣವನ್ನು ಸೂರೆ ಮಾಡಿದನೆಂದು ಹೇಳಲಾಗುತ್ತದೆ.

ಬಸರೂರಿನ ಶಾಸನಗಳಲ್ಲಿ ಉಕ್ತವಾಗಿರುವ ಏಳುಕೇರಿಗಳಲ್ಲಿ ಒಂದಾದ ಮೂಡುಕೇರಿಯಲ್ಲಿ ಅಗಸ್ತ್ಯತೀರ್ಥ ಇದ್ದು, ಸನಿಹದಲ್ಲೇ ಪುರಾತನ ಆದಿನಾಥೇಶ್ವರ ದೇವಾಲಯವಿದೆ. ಪೂರ್ಣ ಶಿಥಿಲಾವಸ್ಥೆ ಯಲ್ಲಿದ್ದ ಈ ದೇಗುಲವನ್ನು ಕಳೆದ ಶತಮಾನದ ಉತ್ತರಾರ್ಧ ಭಾಗದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಈ ಗುಡಿಯ ಮಗ್ಗುಲಲ್ಲೇ ಗೌಡಸಾರಸ್ವತರಿಗೆ ಸಂಬಂಧಿಸಿದ ಕಾಶಿಮಠದ ಶಾಖಾಮಠವಿದೆ. ಮಠದಲ್ಲಿ ಶ್ರೀದೇವಿ–ಭೂದೇವಿ ಸಹಿತ ತ್ರಿನಾಮ ವೆಂಕಟರಮಣನ ಶಿಲ್ಪವಿದೆ. ಈ ಮಠದ ಎದುರಿನ ರಾಮಚಂದ್ರ ದೇವಾಲಯದಲ್ಲಿರುವ ಕೇಶವೇಂದ್ರ ತೀರ್ಥ ಹಾಗೂ ಭುವನೇಂದ್ರ ತೀರ್ಥರ ವೃಂದಾವನಗಳು ಚೆನ್ನಾಗಿ ಸಂರಕ್ಷಿಸಲ್ಪಟ್ಟಿವೆ. ಇಲ್ಲಿಯ ಗುಪ್ಪೆಗುಡ್ಡೆ ಪರಿಸರವು ಪುರಾತನ ಕೋಟೆಯ ಅವಶೇಷಗಳನ್ನು ಹೊಂದಿರುವ ಸ್ಥಳ. ಅಲ್ಲಿ ಸದಾನಂದ ಮಠದ ಅವಶೇಷಗಳಿದ್ದು, ಕೊಂಕಣ ರೈಲು ಮಾರ್ಗ ರಚನೆ ಸಂದರ್ಭದಲ್ಲಿ ಕೋಟೆ ಭಾಗವು ಸಾಕಷ್ಟು ಹಾಳಾಯಿತೆಂದು ತಿಳಿದುಬರುತ್ತದೆ. ಇದರ ಬದಿಯಲ್ಲೇ ಇರುವ ಗುಡಿಗಾರಕೇರಿ–ರಾಹುತಕೇರಿ ಮಾರ್ಗವಾಗಿ ಸಾಗಿ ಪಡುವಗೇರಿಯ ತಿರುಮಲ ವೆಂಕಟರಮಣನ ದೇವಾಲಯವನ್ನು ವೀಕ್ಷಿಸಬಹುದಾಗಿದೆ. ಶಾಸನಗಳಲ್ಲಿ ತಿರುಮಲ ದೇವರೆಂದೇ ಉಲ್ಲೇಖಿತಗೊಂಡಿರುವ ಇದಕ್ಕೆ ದತ್ತಿಬಿಟ್ಟಿದ್ದ ಅಂಶ ೧೪೮೨, ೧೫೦೬ ಹಾಗೂ ೧೫೩೩ರ ಶಾಸನಗಳಿಂದ ವೇದ್ಯವಾಗುತ್ತದೆ. ೧೪೮೨ರ ಶಾಸನದಲ್ಲಿ ಕೋಟಿನಾಥ ದೇವರಿಗೆ ಐದೂವರೆ ತಾರಗಳನ್ನು ದತ್ತಿಬಿಟ್ಟ ಉಲ್ಲೇಖವಿದೆ. ೧೫೦೬ರ ಶಾಸನದಲ್ಲಿ ಸಾಲಿಗರ ಕೇರಿಯ ಮಗ್ಗಗಾರರೂ ದಾಖಲಾಗಿದ್ದು, ತಿರುಮಲದೇವರ ಪಡುವಣ ಅಶ್ವತ್ಥ ಕಟ್ಟೆಯ ನಿರ್ವಹಣೆಗೆ ಮೂಡಗೇರಿಯ ಹೊಸಕೇರಿಯವರು ಮೈಸಾಲದ ಬಡ್ಡಿ ಬಾಬ್ತು ಏಳು ಗದ್ಯಾಣವನ್ನು ದತ್ತಿ ಬಿಟ್ಟಿರುವ ವಿಚಾರ ಗಮನಾರ್ಹವಾಗಿದೆ. ಸಣ್ಣಕೆರೆ ಕಟ್ಟೆ ಬಳಿಯಿರುವ ೧೫೨೫ರ ಶಾಸನದಿಂದ ನಾರಾಯಣ ಮುನಿಲ ಕುಪ್ಪಣ ಸೆಟ್ಟಿಯು ಲಕ್ಷ್ಮಿ ನಾರಾಯಣ ಗುಡಿ ಹಾಗೂ ಮಠ ನಿರ್ಮಿಸಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇಲ್ಲೊಂದು ಮನೆಯ ಜಾಲಾಂದ್ರದಲ್ಲಿರುವ ಪೋರ್ಚುಗೀಸ್ ರಾಜಲಾಂಛನದ ಕಾಷ್ಠಬಿಂಬವು ಉಲ್ಲೇಖಾರ್ಹವಾಗಿದೆ.

ರಾಹುತಗೇರಿಯಲ್ಲಿರುವ ದೇವಿಯ ದೇಗುಲವು ಬಸರೂರಿನ ಪ್ರಧಾನ ಆಕರ್ಷಣೆ. ಈ ದೇವಿಯ ಮೊದಲ ಉಲ್ಲೇಖ ೧೪೫೫ರ ಶಾಸನದಲ್ಲಿದ್ದು, ದೇವಿಯ ಜಾತ್ರೆ ಮೆರವಣಿಗೆಗಳಿಗೆ ಸಂಬಂಧಿಸಿದಂತೆ ಎರಡೂ ಕೇರಿಯವರು ಮಾಡಿಕೊಂಡ ಒಪ್ಪಂದದ ದಾಖಲೆ ಅದಾಗಿದೆ. ಇಲ್ಲಿ ಕಾಳಿ–ಲಕ್ಷ್ಮಿ–ಸರಸ್ವತಿಯರು, ಶಿವಲಿಂಗರೂಪದಲ್ಲಿ ಆರಾಧಿಸಲ್ಪಡುತ್ತಾರೆ. ಅವನ್ನು ಬೃಹತ್ತಾದ ಹುತ್ತ ಆವರಿಸಿದೆ. ಈ ಗುಡಿಯು ಮಾರಿಯ ಸನ್ನಿಧಾನವೂ ಆಗಿದ್ದು, ಮುಖವಷ್ಟೇ ಇರುವ ಮರದ ಶಿಲ್ಪಕ್ಕೆ ಕಲಾತ್ಮಕವಾದ ಸರ್ಪಮಯ ಕಿರೀಟವಿದೆ. ಅಲ್ಲೇ ಸೋದರಿ ಮಾತಂಗಿ ಹಾಗೂ ವೀರಭದ್ರ ಬೇತಾಳರ ಶಿಲ್ಪಗಳಿವೆ. ವೀರಭದ್ರನ ಕಾಲಿಗೆ ಸಂಕೋಲೆ ಬಿದ್ದಿದ್ದು ವೀರಭದ್ರನ ಮೂರ್ತಿಯೆದುರು 'ಬೆತ್ತಲೆ ಪರಮೇಶ್ವರಿ' ಎಂಬ ನಗ್ನ ಶಿಲ್ಪವೂ ಇದೆ. ಅದಕ್ಕೊಂದು ಸ್ಥಳೀಯ ಐತಿಹ್ಯವಿದೆ. ಇಲ್ಲಿ ಭದ್ರಕಾಳಿ, ಅನ್ನಪೂರ್ಣೇಶ್ವರಿ ಮುಂತಾದ ಮೂರ್ತಿಗಳಿವೆ. ಅಲ್ಲದೆ ಕಾಲಲ್ಲಿ

ಪುಟ್ಟ ಅರಲೆ ಗೂಡನ್ನು ಮೆಟ್ಟಿನಿಂತ ಸಿಂಹದಂತೆ ತೋರುವ ಅಪೂರ್ವವಾದೊಂದು ಪ್ರಾಣಿ ಶಿಲ್ಪವಿಲ್ಲಿದೆ. ಚೀನಾ-ಮಂಗೋಲಿಯಾ ಮೂಲಕ್ಕೆ ಸೇರಿದ ಪೌರಾಣಿಕ ಪ್ರಾಣಿಯ ಶಿಲ್ಪ ಇದಾಗಿದ್ದು, ಅದರ ತಲೆ ಹಾಗೂ ಮೇಲೆತ್ತಿಕೊಂಡ ಬಾಲಗಳಿಂದ ಬೆಂಕಿಯ ಜ್ವಾಲೆ ಹೊಮ್ಮುತ್ತಿದ್ದು, ತನ್ನೆರಡು ನಾಲಗೆಗಳನ್ನು ಅದು ಬಾಯರಳಿಸಿ ಬೆನ್ನ ಮೇಲೆ ಚಾಚಿಕೊಂಡಿದೆ. ಬಸರೂರು ಹಿಂದೆ ಹೊಂದಿದ್ದ ವಿದೇಶಿ ಸಂಪರ್ಕಕ್ಕೆ ಇದು ಸಾಕ್ಷಿಯಾಗಿದೆ. ೧೪೫೫ರ ಶಾಸನದಲ್ಲಿ ಸ್ವದೇಶಿ-ಪರದೇಶಿಗಳು ನಡೆಯುವ ಉಭಯಮಾರ್ಗದ ಹಾದಿಯಲ್ಲಿ ದೇವಿಯ ಜಾತ್ರೆಗೆ ಬಳಸುವ ಅಡಕೆಯ ಮರವನ್ನು, ತೋರಣಗಂಬವನ್ನು ಹೊಂದಿರುವ ಈ ಉಭಯಮಾರ್ಗದಲ್ಲಿ ಮೆರೆಸಿಕೊಂಡು ಹೋಗುವಂತಿಲ್ಲ ಎಂದು ನಿಷೇಧ ಹೇರಿರುವುದು ಉಲ್ಲೇಖಾರ್ಹವಾಗಿದ್ದು, ಹಂಜಮಾನ್ ವರ್ತಕರು ಬಸರೂರಿನಲ್ಲಿದ್ದ ಅಂಶವೂ ದಾಖಲಾಗಿದೆ. ಇಲ್ಲಿರುವ ವಿಗ್ರಹಗಳೆಲ್ಲವೂ ಮರದ ಮೂರ್ತಿಗಳಾಗಿದ್ದು, ನೆರೆಯ ಗುಡಿಗಾರ ಕೇರಿಯಲ್ಲಿ ಹಿಂದಿದ್ದ ಕಾಷ್ಠಶಿಲ್ಪಿಗಳ ಕೃತಿಗಳಾಗಿರುವಂತೆ ತೋರುತ್ತಿದ್ದು, ಅವುಗಳಿಗೆ ಮಾಡಿರುವ ಬಣ್ಣಗಾರಿಕೆಯೂ ಅಷ್ಟೇ ಆಕರ್ಷಕವಾಗಿದೆ. ಮಲಯಾಳಿ ಬೊಬ್ಬರ್ಯನನಿಗೆ ಪ್ರತ್ಯೇಕ ಸ್ಥಾನವಿದ್ದು, ಇನ್ನೊಂದು ಗುಡಿಯಲ್ಲಿ ಹಾಯ್ಗುಳಿ ದೊಟ್ಟೆಕಾಲು ಚಿಕ್ಕು, ಮಡ್ಲಚಿಕ್ಕು ಮೊದಲಾದ ದೈವಮೂರ್ತಿಗಳಿವೆ. ಮಹಿಳೆಯರು ಸಂತಾನಾಪೇಕ್ಷೆಯಿಂದ ಪಟ್ಟೆಸೀರೆ ಚಿನ್ನಾಭರಣದ ಹರಕೆಯನ್ನು ಈ ದೇವಿಗೆ ಹೊರುತ್ತಾರೆ. ನವರಾತ್ರಿಯ ಒಂಬತ್ತು ದಿನಗಳೂ ದೇವಿಯನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ಪೂಜಿಸಲಾಗುತ್ತದೆ. ಮಾರಿದೇವಿಯ ದೊಡ್ಡ ಜಾತ್ರೆಯು ೬೦ ವರ್ಷಗಳಿಗೊಮ್ಮೆ ನಡೆಯುವ ಸಂವತ್ಸರದ ಜಾತ್ರೆಯಾಗಿದ್ದು, ನಾಡಿಗೇ ವಿಶಿಷ್ಟವಾಗಿದ್ದು, ಇಷ್ಟು ದೀರ್ಘಕಾಲ ಕಾಯಬೇಕಾದ ಜಾತ್ರೆ ಮತ್ತೊಂದಿಲ್ಲವೆಂದರೇ ಉತ್ಪ್ರೇಕ್ಷೆಯಾಗಲಾರದು. ಏಳು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಬಸರೂರಿನ ನೆರೆಯ ಬಳ್ಕೂರು, ಜಪ್ತಿ, ಕಂದಾವರ ಹಾಗೂ ಆನಗಳ್ಳಿಯ ಗ್ರಾಮಸ್ಥರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಸರ್ಪಕಿರೀಟದ ಮಾರಿಯ ಮೂರ್ತಿಯನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಆಗ ಖಾಲಿ ಇರುವ ಅವಳ ಗದ್ದುಗೆಯಲ್ಲಿ ಸೋದರಿ ಮಾತಂಗಿಯನ್ನಿರಿಸಲಾಗುತ್ತದೆ. ಹಿಂದೆ ದೇವಿಯನ್ನು ಪರವ ಜನಾಂಗದವರು ಹೊರುತ್ತಿದ್ದರಾದರೂ, ೧೯೮೪ರ ಜಾತ್ರೆಯಲ್ಲಿ ತೇರೊಂದನ್ನು ನೂತನವಾಗಿ ಮಾಡಿಸಿ ಬಳಸಲಾಯಿತು. ಆನಂತರ ಅದನ್ನು ಮಹಾಲಿಂಗೇಶ್ವರ ದೇವರ ಸೇವೆಗೆಂದು ಒಪ್ಪಿಸಲಾಗಿದೆ. ಈ ಉತ್ಸವದಲ್ಲಿ ದೇವಿಯ ಜೊತೆಗೆ ಜಟ್ಟಿಂಗರಾಯ, ಪಂಜುರ್ಲಿ, ಕಲ್ಕುಟಿಗ, ಹೊಯ್ಗರೆ ಚಿಕ್ಕು, ಎಡಗೋಳಿ ಚಿಕ್ಕು, ಕೊಂಗಳ್ಳಿ ಅಮ್ಮ ಮುಂತಾದ ದೈವಗಳು ಸೇರುತ್ತವೆ. ಮಾರಿಗೆ ಈ ದೊಡ್ಡ ಜಾತ್ರೆಯಲ್ಲದೆ, ೧೫ ವರ್ಷಗಳಿಗೊಮ್ಮೆ ಒಂದು ದಿನದ ಚಿಕ್ಕ ಜಾತ್ರೆಯೂ ನಡೆಯುತ್ತದೆ. ಆದರೆ ಆಗ ಮಾರಿಯ ಮೂರ್ತಿಯನ್ನು ಗ್ರಾಮದ ಗಡಿಗೆ ಕೊಂಡೊಯ್ಯುವುದಿಲ್ಲ.

ಬಸರೂರಿನ ಹೃದಯಭಾಗವಾದ ಪಡುಗೇರಿಯಲ್ಲಿರುವ ಮಹಾಲಿಂಗೇಶ್ವರ ದೇವಾಲಯವು ಇಲ್ಲಿಯ ಪ್ರಾಚೀನ ದೇವಾಲಯವಾಗಿದ್ದು, ಮಹಾಲಿಂಗೇಶ್ವರನನ್ನು ಸುಮಾರು ೧೧-೧೨ನೆಯ ಶತಮಾನದ ಶಾಸನಗಳಲ್ಲಿ ನಖರೇಶ್ವರನೆಂದೇ ಉಲ್ಲೇಖಿಸಲಾಗಿದೆ. ನಖರವೆಂಬ ವರ್ತಕ ಸಂಘದವರು ಈ ದೇವಾಲಯವನ್ನು ನಿರ್ಮಿಸಿದ್ದರಿಂದ ಆ ಹೆಸರು ಬಂದಿರುವಂತೆ ತೋರುತ್ತದೆ. ಆದರೆ ವಸುಮಹಾರಾಜನು ಇಲ್ಲಿಯ ಶಿವಲಿಂಗವನ್ನು ಕದ್ರಿಯಿಂದ ತರಿಸಿ ಸ್ಥಾಪಿಸಿದನೆಂಬ ಐತಿಹ್ಯವೂ ಇದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ೧೧೫೫ರ ಶಾಸನದಲ್ಲಿ ಮೊದಲ ಉಲ್ಲೇಖ ಲಭಿಸುತ್ತದೆ. ಅದೇ ೧೪೦೦ರ ಇನ್ನೊಂದು ಶಾಸನದಲ್ಲಿ ನಖರೇಶ್ವರ ದೇವಾಲಯದ ಮುಂದಿದ್ದ ನಂದೀಕೇಶ್ವರನಿಗೆ ದತ್ತಿಬಿಟ್ಟ ವಿಚಾರವಿದೆ. ಆದರೆ ೧೪೫೨ರ ವೇಳೆಗೆ ಇದಕ್ಕೆ ಮಹಾಲಿಂಗೇಶ್ವರ ಎಂಬ ಹೆಸರು ರೂಢಿಗೆ ಬಂದಿದ್ದ ಅಂಶ ಶಾಸನದಲ್ಲಿ ಬರುವ 'ನಖರೇಶ್ವರ ಮಹಾದೇವ' ಎಂಬ ಉಲ್ಲೇಖದಿಂದ ತರ್ಕಿಸಬಹುದಾಗಿದೆ. ೧೫೨೮ರ ಶಾಸನದಲ್ಲೂ ನಖರೇಶ್ವರದ ಮಹಾಲಿಂಗೇಶ್ವರ ಎಂಬ ಉಲ್ಲೇಖವೇ ದೊರೆಯುತ್ತದೆ. ಪ್ರಧಾನ ಗರ್ಭಗೃಹದಲ್ಲಿ ಮಹಾಲಿಂಗೇಶ್ವರ (ಶಾಸನೋಕ್ತ ನಖರೇಶ್ವರ)ನ ಶಿವಲಿಂಗವಿದ್ದರೆ, ಉಪಗೃಹಗಳಲ್ಲಿ ದುರ್ಗಾ, ಗಣಪತಿ, ಮಹಿಷಮರ್ದಿನಿ, ವೀರಭದ್ರ, ತಾಂಡವೇಶ್ವರ, ನಾರಾಯಣ ಮುಂತಾದ ದೇವತಾಶಿಲ್ಪಗಳಿವೆ. ಶಿರವಿಲ್ಲದ ಕಾಷ್ಠಮೂರ್ತಿಯೊಂದು ಈ ದೇವಾಲಯದಲ್ಲಿದ್ದು, ಅದಕ್ಕೆ ಸ್ವರ್ಣಗೌರಿವ್ರತದಂದು ಆವೆಮಣ್ಣಿನ ಮುಖದಿಂದ

ಅಲಂಕರಿಸಿ, ಪೂಜಿಸಿ ನಂತರ ಶಿರೋಭಾಗವನ್ನಷ್ಟೆ ವಿಸರ್ಜಿಸಲಾಗುತ್ತದೆ. ಈ ದೇವಾಲಯದ ಕಂಬವೊಂದರ ಮೇಲೆ ಇರುವ ನಾಲ್ಕು ಆನೆಗಳನ್ನು ಹಿಡಿದು ಹಾರುತ್ತಿರುವ ಗಂಡಭೇರುಂಡ; ಮುಖ ಕೈಸಹಿತ ಅರ್ಧ ದೇಹ ಮನುಷ್ಯನದಾದರೆ, ಉಳಿದರ್ಧ ಭಾಗ ಪ್ರಾಣಿಯದಂತಿರುವ ಪುರುಷಾಮೃಗ ಉಬ್ಬುಕೆತ್ತನೆಗಳು ಉಲ್ಲೇಖಾರ್ಹವಾಗಿದೆ. ಶೂಲಪಾಣಿ–ಪರಶುಪಾಣಿ ಎಂದು ಕರೆಯಲ್ಪಡುವ ಆಳೆತ್ತರದ ಪಂಚಲೋಹದ ದ್ವಾರಪಾಲಕ ಮೂರ್ತಿಗಳು ಗಮನಾರ್ಹವಾಗಿವೆ. ಗುಡಿಯ ಎದುರಿರುವ ದೀಪಸ್ತಂಭ ಆಕರ್ಷಕವಾಗಿದ್ದು, ಕಾರ್ತಿಕ ಮಾಸದ ದೀಪೋತ್ಸವ ಪ್ರಸಿದ್ಧವಾಗಿದೆ. ಇಲ್ಲಿಯ ಕಂಚಿನ ದೀಪದಕಂಬದ ಮೇಲಿನ ಗಜಾರೂಢ ಗಣಪತಿ ಉಲ್ಲೇಖಾರ್ಹ. ಮಹಾಲಿಂಗೇಶ್ವರನ ಏಳುದಿನಗಳ ವಾರ್ಷಿಕ ಜಾತ್ರೆಯು ರಾಮನವಮಿಯಂದು ಪಟ ಏರಿಸುವುದೊಂದಿಗೆ ಆರಂಭವಾಗಿ, ಆರು ದೈನಂದಿನ ಉತ್ಸವಗಳ ನಂತರ ಚೈತ್ರ ಹುಣ್ಣಿಮೆ ಕೂಡುವ ಏಳನೆಯ ದಿನದಂದು ರಥೋತ್ಸವವಾಗುತ್ತದೆ. ಅಂದು ಅವಭೃತೋತ್ಸವದ ಅಂಗವಾಗಿ ನಡೆಯುವ ಓಕುಳಿಯಾಟ ವಿಶಿಷ್ಟವಾಗಿರುತ್ತದೆ. ನಾಡವ ಜನಾಂಗದ ಯುವಕರು ಮಾತ್ರ ಇದರಲ್ಲಿ ಪಾಲ್ಗೊಳ್ಳುವ ಸಂಪ್ರದಾಯವಿದೆ.  ಅಲ್ಲೇ ಇರುವ ೧೪೮೭ರ ಶಾಸನದಿಂದ ಊರ ಸೆಟ್ಟಿಕಾರರು ರುದ್ರಾಕ್ಷಿ ಒಡೆಯರ ಮಠ ನಿರ್ಮಿಸಿ ದಾನ ನೀಡಿದ್ದ ಅಂಶ ಗೊತ್ತಾಗುತ್ತದೆ. ಈ ದೇವಾಲಯಕ್ಕೆ ಅನತಿ ದೂರದಲ್ಲಿರುವ ತುಳುವೇಶ್ವರ ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದರೂ ಇದ್ದುದರಲ್ಲಿ ಹೇಗೋ ಪೂಜಾ ಕಾರ್ಯನಡೆದುಕೊಂಡು ಬರುತ್ತಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ.  ಈ ದೇವರಿಗೆ ಮುಳಲದೇವಿಯು ದತ್ತಿಬಿಟ್ಟ ಅಂಶ ೧೪೦೧ರ ಶಾಸನವೊಂದರಲ್ಲಿದೆ. ಬಸರೂರಿನ 'ಮುಂಡಿಬಾಗಿಲು', ವಾರಾಹಿ ನದಿ ನಡುವೆ ಇರುವ ಹಟ್ಟಿಕುದುರು ತಲುಪಲು ಇರುವ ಕಡವು ತಾಣವಿದಾಗಿದ್ದು, ದೋಣಿ ಸಾರಿಗೆಯನ್ನು ಕಲ್ಪಿಸಲಾಗಿದೆ. ಇದಕ್ಕೆ ಪೂರಕವಾಗಿ ಬಸರೂರಿನ ಒಂದೆರಡು ಶಾಸನಗಳಲ್ಲಿ ಅಳಿವೆಯಬಾಯಿ ಕಡುವಿನ ಹೊಳೆ ಇತ್ಯಾದಿ ಉಲ್ಲೇಖವಿದೆ.

ದೊಡ್ಡಕೆರೆಕಟ್ಟೆ ಬಳಿಯಿರುವ ೧೪೭೨ರ ಶಾಸನದಿಂದ ಪಡುವಗೇರಿಯ ದುಗ್ಗಣ ಶೆಟ್ಟಿ ಕುಟುಂಬದವರು ಹಾಗೂ ಜವರುಪಾಲಿಯ ಕಿರುಮಲ್ತೆ ಶೆಟ್ಟಿ ಕುಟುಂಬದವರು ವಾರಣಾಸಿಯಿಂದ ಪಂಚ ಪೂಜೆ ಸಹಿತ ವಿಶ್ವನಾಥಲಿಂಗವನ್ನು ತಂದು ಬಸರೂರಲ್ಲಿ ಪ್ರತಿಷ್ಠಾಪಿಸಿ ಮಠ ನಿರ್ಮಿಸಿ ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಇದೇ ತೇದಿಯ ಇನ್ನೊಂದು ಶಾಸನದಿಂದ, ಇದೇ ಕುಟುಂಬದವರು ತಾವು ಕಟ್ಟಿಸಿದ ಮಠಕ್ಕೆ ನಾರಣಪುರದ ಚಮ್ಮಾರ ಓಣಿಯ ಮೂಡಭಾಗದಲ್ಲಿ ದತ್ತಿಬಿಟ್ಟ ಅಂಶ ಗೊತ್ತಾಗುತ್ತದೆ. ಅಲ್ಲೇ ಇರುವ ೧೫೩೧ರ ಇನ್ನೊಂದು ಶಾಸನದಿಂದ ಮಹಾಲಿಂಗೇಶ್ವರ ಗುಡಿಯ ಸನಿಹದಲ್ಲಿ ದುರ್ಗಾದೇವಿಯನ್ನು ಲಜ್ಜೆಯ ಸದಾನಂದಶೆಟ್ಟಿಯು ಪ್ರತಿಷ್ಠೆ ಮಾಡಿಸಿದ ಅಂಶ ಗೊತ್ತಾಗುತ್ತದೆ. ಇಲ್ಲಿಯ ಬಸ್ತಿಕೇರಿಯು ಹಿಂದೆ ಪ್ರಮುಖ ಜೈನವಸತಿ ತಾಣವಾಗಿತ್ತಾದರೂ ಇಂದು ಯಾವುದೇ ಜೈನ ಬಸದಿ ಉಳಿದಿಲ್ಲ. ಇಲ್ಲಿನ ೧೪೫೫ರ ಶಾಸನವೊಂದರಲ್ಲಿ ನಖರೇಶ್ವರ, ತುಳುವೇಶ್ವರ ಹಾಗೂ ದೇವಿಗುಡಿಗಳ ಜೊತೆಗೆ ಬಸ್ತಿಯ ಉಲ್ಲೇಖವೂ ಇದೆ. ಗೋಕರ್ಣದ ಪರ್ತಗಾಳಿ ಜೀವೋತ್ತಮ ಶಾಖಾ ಮಠವೊಂದು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಮಠದಲ್ಲಿ ಶ್ರೀರಾಮ ಹಾಗೂ ವೀರವಿಟ್ಠಲದೇವರು ಆರಾಧ್ಯದೈವವಾಗಿವೆ. ಇಲ್ಲಿಯ ೧೪೫೫ರ ಶಾಸನವೊಂದರಿಂದ ಹಿಂದೆ ಇಲ್ಲಿ ನಾಲ್ಕು ಮಠಗಳಿದ್ದ ಅಂಶ ತಿಳಿದುಬರುತ್ತಿದ್ದು, ಚಿರುಳಿಗುಂಡದ ವಿಷ್ಣುಮೂರ್ತಿಯ ಉಲ್ಲೇಖವೂ ಇದೆ.

ಬಸರೂರಿನ ಮಾರ್ಗೋಳಿ ಎಂಬಲ್ಲಿ ಸಂತ ಫಿಲಿಫ್‌ಮೇರಿಗೆ ಅರ್ಪಿತವಾದ ಪ್ರಾಚೀನ ರೋಮನ್ ಕ್ಯಾಥೋಲಿಕ್ ಚರ್ಚು ಇದೆ. ಇಗರ್ಜಿಯ ಒಳಕಂಬಗಳ ಮೇಲೆ ಕ್ರೈಸ್ತಧರ್ಮವನ್ನು ಪ್ರಚಾರಮಾಡಿದ ವಿವಿಧ ಸಂತರ ಆಕರ್ಷಕ ಬಿಂಬಗಳಿವೆ. ಪ್ರತೀವರ್ಷ ನವೆಂಬರ್ ೧೬–೧೭ ರಂದು ಈ ಚರ್ಚಿನ ವಾರ್ಷಿಕ (ತೆರಾಲಿ) ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಆ ಸಂದರ್ಭದಲ್ಲಿ ಇಲ್ಲಿ ವಿಶೇಷ ಸಂತೆ ಸೇರುತ್ತದೆ.

ಊರಿನ ಇನ್ನೊಂದು ಭಾಗದಲ್ಲಿ ಹಿಂದೆ ಜರ್ಮನ್ ಮಿಷಿನರಿಗಳಿದ್ದ ಸ್ಥಳದಲ್ಲಿ ಪ್ರಾಟೆಸ್ಟೆಂಟ್ ಪಂಥದ ಎಲಿಜಬತ್ ಇಗರ್ಜಿ ಇದೆ. ಚರ್ಚಿನೊಳಗೆ ಯಾವುದೇ ಕ್ರೈಸ್ತ ಮೂರ್ತಿ, ಚಿತ್ರಪಟಗಳಿರದೆ

ಅಲ್ಲಿಯ ನಿರಾಕಾರೋಪಾಸನೆ ಅಚ್ಚರಿಯನ್ನುಂಟು ಮಾಡುತ್ತದೆಂದು ಕೆ. ಅನಂತರಾಮು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಹಾರ್ವೆಸ್ಟ್ ಬೆಳೆಕಾಣಿಕೆ ಹಬ್ಬ, ಕ್ರಿಸ್‌ಮಸ್, ಗುಡ್‌ಫ್ರೈಡೆ ಮುಂತಾದ ಹಬ್ಬಗಳನ್ನು ಆಚರಿಸಲಾಗುತ್ತದೆ. ಇಲ್ಲಿರುವ ಕೋಟಿ ಚನ್ನಯರ ಪಂಜುರ್ಲಿ ಗರಡಿಯು ಬಿಲ್ಲವರ ದೈವಾಲಯವಾಗಿದ್ದು, ಅಲ್ಲಿ ಅಸಂಖ್ಯಾತ ದೈವಗಳ ಸ್ಥಾನವಿದ್ದು ಇತರರೂ ನಡೆದುಕೊಳ್ಳುತ್ತಾರೆ. ವಾರಾಹಿ ಹೊಳೆಯ ಆಚೆ ದಡದ ಗುಲ್ವಾಡಿಯಲ್ಲಿ ಪ್ರಭಾಕರ ಹೆಂಚಿನ ಕಾರ್ಖಾನೆ ಹಾಗೂ ಸಮೀಪದ ಹಳನಾಡು ಮುಳ್ಳು ಗುಡ್ಡೆಯಲ್ಲಿ ಸೌಪರ್ಣಿಕಾ ಗೇರುಬೀಜದ ಕಾರ್ಖಾನೆಗಳಿವೆ.

**ಬಾರಕೂರು:** ತಾಲೂಕು ಕೇಂದ್ರ ಉಡುಪಿಯಿಂದ ೧೬ ಕಿ.ಮೀ. ದೂರದಲ್ಲಿರುವ ಕಚ್ಚೂರು (ಜನಸಂಖ್ಯೆ: ೧೯೬೩) ಕಂದಾಯ ಗ್ರಾಮದ ಉಪಗ್ರಾಮವಿದಾಗಿದ್ದು, ಸೀತಾನದಿ ತೀರದಲ್ಲಿದೆ. ಬಾರಕೂರಿನ ರೈಲು ನಿಲ್ದಾಣದ ಆಚೆ ಭಾಗದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಕೆ. ಶಿವತಾರಕ್ ಕೆಲವು ವರ್ಷಗಳ ಹಿಂದೆ ಪತ್ತೆಹಚ್ಚಿದ್ದಾರೆ. ಇದು ಜಿಲ್ಲೆಯ ಪುರಾತನ ಪಟ್ಟಣಗಳಲ್ಲೊಂದಾಗಿದ್ದು, ಅದರ ಪ್ರಾಚೀನತೆಯನ್ನು ಕ್ರಿ.ಪೂ.೩೦೦ರಷ್ಟು ಹಿಂದಕ್ಕೆ ಗುರುತಿಸಲು ವಿದ್ವಾಂಸರು ಯತ್ನಿಸಿದ್ದಾರೆ. ಸುಮಾರು ೧೧-೧೪ನೆಯ ಶತಮಾನದಲ್ಲಿ ಆಲುಪರಸರ ರಾಜಧಾನಿಯಾಗಿದ್ದು ಹಿರಿಯ ಅರಮನೆಯನ್ನೂ ಹೊಂದಿದ್ದ ಅಂಶ ಕುಮ್ರಗೋಡು, ವಾರಂಬಳ್ಳಿ (ಜನಸಂಖ್ಯೆ: ೧೩೪೫) ಬಾರಕೂರು ಮುಂತಾದೆಡೆ ಇರುವ ಶಾಸನಗಳು ದಾಖಲಿಸಿವೆ. ನಂತರ ಹೊಯ್ಸಳರ ಉಪರಾಜಧಾನಿಯಾಗಿ, ವಿಜಯನಗರದರಸರ ಕಾಲದಲ್ಲಿ ಪ್ರಾಂತೀಯ ಕೇಂದ್ರವಾಗಿ ಮೆರೆದಿರುವ ಈ ಊರು ಒಂದು ಕಾಲದಲ್ಲಿ ಹಂಗಾರಕಟ್ಟೆ ಬಂದರಿನವರೆಗೂ ವ್ಯಾಪಿಸಿದ್ದು, ತನ್ಮೂಲಕ ಸಾಗರೋತ್ತರ ಸಂಪರ್ಕವನ್ನೂ ಹೊಂದಿದ್ದು, ಕೆಳದಿ, ಹೈದರ್, ಟಿಪ್ಪು, ಪೋರ್ಚುಗೀಸ್ ಹಾಗೂ ಬ್ರಿಟೀಷರ ನಿಯಂತ್ರಣಕ್ಕೂ ಒಳಪಟ್ಟಿತ್ತು. ಈಗ ಕಡಲ ಅಳಿವೆಬಾಗಿಲು ದೂರವಾಗಿದ್ದು, ಕಡಲ ತೀರದಿಂದ ನಾಲ್ಕು ಕಿ.ಮೀ. ದೂರದಲ್ಲಿ ಪಟ್ಟಣವಿದೆ. ಹಿಂದೆ ತಾಲೂಕು ಕೇಂದ್ರವೂ ಆಗಿದ್ದ ಬಾರಕೂರು ಇಂದು ಕಚ್ಚೂರು (ಜನಸಂಖ್ಯೆ: ೧,೯೬೩) ಕಂದಾಯಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮವಾಗಿದ್ದರೂ ದೊಡ್ಡ ಪಟ್ಟಣವಾಗಿ ಬೆಳೆದಿದೆ. ಬಾರಕೂರಿಗೆ ಸಂಬಂಧಿಸಿದಂತೆ ಸಂಶೋಧನಾ ಪ್ರೌಢಪ್ರಬಂಧ ಸಲ್ಲಿಸಿದ್ದ ಬಿ. ವಸಂತಶೆಟ್ಟಿ ಪಿಎಚ್.ಡಿ. ಪಡೆದಿದ್ದರು.

ಪ್ರಾಚೀನ ಶಾಸನಗಳಲ್ಲಿ ಬಾರಹಕನ್ಯಾಪುರ, ಬಾರಕನೂರು ಬಾರಕೂರು ಎಂಬ ಉಲ್ಲೇಖವಿದ್ದು, ಬಾರಕ ಎಂಬುದು ದ್ವಾರಕ ಪದದ ತದ್ಭವವಾಗಿದ್ದು, ಸಮುದ್ರದ ದ್ವಾರದಲ್ಲಿರುವ ಊರು ಎಂದಾಗುತ್ತದೆಂಬ ಅಂಶವನ್ನು ಪಿ.ಗುರುರಾಜಭಟ್ ಮುಂದಿಟ್ಟಿದ್ದಾರೆ. ಸ್ಥಳಪುರಾಣದಲ್ಲಿ ಜಯಂತಿಕಾ ನಗರ ವಾರಿಕುಲ ಮುಂತಾದ ಉಲ್ಲೇಖಗಳಿದ್ದು, ವಾರಿಕುಲವೇ ಬಾರಕೂಲ ಬಾರಕೂರು ಆಗಿದ್ದು, ನೀರಿನ ತೀರದಲ್ಲಿರುವ ಊರು ಎಂದು ಅದನ್ನು ಅರ್ಥೈಸಲಾಗಿದೆ. 'ಬಾರಹಕನ್ಯಾಪುರ' ಎಂಬುದು ಭೂತಾಳಪಾಂಡ್ಯನು ಹನ್ನೆರಡು ಕನ್ಯೆಯರನ್ನು ಒಂದೇ ಹಸೆಮಣೆಯಲ್ಲಿ ಮದುವೆಯಾದುದರಿಂದ ಬಂತೆಂದೂ ಹೇಳಲಾಗುತ್ತದೆ. ತುಳುನಾಡಿನಲ್ಲಿ ಹಿಂದೆ ರೂಢಿಯಲ್ಲಿದ್ದ ಅಳಿಯ ಸಂತಾನ ಕಟ್ಟನ್ನೂ ಬಾರಕೂರಿನಲ್ಲೇ ರೂಪಿಸಿ ಜಾರಿಗೆ ತಂದವನು ಭೂತಾಳಪಾಂಡ್ಯನೆಂದು ಹೇಳಲಾಗುತ್ತದೆ. ಅದಕ್ಕೆ ಪೂರಕವಾಗಿ ಈ ಭಾಗದಲ್ಲಿ ಸ್ಥಳ ಪುರಾಣವೂ ಇದೆ. ಒಂದನೆಯ ಬಂಕಿಯಾಳುಪೇಂದ್ರನ ಕಾಲಕ್ಕೆ ಸೇರಿದ ೧೦೨೦ರ ಎರಡು ವೀರಗಲ್ಲುಗಳು ಮೂಡುಗೇರಿಯ ಸೋಮೇಶ್ವರ ಗುಡಿಯ ಮುಂದಿವೆ. ಅಲ್ಲೇ ಇರುವ ಇನ್ನೊಂದು ಆಲುಪ ಶಾಸನ, ಗಗನಶಿವಾಚಾರ್ಯರಿಗೆ ದತ್ತಾಳ್ವೇಂದ್ರ ಶ್ರೀಮಾರಮ್ಮ ಒಡ್ಡಮ್ಮೆ ದೇವಿಯು, ಬಾರಕೂರಿನ ಹಿರಿಯ ಅರಮನೆಯಲ್ಲಿದ್ದಾಗ ೬೦ ಮೂಡೆ ಭೂಮಿಯನ್ನು ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ತುಳುನಾಡಿನ ಹಂಪೆ ಎಂದೇ ಕರೆಯಲ್ಪಟ್ಟಿರುವ ಈ ಊರು ಹಿಂದೆ ಹಲವಾರು ಕೆರೆ, ಕೇರಿ, ಗುಡಿ-ಗುಂಡಾರಗಳನ್ನು ಹೊಂದಿದ್ದು, ವಿಶಾಲಪಟ್ಟಣವಾಗಿದ್ದ ಅಂಶವನ್ನು ಬಾರಕೂರಿನಲ್ಲಿಂದು ಕಂಡು ಬರುವ ನೂರಕ್ಕೂ ಹೆಚ್ಚು ಶಾಸನಗಳು, ಹರಡಿಕೊಂಡಿರುವ ಚಾರಿತ್ರಿಕ ಅವಶೇಷಗಳು, ಪುಷ್ಠೀಕರಿಸುತ್ತವೆ. ಹಿಂದೆ ಬಾರಕೂರು ದೇವಾಲಯಗಳ ತವರಾಗಿದ್ದು, ೩೬೦ ದೇವಾಲಯಗಳನ್ನು ಹೊಂದಿತ್ತೆಂದು ಸ್ಥಳೀಯವಾಗಿ ಹೇಳಲಾಗುತ್ತಾದರೂ ಸುಮಾರು ೪೦ ದೇವಾಲಯಗಳಿಂದು ಉಳಿದಿವೆ.

ಬಾರಕೂರಿನಲ್ಲಿ ಕೋಟೆಕೇರಿ, ಪಡುವಲಕೇರಿ, ಮೂರು(ಮೂಡು)ಕೇರಿ, ಮಣಿಗಾರಕೇರಿ, ಚೌಳಿಕೇರಿ, ಪಟ್ಟಸಾಲಕೇರಿ, ಭಂಡಾರಕೇರಿ, ಬಳೆಗಾರಕೇರಿ, ರಂಗನಕೇರಿ ಮತ್ತು ಹೊಸಕೇರಿ ಎಂಬ ಹತ್ತು ಓಣಿ(ಕೇರಿ)ಗಳಿದ್ದು, ಇವುಗಳಲ್ಲಿ ಹೆಚ್ಚಿನವು ಶಾಸನಗಳಲ್ಲೂ ಉಲ್ಲೇಖಿಸಲ್ಪಟ್ಟಿವೆ. ಹಿಂದೆ ಹಲವು ಧರ್ಮ, ಪಂಥಗಳಿಗೆ ಸೇರಿದ ಜನರನ್ನು ಒಳಗೊಂಡಿದ್ದ ಬಾರಕೂರಿನಲ್ಲಿ ಪ್ರತಿಯೊಂದು ಕೇರಿಗೂ ಪ್ರತ್ಯೇಕ ಕೆರೆ ಹಾಗೂ ದೇವಾಲಯಗಳಿದ್ದು, ವ್ಯವಸ್ಥಿತ ರೀತಿಯಲ್ಲಿ ರೂಪಿಸಲ್ಪಟ್ಟಿದ್ದಂತೆ ತೋರುತ್ತದೆ. ಹನ್ನೆರಡು ವರ್ಷಗಳಿಗೊಮ್ಮೆ ತ್ರಯಂಬಕೇಶ್ವರದಿಂದ ಬರುವ ನಾಂಥಪಂಥೀಯರ ಝುಂಡಿಗೆ ಬಾರಕೂರು ಕೂಡ ಒಂದು ತಂಗುದಾಣವಾಗಿದ್ದು, ಇದರಿಂದ ನಾಥಪಂಥವೂ ಹಿಂದೆ ಪ್ರಮುಖವಾಗಿದ್ದ ಅಂಶ ವೇದ್ಯವಾಗುತ್ತದೆ. ಸಾಗರೋತ್ತರ ವ್ಯಾಪಾರದಿಂದಾಗಿ ಖ್ಯಾತಿ ಹೊಂದಿದ್ದ ಬಾರಕೂರು ಪಟ್ಟಣಕ್ಕೆ ಜೈನ ವರ್ತಕರು, ನಾಥಪಂಥೀಯರು, ಹಂಜಮಾನರೆಂಬ ಮುಸ್ಲಿಂ ವ್ಯಾಪಾರಿಗಳು ಹಾಗೂ ಕ್ರೈಸ್ತಪಂಥೀಯರು ಬೇರೆ ಬೇರೆ ಕಾಲದಲ್ಲಿ ಬಂದು ನೆಲೆಸುವ ಮೂಲಕ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವೈವಿಧ್ಯಗಳಿಗೆ ಕಾರಣರಾದರು. ಬಂಟ–ನಾಡವ ಜನಾಂಗದ ಕುಂಡೋದರ (ಮಹಿಷಾಸುರ), ಬೆಣ್ಣೆಕುದುರಿನಲ್ಲಿರುವ ಮೊಗವೀರರ ಮಹಾಸತಿಯಮ್ಮನ ಗುಡಿ, ಬಿಲ್ಲವರ ಹೊಸಾಳ ಶಿವರಾಯನ ಗರಡಿ, ಗೌಡಸಾರಸ್ವತರ ಪಟ್ಟಾಭಿರಾಮಚಂದ್ರ, ಪದ್ಮಸಾಲಿಗಳ ವೀರಭದ್ರ, ಸಮಗಾರರ ಸರಸ್ವತಿ ನಾರಾಯಣಿ, ಗಾಣಿಗರ ವೇಣು ಗೋಪಾಲ, ಭಂಡಾರಿ (ಕ್ಷೌರಿಕ)ಗಳ ನಗರೇಶ್ವರ, ವಿಶ್ವಕರ್ಮರ ಮಹಾಕಾಳಿಕಾಂಬ, ಸೋನೆಗಾರರ ಶಿವಾಲಯ, ದೇವಾಡಿಗರ ಹೆಣ್ಣುದೈವ ಕೊಟ್ಟಿಗೆ, ಕೂಸಾಳರ ಬೊಬ್ಬರ್ಯ, ಕೊರಗರ ನೀಚ ಮುಂತಾದ ದೇವ ದೈವ ಸ್ಥಾನಗಳಿಲ್ಲಿವೆ. ಅಲ್ಲದೆ ಭಂಡಾರಕೇರಿ ಮಠ, ಪಾದೆಯಮಠ ಮುಂತಾದ ಮಠಗಳೂ ಇಲ್ಲಿವೆ.

ಮೂಡುಕೇರಿಯ ಸೌಮ್ಯನಾಥ/ಸೋಮನಾಥ ದೇವರಿಗೆ ಸಂಬಂಧಿಸಿದಂತೆ ಹತ್ತಾರು ಶಾಸನಗಳು ಲಭ್ಯವಿದ್ದು (ಕ್ರಿ.ಶ.೧೩೩೬–೧೫೮೫) ಅವುಗಳಿಂದ ಈ ದೇವಾಲಯದ ಶ್ರೀಮಂತ ಪರಂಪರೆಯನ್ನು ತಿಳಿಯಬಹುದಾಗಿದೆ.  ಅಲ್ಲದೆ ಆ ದಿನಗಳಲ್ಲಿ ಅದು ಬ್ರಾಹ್ಮಣರಿಗೆ ಭೋಜನಕ್ಕೆ ಹಾಗೂ ವಟುಗಳ ಶಿಕ್ಷಣಕ್ಕೆ ಮಠವಾಗಿ ಕಾರ್ಯನಿರ್ವಹಿಸುತ್ತಿದ್ದ ಅಂಶ ಹಲವಾರು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಮೂಡಗೇರಿ ಯಲ್ಲಿರುವ ೧೩೯೯–೬೦ಕ್ಕೆ ಸೇರಿದ ಮೂರು ಶಾಸನಗಳಲ್ಲಿ ತಂಬುಳಕೆರೆಯ ಸೋಮನಾಥ ದೇವರಿಗೆ ದತ್ತಿಬಿಟ್ಟ ಅಂಶದ ಜೊತೆಗೆ ಅಲ್ಲಿದ್ದ ಮಠ, ರಂಗೋಲಿ ಸೇವೆ ಇತ್ಯಾದಿ ಉಲ್ಲೇಖವಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಊರ ಪ್ರವೇಶದಲ್ಲೇ ಇರುವ ಕಲ್ಲು ಚಪ್ಪರಕಟ್ಟೆ ಮಂಟಪದ ಉಲ್ಲೇಖ ಗೋಪಾಲಕೃಷ್ಣ ಗುಡಿಯ ಬಳಿಯಿರುವ ೧೩೮೦ರ ಶಾಸನದಲ್ಲಿದೆ. ಸೌಮ್ಯನಾಥ ದೇವರಿಗೆ ಸೇರಿದ ಈ ಕಟ್ಟೆಯ ಚಪ್ಪರದಲ್ಲಿ ಅರವಟ್ಟಿಗೆಯನ್ನು ನಡೆಸುತ್ತಿದ್ದ ಅಂಶವನ್ನು ಅದು ದಾಖಲಿಸಿದೆ. ಇಲ್ಲಿಯ ೧೪೦೨ರ ಶಾಸನದಲ್ಲಿ ಪಡುವಲಕೇರಿಯ ಮಾರಕಮ್ಮದೇವಿ, ಕೋಟಿನಾಥ ದೇವರು ಹಾಗೂ ಜಿನಗದ್ದೆಯ ಪ್ರಸ್ತಾಪವಿದೆ. ಈ ಗುಡಿಯ ಮುಂದಿರುವ ೧೪೩೧ರ ಶಾಸನ ಬಾರಕೂರಿನ ಮೂಡುಗೇರಿ ಹಾಗೂ ಚೌಳಿಕೇರಿಗಳ ನಡುವಣ ಸಕ್ಕರೆ ವ್ಯವಹಾರವೂ ಸೇರಿದಂತೆ ಘಟ್ಟದ ಮೇಲಿನಿಂದಲೂ ಹಾದಿಯಿಂದಲೂ ಬರುತ್ತಿದ್ದ ಸರಕು ವಹಿವಾಟುಗಳಿಗೆ ಸಂಬಂಧಿಸಿದ ಒಡಂಬಡಿಕೆಯ ವಿವರಗಳನ್ನು ನೀಡುತ್ತದೆ. ಅದರಲ್ಲೂ ಶಾಸನದಲ್ಲಿ ಕಂಡುಬರುವ ಕಾಟಿಕಟ್ಟೆ ವ್ಯವಹಾರ, ಸಕ್ಕರೆ ಸಂಗ್ರಹಕ್ಕೆ ಸಂಬಂಧಿಸಿದ 'ಆಯದ ಮಳಿಗೆ ಕಟ್ಟೆ' ಯ ಉಲ್ಲೇಖ ಕುತೂಹಲಕರವಾಗಿದೆ. ಬಾರಕೂರಿನಲ್ಲಿರುವ ಸಿಂಹಾಸನಗುಡ್ಡೆ ಪರಿಸರವು ವಿಕ್ರಮಾದಿತ್ಯನ ಅರಮನೆ ಹಾಗೂ ಕೋಟೆ ಇದ್ದ ಸ್ಥಳವೆಂಬ ಪ್ರತೀತಿ ಇದೆ. ಬನ್ನಿಮಹಾಕಾಳಿ ದೇವಾಲಯದಲ್ಲಿರುವ ವಿಶಾಲವಾದ ಗದ್ದುಗೆಯು, ಹಿಂದಿನ ಅರಸರು ಉಪಯೋಗಿಸುತ್ತಿದ್ದ ಸಿಂಹಾಸನವು ಭೂಗತವಾದ ಸ್ಥಳದ ಮೇಲೆ ನಿರ್ಮಿತವಾಗಿದೆ ಎಂಬ ಅಭಿಪ್ರಾಯವಿದೆ. ದಸರೆಯನ್ನು ಇಲ್ಲಿ ಅದ್ದೂರಿಯಿಂದ ಈಗಲೂ ಆಚರಿಸಲಾಗುತ್ತದೆ. ಈ ಪ್ರದೇಶವನ್ನು ಉತ್ಖನನಕ್ಕೊಳಪಡಿಸುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಲಾಗಿದ್ದು, ಅದೂ ಕಾರ್ಯರೂಪಕ್ಕೆ ಬರಬೇಕಿದೆ.

ಕೋಟೆಕೇರಿಯ ಉಲ್ಲೇಖ ಹತ್ತಕ್ಕೂ ಹೆಚ್ಚು ಶಾಸನಗಳಲ್ಲಿದೆ. ಶಾಸನಗಳಲ್ಲಿ ಮೂಲಸ್ಥಾನ ಮಾರ್ಕಂಡೇಶ್ವರ ಪ್ರತಿಷ್ಠಿತ ಎಂದೇ ದಾಖಲಾಗಿರುವ ಇದರ ಮೊದಲ ಉಲ್ಲೇಖ ೧೧೪೦ರ ಶಾಸನದಲ್ಲಿದೆ.

ಇಲ್ಲಿಯ ಪಂಚಲಿಂಗೇಶ್ವರ ದೇವಾಲಯವು ಗಜಪೃಷ್ಠಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಸುಮಾರು ಎಂಟನೆಯ ಶತಮಾನದಷ್ಟು ಪ್ರಾಚೀನ ಗುಡಿಯಾಗಿದೆ. ಮಾರ್ಕಂಡೇಯ ಮುನಿಗಳು ತಪಸ್ಸು ಮಾಡಿದ ಸ್ಥಳ ಇದೆಂಬ ನಂಬಿಕೆಯಿದ್ದು, ಇಲ್ಲಿಯ ಲಿಂಗಗಳನ್ನು ಅವರೇ ಪ್ರತಿಷ್ಠಾಪಿಸಿದರೆಂಬ ಐತಿಹ್ಯವೂ ಇದೆ. ಈ ದೇವಾಲಯದ ಆವರಣದ ನೆಲ್ಲಿಮರದ ಕಟ್ಟೆ ಬುಡದಲ್ಲಿ ನಾಗಮಂಟಪವಿದ್ದು, ಜಾಜಿಕಟ್ಟೆಯ ಮೇಲೆ ಮಾರ್ಕಂಡೇಯ ಪ್ರತಿಷ್ಠಿತ ಲಿಂಗಗಳಿವೆ. ಮೂಲ ಗರ್ಭಗೃಹದಲ್ಲಿರುವ ಶಿವಲಿಂಗ ಕಾಶಿಯಿಂದ ತಂದದ್ದೆಂದು ಹೇಳಲಾಗುತ್ತದೆ. ಗುಡಿಯಲ್ಲಿ ಭುವನೇಶ್ವರಿ, ಕುಮಾರಸ್ವಾಮಿ ಹಾಗೂ ಗಣಪತಿ ಶಿಲ್ಪಗಳಿವೆ. ಅವುಗಳಲ್ಲಿ ಬಲಗೈಲಿ ದಂಡ, ಎಡಗೈಲಿ ಕೋಳಿ ಹಿಡಿದು, ಕುಕ್ಕುಟಧಾರಿಯಾಗಿ ನಿಂತಿರುವ ಷಣ್ಮುಖನ ಶಿಲ್ಪ ಅಪರೂಪದ್ದಾಗಿದೆ. ಅವನ ಕೈಲಿರುವ ಕೋಳಿ ಕೂಗಿದಾಗ ಪ್ರಳಯವಾಗುತ್ತದೆಂಬ ನಂಬಿಕೆ ರೂಢಿಯಲ್ಲಿದೆ. ಅಲ್ಲದೆ, ಆದಿತ್ಯ ಶಿಲ್ಪವೂ ಇದ್ದು, ಸಮೀಪದ ಕಿರುಗುಡಿಯೊಂದರಲ್ಲಿ ಯಕ್ಷಬ್ರಹ್ಮ(?)ನ ಶಿಲ್ಪವಿದೆ. ಇದೇ ಪರಿಸರದಲ್ಲಿರುವ ಇನ್ನೂ ನಾಲ್ಕಾರು ಕಿರುಗುಡಿಗಳಲ್ಲಿ ಇಂಗುಳಾಪರಮೇಶ್ವರಿ ಗುಡಿಯು, ನಾಥಪಂಥೀಯರು ಪೂಜಿಸುತ್ತಿದ್ದ ದೇವಿಯ ನೆಲೆಯಾಗಿದ್ದು, ಇಂದು ಹಾಳು ಬಿದ್ದಿದೆ. ಬದಿಯಲ್ಲೇ ಕಪ್ಪೆಚಿಪ್ಪಿನ ಹನುಮಂತ ರಾಯನ ಗುಡಿ ಇದೆ. ಸನಿಹದಲ್ಲೇ ಇರುವ ಕಾಲಭೈರವನ ಗುಡಿ ಬಳೆಗಾರರಿಂದ ಪೂಜಿಸಲ್ಪಡುತ್ತಿದ್ದು, ಅದರ ಮುಂದೆ ಬಲಿಕಂಬ, ಹಾಗೂ ಕೆಲವು ಅಪರೂಪದ ಮಾಸ್ತಿಕಲ್ಲುಗಳಿವೆ. ನಾಥಪಂಥೀಯರ ಝುಂಡಿ ಬಂದಾಗ ತಂಗುವುದು ಇಲ್ಲೇ. ಈ ದೇವಾಲಯದ ಮುಂಭಾಗದ ಮಂಟಪದ ಜೀರ್ಣೋದ್ಧಾರ ಸಂದರ್ಭದಲ್ಲಿ ಚೌವ್ವೀಸ್ ತೀರ್ಥಂಕರರಿರುವ ಶಿಲಾಪಟ್ಟಿಕೆಯು ಪತ್ತೆಯಾಗಿದೆ. ಈ ಗುಡಿಯ ಎದುರು ಬದಿಯಲ್ಲಿ ಬಟ್ಟೆ ವಿನಾಯಕನ ಗುಡಿಯೂ ಇದೆ. ಇವೆಲ್ಲವೂ ಸುಮಾರು ೮–೯ ನೇ ಶತಮಾನಕ್ಕೆ ಸೇರಿದ ವಾಸ್ತುಗಳಾಗಿದ್ದು, ನಂತರದಲ್ಲಿ ಜೀರ್ಣೋದ್ಧಾರಗೊಂಡಿವೆ. ಕೋಟೆಕೇರಿಗೆ ಸೇರಿದ ಕೋಟೆಕೆರೆ ಇಲ್ಲಿದ್ದು, ಕೋಟೆಯ ಕುರುಹುಗಳು ಅಲ್ಲಲ್ಲಿ ಕಂಡು ಬರುತ್ತವೆ.

ಬಾರಕೂರಿನ ಮಣಿಗಾರಕೇರಿಯ ಉಲ್ಲೇಖ ಇಲ್ಲಿಯ ಹತ್ತಾರು ಶಾಸನಗಳಲ್ಲಿ ಕಂಡುಬರುತ್ತಿದ್ದು ವಿಶಾಲವಾದ ಮಣಿಗಾರಕೆರೆಯೂ ಅಲ್ಲಿದೆ. ಈ ಪ್ರದೇಶದಲ್ಲಿ ಸೋಮನಾಥೇಶ್ವರ, ಸಿದ್ಧೇಶ್ವರ ಹಾಗೂ ಕಾಳಿಕಾಂಬ ಗುಡಿಗಳ ಜೊತೆಗೆ ಇನ್ನೂ ಅನೇಕ ದೇವಾಲಯಗಳು ಶಿಥಿಲಾವಸ್ಥೆಯಲ್ಲಿವೆ. ಬಾರಕೂರಿನ ಹಿರಿಮೆಯನ್ನು ಸಾರುವ ಶಾಸನ, ದೇವಾಲಯಗಳ ಸಮುಚ್ಚಯವಿಲ್ಲಿದೆ. ಇಲ್ಲಿಯ ಸೋಮನಾಥೇಶ್ವರನ ಮೊದಲ ಉಲ್ಲೇಖ ೧೩೧೬ರ ಶಾಸನವೂ ಸೇರಿದಂತೆ ಅನೇಕ ಶಾಸನಗಳಲ್ಲಿವೆ. ಬಂಕಿರಸ ಆಲುಪೇಂದ್ರನು ಬಾರಕನ್ಯಾಪುರದ ಅರಮನೆಯ ಒಡ್ಡೋಲಗದಲ್ಲಿದ್ದಾಗ, ೧೦ ಹೊನ್ನನ್ನು ಈ ದೇವರಿಗೆ ದತ್ತಿ ಬಿಟ್ಟಿದ್ದನ್ನು ೧೩೧೬ರ ಶಾಸನ ದಾಖಲಿಸಿದೆ. ೧೩೧೬–೧೫೬೪ರ ಕಾಲಾವಧಿಗೆ ಸೇರಿದ ಸುಮಾರು ೨೫ ಶಾಸನಗಳಿಂದ ಈ ದೇವಾಲಯದ ಧಾರ್ಮಿಕ ಚಟುವಟಿಕೆಯ ಚಿತ್ರಣ ಲಭಿಸುತ್ತದೆ. ಇದು ವಿಶಾಲವಾದ ಶಿಲಾ ದೇಗುಲವಾಗಿದ್ದು ಮುಚುಕುಂದ ಪ್ರತಿಷ್ಠಿತ ಎಂಬ ಅಭಿಪ್ರಾಯವಿದೆ. ಕಂಬದಗಣಪತಿ ಇಲ್ಲಿಯ ವೈಶಿಷ್ಟ್ಯ ವಾಗಿದ್ದು, ಬಳಿಯಲ್ಲೇ ಮೋಟುಕಾಲು ಬೊಬ್ಬರ್ಯ ದೈವದ ಸ್ಥಾನವಿದೆ. ಮಣಿಗಾರಕೇರಿಯಲ್ಲಿ ಆದಿ ಪರಮೇಶ್ವರಿ ಬಸದಿಯಿದ್ದು, ಅದಕ್ಕೆ ದತ್ತಿಬಿಟ್ಟ ಅಂಶ ೧೪–೧೫ನೇ ಶತಮಾನದ ಮೂರ್‍ನಾಲ್ಕು ಶಾಸನ ಗಳಲ್ಲಿದ್ದು, ೧೪೩೭ರ ನಿಶಿಧಿ ಶಾಸನ, ಮಣಿಗಾರಕೇರಿಯ ಶ್ರಾವಕರು ಜೈನಭಟಾರಕರಿಗೆ ನಿಶಿಧಿಯನ್ನು ನಿಲ್ಲಿಸಿದ್ದನ್ನು ದಾಖಲಿಸಿದೆ.

ಚೌಳಿಕೇರಿಯ ಉಲ್ಲೇಖ ಸುಮಾರು ೧೭ ಶಾಸನಗಳಲ್ಲಿದೆ. ಸುಮಾರು ೧೪–೧೫ನೆಯ ಶತಮಾನದ ಶಾಸನಗಳಲ್ಲಿ ಕೆಲ್ಲಂಗೆರೆ ವಿನಾಯಕ, ವೈಜನಾಥನ ಉಲ್ಲೇಖವಿದ್ದು, ಚೌಳಿಕೇರಿಯಲ್ಲಿ ಜಿನಬಸದಿಗಳಿದ್ದರೂ ಜಿನಬಿಂಬಗಳಾವುದೂ ಉಳಿದಿಲ್ಲ. ಬಸದಿಗಳನ್ನು ರಕ್ಷಿತ ಸ್ಮಾರಕಗಳೆಂದು ಪುರಾತತ್ವ ಇಲಾಖೆ ಘೋಷಿಸಿದ್ದು, ಹಿಂಬದಿಯಲ್ಲಿ ಅಂತಹುದೇ ಇನ್ನೆರಡು ಪ್ರಾಚೀನ ವಾಸ್ತುರಚನೆಗಳಿದ್ದು, ಒಂದರ ಮುಂದೆ ನಂದಿ ವಿಗ್ರಹವಿದೆ. ವಡ್ಡರ್ಸೆಯ ೧೫೫೭ರ ಶಾಸನದಲ್ಲಿ ಬಾರಕೂರಿನ ಕೋಟೆಕೇರಿಯ ನಾರಾಯಣ ದೇವರಿಗೆ ವೊಡಕರಸೆಯ ಬಿನ್ನಾಣಿ ೬೦ ವರಾಹ ದತ್ತಿ ನೀಡಿದ ಉಲ್ಲೇಖವಿದೆ. ಈ ಸಂಕೀರ್ಣದಲ್ಲಿರುವ ಗುಡಿಗಳಲ್ಲೊಂದು ಬಾರಕೂರಿನ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಹತ್ತುಕೇರಿಯ ನಾರಾಯಣನ

ಗುಡಿ ಎಂದು ಜಗದೀಶ ಶೆಟ್ಟಿ ಅಭಿಪ್ರಾಯ ಪಡುತ್ತಾರೆ. ಅತ್ರಾಡಿಯ ೧೪೦೪ರ ಶಾಸನದಲ್ಲಿ ನಾರಣದೇವರ ದೀಪಕಂಬದ ಪ್ರಸ್ತಾಪವಿದ್ದು, ಚೌಳಿಕೆಯ ಗರಡಿ ಬಳಿಯಿರುವ ೧೪೩೬ರ ಶಾಸನ, ತುಳು ರಾಜ್ಯದ ಕಟ್ಟಳೆಯ ಹತ್ತುಕೇರಿಯ ಮಧ್ಯಸ್ಥಾನದಲ್ಲಿರುವ ನಾರಣದೇವಸ್ಥಾನದಲ್ಲಿ ದೀಪಮಾಲೆ ನಿಲ್ಲಿಸಿ ಏಳು ಬ್ರಾಹ್ಮಣರ ಭೋಜನ ವ್ಯವಸ್ಥೆ ಮಾಡಿದ್ದನ್ನು ದಾಖಲಿಸಿದೆ. ಅಲ್ಲದೆ, ನಾರಾಯಣ ಮಹಾದೇವರು ಹಾಗೂ ದುರ್ಗಾದೇವಿಯ ಗುಡಿಗಳಿಗೆ ತಲಾ ನಾಲ್ಕಾರು ಒಕ್ಕಲಿಗರನ್ನು ಸೇವೆಗೆಂದು ಬಿಟ್ಟಿದ್ದನ್ನು ದಾಖಲಿಸಿದೆ. ಗಣಪತಿಗುಡಿ ಮುಂದಿರುವ ೧೪೩೨ರ ಶಾಸನ, ಚೌಡೇಶ್ವರಿಯ ಏಳುದಿನದ ಕಥೆಯ ಹಬ್ಬ ಮುಗಿದ ದಿನದ ಪೂಜೆಯಂದು ಕಥೆ ಹೇಳಿದ ಪುರಾಣಿಕರಿಗೆ ಗೌರವಿಸುವ ಬಗ್ಗೆ ಹೇಳಿದೆ. ಅಲ್ಲದೆ, ಮೂರು ವರ್ಷಕ್ಕೆ ಒಂದು ಬಾರಿ ಕೆರೆಯ ಕೆಸರು, ಕಸವ ತೆಗೆಯುವ ಬಗ್ಗೆ ಹೇಳುತ್ತಾ ಮಡಿವಾಳರಿಗೆ ಉಪ್ಪು, ಪಾತ್ರೆ, ಕುಡಿನೀರು, ಅರಿಯಕೇರಿಯ ಹಲರಿಗೆ ಔತಣ ನೀಡುವ ಬಗ್ಗೆ ಮಹತ್ವದ ಮಾಹಿತಿ ನೀಡುತ್ತದೆ.

ಬಾರಕೂರಿಗೆ ಸಮೀಪದಲ್ಲಿ ಸೀತಾನದಿಯ ಎರಡು ಕವಲುಗಳ ನಡುವೆ ಇರುವ ಬೆಣ್ಣೆಕುದುರು ದ್ವೀಪವು ನಯನಮನೋಹರವಾಗಿದ್ದು, ಸುಮಾರು ನಾಲ್ಕು ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಈಗ ಅದನ್ನು ಸೇತುವೆಯ ಮೂಲಕ ಸುಲಭವಾಗಿ ತಲುಪಬಹುದಾಗಿದ್ದು, ಅಲ್ಲಿರುವ ಮೊಗವೀರರ ಮಾಸ್ತಮ್ಮನ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಗರ್ಭಗೃಹದಲ್ಲಿ ಪಂಚಲೋಹದ ದೇವಿಯ ಶಿಲ್ಪವಿದೆ. ಮರದಿಂದ ಮಾಡಿದ ನವಿಲು, ಚೀಣಿಯರ ಭೂತ ಎಂದು ಕರೆಯುವ ಆಳೆತ್ತರದ ನಾಲ್ಕು ಕಾಷ್ಠ ಮೂರ್ತಿಗಳಿಲ್ಲಿವೆ. ಅಲ್ಲದೆ ಗೂರ್ಲಮ್ಮ (ಉಬ್ಬಸ ಪರಿಹಾರ ದೇವತೆ) ನಂದಿಕೇಶ್ವರಿ, ಅಬ್ಬಕ್ಕೆ ದಾರಕ್ಕೆ, ಹಳೆಯಮ್ಮ, ವೀರಭದ್ರ, ಗಡಿನಂದಿ, ಆಕಾಶನಂದಿ, ಗಜಪತಿ, ಬಾಲು ಬಗ್ಗು, ಚಿಕ್ಕು, ಚಕ್ರೇಶ್ವರಿ,ಹುಲಿದೇವರು, ಪಂಜುರ್ಲಿ, ಜೋಗಿಪುರುಷ, ಮುಳ್ಳುಹಾಯ್ಗುಳಿ, ಕೆಂಡದ ಹಾಯ್ಗುಳಿ, ಮುಂತಾದ ದೈವಗಳಿಲ್ಲಿದ್ದು, ಹಸರಾಯ, ವೆಂಕಟರಮಣ, ಕ್ಷೇತ್ರಪಾಲ, ಕೋಳಿಮಾರಮ್ಮ, ನಾಗದೇವ, ಮುಂತಾದವುಗಳಿಗೆ ಪ್ರತ್ಯೇಕ ಸನ್ನಿಧಿಗಳಿಲ್ಲಿವೆ. ಈ ಮಾಸ್ತಮ್ಮನ ಜಾತ್ರೆ ಡಿಸೆಂಬರ್ ೧೫ರಿಂದ ೧೯ರವರೆಗೆ ಗೆಂಡಸೇವೆ, ಡಕ್ಕೆಬಲಿ, ತುಲಾಭಾರ ಹಾಗೂ ಕೋಲುನೇಮಗಳೊಂದಿಗೆ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಕಚ್ಚೂರಿನ ಕಾಳಿಕಾಂಬ ದೇವಳವು ಜೀರ್ಣೋದ್ಧಾರಗೊಂಡಿದ್ದು, ಭವ್ಯವಾಗಿದೆ. ಕಮ್ಮಟೇಶ್ವರ ಗುಡಿ, ಬ್ರಹ್ಮಲಿಂಗ, ವೀರಭದ್ರ ಹಾಗೂ ದುರ್ಗಾಪರಮೇಶ್ವರಿಯ ದೇವಾಲಯಗಳು ಇಲ್ಲಿವೆ. ಅಲ್ಲದೆ ಆಲುಪರ ಕಾಲದ ನಗರೇಶ್ವರ (ನಾಗೇಶ್ವರ) (ಜನಸಂಖ್ಯೆ: ೧೧೪೬)ದೇವಾಲಯ (ಈಗ ಜೀರ್ಣೋದ್ಧಾರಗೊಂಡಿದೆ) ಹಾಗೂ ಜಿನಬಸದಿಗಳು ಇಲ್ಲಿವೆ. ನಗರೇಶ್ವರ ದೇವಾಲಯವು ಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಆಕರ್ಷಕವಾಗಿದೆ. ಮಿಗಿಲಾಗಿ ಜೋಗಿಗಳು ಪೂಜಿಸುವ ದುರ್ಗಾಪರಮೇಶ್ವರಿ ಗುಡಿಯೂ ಊರ ಹೊಳೆಯ ದಂಡೆಯ ಮೇಲಿದೆ. ಉದ್ದಾಲಗುಡ್ಡೆಯಲ್ಲಿ ಕೂಸಾಳು ಜನಾಂಗದವರ ಕಂಬಿಗಾರ ದೈವವಿದೆ. ಅರಣ್ಯದಲ್ಲಿ ದನಗಳನ್ನು ರಕ್ಷಿಸುವ ಕೀಳುದೈವಗಳ ಭೂತಸ್ಥಾನಗಳಿವೆ. ಅಲ್ಲದೆ ಹೊಸಕೆರೆ ತೀರದ ಮೇಲೆ ಗಣಪತಿ ದೇವಾಲಯವಿದೆ.

ಹನೆಹಳ್ಳಿಯ ಶೆಡಿಗುಡ್ಡೆಯಲ್ಲಿ ಕುಂಡೋದರನ ಗುಡಿ ಇದೆ. ಅಲ್ಲಿ ಅಶ್ವಾರೋಹಿ ವೀರನೊಬ್ಬನ ರೂಪದಲ್ಲಿ ಮಹಿಷಾಸುರನು ಕಡೆಯಲ್ಪಟ್ಟಿದ್ದಾನೆ. ಈ ಗುಡಿಯಲ್ಲಿ ಚಿಕ್ಕು ಆಕಾಶನಂದಿ, ಏಕಶೃಂಗ ನಂದಿ ಹಾಗೂ ಪಂಚಮುಖ ನಂದಿಗಳ ಮರದ ಪಾಪೆಗಳಿವೆ. ಮೆಕ್ಕೆಕಟ್ಟೆಯಲ್ಲಿಯಂತೆ ಇಲ್ಲೂ ಕೂಡ ಗೆಂಡೆಸೇವೆ, ತೊಟ್ಟಿಲುಸಿಡಿ ಕಾರ್ಯಕ್ರಮಗಳಿರುತ್ತವೆ. ಅಲ್ಲೇ ಸನಿಹದಲ್ಲಿ ದೇವಾಡಿಗರು ಪೂಜಿಸುವ ಹೆಣ್ಣು ಭೂತದ ಕೊಟ್ಟಿಗೆಯಿದೆ. ಊರಾಚೆ ಸರ್ಕಾರಿ ಆಸ್ಪತ್ರೆಯ ಹಿಂಭಾಗದಲ್ಲಿ ಕೋಟೆ ಅವಶೇಷಗಳಿದ್ದು, ಸುತ್ತಲೂ ಕಂದಕವಿದೆ. ಈ ಪ್ರದೇಶವು ಎಸ್. ನಾಗರಾಜುರವರ ಮಾರ್ಗದರ್ಶನದಲ್ಲಿ ಉತ್ಖನನಕ್ಕೆ ಒಳಪಟ್ಟಿದ್ದು, ಹಿಂದೆ ಅಲ್ಲಿ ಅರಮನೆ, ಅಶ್ವಶಾಲೆ, ಗಜಶಾಲೆಗಳ ಕುರುಹುಗಳಿದ್ದವೆಂದು, ಗುರುತಿಸಲಾಗುತ್ತದೆ. ಆದರೆ ಇಂದು ಬಟ್ಟಾಬಯಲಾಗಿದ್ದು, ರಾಣಿಕೆರೆ ಹಾಗೂ ಬಾಗಿಲು ಭೈರವರಷ್ಟೇ ಉಳಿದಿವೆ. ಬಾರಕೂರಿನಲ್ಲಿ ಮೂರು ಕಡೆ ಕೋಟೆ ಇದ್ದುದಕ್ಕೆ ಕುರುಹುಗಳಿದ್ದು, ಅವುಗಳಲ್ಲೊಂದು ಇದಾಗಿದ್ದು, ಹಿಂದೆ ಇದು ರಾಜಧಾನಿಯಾಗಿದ್ದುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಸಮೀಪದಲ್ಲೇ ನಂದರಾಯನ ಕೋಟೆ ಇದ್ದು, ಅದಕ್ಕೆ ಕದಂಬ ಮಯೂರವರ್ಮನೊಂದಿಗೆ ಸಂಬಂಧ ಕಲ್ಪಿಸಲಾಗಿದೆ.

ಮೂಡುಕೇರಿಯ ಗೋಪಾಲಕೃಷ್ಣ, ಇಲ್ಲಿಯ ಇನ್ನೊಂದು ಪ್ರಮುಖ ದೇವಾಲಯ. ಸೋಮ ವಂಶೀಯ ಕ್ಷತ್ರಿಯರ ಆರಾಧ್ಯದೈವ, ಸುಮಾರು ೧೪ನೆಯ ಶತಮಾನಕ್ಕೆ ಸೇರಿದ ಈ ಗುಡಿಯಲ್ಲಿ ಕುಮಾರ ಮಾಧವ ಸ್ವಾಮಿಗಳು, ಗೋಪಿನಾಥ ದೇವರನ್ನು ಪ್ರತಿಷ್ಠಾಪಿಸಿ, ದತ್ತಿ ಬಿಟ್ಟ ಅಂಶವನ್ನು ಅಲ್ಲೇ ಇರುವ ೧೩೮೦ರ ಶಾಸನವೊಂದು ದಾಖಲಿಸಿದ್ದು, ಶಾಸನಗಳು ಇದನ್ನು ಬಾರಕೂರು ಭಂಡಿಯ ಮಠದ ಗೋಪಿನಾಥನೆಂದೇ ಉಲ್ಲೇಖಿಸುತ್ತದೆ. ಇದರಿಂದ ಹಿಂದೆ ಇದೊಂದು ಮಠವಾಗಿದ್ದ ಅಂಶ ವೇದ್ಯ ವಾಗುತ್ತದೆ. ಅದನ್ನಿಂದು ಜೀರ್ಣೋದ್ಧಾರಗೊಳಿಸಲಾಗಿದ್ದು, ಮಗ್ಗುಲಲ್ಲೆ ಸರಸ್ವತಿ ನಾರಾಯಣಿಯ ಕಿರುಗುಡಿಯೂ ಇದೆ. ಅಲ್ಲೇ ಸೋನೆಗಾರರ ಕಿರು ದೇವಾಲಯವಿದೆ. ಇಲ್ಲಿಯ ಮಾಸ್ತಿಯಮ್ಮನ ಗುಡಿಯೂ ಉಲ್ಲೇಖಾರ್ಹವಾಗಿದೆ. ರೋಮನ್ ಕ್ಯಾಥೋಲಿಕ್ ಪಂಥಕ್ಕೆ ಸೇರಿದ ಸೇಂಟ್‌ಪೀಟರ್ ಇಗರ್ಜಿ ಇದೆ. ಭವ್ಯವೂ ವಿಶಾಲವೂ ಆದ ಈ ಚರ್ಚು ೧೯ನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ ನಿರ್ಮಾಣ ಗೊಂಡಿದೆ. ಈ ಪಂಥೀಯರ ವಿದ್ಯಾಸಂಸ್ಥೆ, ಸೇವಾ ಸಂಸ್ಥೆ, ಕನ್ಯಾಸ್ತ್ರೀಮಠ ಮುಂತಾದವುಗಳಿದ್ದು, ಬೈಬಲ್ ಸೊಸೈಟಿಯೂ ಇದೆ. ಬಾರಕೂರಿನ ಭಾಗವಾಗಿರುವ ಹೊಸಾಳದ ಮಹಾಲಕ್ಷ್ಮೀ ದೇವಾಲಯವು ಉದ್ಯಾವರದ ದುರ್ಗಾ ಪರಮೇಶ್ವರಿ ದೇವಾಲಯವನ್ನು ಹೋಲುತ್ತಿದ್ದು, ಗರ್ಭಗೃಹದಲ್ಲಿ ಮಹಾಕಾಳಿ, ಮಹಾಲಕ್ಷ್ಮೀ ಹಾಗೂ ಮಹಾಸರಸ್ವತಿಯರ ಬೃಹತ್ ಪ್ರಮಾಣದ ಮೃಣ್ಮಯಮೂರ್ತಿಗಳಿದ್ದು, ಆವರಣದಲ್ಲಿ ವೀರಭದ್ರನ ರುದ್ರಭೀಕರ ಕಾಷ್ಠಮೂರ್ತಿಯಿದೆ. ಈ ಗುಡಿಯ ಆವರಣದಲ್ಲಿರುವ ೧೩೩೪ರ ಶಾಸನದಲ್ಲಿ ಮುಮ್ಮಡಿ ಬಲ್ಲಾಳನ ಪಿರಿಯರಸಿ ಚಿಕ್ಕಾಯಿ ತಾಯಿಯು ಆಳುತ್ತಿರೆ ಮೂಡಗೇರಿಯ ವೀರೇಶ್ವರ ದೇವರಿಗೆ ನಾಗತುಂಗನು ೧೦೦೦ ಮೂಡೆ ಅಕ್ಕಿಯನ್ನು ೬೦ ಮಾಲೆಯ ಬೊಪ್ಪಿಸೆಟ್ಟಿಯಿಂದ ಖರೀದಿಸಿ ದತ್ತಿ ಬಿಟ್ಟ ಉಲ್ಲೇಖವಿದೆ.

ಇಲ್ಲಿಯ ಭಂಡಾರಕೇರಿ ಮಠ, ಮಧ್ವಸಂಪ್ರದಾಯಕ್ಕೆ ಸೇರಿದ್ದು, ಮಧ್ವಾಚಾರ್ಯರ ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರು ಈ ಮಠದ ಪ್ರವರ್ತಕರಾಗಿದ್ದು, ಸತ್ಯತೀರ್ಥರು ಅಲ್ಲಿಯ ಮೊದಲ ಯತಿಗಳು. ಶ್ರೀರಾಮಚಂದ್ರ ಹಾಗೂ ಗೋಪಿನಾಥರು ಅಲ್ಲಿಯ ಪಟ್ಟದದೇವರು, ವಿಶಾಲವಾದ ಈ ಮಠದಲ್ಲಿ ಆಕರ್ಷಕವಾದ ಕಾಷ್ಠಮೂರ್ತಿಗಳಿದ್ದು, ಹಿಂದಿನ ಯತಿಗಳ ವೃಂದಾವನ ಹಾಗೂ ವಿವಿಧ ದೈವ ಸನ್ನಿಧಿಗಳೂ ಇಲ್ಲಿವೆ. ಇಲ್ಲಿ ಮುಸ್ಲಿಂ ಜನಾಂಗದ ಮಸೀದಿ ಹಾಗೂ ದರ್ಗಾಗಳಿವೆ. ಅಲ್ಲದೆ ಪ್ರಾಟೆಸ್ಟಂಟ್ ಪಂಥೀಯರ ಇಗರ್ಜಿ ಕೂಡಾ ಇದೆ. ***ಬಾಳಕುದುರು*** (ಜನಸಂಖ್ಯೆ: ೨೮೭೩): ಅದ್ವೈತ ಪೀಠಕ್ಕೆ ಸೇರಿದ ಮಠದಿಂದಾಗಿ ಪ್ರಸಿದ್ಧವಾಗಿದೆ. ಮೂಲತಃ ಭಾಗವತ ಪರಂಪರೆಗೆ ಸೇರಿದ ಈ ಮಠದ ಮೂಲ ಯತಿಗಳು ಕೈವಲ್ಯಾಶ್ರಮಸ್ವಾಮಿಗಳು, ಇವರು ಕಲ್ಯಾಣಪುರ ಬಳಿಯ ಪುತ್ತೂರಿನಲ್ಲಿ ಗತಿಸಿದರೆಂದು ತಿಳಿದುಬರುತ್ತದೆ. ಕುಂದಾಪುರ ತಾಲೂಕಿನ ಕಂದಾವರ ಬಳಿಯ ಹುತ್ತೂರುಮಠ ಎಂಬಲ್ಲಿ ಈ ಪರಂಪರೆಯ ಮೂಲ ಮಠವಿದ್ದು, ಯಾವುದೋ ಕಾಲದಲ್ಲಿ ಅದು ಬಾಳಕುದುರುವಿಗೆ ಸ್ಥಳಾಂತರಗೊಂಡಿತೆಂದು ತಿಳಿದುಬರುತ್ತದೆ. ಜಿಲ್ಲೆಯ ಸ್ಮಾರ್ತ ಬ್ರಾಹ್ಮಣರು ಈ ಮಠಕ್ಕೆ ನಡೆದುಕೊಳ್ಳುತ್ತಾರೆ. ಇಲ್ಲಿ ಆದಿಶಂಕರ ಹಾಗೂ ಶಾರದಾಂಬೆ ಯರ ಸನ್ನಿಧಿಗಳಿದ್ದು, ಶಾರದೆಯ ಕಾಷ್ಠಶಿಲ್ಪ ಆಕರ್ಷಕವಾಗಿದೆ. ಮಠದ ಆವರಣದಲ್ಲಿ ಪುಷ್ಕರಿಣಿ ಹಾಗೂ ಹಿಂದಿನ ಯತಿಗಳ ಸಮಾಧಿ ಹಾಗೂ ಶಿವಾಲಯಗಳಿವೆ. ***ಹಂಗಾರಕಟ್ಟೆ :*** ಇದು ಬಾಳಕುದುರು ಗ್ರಾಮಕ್ಕೆ ಸೇರಿದ ಉಪಗ್ರಾಮ. ಪ್ರಾಚೀನ ರೇವುಪಟ್ಟಣ, ಸೀತಾನದಿಯು ಸಮುದ್ರವನ್ನು ಸೇರುವ ಅಳಿವೆಬಾಗಿಲ ಬಳಿ ಇರುವ ಇದು ಮೀನುಗಾರಿಕೆಯ ಬಂದರಾಗಿ ಬಳಕೆಯಾಗುತ್ತಿದೆ. ಮಲ್ಪೆಯಂತೆ ಈ ಬಂದರನ್ನೂ ಅಭಿವೃದ್ಧಿಪಡಿಸಬಹುದಾಗಿದೆ. ಹಂಗಾರಕಟ್ಟೆ ಎದುರಿಗೆ ಇರುವ ಬೆಂಗ್ರೆ (ನಡುಗಡ್ಡೆ)ಯಲ್ಲಿ ಮೀನುಗಾರರು ವಾಸಿಸುತ್ತಾರೆ.

**ಬೆಳ್ಮಣ್ಣು** (ಜನಸಂಖ್ಯೆ : ೪,೪೭೦) : ತಾಲೂಕು ಕೇಂದ್ರ ಕಾರ್ಕಳದಿಂದ ೧೯ ಕಿ.ಮೀ. ಅಂತರದಲ್ಲಿದ್ದು, ಅಲ್ಲಿ ಲಭಿಸಿರುವ ಜಿಲ್ಲೆಗೆ ಅತಿಪ್ರಾಚೀನ ಶಾಸನ ಎನ್ನಲಾಗುವ ಸುಮಾರು ಎಂಟನೇಯ ಶತಮಾನಕ್ಕೆ ಸೇರಿದ ತಾಮ್ರ ಶಾಸನದಿಂದಾಗಿ ಮಹತ್ವ ಪಡೆದಿದೆ. ಮಿಗಿಲಾಗಿ ಪುರಾತನ ದುರ್ಗಾಪರಮೇಶ್ವರಿ ದೇವಾಲಯದಿಂದಾಗಿಯೂ ಪ್ರಸಿದ್ಧವಾಗಿದೆ. ಬೆಳ್ಮಣ್ಣು ತಾಮ್ರಶಾಸನದಲ್ಲಿ ಊರ ಹೆಸರು 'ಬೈಳ್ಮಣ್ಣು' ಎಂದು

ಉಲ್ಲೇಖಿತಗೊಂಡಿದ್ದು, ಕನ್ನಡ ಭಾಷೆಯಲ್ಲಿರುವ ಅತ್ಯಂತ ಪ್ರಾಚೀನ ತಾಮ್ರಶಾಸನ ಎಂಬ ಹೆಗ್ಗಳಿಕೆ ಇದಕ್ಕೆ ಸಲ್ಲುತ್ತದೆ. ಅಲ್ಲದೆ ಮಹಾನಾಡು ಸಭೆಯನ್ನು ಹೊಂದಿದ್ದ ಶಿವಳ್ಳಿ, ಕಾಂತಾವರ ಹಾಗೂ ಬೋಳ ಗ್ರಾಮಗಳ ಉಲ್ಲೇಖವೂ ಇದರಲ್ಲಿದೆ. ಇದೊಂದು ದಾನಶಾಸನವಾಗಿದ್ದು, ಆಳುಪರಸರ ಕಾಲದಲ್ಲಿ ಇಲ್ಲಿಯ 'ವಿಂಧ್ಯವಾಸಿನಿ' ದೇವಿಗೆ ದತ್ತಿ ನೀಡಿರುವ ಅಂಶವನ್ನು ದಾಖಲಿಸುವುದರ ಜೊತೆಗೆ ದೇವಿಯನ್ನು ಅತಿಶಯವಾಗಿ ವರ್ಣಿಸಲಾಗಿದೆ. ರಮ್ಯವಾದ ಗುಡ್ಡದ ತುದಿಯಲ್ಲಿರುವ ದುರ್ಗಾಲಯವನ್ನು ಮೂರು ದಿಕ್ಕುಗಳಿಂದಲೂ ತಲುಪಲು ಮೆಟ್ಟಿಲುಗಳಿವೆ. ಶಿವಲಿಂಗರೂಪದಲ್ಲಿರುವ ದುರ್ಗಾಪರಮೇಶ್ವರಿಯನ್ನು ಆರಾಧಿಸುವುದರ ಜೊತೆಗೆ ಮಹಿಷಮರ್ಧಿನಿಯನ್ನೂ ಇಲ್ಲಿ ಆರಾಧಿಸಲಾಗುತ್ತದೆ. ಗಾತ್ರದಲ್ಲಿ ಕಿರಿದಾಗಿದ್ದರೂ ಸುಂದರವಾಗಿದ್ದು, ಮಹಿಷನನ್ನು ಮರ್ದಿಸುತ್ತಿರುವ ಚತುರ್ಭುಜೆ ತ್ರಿಶೂಲಿನಿಯ ಈ ಶಿಲ್ಪ ಆಕರ್ಷಕವಾಗಿದೆ. ಈ ಗುಡಿಯ ಆವರಣದಲ್ಲಿ ಶಿವಲಿಂಗರೂಪಿಣಿ ದೇವಿ, ನಂದಿಗೋಣ ವ್ಯಾಘ್ರ ಚಾಮುಂಡಿ, ಧೂಮಾವತಿ, ಪಿಲಿಚಂಡಿ ಹಾಗೂ ರಕ್ತೇಶ್ವರಿಯರ ಸ್ಥಾನಗಳಿವೆ. ಮೀನಮಾಸದ ಸಂಕ್ರಮಣದಿಂದ ಐದು ದಿನಗಳ ಜಾತ್ರೆ ಇಲ್ಲಿ ನಡೆಯುತ್ತದೆ. ಮುಕ್ತಾಯ ದಿನದಂದು ಜರುಗುವ ನಗರ ಸವಾರಿ ಸಂದರ್ಭದಲ್ಲಿ ದೇವಿಗೆ ೧೦೦ಕ್ಕೂ ಹೆಚ್ಚು ಕಟ್ಟೆಪೂಜೆಗಳಾಗುತ್ತವೆ. ಅಂದು ಸಂಜೆ ಬೆಟ್ಟ ಇಳಿದು ಹೊರಡುವ ದೇವಿಯ ಪಲ್ಲಕ್ಕಿ ಮೆರವಣಿಗೆ, ಮಾರನೆಯ ದಿನ ಮುಂಜಾನೆ ಆರರವರೆವಿಗೂ ನಡೆದು ಕೊನೆಗೆ ಪಡುಬೆಳ್ಮಣ್ಣಿನ ಮಹಾಲಿಂಗೇಶ್ವರ ದೇವಾಲಯದಲ್ಲಿ ಅವಭ್ಯತೋತ್ಸವ ಜರುಗುತ್ತದೆ. ಇಲ್ಲಿ ಪ್ರತಿವರ್ಷ ವೃಶ್ಚಿಕ ಸಂಕ್ರಮಣದಿಂದ ೪೮ ದಿನಗಳ ಕಾಲ ಜರುಗುವ ಮಂಡಲ ಪೂಜೆಯೂ ವಿಶಿಷ್ಟವಾಗಿರುತ್ತದೆ. ಬೆಳ್ಮಣ್ಣು ಪೇಟೆಯಲ್ಲಿರುವ ಸಂತ ಜೋಸೆಫರ ಇಗರ್ಜಿಯು ಶತಮಾನಕ್ಕೂ ಹಳೆಯದಾಗಿದ್ದು, ಶಿರ್ವ ಇಗರ್ಜಿಯ ಸೋದರಿ ಇದೆಂದೇ ಹೇಳಲಾಗುತ್ತದೆ. ಬಡಜನರ ಅಭ್ಯುದಯಕ್ಕೆ ದುಡಿಯುತ್ತಿದ್ದು, ಬುದ್ಧಿಮಾಂಧ್ಯ ಮಕ್ಕಳಿಗಾಗಿ 'ಮಾನವಿಕಾ' ಎಂಬ ಶಾಲೆಯನ್ನು ಅದು ನಡೆಸುತ್ತಿದೆ. ಬೆಳ್ಮಣ್ಣಿನ ಉಪಗ್ರಾಮ ಕೆಮ್ಮಣ್ಣು ಎಂಬಲ್ಲಿಯೂ ದುರ್ಗಾದೇವಿಯ ಆಲಯವಿದೆ.

**ಬೈಂದೂರು** (ಜನಸಂಖ್ಯೆ: ೪,೯೮೩) : ತಾಲೂಕು ಕೇಂದ್ರ ಕುಂದಾಪುರದಿಂದ ೩೨ ಕಿ.ಮೀ ದೂರದಲ್ಲಿರುವ ಇದು, ಕೊಲ್ಲೂರಿಗೆ ೨೬ ಕಿ.ಮೀ. ಅಂತರದಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ ೧೭ ಊರ ಬದಿಯಲ್ಲೇ ಹಾದುಹೋಗಿದೆ. ಹೋಬಳಿ ಕೇಂದ್ರವೂ ಅಗಿರುವ ಐತಿಹಾಸಿಕ ಮಹತ್ವದ ಈ ಸ್ಥಳ ಹಿಂದೆ ಬಂದರು ಪಟ್ಟಣವಾಗಿದ್ದು, ಅಲ್ಲಿರುವ ಸೇನೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಹಿಂದೆ ಇದು ಜೈನ ಅರಸರ ಆಳ್ವಿಕೆಗೆ ಒಳಪಟ್ಟಿದ್ದು, ಹೊಸಾಡು ಗ್ರಾಮದಲ್ಲಿ ಒಂದು ಬಸದಿ ಇದ್ದು, ಕೊಂಕಣ ರೈಲ್ವೆ ಕಾಮಗಾರಿ ಸಂದರ್ಭದಲ್ಲಿ ನಾಶವಾಯಿತೆಂದು ತಿಳಿದುಬರುತ್ತದೆ. ಇಲ್ಲಿಯ ೧೨೭೨ರ ವೀರಪಾಂಡ್ಯದೇವನ ಶಾಸನದ ವಿವರ ಹಾಳಾಗಿದೆ. ಪಡುವರಿಯ ೧೩೨೪ರ ಶಾಸನದಲ್ಲಿ ಬಯಿದೂರನಾಡ ಅಧಿಕಾರಿಯು ನೀಡಿದ ದತ್ತಿಯ ಉಲ್ಲೇಖವಿದೆ. ಅಲ್ಲಿರುವ ೧೩೫೬ರ ಶಾಸನದಲ್ಲಿ ಗೋಕರ್ಣೇಶ್ವರ, ಮಾರ್ತಾಂಡೇಶ್ವರರ ಜೊತೆಗೆ ಭಾನುದೇವರ ಬಸದಿಗೆ ಬಿಟ್ಟ ದತ್ತಿಯ ಪ್ರಸ್ತಾಪವಿದೆ. ಇಲ್ಲಿಯ ೧೪೪೯ರ ಶಾಸನದಿಂದ ಪಾರ್ಶ್ವನಾಥ ಬಸದಿಯಲ್ಲಿನ ವೃತ್ತಿಕಾರರ ಶಾಲೆ, ಬ್ರಹ್ಮದೇವರ ದೀಪಕ್ಕೆ, ಬಂಕೇಶ್ವರ ದೇವರು, ಚತುರ್ಮುಖಿ ಮಠಗಳಿಗೆ ದತ್ತಿ ಬಿಟ್ಟಿದನ್ನು ದಾಖಲಿಸಿದೆ. ಪ್ರಾಚೀನ ಶಾಸನಗಳಲ್ಲಿ ಬೈಂದೂರು, ಬಯಿದೂರು ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರ ಬಸ್ಸು ನಿಲ್ದಾಣದ ಸಮೀಪದಲ್ಲೇ ಇರುವ ಸೇನೇಶ್ವರ ದೇವಾಲಯವು ಪೌರಾಣಿಕವಾಗಿ ತ್ರೇತಾಯುಗದಷ್ಟು ಪ್ರಾಚೀನ ಎಂದು ಹೇಳಲಾಗುತ್ತದೆ. ಲಂಕೆಗೆ ದಂಡೆತ್ತಿ ಹೊರಟ ಶ್ರೀರಾಮನು ಇಲ್ಲಿ ರಾತ್ರಿ ತಂಗಿದ್ದನೆಂದು ಹೇಳಲಾಗುತ್ತಿದ್ದು, ಲಂಕೆಗೆ ಸೇತುವೆಯನ್ನು ಇಲ್ಲೇ ನಿರ್ಮಿಸುವ ವಿಚಾರವನ್ನು ಹೊಂದಿದ್ದ ಅವನು, ಬಿಂದುಮಹರ್ಷಿಗಳ ಸೂಚನೆಯಂತೆ ಅದನ್ನು ಕೈಬಿಟ್ಟನೆಂಬ ಅಭಿಪ್ರಾಯವಿದೆ. ಇಲ್ಲಿಯ ಸೇನೇಶ್ವರ ಲಿಂಗವು ಶ್ರೀರಾಮ ಪ್ರತಿಷ್ಠಿತವೆಂಬ ಅಭಿಪ್ರಾಯವೂ ಇದೆ. ಈ ದೇವಾಲಯವಿಂದು ಧರ್ಮಸ್ಥಳದ ಧರ್ಮೋತ್ಥಾನ ಸಮಿತಿಯ ಮುಂದಾಳತ್ವದಲ್ಲಿ ಸಂರಕ್ಷಿಸಲ್ಪಟ್ಟಿದೆ. ಬಿಂದು ಮಹರ್ಷಿಗಳಿಂದಾಗಿ ಬಿಂದುಪುರ ಎಂಬ ಹೆಸರನ್ನು ಪಡೆದ ಇದು, ಕ್ರಮೇಣ 'ಬೈಂದೂರು' ಆಯಿತೆಂಬ ಅಭಿಪ್ರಾಯವಿದೆ. ಪಡುವರಿಯ ೧೩೪೯ರ ಶಾಸನ ಬಯಿದೂರ ಸೇನೇಶ್ವರ ದೇವರಿಗೆ ನಾಗಂಡುಗ ೨೪೦ ಮೂಡೆ ಅಕ್ಕಿಯನ್ನು ಚಿಕ್ಕಮಲ್ಲೇಯ ದಂಡನಾಯಕ ನೀಡಿದ್ದನ್ನು ದಾಖಲಿಸಿದರೆ, ಪಡುವರಿಯ ೧೩೬೦ರ

ಶಾಸನ ವಿರೂಪಾಕ್ಷಪುರದ ಭಳಾರಿಗೆ ಮೂಗಂಡುಗ ಗದ್ದೆಯ ೧೦೦ ಮೂಡೆ ಅಕ್ಕಿಯನ್ನು ದತ್ತಿ ಬಿಟ್ಟ ವಿವರವಿದೆ. ಬೈಂದೂರಿನ ೧೩೬೫ರ ಇನ್ನೊಂದು ಶಾಸನ, ನರಸಿಂಹದೇವರ ಮಠಕ್ಕೆ ಬಿಟ್ಟ ದತ್ತಿಯನ್ನು ದಾಖಲಿಸಿದೆ. ಪಡುವರಿಯ ೧೪೧೯ರ ಎರಡು ಶಾಸನಗಳು ವೀರಾಪುರದ ಮಾಯಣ್ಣನಿಗೆ ಹಾಗೂ ಸೇನೇಶ್ವರ ದೇವರಿಗೆ ಬಿಟ್ಟ ದತ್ತಿಯನ್ನು ದಾಖಲಿಸಿವೆ. ಬೈಂದೂರಿನ ೧೪೪೯ರ ಶಾಸನ, ಬೈಂದೂರ ಪಾರ್ಶ್ವನಾಥದೇವರಿಗೆ ಗಂಗನಾಡೊಳಗೆ ಹಾಗೂ ಬಂಕೇಶ್ವರ ಗಾಯಿತ್ರಿ ದೇವಿಯರ ಮಠಕ್ಕೆ ಬಿಟ್ಟ ದತ್ತಿಗಳನ್ನು ತಿಳಿಸುತ್ತದೆ. ಬೈಂದೂರಿನ ೧೫೦೮ರ ಶಾಸನ, ವೀರನರಸಿಂಹನ ಆಳ್ವಿಕೆಯಲ್ಲಿ ಹಾಡುವಳಿ ರಾಜ್ಯವನ್ನಾಳುತ್ತಿದ್ದ ಇಂದರಸವಡೆಯನು ಸೇನೇಶ್ವರ ಗುಡಿ ಹಾಗೂ ಚತುರ್ಮುಖಿ ಸ್ಥಾನಗಳಿಗೆ ದತ್ತಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಸೇನೇಶ್ವರ ಗುಡಿಯಲ್ಲಿರುವ ೧೫೨೪ರ ಶಾಸನ ಬೈಂದೂರುನಾಡ ಸೇನೇಶ್ವರ, ನರಸಿಂಹದೇವ ಹಾಗೂ ಗೋಪಿನಾಥ ದೇವರು ಹಾಗೂ ಮಠದ ಸೇವೆಗೆಂದು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ.

ವಿಶಾಲವಾದ ಪ್ರಾಕಾರದ ನಡುವೆ ಗರ್ಭಗೃಹ, ಸುಖನಾಸಿ, ನವರಂಗ ಹಾಗೂ ನಂದಿ ಮಂಟಪಗಳನ್ನು ಹೊಂದಿರುವ ಸೇನೇಶ್ವರ ದೇವಾಲಯವು ಉತ್ತಮ ವಾಸ್ತುಶಿಲ್ಪ ಕಲಾಕೃತಿಯಾಗಿದ್ದು, ದೇವಾಲಯದ ಭಿತ್ತಿ, ಬಾಗಿಲವಾಡ, ಸ್ತಂಭಗಳು ಆಕರ್ಷಕವಾಗಿದ್ದು, ಅದರಿಂದಾಗಿ ಈ ಊರನ್ನು ಜಿಲ್ಲೆಯ ಬೇಲೂರು ಎಂದೇ ಕರೆಯಲಾಗಿದೆ. ದೇವಾಲಯದ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದರೆ, ದೇವಕೋಷ್ಠಗಳಲ್ಲಿ ಸೂರ್ಯ, ವಿಷ್ಣು, ಸಪ್ತಮಾತೃಕಾ, ಬಲಮುರಿಗಣಪ, ಮಹಿಷಮರ್ಧಿನಿ, ಸುಬ್ರಹ್ಮಣ್ಯ, ಶಂಕರನಾರಾಯಣ ಮುಂತಾದ ಆಕರ್ಷಕ ಶಿಲ್ಪಗಳಿವೆ. ಪ್ರದಕ್ಷಿಣ ಪಥದ ಗೂಡುಗಳಲ್ಲಿ ಕಾಳಭೈರವ, ಚತುರ್ಮುಖ ಬ್ರಹ್ಮ, ಉಗ್ರನರಸಿಂಹ, ವೀರಭದ್ರ, ಹಾಗೂ ಭೈರವೇಶ್ವರಿಯ ಶಿಲ್ಪಗಳಿವೆ. ಸುಮಾರು ೧೧-೧೨ನೆಯ ಶತಮಾನದಲ್ಲಿ ಸೇನಾಪುರದಿಂದ (ಕುಂದಾಪುರ ತಾ.) ಈ ಭಾಗದಲ್ಲಿ ಆಡಳಿತ ನಡೆಸಿದ ಕಲ್ಯಾಣದ ಚಾಲುಕ್ಯರ ಸಾಮಂತರಾದ ಸೇನವರ ಅರಸರ ನಿರ್ಮಾಣ ಇದೆಂಬ ಅಭಿಪ್ರಾಯವನ್ನು ಪಿ. ಗುರುರಾಜಭಟ್ಟ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪೂರಕವಾಗಿ ಈ ದೇವಾಲಯವನ್ನು ಸೇನವರ ಮನೆತನಕ್ಕೆ ಸೇರಿದ ಜೀಮೂತವಾಹನ(೧೦೨೦-೫೮) ನಿರ್ಮಿಸಿದ್ದಾನೆಂದು ವೈ. ಉಮಾನಾಥಶೆಣೈರವರು ಅಭಿಪ್ರಾಯ ಪಡುತ್ತಾರೆ. ಬೈಂದೂರಿನಲ್ಲಿ ರಾಮಚಂದ್ರ, ವೆಂಕಟರಮಣ, ಬಂಕೇಶ್ವರ ಮುಂತಾದ ಗುಡಿಗಳಿವೆ. ಶಿರೂರಿಗೆ ಹೋಗುವ ಮಾರ್ಗದಲ್ಲಿರುವ ಒತ್ತಿನೆಣೆ ಎಂಬ ಸ್ಥಳದಲ್ಲಿರುವ ಮಾಸ್ತಿಯಮ್ಮನ ಗುಡಿಯಲ್ಲಿ ಮಹಾಸತಿ ಕಲ್ಲೊಂದನ್ನು ಪೂಜಿಸಲಾಗುತ್ತಿದೆ. ಗುಡಿಯೊಳಗೆ ಭಕ್ತರು ಮರದ ಗೊಂಬೆಯನ್ನು ಹರಕೆ ರೂಪದಲ್ಲಿ ಸಲ್ಲಿಸಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಒತ್ತಿನೆಣೆ ಘಟ್ಟದ ಬಳಿ ಕಿರು ಮಂತ್ರಾಲಯ ಎಂದೇ ಕರೆಯಲ್ಪಡುವ ರಾಘವೇಂದ್ರ ಸ್ವಾಮಿ ಬೃಂದಾವನವಿದೆ. ಇಲ್ಲಿಂದ ಕಾಣಸಿಗುವ ಸಮುದ್ರದ ರಮ್ಯ ನೋಟ ಮನಸ್ಸಿಗೆ ಮುದನೀಡುತ್ತದೆ.

ಊರಿಗೆ ಅನತಿ ದೂರದ ಕಡಲತೀರದ ಪಡುವರಿಯ ಸೋಮೇಶ್ವರ ದೇವಾಲಯವನ್ನು ಶ್ರೀರಾಮನು ಸೇತುಬಂಧ ಸಂದರ್ಭದಲ್ಲಿ ನಿರ್ಮಿಸಿದನೆಂಬ ನಂಬಿಕೆ ಇದೆ. ಕಡಲತೀರ್ಥಕ್ಕೆ ಹೋಗುವ ಮಾರ್ಗದಲ್ಲಿ ಬಂಡೆಗಳ ನಡುವೆ ನಾಗತೀರ್ಥ ಹಾಗೂ ಪಂಚಲಿಂಗೇಶ್ವರಿ ದೇವಾಲಯವಿದ್ದು, ಗರ್ಭಗುಡಿಯಲ್ಲಿ ಐವರು ಈಶ್ವರಿಯರ ಪ್ರತೀಕವಾಗಿ ಐದು ಪುಟ್ಟಲಿಂಗಗಳಿವೆ. ಹಿಂಬದಿಯಲ್ಲಿ ದೊಡ್ಡದಾದ ಎರಡು ಶಿಲಾಮೊಗಗಳಿವೆ. ಅಲ್ಲದೆ ಮಾಸ್ತಿ, ಹಾಯ್ಗುಳಿ, ಚಾಮುಂಡಿ ಮುಂತಾದ ಶಿಲ್ಪಗಳಿವೆ. ಪ್ರಸಿದ್ಧ ಇತಿಹಾಸಕಾರರಾದ ಜಾರ್ಜ್ ಮಾರ್ಕ್ ಮೊರೇಸ್ ಈ ಊರಿನವರು. *ಗಂಗನಾಡು :* ಬೈಂದೂರಿಗೆ ಅನತಿ ದೂರದಲ್ಲಿರುವ ಈ ಗ್ರಾಮದಲ್ಲೂ ಶಾಸನ ಶಿವಾಲಯ, ಕೆರೆ ಮುಂತಾದ ಪ್ರಾಚೀನ ಅವಶೇಷಗಳಿವೆ.

**ಬೋಳ** (ಜನಸಂಖ್ಯೆ: ೩,೭೭೬): ತಾಲೂಕು ಕೇಂದ್ರ ಕಾರ್ಕಳದಿಂದ ಆರು ಕಿ.ಮೀ. ಅಂತರದಲ್ಲಿ ಪ್ರಕೃತಿಯ ಮಡಿಲಲ್ಲಿರುವ ಸುಂದರ ಗ್ರಾಮ. ಎಂಟನೆಯ ಶತಮಾನದ ಶಾಸನವೊಂದರಲ್ಲಿ ಇದು. 'ಬೇಳ' ಎಂದು ದಾಖಲಿಸಲ್ಪಟ್ಟಿದ್ದು, ಹಿಂದೆಂದೋ ನಂದರಸನೆಂಬುವನ ಪಾಳೆಯಪಟ್ಟು ಇದಾಗಿತ್ತೆಂಬ ಅಭಿಪ್ರಾಯವಿದೆ. ಇಲ್ಲಿರುವ ಮೃತ್ಯುಂಜಯ ರುದ್ರನ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ

ಮಾಡಲಾಗಿದೆ. ಅಲ್ಲದೆ ಇಲ್ಲಿರುವ ಜೈನ ಬಸದಿಯು ವರ್ಧಮಾನ ತೀರ್ಥಂಕರ ಹಾಗೂ ಪದ್ಮಾವತಿ ಯಕ್ಷಿಯರ ಆರಾಧನಾ ಕೇಂದ್ರವಾಗಿಯೂ ಖ್ಯಾತಿ ಪಡೆದಿದೆ. ಮಿಗಿಲಾಗಿ ಸಿರಿದೈವಗಳಿಗೂ ಇದೊಂದು ಪ್ರಮುಖ ನೆಲೆಯಾಗಿದೆ.

**ಮಂದರ್ತಿ :** ತಾಲೂಕು ಕೇಂದ್ರ ಉಡುಪಿಯಿಂದ ೨೫ ಕಿ.ಮೀ. ಉತ್ತರಕ್ಕೆ ಹೆಗ್ಗುಂಜೆ ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮ. ಅಲ್ಲಿರುವ ದುರ್ಗಾಪರಮೇಶ್ವರಿ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಬಸ್ಸು ಇಳಿಯುತ್ತಿದ್ದಂತೆಯೇ ಎದುರಾಗುವ ೭೫ ಅಡಿ ಎತ್ತರದ ಐದು ಅಂತಸ್ತಿನ ದ್ರಾವಿಡ ಶೈಲಿಯ ಭವ್ಯ ರಾಜಗೋಪುರವು ಕಲಾತ್ಮಕ ಶಿಲ್ಪಗಳಿಂದಾಗಿ ವೀಕ್ಷಕರ ಗಮನ ಸೆಳೆಯುತ್ತದೆ. ಗರ್ಭಗೃಹದಲ್ಲಿ ದೇವಿಯ ಮೂರ್ತಿಯ ಹಿಂಬದಿಯಲ್ಲಿರುವ ವಲ್ಮೀಕವು ನಾಗಕನ್ಯೆಯಾದ ಮಂದರ್ತಿಯ ಸ್ಥಾನವೆಂದು ನಂಬಲಾಗುತ್ತದೆ. ಅವಳು ದುರ್ಗಾ ದೇವಿಯಲ್ಲೇ ಒಂದಾಗಿದ್ದಳೆಂದೂ ಹೇಳಲಾಗುತ್ತದೆ. ಇಲ್ಲಿ ದೇವಾಲಯ ದೈವಾಲಯ ಗಳೆರಡೂ ಒಂದರೊಡನೊಂದು ಮಿಲಿತಗೊಂಡಿದ್ದು, ಕುಂಭ ಸಂಕ್ರಮಣದಲ್ಲಿ ಗೆಂಡೆಸೇವೆ ನಡೆದು ನಂತರದ ದಿನಗಳಲ್ಲಿ ರಥೋತ್ಸವ, ದೀಪೋತ್ಸವಾದಿಗಳಿರುತ್ತವೆ. ಹೊರಗಿರುವ ಇನ್ನೊಂದು ವಲ್ಮೀಕದ ಬಳಿ ಸುಬ್ರಹ್ಮಣ್ಯನ ಸನ್ನಿಧಾನವಿದೆ. ದೇವಾಲಯದ ಒಳಪ್ರಾಕಾರದಲ್ಲಿ ವೀರಭದ್ರನ ಮೂರ್ತಿಯಿದ್ದರೆ, ಹೊರಪ್ರಾಕಾರದಲ್ಲಿ ಕಲ್ಲುಟಿಗ, ಗೆಂಡದಹಾಯ್ಗುಳಿ, ನಂದಿ, ಕ್ಷೇತ್ರಪಾಲಾದಿ ಮೂರ್ತಿಗಳಿವೆ. ಸನಿಹದಲ್ಲೇ ಚಾಮುಂಡೇಶ್ವರಿ (ಮಾರಿ) ದೇವಾಲಯವಿದೆ. ಅಲ್ಲದೆ, 'ಶ್ರೀಮಂದರ್ತಿ ದುರ್ಗಾಪರಮೇಶ್ವರಿ ಕೃಪಾಪೋಷಿತ ದಶಾವತಾರ ಮೇಳ'ದಿಂದಾಗಿಯೂ ಮಂದರ್ತಿಯು ಪ್ರಸಿದ್ಧವಾಗಿದೆ. ಹರಕೆಯ ರೂಪದಲ್ಲಿ ದೇವಿಯ ಪ್ರಸಂಗವನ್ನು ಯಕ್ಷಗಾನದಾಟದ ಮೂಲಕ ಆಡಿಸುವುದು ಪರಮೋತ್ಕೃಷ್ಟ ಸೇವೆಯಾಗಿದ್ದು, ಈ ಸೇವೆಯ ಒತ್ತಡವನ್ನು ಪೂರೈಸಲೆಂದೇ ಎರಡು ತಂಡಗಳನ್ನು ಆ ಮೇಳವು ಹೊಂದಿದೆ.

**ಮರವಂತೆ** (ಜನಸಂಖ್ಯೆ: ೫,೦೫೯): ತಾಲೂಕು ಕೇಂದ್ರ ಕುಂದಾಪುರದಿಂದ ಒಂಬತ್ತು ಕಿ.ಮೀ. ಪೂರ್ವಕ್ಕೆ ಇರುವ ಸುಂದರ ನಿಸರ್ಗತಾಣ, ಕೊಲ್ಲೂರು ಕಡೆಯಿಂದ ಹರಿದು ಬರುವ ಸೌಪರ್ಣಿಕಾ ನದಿಯು ಮರವಂತೆಯ ಬಳಿ ಸಮುದ್ರದ ಮಗ್ಗುಲಲ್ಲೇ ಸಮಾನಾಂತರವಾಗಿ ಸ್ವಲ್ಪ ದೂರ ಹರಿದು ಹೋಗುವ ದೃಶ್ಯ ಅತ್ಯಂತ ರಮಣೀಯವಾದುದು. ಇಲ್ಲಿ ಸುಮಾರು ಅರ್ಧ ಕಿ.ಮೀ.ವರೆಗೆ ನದಿ–ಸಮುದ್ರಗಳ ನಡುವಣ ಅಂತರ ಕೇವಲ ೫೦ ಅಡಿ ಇದ್ದರೂ ಈ ನದಿ ಸಾಗರವನ್ನು ಸೇರುವುದು ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಗಂಗೊಳ್ಳಿ ಬಳಿ. ಮರವಂತೆಯ ನಿಡಿದಾದ ಕಡಲ ತೀರದ ಮೇಲಿನ ವಾಯುವಿಹಾರ ಪ್ರವಾಸಿಗರಿಗೆ ಮುದನೀಡುತ್ತದೆ. ಮರವಂತೆಯ ಜಕ್ಕನಕಟ್ಟೆಯಲ್ಲಿರುವ ಪ್ರಾಚೀನ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ದೇವಿಯ ದಾರು ಶಿಲ್ಪವಿದೆ. ದುರ್ಗೆಯ ಯಕ್ಷೇಶ್ವರಿ ರೂಪವೆಂದು ಹೇಳಲಾಗುವ ಇದು ವಿಶಿಷ್ಟ ಶಿಲ್ಪಲಕ್ಷಣವನ್ನು ಹೊಂದಿದೆ. ಗರ್ಭಗೃಹದಲ್ಲಿ ಬ್ರಹ್ಮಲಿಂಗೇಶ್ವರ ಶಿವಲಿಂಗವಿದೆ. ಅಲ್ಲದೆ ಕಲ್ಲುಕುಟಿಗ, ಬೊಬ್ಬರ್ಯ, ಹಾಯ್ಗುಳಿ, ಮಾಸ್ತಿ, ಚಿಕ್ಕು ಮುಂತಾದ ಪರಿವಾರ ದೈವಗಳಿವೆ. ಪ್ರತಿ ಸಂಕ್ರಮಣದಲ್ಲೂ ದರ್ಶನಾದಿಗಳಿರುತ್ತಿದ್ದು, ವಾರ್ಷಿಕ ಜಾತ್ರೆಯಲ್ಲಿ ಮಕರ ಸಂಕ್ರಮಣದಿಂದ ಎಂಟನೆಯ ದಿನದಂದು, ಢಕ್ಕೆಬಲಿ ಹಾಗೂ ಗೆಂಡೆಸೇವೆಗಳ ವಿಶೇಷವಿರುತ್ತದೆ. ಇಲ್ಲಿ ಸೌಪರ್ಣಿಕೆಯು ಸಮುದ್ರಕ್ಕೆ ಸಮಾನಂತರವಾಗಿ ಪ್ರಶಾಂತವಾಗಿ ಹರಿಯುವ ತಾಣಕ್ಕೆ 'ಮಾರಸ್ವಾಮಿ' ಎಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಅತ್ತ ಸಮುದ್ರ ಇತ್ತ ನದಿ; ಒಂದೆಡೆ ಅಬ್ಬರಿಸಿ ಬರುವ ಕಡಲ ಅಲೆಗಳು–ಇನ್ನೊಂದೆಡೆ ಮಂದಗತಿಯಿಂದ ಹರಿದಿರುವ ಸೌಪರ್ಣಿಕಾ ನದಿ ಹೀಗೆ ಅಬ್ಬರ ಗಾಂಭೀರ್ಯಗಳ ನಡುವೆ ನಿಂತ ಪ್ರಕೃತಿಪ್ರೇಮಿ ಮೂಕವಿಸ್ಮಿತನಾಗುತ್ತಾನೆ. ಇಲ್ಲಿ ಟರ್ಟಲ್ ಬೇ ಎಂಬ ಖಾಸಗಿ ವಿಶ್ರಾಂತಿಧಾಮವೊಂದು ಪ್ರವಾಸಿಗರಿಗಾಗಿ ತಲೆಎತ್ತಿ ನಿಂತಿದೆ. ಈ ಪರಿಸರದಲ್ಲಿರುವ ಪ್ರಾಚೀನ ವಿಷ್ಣು ದೇವಾಲಯ (ಸು.೧೦ನೇ ಶತಮಾನ)ಮೂರು ಗರ್ಭಗೃಹಗಳನ್ನು ಒಂದೇ ಸಾಲಲ್ಲಿ ಹೊಂದಿರುವ ತ್ರಿಕೂಟಾಚಲವಾಗಿದ್ದು, ಒಳಗೆ ವರಾಹ, ವಿಷ್ಣು ಹಾಗೂ ನರಸಿಂಹನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿಯ ನಗಾರಿ ಒಂದು ವಿಶೇಷವಾದರೆ, ಈ ದೇವರಿಗೆ ನಡೆಯುವ ಅಂಬಾರಿ ಸೇವೆ ಇನ್ನೊಂದು ವಿಶೇಷವಾಗಿದ್ದು, ಬಂದವರಿಗೆಲ್ಲ ಅಂದು ಅನ್ನ ಸಂತರ್ಪಣೆ ಇರುತ್ತದೆ.

**ಮಲ್ಪೆ:** ಉಡುಪಿಗೆ ನಾಲ್ಕು ಕಿ.ಮೀ. ಅಂತರದಲ್ಲಿ ಸಮುದ್ರ ತೀರದಲ್ಲಿರುವ ಕೊಡವೂರು ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮವಾಗಿದ್ದು ಬೀಚಿನಿಂದಾಗಿ, ಮೀನುಗಾರಿಕೆಯಿಂದಾಗಿ ಸಣ್ಣ ಪಟ್ಟಣವಾಗಿ ರೂಪುಗೊಂಡು ಪ್ರಸಿದ್ಧವಾಗಿದೆ. ಮೀನುಗಾರಿಕೆಗೆ ಹೆಸರಾಗಿರುವ ಮಲ್ಪೆಯ ಬಂದರಿನಲ್ಲಿ ನಡೆಯುವ ಮೀನಿನ ವ್ಯಾಪಾರ ಗೌಜಿನಿಂದ ಕೂಡಿರುತ್ತದೆ. ಮಲ್ಪೆಯಲ್ಲಿ ಮುಸಲ್ಮಾನರ ಮಸೀದಿ, ಮದ್ರಸಾ, ಪ್ರಾಟೆಸ್ಟೆಂಟ್ ಯು.ಬಿ.ಎಂ. ಇಗರ್ಜಿ ಹಾಗೂ ಶಾಲೆಗಳಿವೆ. ಮೀನುಗಾರಿಕೆಯಿಂದಾಗಿ ದೋಣಿಗಳ ನಿರ್ಮಾಣ, ದುರಸ್ತಿ, ಮತ್ಸ್ಯಸಂಸ್ಕರಣ, ಮೀನೆಣ್ಣೆಯ ಕಾರ್ಖಾನೆ ಹಾಗೂ ಶೀತಾಗಾರಗಳು ಮಲ್ಪೆಯಲ್ಲಿವೆ. ತೆಂಗಿನನಾರು ಅಭಿವೃದ್ಧಿ ನಿಗಮ ಮುಂತಾದ ಅನೇಕ ಉದ್ಯಮಗಳು ಇಲ್ಲಿ ಸಮೃದ್ಧವಾಗಿ ಬೆಳೆದಿವೆ. ಪ್ರವೇಶ ಟಿಕೇಟ್ ಪಡೆದು ಬಂದರನ್ನು ಪ್ರವೇಶಿಸಬಹುದಾಗಿದ್ದು, ಒಳಗೆ ನಡೆಯುವ ಮೀನಿನ ವಹಿವಾಟು ವಿಶಿಷ್ಟವಾಗಿರುತ್ತದೆ. ಸಾಗರದೊಡಲಲ್ಲಿರುವ ಸಂತ ಮೇರಿ ದ್ವೀಪವನ್ನು ಸಂದರ್ಶಿಸಲು ಪ್ರವಾಸಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಲ್ಲಿಂದ ಉತ್ತಮ ಸಾರಿಗೆ ಸೌಕರ್ಯವಿದೆ. ೧೯೯೦ರ ದಶಕದಲ್ಲಿ ೧೫ ಮೀಟರ್ ಉದ್ದದ ರಾಕ್ಷಸಗಾತ್ರದ ಸತ್ತ ತಿಮಿಂಗಿಲವೊಂದು ಮಲ್ಪೆ ತೀರಕ್ಕೆ ತೇಲಿ ಬಂದಿತ್ತು. ಮಲ್ಪೆ ಬಂದರನ್ನು ಹಾಗೂ ಕಡಲ ತೀರವನ್ನು ಪ್ರವಾಸಿ ಧಾಮವನ್ನಾಗಿ ಬೆಳೆಸಲು ಸಾಕಷ್ಟು ಅವಕಾಶಗಳಿವೆ. ಬಂದರಿನಿಂದ ಹೊರಗೆ ಚಾಚಿಕೊಂಡಿರುವ ಮಲ್ಪೆಯ ಬೀಚು, ಪ್ರವಾಸಿಗರ ಸ್ವರ್ಗವಾಗಿದೆ. ತೀರದಂಚಲ್ಲಿ ಮರಳ ಮೇಲೆ ನಡೆದಾಡುತ್ತಾ ಮೇಲೇರಿ ಬರುವ ಅಲೆಗಳಿಂದ ತಪ್ಪಿಸಿಕೊಳ್ಳುವುದು ಒಂದು ವಿಶಿಷ್ಟ ಅನುಭವವಾದರೆ, ಅಲೆಗಳಿಗೆ ಮೈಯೊಡ್ಡಿ, ಅವುಗಳ ಹೊಡೆತ ತಿಂದು ಹಿಗ್ಗುವುದು ಇನ್ನೊಂದು ಬಗೆಯ ಅನುಭವವಾಗಿರುತ್ತದೆ. ವಡ ಭಾಂಡೇಶ್ವರ, ದೇವಾಲಯ, ವಡಬ್ರಾಂಡ ಕಿನಾರೆ, ಗಾಂಧಿಸ್ಮಾರಕಗಳನ್ನು ಕಡಲ ತೀರದಲ್ಲಿ ನಡೆಯುತ್ತಾ ತಲುಪಬಹುದಾಗಿದ್ದು, ಮಾರ್ಗಮಧ್ಯದಲ್ಲಿರುವ ಶ್ರೀಮತಿ ಮನೋರಮಾ ಮಧ್ವರಾಜರ ಕಾರೊನೆಟ್ ಫಿಷ್‌ಮಿಲ್ ಅಂಡ್ ಆಯಿಲ್ ಕಂಪನಿಯು ಮೀನೆಣ್ಣೆ ಉತ್ಪಾದನೆಗೆ ಹೆಸರಾಗಿದೆ.

ಮಲ್ಪೆ ಬಂದರಿನಿಂದ ಏಳು ಕಿ.ಮೀ. ಅಂತರದಲ್ಲಿ ಸಾಗರದೊಡಲಲ್ಲಿರುವ ಸಂತ ಮೇರಿ ದ್ವೀಪ ಸಮೂಹಕ್ಕೆ ವಾರದುದ್ದಕ್ಕೂ ಬೆಳಗ್ಗೆ ಒಂಬತ್ತರಿಂದ ಸಂಜೆ ನಾಲ್ಕರವರೆಗೆ ಸಂಚರಿಸುವ ಖಾಸಗಿ ಸ್ಟೀಮರ್‌ಗಳು ಪ್ರವಾಸಿಗರಿಗೆ ಸಾರಿಗೆ ಅವಕಾಶವನ್ನು ಕಲ್ಪಿಸಿವೆ. ತನ್ನಲ್ಲಿ ಹುದುಗಿಸಿಕೊಂಡಿರುವ ಮೋಹಕ ಶಿಲೆಗಳಿಂದ ವಿಸ್ಮಯತಾಣವಾಗಿ ವಿಜೃಂಭಿಸುತ್ತಿದೆ. ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮನು ಭಾರತದಲ್ಲಿ ಕಾಲಿಟ್ಟ ಮೊದಲ ಸ್ಥಳ ಈ ದ್ವೀಪ ಸಮೂಹ ಎಂಬ ಅಭಿಪ್ರಾಯವಿದ್ದು ಅದನ್ನು ತಲುಪುವ ಯಾನವೇ ರೋಮಾಂಚಕಾರಿಯಾಗಿದ್ದು, ಅಲ್ಲಿರುವ ನಾಲ್ಕರಲ್ಲಿ ಒಂದಾದ ಬಹುದ್ದೂರ್‌ಗಢ ಮಿಲಿಟರಿ ವಶದಲ್ಲಿದ್ದು, ದೀಪಸ್ತಂಭ ಹೊಂದಿದೆ. ಉಳಿದ ಮೂರರಲ್ಲಿ ಚಿಕ್ಕ ಎರಡು ದ್ವೀಪಗಳು ಬೆಟ್ಟಗುಡ್ಡದಿಂದ ಕೂಡಿದ್ದು, ದೊಡ್ಡದಾದ ಇನ್ನೊಂದೇ ಸಂತ ಮೇರಿ ದ್ವೀಪವಾಗಿದೆ. ನಿರ್ಜನವಾದ ಈ ದ್ವೀಪದಲ್ಲಿ ತೆಂಗಿನ ವನವಿರುವುದರಿಂದ ಇದಕ್ಕೆ *Frfrqxw#Lvodqg* ಎಂದೂ ಕರೆಯಲಾಗುತ್ತಿದ್ದು, ತೋನ್ಸೆಪಾರು ಎಂಬುದು ಅದಕ್ಕಿರುವ ಹಳೆಯ ಹೆಸರಾಗಿದೆ. ಈ ದ್ವೀಪದಲ್ಲಿರುವ ಶಿಲಾ ಸಮೂಹಗಳು ಮೋಹಕ ವಿನ್ಯಾಸಗಳನ್ನು ರೂಪಿಸಿದೆ. ಚಿತ್ರವಿಚಿತ್ರಾಕೃತಿಯ ಸ್ತಂಭಾಕಾರದ ಶಿಲಾಸ್ತೋಮಗಳಿಂದಾಗಿ ಈ ದ್ವೀಪವು ಜಗತ್ಪ್ರಸಿದ್ಧವಾಗಿದೆ. ಸುಮಾರು ೨೪ ಎಕರೆಯಷ್ಟು ಪ್ರದೇಶವನ್ನು ಹೊಂದಿರುವ ಈ ದ್ವೀಪ, ವೀಕ್ಷಕರಲ್ಲಿ ವಿಭಿನ್ನ ಭ್ರಾಂತಿಯನ್ನುಂಟು ಮಾಡುತ್ತದೆ. ಪ್ರಾಕೃತಿಕ ಅದ್ಭುತಗಳಲ್ಲೊಂದಾದ ಇದನ್ನು ರಾಷ್ಟ್ರೀಯ ಭೂ ವೈಜ್ಞಾನಿಕ ಸ್ಮಾರಕವೆಂದು ಈಗಾಗಲೇ ಘೋಷಿಸಲಾಗಿದೆ. ಈ ದ್ವೀಪದಲ್ಲಿರುವ ಎತ್ತರದ ಸ್ತಂಭಾಕಾರದ ಶಿಖರವೊಂದರ ಮೇಲಿಂದ ಕಾಣಸಿಗುವ ಸುತ್ತಲಿನ ಪ್ರಕೃತಿ ಸೊಬಗು ಅವರ್ಣನೀಯ ಆನಂದವನ್ನು ನೀಡುತ್ತದೆ. ಇಲ್ಲಿರುವ ವಿವಿಧ ಕೋನಾಕೃತಿಯ ನಿಸರ್ಗನಿರ್ಮಿತ ಶಿಲೆಗಳು ವೀಕ್ಷಕರನ್ನು ಕಲ್ಪನಾಲೋಕಕ್ಕೆ ಕರೆದೊಯ್ಯುತ್ತವೆ. ಸಮುದ್ರದ ಜಲಚರ ಜೀವಿಗಳ ಅವಶೇಷ ಸಂಗ್ರಹಕರಿಗೆ ಹೇಳಿ ಮಾಡಿಸಿದ ಸ್ಥಳವಿದಾಗಿದೆ. ಇಲ್ಲಿಯ ಶಿಲೆಗಳು ಬಸಾಲ್ಟ್ ಅಗ್ನಿಶಿಲೆಗಳಾಗಿದ್ದು, ಆರು ಕೋಟಿ ವರ್ಷಗಳ ಹಿಂದೆ ಸಂಭವಿಸಿದ ಜ್ವಾಲಾಮುಖಿಯಿಂದಾಗಿ ಭೂಗರ್ಭದಿಂದ ಹೊರಚಿಮ್ಮಿ ರೂಪುಗೊಂಡಿದ್ದು, 'ಸ್ತಂಭಾಕೃತಿಯ ಸಂದುಗಳು' ಎಂದು ಭೂವಿಜ್ಞಾನಿಗಳು ಈ ವೈಚಿತ್ರಕ್ಕೆ ಹೆಸರಿಟ್ಟಿದ್ದು, ವಿಶ್ವದ ವಿವಿಧೆಡೆಗಳಲ್ಲಿ ಈ ಬಗೆಯ ಶಿಲಾಸಾಮ್ರಾಜ್ಯವಿದೆ.

ಆ ಪೈಕಿ ಉತ್ತರ ಅಮೇರಿಕದ ಡೆವಿಲ್ಸ್‌ಟವರ್ ಎಂಬುದು ಪರಮಾದ್ಭುತವಾದ ಸ್ತಂಭಶಿಲಾಗೋಪುರವಾಗಿದ್ದು, ಅದು ೨೬೫ ಮೀ. ಎತ್ತರವಿರುವ ಅಂಶವನ್ನು ಕೆ. ಅನಂತರಾಮು, ತಮ್ಮ 'ದಕ್ಷಿಣದ ಸಿರಿನಾಡು' ಉದ್ಗ್ರಂಥದಲ್ಲಿ ಮನೋಜ್ಞವಾಗಿ ದಾಖಲಿಸಿದ್ದಾರೆ. ಮಲ್ಪೆಯ ತುಂಗಸಾಲಿಯಾನ ನಿಷ್ಣಾತ ಈಜುಗಾರರೆನಿಸಿದ್ದಾರೆ. ***ವಡಭಾಂಡೇಶ್ವರ:*** ಕೊಡವೂರಿಗೆ ಸೇರಿದ ಉಪಗ್ರಾಮ ಇದಾಗಿದ್ದು, ಅಲ್ಲಿರುವ ವಡಬಾಂಡ ಬಲರಾಮ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ತೀರದಲ್ಲೆ ಇರುವ ಈ ಗುಡಿ ಇತ್ತೀಚೆಗೆ ನವೀಕರಣಗೊಂಡಿದ್ದು, ಆಕರ್ಷಕವಾಗಿದೆ. ಕುಷ್ಠರೋಗ ಪೀಡಿತ ಭಾಂಡಮುನಿಗಳು ತಪಸ್ಸು ಮಾಡಿ ಸುಬ್ರಹ್ಮಣ್ಯನನ್ನು ಒಲಿಸಿಕೊಂಡು ಇಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದರೆ, ಮುಂದೆ ಮಧ್ವಾಚಾರ್ಯರು ಬಲರಾಮನನ್ನು ಪ್ರತಿಷ್ಠೆ ಮಾಡಿಸಿದರೆಂದು ತಿಳಿದುಬರುತ್ತದೆ. ಇಲ್ಲಿ ಮೀನಮಾಸದ ಬಿದಿಗೆಯಂದು ರಥೋತ್ಸವವಾಗುತ್ತದೆ. ಪ್ರತಿವರ್ಷ ಜನವರಿಯಲ್ಲಿ ಬರುವ ಎಳ್ಳಮಾವಾಸೆಯ ಸಮುದ್ರಸ್ನಾನಕ್ಕೆಂದು ದೂರದ ಊರುಗಳಿಂದ ಇಲ್ಲಿಗೆ ಭಕ್ತರು ಬರುತ್ತಾರೆ. ***ಕಲ್ಮಾಡಿ:*** ಇದೂ ಕೂಡ ಕೊಡವೂರಿಗೆ ಸೇರಿದ ಉಪಗ್ರಾಮವಾಗಿದ್ದು, ಅಲ್ಲಿರುವ ಸುಂದರವಾದ ತೆಲ್ಲಮಾರಿಸ್ (ಸಮುದ್ರತಾರೆ) ಚರ್ಚಿನಿಂದಾಗಿ ಪ್ರಸಿದ್ಧವಾಗಿದೆ. ಇಲ್ಲಿ ವೆಲ್ಲಂಕಣಿ ಮಾತೆಯನ್ನು ಉಪಾಸನೆ ಮಾಡಲಾಗುತ್ತದೆ. ಈ ಮಾತೆಯ ವಾರ್ಷಿಕ ಜಾತ್ರೆಯು ಎರಡು ದಿನಗಳ ಕಾಲ ಫೆಬ್ರವರಿ ಮಾಹೆಯಲ್ಲಿ ಜರುಗುತ್ತದೆ. **ಮಾಣಿಕೊಳಲು** : ತಾಲೂಕು ಕೇಂದ್ರ ಕುಂದಾಪುರದಿಂದ ಹಲಸನಾಡಿಗೆ ಹೋಗುವ ಮಾರ್ಗದಲ್ಲಿರುವ ಮಾಣಿಕೊಳಲಿನಲ್ಲಿ ಪುರಾತನ ಚೆನ್ನಕೇಶವ ದೇವಾಲಯವಿದೆ. ಅಲ್ಲಿರುವ ಚೆನ್ನಕೇಶವ ಶಿಲ್ಪವು ಸುಮಾರು ೯ನೆಯ ಶತಮಾನಕ್ಕೆ ಸೇರಿದ್ದೆಂದು ಪಿ. ಗುರುರಾಜಭಟ್ ಅಭಿಪ್ರಾಯಪಟ್ಟಿದ್ದಾರೆ.

**ಮಾರಣಕಟ್ಟೆ** : ತಾಲೂಕು ಕೇಂದ್ರ ಕುಂದಾಪುರದಿಂದ ೪೨ ಕಿ.ಮೀ. ದೂರದ ಕೊಲ್ಲೂರಿಗೆ ಹೋಗುವ ಮಾರ್ಗದಲ್ಲಿರುವ *ಚಿತ್ತೂರು* (ಜನಸಂಖ್ಯೆ: ೨,೯೧೪) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿದ್ದು, ಬ್ರಹ್ಮಲಿಂಗೇಶ್ವರ ದೇವ-ದೈವಸ್ಥಾನಗಳಿಂದಾಗಿ ಮಹತ್ವ ಪಡೆದಿದೆ. ಅಡ್ಡರಸ್ತೆಯಿಂದ ಎರಡು ಕಿ.ಮೀ. ಒಳಕ್ಕಾದಂತೆ ಇರುವ ಮಾರಣಕಟ್ಟೆಯು ಹಿಂದೆ ಜೈನಕೇಂದ್ರವಾಗಿರುವ ಸಾಧ್ಯತೆಗಳಿವೆ. ಬ್ರಹ್ಮಲಿಂಗೇಶ್ವರ ಗುಡಿಯ ಬಳಿ ದಡ್ಡೆ ಹೊಳೆಯು ಪಶ್ಚಿಮವಾಹಿನಿಯಾಗಿ ಹರಿದಿರುವುದರಿಂದ ಕ್ಷೇತ್ರಕ್ಕೆ ಪಾವಿತ್ರ್ಯ ಬಂದಿದೆ. ಇಲ್ಲಿಯ ಬ್ರಹ್ಮಲಿಂಗೇಶ್ವರ ಗುಡಿಯು ದಾರು ಕಟ್ಟಿಗೆಯ ನಿರ್ಮಾಣವಾಗಿದ್ದು, ಇತ್ತೀಚೆಗೆ ನಾಜೂಕಾಗಿ ಅದನ್ನು ನವೀಕರಿಸಲಾಗಿದೆ. ಇಲ್ಲಿ ಬ್ರಹ್ಮಲಿಂಗೇಶ್ವರ, ಶ್ರೀಚಕ್ರ, ಚಿಕುಟ್ಟೊ (ಬಾಲಚಿಕ್ಕು) ದೊಟ್ಟೆಗಾಲು ಚಿಕ್ಕು, ಮರ್ಲಚಿಕ್ಕು (ಬಗ್ಗುಚಿಕ್ಕು) ಹುಲಿದೇವರು, ಹಸ್ಲತಿಮ್ಮಿ ಮುಂತಾದ ವರ್ಣಮಯ ದಾರು ಮೂರ್ತಿಗಳಿವೆ. ಮೂಲ ಗುಡಿಯಲ್ಲಿ ಖಡ್ಗವನ್ನು ಎತ್ತಿಹಿಡಿದಿರುವ ಬ್ರಹ್ಮಲಿಂಗೇಶ್ವರನ ಭವ್ಯವಾದ ವಿಗ್ರಹವಿದ್ದು, ಇಕ್ಕೆಲಗಳಲ್ಲಿ ಶಂಕರಾಚಾರ್ಯರ ಜೊತೆಯಲ್ಲಿ ಬಂದ ಮಲಯಾಳಿ ನಟ ಹಾಗೂ ಯಕ್ಷಮ್ಮರಿದ್ದಾರೆ. ಇಲ್ಲಿಯ ಕಮಾನಿನಾಕಾರದ ಶ್ರೀಚಕ್ರ ಗುಡಿಯಲ್ಲಿ, ಕೊಲ್ಲೂರಿಗೆ ಹೋಗುತ್ತಿದ್ದ ಶಂಕರಾಚಾರ್ಯರು ಪ್ರತಿಷ್ಠಾಪಿಸಿದರೆಂದು ಹೇಳಲಾಗುವ ಭುವನೇಶ್ವರಿ ಯಂತ್ರವಿದ್ದು, ಅದನ್ನೇ ಈಗಲೂ ಭಕ್ತರು ಆರಾಧಿಸುತ್ತಾರೆ. ಹುಲಿದೇವರ ಸನ್ನಿಧಿಯ ಹೊರಭಾಗದಲ್ಲಿ, ಪ್ರತ್ಯೇಕ ಪೂಜೆ ಪುರಸ್ಕಾರಗಳಿರುವ ಶಿವನ ಗಣಗಳೆಂದು ಹೇಳಲಾಗುವ ಚೀನಿ ಭೂತಗಳಿವೆ. ಬ್ರಹ್ಮಲಿಂಗೇಶ್ವರನ ಸನ್ನಿಧಿಯಲ್ಲಿ ಆಣೆ-ಪ್ರಮಾಣ, ಹೊಯ್ಲು ಕೊಡುವುದು ಹಾಗೂ ವಾಕ್ಯ ತೀರ್ಮಾನಗಳು ಶ್ರದ್ಧಾಭಕ್ತಿಯಿಂದ ತೀರ್ಮಾನವಾಗುತ್ತದೆ. 'ಮಾರಣಕಟ್ಟೆಗೆ ಹೊಯ್ಲುಗು ಕೊಟ್ಟಿದೆ' ಎಂದು ಜಾಹಿರುಪಡಿಸುವ ಎಚ್ಚರಿಕೆ ಫಲಕಗಳನ್ನು ಹಾಕುವುದೂ ಎಷ್ಟೋ ಕಡೆ ಈಗಲೂ ರೂಢಿಯಲ್ಲಿ ಉಂಟು. ಇದು ಧರ್ಮಸ್ಥಳದ ವಾಕ್ಯ ತೀರ್ಮಾನ ಪದ್ಧತಿಯನ್ನು ನೆನಪಿಸುತ್ತದೆ. ಮಕರ ಸಂಕ್ರಾಂತಿಯಿಂದ ಮೂರು ದಿನಗಳ ಕಾಲ ವೈಭವೋಪೇತವಾಗಿ ನಡೆಯುವ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಢಕ್ಕೆ ಬಲಿ, ಗೆಂಡೆ (ಕೊಂಡ ಹಾಯುವ) ಸೇವೆಗಳಿದ್ದು, ಜಾತ್ರೆಯು ಕಡುಬಿನ ಪೂಜೆಯೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿಯ ಬ್ರಹ್ಮಲಿಂಗೇಶ್ವರ ದಶಾವತಾರ ಯಕ್ಷಗಾನ ಮೇಳ ಪ್ರಸಿದ್ಧವಾಗಿದೆ.

**ಮಾಳ** (ಜನಸಂಖ್ಯೆ: ೫,೫೬೮): ತಾಲೂಕು ಕೇಂದ್ರ ಕಾರ್ಕಳಕ್ಕೆ ಸುಮಾರು ೧೫ಕಿ.ಮೀ. ದೂರದಲ್ಲಿರುವ ಇದು, ಸಹ್ಯಾದ್ರಿಯ ಅಂಚಿಗೆ ಅಂಟಿಕೊಂಡಂತಿರುವ ದುರ್ಗಮ ಗ್ರಾಮ. ಮಲ್ಲಾರು ಹೊಳೆಯ ಸನಿಹವಿರುವ ಈ ಗ್ರಾಮದಿಂದ ಒಂದೂವರೆ ಕಿ.ಮೀ. ದೂರದ ಎಡಪಾಡಿಯಲ್ಲಿ ಪರ್ವತಗಳ ನಡುವೆ ಇರುವ

ಪರಶುರಾಮ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಅಲ್ಲದೆ ಗ್ರಾಮದಲ್ಲಿ ವಿಷ್ಣುಮೂರ್ತಿಗುಡಿ ಹಾಗೂ ಧೂಮಾವತಿ ದೈವಸ್ಥಾನಗಳಿವೆ. ಸಮಾಜ ಸೇವಾ ಧುರೀಣೆಯಾಗಿದ್ದು, ವಿಕ್ಟೋರಿಯಾ ರಾಣಿಯಿಂದ *õNdMhu0l0KIqgÑ#*ಪ್ರಶಸ್ತಿಯನ್ನೂ ಪಡೆದಿದ್ದ ಪಂಡಿತ ರಮಾಬಾಯಿ ಸರಸ್ವತಿ (೧೮೫೮–೧೯೨೨) ಈ ಗ್ರಾಮದವರು.

**ಮುಚ್ಲುಕೋಡು**: *ಬಡಗಬೆಟ್ಟು* (ಜನಸಂಖ್ಯೆ: ೬,೯೮೫) ಕಂದಾಯಗ್ರಾಮಕ್ಕೆ ಸೇರಿದ ಇದು ಅಲ್ಲಿರುವ ಸ್ಕಂಧಾಲಯದಿಂದಾಗಿ ಪ್ರಸಿದ್ಧಿಯಲ್ಲಿದೆ. ಉದ್ಯಾವರಕ್ಕೆ ಸನಿಹದಲ್ಲಿರುವ ಇದು ಉಡುಪಿ ಪರಿಸರದ ನಾಲ್ಕು ಪ್ರಸಿದ್ಧ ಸ್ಕಂದಾಲಯಗಳಲ್ಲಿ ಒಂದು. ಜಲಸಮೃದ್ಧಿಯ ಜಾಗದಲ್ಲಿ ಸ್ಕಂಧನನ್ನು ನೆಲೆಗೊಳಿಸುವುದು ಸಾಮಾನ್ಯ ಲಕ್ಷಣವಾಗಿದ್ದು, ಇಲ್ಲಿಯೂ ಸ್ಕಂದ ಪುಷ್ಕರಣಿ ಎಂಬ ಕಿರು ಜಲಾಶಯವಿದೆ. ಸೊಂಟದ ಮೇಲೆ ಎಡಗೈಯಿಟ್ಟು ಬಲಗೈಯಲ್ಲಿ ವೇಲಾಯುಧವನ್ನು ಹಿಡಿರುವ ಸ್ಕಂದನ ಮೂರ್ತಿ ಆಕರ್ಷಕವಾಗಿದ್ದು, ಬದಿಯಲ್ಲೇ ನಾಗಬನವೂ ಇದೆ. ವಾರ್ಷಿಕ ಷಷ್ಠಿ ಉತ್ಸವದ ಅಂಗವಾಗಿ ರಥೋತ್ಸವದಂದು ಬ್ರಾಹ್ಮಣ ಮುತ್ತೈದೆಯರ ಸಂತರ್ಪಣೆಯಾದ ಮೇಲೆ ಮಡೆಸ್ನಾನವಿರುತ್ತದೆ. ನಾಗದೋಷ ಪರಿಹಾರಕ್ಕಾಗಿ ಈ ಸೇವೆಯನ್ನು ಹರಕೆ ರೂಪದಲ್ಲಿ ಮಾಡಲಾಗುತ್ತದೆ. ***ಬೈಲೂರು:*** ಬಡಗಬೆಟ್ಟಿಗೆ ಸೇರಿದ ಇನ್ನೊಂದು ಉಪಗ್ರಾಮ ಇದಾಗಿದ್ದು, ಅಲ್ಲಿರುವ ದುರ್ಗಾಲಯವು ಉಲ್ಲೇಖಾರ್ಹವಾಗಿದೆ. ಮೀನಮಾಸದಲ್ಲಿ ದೇವಿಯ ತೇರನ್ನು ಎಳೆಯಲಾಗುತ್ತದೆ.

**ಮುದ್ರಾಡಿ** (ಜನಸಂಖ್ಯೆ: ೪,೧೯೬): ತಾಲೂಕು ಕೇಂದ್ರ ಕಾರ್ಕಳಕ್ಕೆ ಸ್ವಲ್ಪ ದೂರದಲ್ಲಿರುವ ಇದು ಹಿಂದೆ ಸಾವಂತರಸರ ಶಾಖೆಯೊಂದರ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ **'ಕಾಂಗ್ರೆಸ್ ಗ್ರಾಮ'** ಎಂದೇ ಪ್ರಸಿದ್ಧವಾಗಿದ್ದು, ಎಂ.ಡಿ. ಅಧಿಕಾರಿ, ಮುಂತಾದವರು ಇಲ್ಲಿಯವರು. ಮೂಡಬಿದ್ರಿಯ ಹೊಸಬಸದಿಯಲ್ಲಿರುವ ಸುಮಾರು ೧೪೭೧ರ ಶಾಸನದಿಂದ ಮುದ್ರಾಡಿಯು ಸ್ಥಳೀಯ ಸಾವಂತರ ನಿಯಂತ್ರಣಕ್ಕೆ ಒಳಪಟ್ಟಿದ್ದು, ಮೂಡಬಿದ್ರಿಯ ಗುರುಬಸದಿ ಹಾಗೂ ಹೊಸಬಸದಿಗಳಿಗೆ ಅಣ್ಣ ಸಾವಂತ ಹೆಗ್ಗಡೆಯು ಭೂದಾನ ನೀಡಿದ ಅಂಶ ಗೊತ್ತಾಗುತ್ತಿದ್ದು, ಅದರಲ್ಲಿ ಈ ಮನೆತನದ 'ವಂಶಾವಳಿ'ಯೂ ಲಭ್ಯವಿದೆ. ಕಳೆದ ಶತಮಾನದ ಉತ್ತರಾರ್ಧಭಾಗದಲ್ಲಿ ಸಮೀಪದ ಬಚ್ಚಪ್ಪು ಎಂಬ ತಾಣದಲ್ಲಿ ನಿರ್ಮಾಣ ಗೊಂಡಿರುವ ಆದಿಶಕ್ತಿ ದೇವಾಲಯ ಹಾಗೂ ಬ್ರಹ್ಮ–ಬೈದರ್ಕಳ ಗರಡಿಗಳಿಂದಾಗಿ ಹೆಚ್ಚು ಪ್ರಸಿದ್ಧವಾಗಿದೆ. ಆದಿಶಕ್ತಿ ದೇವಾಲಯದ ಮೇಲಂತಸ್ತಿನಲ್ಲಿರುವ ಶಯ್ಯಾಗೃಹದಲ್ಲಿ ಕಲಾತ್ಮಕವಾದ ಗಂಧದ ತೂಗು ಮಂಚವಿದೆ. ಗುಡಿಯ ಬದಿಯಲ್ಲಿ ಪುರುಷರುಂಡ ಸ್ತ್ರೀ ದೇಹವನ್ನುಳ್ಳ ನಾಲ್ಕು ಕೈಯಲ್ಲಿ ೪೮ ಆಯುಧಗಳನ್ನು ಹೊಂದಿರುವ ಧೂಮಾವತಿ ಬಂಟ ಹಾಗೂ ಕಲ್ಕುಡ–ಕಲ್ಕುರ್ಟಿ ದೈವಗಳ ಪ್ರತ್ಯೇಕ ಸ್ಥಾನಗಳಿವೆ. ದೇವಿ ಗುಡಿಯ ಎದುರಿಗಿರುವ ಬ್ರಹ್ಮ–ಬೈದರ್ಕಳ ಗರಡಿಯಲ್ಲಿ ಬ್ರಹ್ಮ, ಕೋಟಿ–ಚನ್ನಯ, ಕುಜುಂಬ ಕಾಂಜನ, ಕೊಡಮಣಿತ್ತಾಯ ಹಾಗೂ ಕುಕ್ಕಿನಂತಾಯ ದೈವಗಳ ದಾರು ಶಿಲ್ಪಗಳಿವೆ. ಸನಿಹದಲ್ಲೇ ನೂತನ ನಾಗ ಶಿಲ್ಪಗಳಿಂದ ಕೂಡಿದ ನಾಗಬನವಿದೆ. ಏಪ್ರಿಲ್ ತಿಂಗಳಲ್ಲಿ ವಿವಿಧ ದೈವಗಳಿಗಾಗಿ ಒಂದು ವಾರದ ನೇಮೋತ್ಸವವಿರುತ್ತದೆ. ನವರಾತ್ರಿ ಸಂದರ್ಭದಲ್ಲಿ ಆದಿಶಕ್ತಿಯನ್ನು ವಿವಿಧ ಸಾಂಸ್ಕೃತಿಕ ಕಾರ್ಯ ಕ್ರಮಗಳೊಂದಿಗೆ ಆರಾಧಿಸಲಾಗುತ್ತದೆ.

**ಮೂಡಾರು** (ಜನಸಂಖ್ಯೆ: ೫,೭೯೭): ತಾಲೂಕು ಕೇಂದ್ರ ಕಾರ್ಕಳದಿಂದ ೧೪ ಕಿ.ಮೀ. ದೂರದಲ್ಲಿರುವ ಇದು, ಅಲ್ಲಿರುವ  ಪ್ರಾಚೀನ ಅಪ್ಪಾಯಿ (ಅನಂತನಾಥ) ಬಸದಿಯಿಂದಾಗಿ ಪ್ರಸಿದ್ಧವಾಗಿದ್ದು, ಅದನ್ನಿಂದು ಜೀರ್ಣೋದ್ದಾರ ಮಾಡಲಾಗಿದೆ. ಮೂಡಾರಿನ ಉಪಗ್ರಾಮವಾದ ದಿಧಿ(ಡಿಡಿ)ಂಬರಿಯು ಭೂತಾರಾಧನೆಯ ಪ್ರಮುಖ ನೆಲೆಯಾಗಿದ್ದು, ಕೊಡಮಣಿತ್ತಾಯ, ಕುಕ್ಕಿನಂತಾಯ, ಧರ್ಮರಸು, ಬ್ರಹ್ಮ–ಬೈದರ್ಕಳು ಹಾಗೂ ಮಾಣಿಬಾಲೆ ದೈವಗಳ ನೆಲೆಯಾಗಿದ್ದು, ಕಾಲಾವಧಿ ನೇಮೋತ್ಸವವಿರುತ್ತದೆ.

**ಮೂಲೂರು** (ಜನಸಂಖ್ಯೆ: ೨,೮೫೪):  ಉಡುಪಿ ಪಟ್ಟಣದಿಂದ ೧೬ ಕಿ.ಮೀ. ದೂರದಲ್ಲಿ, ಉಡುಪಿ–ಮಂಗಳೂರು ಹೆದ್ದಾರಿಯಲ್ಲಿರುವ ಮುಖ್ಯಸ್ಥಳ. ಸುಮಾರು ೧೦ನೆಯ ಶತಮಾನಕ್ಕೆ ಸೇರಿದ

ಶಾಸನವೊಂದರಲ್ಲಿ ಊರ ಹೆಸರು ಮೂಲಾಪುರ ಎಂದಿದೆ. ಇಲ್ಲಿಯ ಬೊಬ್ಬರ್ಯ ಗುಡಿಯಲ್ಲಿರುವ ಸುಮಾರು ೪೮ ಸೆ.ಮೀ ಎತ್ತರದ ಬುದ್ಧನ ಶಿಲ್ಪವು ಸುಮಾರು ೧೧ನೆಯ ಶತಮಾನಕ್ಕೆ ಸೇರಿದ್ದು, ಉಲ್ಲೇಖಾರ್ಹವಾಗಿದೆ.

**ಮೆಕ್ಕೆಕಟ್ಟೆ :** ಬಾರಕೂರಿಗೆ ಸುಮಾರು ೧೨ ಕಿ.ಮೀ. ದೂರದಲ್ಲಿರುವ *ಶಿರಿಯಾರ* (ಜನಸಂಖ್ಯೆ: ೪೩೩೬) ಕಂದಾಯ ಗ್ರಾಮಕ್ಕೆ ಇದು ಸೇರಿದ್ದು, ನಂದಿಕೇಶ್ವರ ದೇವಾಲಯ ಹಾಗೂ ನೂರಾರು ವರ್ಣಮಯ ವೈವಿಧ್ಯಮಯ ಕಾಷ್ಠ ವಿಗ್ರಹಗಳಿಂದಾಗಿ ಪ್ರಸಿದ್ಧವಾಗಿದೆ. ಜಿಲ್ಲಾ ಕೇಂದ್ರ ಉಡುಪಿಯಿಂದ ೨೭ ಕಿ.ಮೀ. ಉತ್ತರಕ್ಕೆ ಇರುವ ಇಲ್ಲಿಯ ದೇವಾಲಯದ ಪ್ರವೇಶದ್ವಾರದ ಇಕ್ಕೆಲದಲ್ಲಿರುವ ಶಂಕಪಾಣಿ–ಶೂಲಪಾಣಿ ದ್ವಾರಪಾಲಕರನ್ನು ದಾಟಿ ಒಳಹೊಕ್ಕರೆ, ಗರ್ಭಗೃಹದಲ್ಲಿ ವೃಷಭರೂಪಿ ನಂದಿಕೇಶ್ವರನ ಬೃಹತ್ ಕಾಷ್ಠ ಬಿಂಬವಿದ್ದು, ಜೊತೆಗೆ ಪಾರ್ಶ್ವಮುಖ ನಂದಿ, ತ್ರಿಮುಖ ನಂದಿ, ಪಂಚಮುಖ ನಂದಿ, ಆಕಾಶನಂದಿ, ಒಕ್ಕೋಣ, ವೀರಭದ್ರ ಮುಂತಾದ ಕಾಷ್ಠ ವಿಗ್ರಹಗಳ ವಿಸ್ಮಯ ಲೋಕವೇ ಇದೆ. ಅದರಲ್ಲೂ ವೀರಭದ್ರ ಮೂರ್ತಿಯಂತೂ ಆಕರ್ಷಕವಾಗಿದೆ. ಗರ್ಭಗುಡಿಯ ಮಗ್ಗಲಲ್ಲೇ ನಾಗಕಿರೀಟಧಾರಿ ಜೋಗಿ ಪುರುಷ ಹಾಗೂ ಮರ್ಕಟಗಳ ಮಿಥುನ ಮೂರ್ತಿಗಳಿವೆ. ಗರ್ಭಗೃಹದ ಮೇಲಂತಸ್ತಿನಲ್ಲೂ ಕಾಷ್ಠಮೂರ್ತಿಗಳ ವೈವಿಧ್ಯಮಯ ಸಂಗ್ರಹವಿದೆ. ಸ್ಥಳೀಯವಾಗಿ ಇವನ್ನು 'ಉರು' ಎಂದು ಕರೆಯುತ್ತಿದ್ದು, 'ರೂಪು' ಎಂಬ ಪದವೇ 'ಉರು' ಆಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಗರ್ಭಗೃಹದ ಬದಿಯ ಮೊಗಸಾಲೆಯೊಳಗೆ ಇರುವ ಕಾಷ್ಠಮೂರ್ತಿಗಳನ್ನು ಹಲಸು–ಹೆಬ್ಬಲಸು ಮರಗಳಿಂದ ರೂಪಿಸಲಾಗಿದ್ದು, ಅಕರಾಳ–ವಿಕರಾಳ ಆಕಾರದಿಂದಲೂ, ಜೋರಾದ ಬಣ್ಣಗಾರಿಕೆಯಿಂದಲೂ, ರಾಕ್ಷಸಗಾತ್ರದಿಂದಲೂ, ಇವು ವೀಕ್ಷಕರಲ್ಲಿ ದಿಗ್ಭ್ರಾಂತಿಯನ್ನುಂಟು ಮಾಡುತ್ತವೆ. ಗುಡಿಯ ಮಂಟಪದಲ್ಲಿ ಸುಮಾರು ಎರಡರಿಂದ ೧೫ ಅಡಿ ಎತ್ತರದ ಹುಲಿದೇವರು, ಖೇಚರಾಹುತ, ಕಾಲಭೈರವ, ಜಟ್ಟಾಂಗ ಭೈರವ, ಮುಂತಾದ ದೇವರು; ಸಾಸ್ತಾನ, ಉಮ್ಮಲ್ತಿ, ಪಂಜುರ್ಲಿ, ಗರುಡ, ಸಣ್ಣಮ್ಮ, ಹೊನ್ನಮ್ಮ, ಉಮ್ಮಲ್ತಿ ಭೂತ, ಬಾಗಿಲು ಬೊಬ್ಬರ್ಯ ಮುಂತಾದ ದೈವಬೊಂಬೆಗಳಿವೆ. ಮುಖವನ್ನು ಉನ್ಮುಖವಾಗಿಸಿಕೊಂಡಿರುವ, ಬಾಯಿ ಕಿಸಿದುಕೊಂಡಿರುವ, ನಾಲಗೆ ಹಿರಿದುಕೊಂಡಿರುವ ವಿಚಿತ್ರ ಬಗೆಯ ನಂದಿಮೂರ್ತಿಗಳಿಲ್ಲಿವೆ. ನಂದಿ ಶಿರ–ಮಾನವ ಶರೀರ ನಂದಿರೂಢನಾಗಿ ನಗಾರಿ ಬಾರಿಸುತ್ತಿರುವ ಮಾನವ, ಮುಸಲ್ಮಾನರ ಟೋಪಿ ಧರಿಸಿ, ಕೋವಿ ಹಿಡಿದಿರುವ ವಿಚಿತ್ರ ಸಿಪಾಯಿ, ಬೃಹದ್ಗಾತ್ರದ ಆನೆಯ ಮೇಲೆ ಕುಳಿತ ವೀರ, ಋಷಿ–ಮುನಿಗಳೇ ಮುಂತಾದ ಆಕರ್ಷಕ ಕಾಷ್ಠಮೂರ್ತಿಗಳ ಪಟ್ಟಿಯನ್ನೇ ಕೆ. ಅನಂತರಾಮು ನೀಡಿದ್ದಾರೆ. ಹೊರಗಿನ ಗುಡಿಯಲ್ಲಿ ಬೇಟೆನಾಯಿಗಳೊಂದಿಗಿರುವ ಹಸ್ರತಿಮ್ಮನಿದ್ದು, ಒಳಗೆ ಕೋಲೆ (ಕುಲೆ)ಭೂತಗಳ ತಂಡವೇ ಇದೆ. ಅಲ್ಲದೆ ಬಾಗಿಲ ಬೊಬ್ಬರ್ಯನ ಶಿಲಾಮೂರ್ತಿಯೂ ಇದೆ. ನೆರೆಯ ಶಿರಿಯಾರ ಗ್ರಾಮದ ಜಂಬೂರು ಎಂಬ ಸ್ಥಳದಲ್ಲಿ ಜಾಬಾಲಿ ಮುನಿಯು ಶಿವನನ್ನು ಕುರಿತು ಹಿಂದೆ ತಪಸ್ಸು ಮಾಡಿದಾಗ, ಮೆಚ್ಚಿದ ಶಿವನು, ಧರೆಗಿಳಿದು ಬಂದಾಗ, ಅವನ ಗಣಗಳು ಹಿಂಬಾಲಿಸಿದವಂತೆ. ಆಗ ಶಿವನು ಅವನ್ನು ಅಲ್ಲೇ ಇರಲು ಹೇಳಿ ಜಂಬೂರಿಗೆ ತಾನೊಬ್ಬನೇ ಹೋಗಿ ದರ್ಶನ ನೀಡಿ ಉದ್ಭವ ಲಿಂಗವಾಗಿ ನೆಲೆಸಿ ಮಹಾಲಿಂಗೇಶ್ವರನೆಂದು ಖ್ಯಾತಿ ಪಡೆದನೆಂದು ಸ್ಥಳಪುರಾಣ ತಿಳಿಸುತ್ತದೆ. ಇಲ್ಲಿರುವ ಕಾಷ್ಠಶಿಲ್ಪಗಳನ್ನು ೧೯೬೪–೭೦ರ ಅವಧಿಯಲ್ಲಿ ಬಸರೂರು ಹಾಗೂ ಉಪ್ಪುಂದ ಗ್ರಾಮದ ಗುಡಿಗಾರರು ಕೆತ್ತಿದ್ದಾರೆ. ಲೊಡ್ಡಾಗಿದ್ದ ಇಲ್ಲಿನ ಅನೇಕ ಬೊಂಬೆಗಳು ನಾಡಿನ ವಿವಿಧ ವಸ್ತುಸಂಗ್ರಹಾಲಯಗಳನ್ನು ಸೇರಿವೆ. ಪ್ರತಿವರ್ಷ ನಡೆಯುವ ಐದು ದಿನಗಳ ಜಾತ್ರೆಯಲ್ಲಿ ಮೊದಲು ಹಸ್ರತಿಮ್ಮನ ಆಶ್ರಯದಲ್ಲಿ ಮಾರಿಪೂಜೆ ಮಾಡಲಾಗುತ್ತದೆ. ಅನಂತರ ಮಾರನೆ ದಿನ ರಾತ್ರಿ ನಡೆಯುವ ಗೆಂಡೆಸೇವೆ (ಕೊಂಡ ಹಾಯುವುದು ಮೇಲ್ವರ್ಗದವರಿಗೊಂದು ಹಾಗೂ ಮಿಕ್ಕವರ್ಗದವರಿಗೊಂದು) ಯಲ್ಲಿ ಸುಮಂಗಲಿಯರು (ಅವಿವಾಹಿತರು ಹಾಗೂ ವಿಧವೆಯರನ್ನು ಹೊರತುಪಡಿಸಿ) ಕೊಂಡಹಾಯುತ್ತಿದ್ದು, ಪುರುಷರು ಹಾಯುವಂತಿಲ್ಲ. ಬೆಳಗಿನ ಜಾವದಲ್ಲಿ ಢಕ್ಕೆ ಬಲಿ ಸೇವೆಯಾಗುತ್ತದೆ. ನಾಲ್ಕನೆಯ ದಿನ ಶೆಡಿ (ಸಿಡಿ) ಸೇವೆ ಇನ್ನೊಂದು ವಿಶೇಷ.

**ವಂಡಾರು** (ಜನಸಂಖ್ಯೆ: ೧,೪೪೪): ಉಡುಪಿ ಪಟ್ಟಣಕ್ಕೆ ಸ್ವಲ್ಪ ದೂರದಲ್ಲಿರುವ ಇದು, ಅಲ್ಲಿ ನಡೆಯುವ ಜೋಡುಕರೆ ಕಂಬಳದಿಂದಾಗಿ ಪ್ರಸಿದ್ಧವಾಗಿದೆ. ಮಿಗಿಲಾಗಿ ಹಿಂದೆ ಸ್ಥಳೀಯ ಹೆಗ್ಗಡೆಗಳ ಬೀಡಾಗಿ ಮೆರೆದಿರುವ ಸ್ಥಳ. ನೆಗಳೆಬೀಡು ಎಂದು ಕರೆಯಲ್ಪಡುವ ಸ್ಥಳದಲ್ಲಿರುವ ಹೆಗ್ಡೆ ಅರಸರ ಅರಮನೆ ಸಂಪೂರ್ಣ ಕಾಷ್ಠಮಯವಾಗಿದೆ. ಅರಮನೆಯ ಹೊರಗೆ ಎರಡು ಗುಡಿಗಳಿದ್ದು, ಒಂದರಲ್ಲಿ ಸಪ್ತಲಿಂಗಗಳಿದ್ದು, ಹಿಂಬದಿಯಲ್ಲಿ ನೆಗಳೆ/ನಿಗಳ ಎಂದು ಕರೆಯುವ ಮೊಸಳೆಯಂತಹ ಪ್ರಾಣಿಯನ್ನು ಬಿಡಿಸಲಾಗಿದೆ. ಇಲ್ಲಿರುವ ಲಿಂಗಗಳು ಪಂಚಪಾಂಡವರು, ದ್ರೌಪದಿ ಹಾಗೂ ಕೃಷ್ಣರಿಗೆ ಪ್ರತೀಕವೆಂದು ಹೇಳಲಾಗುತ್ತದೆ. ಐತಿಹ್ಯವೊಂದರ ಪ್ರಕಾರ, ವನವಾಸ ಕಾಲದಲ್ಲಿ ಕೋಟೇಶ್ವರಕ್ಕೆ ಬಂದಿದ್ದ ಪಾಂಡವರು, ಒಂದೇ ರಾತ್ರಿಯಲ್ಲಿ ಅಲ್ಲಿನ ಕೆರೆಯನ್ನು ಕಟ್ಟಿಸಿ, ನೆಗಳೆಯೊಂದರ ಮೇಲೆ ಕುಳಿತು, ಕೆರೆಯೊಳಗಿನಿಂದ ಸುರಂಗಮಾರ್ಗವಾಗಿ, ವಂಡಾರಿಗೆ ಬಂದು, ಈಗಿನ ಕಂಬಳಗದ್ದೆಯ ಬಳಿ ಹೊರಬಂದು ಒಂದೇ ರಾತ್ರಿಯಲ್ಲಿ ಗುಡ್ಡ ಕಡಿದು, ಕಂಬಳಗದ್ದೆ ನಿರ್ಮಾಣಮಾಡಿದರೆಂದು ಹೇಳಲಾಗುತ್ತದೆ. ಆ ನಂತರ ಪಾಂಡವರು ನೆಗಳೆಯನ್ನು ಇಲ್ಲಿನ ಬಾವಿಯಲ್ಲಿ ನೆಲೆಗೊಳಿಸಿ ಹೋದರೆಂದು ಹೇಳಲಾಗುತ್ತದೆ. ಇದರಿಂದಾಗಿ ವಂಡಾರಿನಲ್ಲಿ ಕಂಬಳ ನಡೆಯುವಾಗ, ಕೋಟಿ ತೀರ್ಥದ ನೀರು ಕೊಂಚ ರಾಡಿಯಾಗುತ್ತದಂತೆ! ಅದೇ ರೀತಿ ಕೋಟೇಶ್ವರದಲ್ಲಿ ತೇರೆಳೆದಾಗ ಇಲ್ಲಿನ ಕಂಬಳ ಗದ್ದೆಯಲ್ಲಿ ಧೂಳೇಳುತ್ತದೆಂಬ ಪ್ರತೀತಿ ಇದೆ. ಇಲ್ಲಿರುವ ತುಳಸಮ್ಮನ ಗುಡಿಯಲ್ಲಿ ದುರ್ಗಾಪರಮೇಶ್ವರಿಯನ್ನು ಕಳಶ–ಕನ್ನಡಿಗಳ ರೂಪದಲ್ಲಿ ಆರಾಧಿಸಲಾಗುತ್ತದೆ. ಅರಮನೆಯಲ್ಲಿ ಅಂಬಾಗಿಲು ಎಂದು ಕರೆಯಲಾಗುವ ತೆರೆದ ಗದ್ದುಗೆಮನೆ. ಒಂಬತ್ತು ಎಕರೆ ವಿಸ್ತೀರ್ಣದ ಕಂಬಳಗದ್ದೆ, ಇಲ್ಲಿನ ವಿಶೇಷವಾಗಿದೆ. ಅರಮನೆಯ ಗರಡಿ ಮನೆಯಲ್ಲಿ ಪಟ್ಟದ ಅರಸರ ಪಂಚಲೋಹದ ಮೂರ್ತಿ ಇದ್ದು, ಅದಕ್ಕೆ ೧೨ ವರ್ಷಗಳಿಗೊಮ್ಮೆ ಪುನರ್ಪಟ್ಟ ಮಾಡಲಾಗುತ್ತದೆ. ವಿಶಾಲವಾದ ಅರಮನೆಯಲ್ಲಿ ಕಂಬಳದ ಕೋಣಗಳಿಗಾಗಿ ಹಟ್ಟಿಯಿದೆ. ನವರಾತ್ರಿ ಪೂಜೋತ್ಸವಗಳಿಗಾಗಿ ಮೀಸಲಾದ ವಿಶೇಷ ಪೂಜಾಗೃಹಗಳಿವೆ. ನಾಗಸನ್ನಿಧಿಯೂ ಇದೆ. ಕೊಡಿ ತಿಂಗಳಲ್ಲಿ ನಡೆಯುವ ಜಾತ್ರೆಯು ವಂಡಾರು ಗ್ರಾಮದ ಮುಖ್ಯ ಜಾತ್ರೆಯಾಗಿದ್ದು, ಆ ಸಂದರ್ಭದಲ್ಲೇ ಕಂಬಳವೂ ನಡೆಯುತ್ತದೆ. ಆರು ದಿನಗಳ ಈ ಜಾತ್ರೆಯನ್ನು ಅರಮನೆಯವರೇ ನಡೆಸುತ್ತಿದ್ದು, ಮೂರನೆಯ ದಿನ ನೆರೆಹೊರೆ ಗ್ರಾಮದ ರೈತರು ತಮ್ಮ ರಾಸುಗಳನ್ನು ಅಲಂಕರಿಸಿಕೊಂಡು ಕಂಬಳಗದ್ದೆಯಲ್ಲಿ ಓಡಿಸಿ, ಹರಕೆ ಸಲ್ಲಿಸುತ್ತಾರೆ. ಅಂದು ಸಂಜೆ ಹೆಗ್ಡೆಯವರ ಜೋಡು ಕೋಣಗಳನ್ನು ಕಂಬಳ ಗದ್ದೆಯಲ್ಲಿ ಓಡಿಸಿದ ನಂತರ ಪಟ್ಟದರಸರ ಪಂಚ ಲೋಹದ ಮೂರ್ತಿಯನ್ನು ರಥದಲ್ಲಿಟ್ಟು ಒಂದು ಸುತ್ತು ಮೆರೆಸಲಾಗುತ್ತದೆ. ನಾಲ್ಕನೆಯ ದಿನ ತುಳಸಮ್ಮನ ಗುಡಿ ಬಳಿ ದರ್ಶನ, ಗೆಂಡೆಸೇವೆ ಮುಂತಾದವು ಜರುಗುತ್ತವೆ. ಐದನೆಯ ದಿನ ಕಂಬಳಗದ್ದೆಗೆ ಬೀಜ ಬಿತ್ತುವ ಕಾರ್ಯವಾಗುತ್ತದೆ. ಆರನೆಯ ದಿನ ಸಮೀಪದ ಹಾಡಿಯಲ್ಲಿ ಕೋಳಿ ಅಂಕ ನಡೆಯುವುದರೊಂದಿಗೆ ಜಾತ್ರೆ ಮುಗಿಯುತ್ತದೆ. ಈ ಜಾತ್ರೆಯಲ್ಲಿ ಕುಡುಬಿಯರು ಅಧಿಕ ಸಂಖ್ಯೆಯಲ್ಲಿ ಸೇರುತ್ತಾರೆ.

**ವಡ್ಡರ್ಸೆ** (ಜನಸಂಖ್ಯೆ: ೧೯೯೪): ಉಡುಪಿ ಪಟ್ಟಣದಿಂದ ಐದು ಕಿ.ಮೀ. ಅಂತರದಲ್ಲಿರುವ ಇದು ಹಿಂದೆ ರಾಜಧಾನಿ ಪಟ್ಟಣವಾಗಿ ಮೆರೆದಿದ್ದು, ಅದರ ಕುರುಹಾಗಿ, ಅರಮನೆಯ ಅವಶೇಷಗಳನ್ನು ಇಲ್ಲಿ ಕಾಣಬಹುದಾಗಿದೆ. ಮಿಗಿಲಾಗಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಕಲ್ಗೋರಿ ಸಮಾಧಿ ಹಾಗೂ ಮೃತ್ಪಾತ್ರೆಯ ಅವಶೇಷಗಳನ್ನು ಅ. ಸುಂದರ ಅವರು ಬಹಳ ಹಿಂದೆಯೇ ಬೆಳಕಿಗೆ ತಂದಿದ್ದು, ಅವು ಕ್ರಿಪೂ. ೮೦೦–೨೦೦ ನಡುವಣ ಕಾಲದವಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿಯ ಮಹತೋಭಾರ ಮಹಾಲಿಂಗೇಶ್ವರ ದೇವಾಲಯವು ಸುಮಾರು ಎಂಟನೆಯ ಶತಮಾನದಷ್ಟು ಪುರಾತನ ಆಲಯವಾಗಿದ್ದು, ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಈ ಗುಡಿಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಐತಿಹ್ಯವೊಂದಿದ್ದು, ಆ ಪ್ರಕಾರ ಜಾತ್ರೆಯಲ್ಲಿ ಕ್ಷೌರಿಕರೇ ದೇವರಿಗೆ ಕೊಡೆ ಹಿಡಿಯುವ ಸಂಪ್ರದಾಯ ಈಗಲೂ ರೂಢಿಯಲ್ಲಿದೆ. ಮುಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ ಶಾಸನ, ವೊಡರಸಿ ದೇವರಿಗೆ ನಾಗಂಡುಗ ಭೂಮಿಯನ್ನು ದಾನ ನೀಡಿದ್ದನ್ನು ದಾಖಲಿಸಿದೆ. ಊರ ಒಳಗಡೆ ಎಡಕ್ಕೆ ಅಮ್ಮನವರ ಗುಡಿ, ಬಲಕ್ಕೆ ಬ್ರಹ್ಮಲಿಂಗೇಶ್ವರ ಹಾಗೂ ನಾಲ್ಕು ದಿಕ್ಕಲ್ಲೂ ಬೊಬ್ಬರ್‍ಯನ ಗುಡಿಗಳಿದ್ದು, ಹಿಂಬದಿಯಲ್ಲಿ ಅರಮನೆಯ ಕುರುಹುಗಳಿವೆ.

**ವರಂಗ** (ಜನಸಂಖ್ಯೆ: ೩೯೯೨) : ತಾಲೂಕು ಕೇಂದ್ರ ಕಾರ್ಕಳದಿಂದ ೨೧ ಕಿ.ಮೀ. ಅಂತರದಲ್ಲಿರುವ ಇದೊಂದು ಪುರಾತನ ಜೈನ ತೀರ್ಥಕ್ಷೇತ್ರ. ವರಂಗವು ನಾಲ್ಕು ದಿಕ್ಕಲ್ಲೂ ಮಾಚಿಬೆಟ್ಟ, ಕೆಲ್ಕಿಲ, ಕಾಟಿಕಲ್ಲು, ಕವರು ಹಾಗೂ ಪಡುಕೋಡೂರು ಹೊಳೆಗಳಿಂದ ಆವೃತ್ತವಾಗಿರುವ ದ್ವೀಪ. ಜೈನ ಹೆಗ್ಗಡೆಗಳ ಆಡಳಿತ ಕ್ಕೊಳಪಟ್ಟಿದ್ದ ಪ್ರಮುಖ ತಾಣ. ಕೆರೆ ನಡುವಣ ಚತುರ್ಮುಖ ಬಸದಿ, ಮಠದ ಬಸದಿ, ನೇಮಿನಾಥ ಬಸದಿ ಹಾಗೂ ಜೈನ ಮಠಗಳನ್ನು ಹೊಂದಿದ್ದು, ಆಲುಪ, ಶಾಂತಾರ ಹಾಗೂ ಭೈರರಸರ ಆಡಳಿತವನ್ನು ಕಂಡ ನೆಲೆ. ನೆರೆಯ ಅಲೆವೂರು ಕುರುಳಿಕುಂದ ಹಾಗೂ ವರಂಗ ನಡುವಣ ಸಂಬಂಧವನ್ನು ಕೋಟಿಕೂಟದ ಸಂಬಂಧವೆಂದು ವರಂಗದ ಶಾಸನವೊಂದು ವರ್ಣಿಸಿದೆ. ಊರ ಸರೋವರದ ನಡುವೆ ಇರುವ ಕಿರುಪ್ರಮಾಣದ ಚತುರ್ಮುಖ ಬಸದಿಯು ಆಕರ್ಷಕ ವಾಗಿದ್ದು, ಅದನ್ನು ದೋಣಿ ತೆಪ್ಪಗಳ ಮೂಲಕ ತಲುಪಬಹುದಾಗಿದೆ. ಬಸದಿಯನ್ನು ನಾಲ್ಕು ದಿಕ್ಕು ಗಳಿಂದಲೂ ಪ್ರವೇಶಿಸಬಹುದಾದ ಆಕರ್ಷಕ ದ್ವಾರಗಳಿಗೆ ಸೋಪಾನವಿದೆ. ಪ್ರಧಾನ ಗರ್ಭಗೃಹದಲ್ಲಿ ಒಂದೇ ಪೀಠದ ಮೇಲೆ ನಾಲ್ಕು ದಿಕ್ಕುಗಳತ್ತ ಮುಖಮಾಡಿ ನಿಂತಿರುವ ಪಾರ್ಶ್ವನಾಥ, ಅನಂತನಾಥ, ನೇಮಿನಾಥ ಹಾಗೂ ಶಾಂತಿನಾಥ ತೀರ್ಥಂಕರರ ಸುಂದರ ಶಿಲ್ಪಗಳಿವೆ. ದೇವಾಲಯದ ಹಿಂಬದಿಯಲ್ಲಿರುವ ಸಹ್ಯಾದ್ರಿ ಶ್ರೇಣಿಯ ಹಸಿರು, ಕಣ್ಣಿಗೆ ಮುದ ನೀಡುತ್ತದೆ. ಶಿಖರಪಂಕ್ತಿಯಲ್ಲಿರುವ ತೀರ್ಥಕಲ್ಲು ಗುಡ್ಡದ ನಡುವಣ ಗಣಾಧರತೀರ್ಥ ಎಂಬ ತೊರೆಯ ನೀರು ಮಳೆಗಾಲದಲ್ಲಿ ಜಲಪಾತದಂತೆ ಧುಮ್ಮಿಕ್ಕಿ ಹರಿದರೆ ಉಳಿದ ಸಮಯದಲ್ಲಿ ಶಾಂತವಾಗಿ ಹರಿದು ಬಂದು ಸರೋವರವನ್ನು ಸಮೃದ್ಧ ವಾಗಿಸಿದೆ. ಆಷಾಢ ಅಮಾವಾಸ್ಯೆಯಂದು ಜೈನರು ಗಣಾಧರತೀರ್ಥದಲ್ಲಿ ಮಿಂದು, ಗಣಾಧರ ಪಾದವನ್ನು ಪೂಜಿಸಿ ಬರುವ ಸಂಪ್ರದಾಯವಿದೆ. ಈ ಬಸದಿಯಲ್ಲೇ ಇರುವ ಪದ್ಮಾವತಿ ಯಕ್ಷಿಯ ಸನ್ನಿಧಾನದಲ್ಲಿ ಪದ್ಮಾವತಿಯ ಆಕರ್ಷಕ ಬಿಂಬವಿದ್ದು, ಅವಳೇ ಇಂದು ಪ್ರಧಾನವಾಗಿ ಆರಾಧಿಸಲ್ಪಡುತ್ತಿದ್ದಾಳೆ. ಬಸದಿಯ ಸನಿಹದಲ್ಲಿ ನಾಗರಕಟ್ಟೆ ಹಾಗೂ ಕ್ಷೇತ್ರಪಾಲರ ನೆಲೆಗಳ ಜೊತೆಗೆ ಸಣ್ಣ ಬಾವಿಯೂ ಇದೆ. ಕಾರ್ಕಳದ ಚತುರ್ಮುಖ ಬಸದಿಯನ್ನು ನೆನಪಿಸುವ ಈ ಬಸದಿಗೆ ಬರುವ ಭಕ್ತರು ಸರೋವರದಲ್ಲಿರುವ ವಿವಿಧ ವರ್ಣದ ಮೀನುಗಳಿಗಾಗಿ ಹುರುಳಿ ಹಾಗೂ ಅಕ್ಕಿಯನ್ನು ಚೆಲ್ಲುತ್ತಾರೆ. ಆಲುಪ ಒಂದನೆಯ ಕುಲಶೇಖರ (೧೦೬೦–೧೧೨೦)ನ ರಾಣಿ ಜಾಕಲಮಹಾದೇವಿಯು ದೊಡ್ಡದೊಂದು ತಟಾಕ ನಿರ್ಮಿಸಿದ ಉಲ್ಲೇಖ ಶಾಸನವೊಂದರಲ್ಲಿದ್ದು, ಅದೇ ಕೆರೆಬಸದಿಯಿರುವ ಈ ತಟಾಕವಾಗಿರುವಂತೆ ತೋರುತ್ತದೆ. ಶಾಂತಾರ ಅರಸ ಕುಂದ(ಡ)ಣ (೧೨೨೦–೩೦)ನ ಕಾಲಕ್ಕೆ ಸೇರಿದ ಶಾಸನವೊಂದು ವರಾಂಗದ ನೇಮೀಶ್ವರ ಬಸದಿಯಲ್ಲಿ ಲಭಿಸಿದೆ. ಅದರ ಪ್ರಕಾರ ವರಂಗದ ತೀರ್ಥವು ಪವಿತ್ರ ಆದಿತೀರ್ಥ ವಾಗಿದ್ದು, ಹಿಂದೆ ವರಂಗರಾಯನು ಮಾಡಿದ್ದ ಧರ್ಮಕಾರ್ಯವನ್ನು ಕುಂಡಣ ದೊರೆಯು ಸಂರಕ್ಷಿಸಿದನೆಂದು ಗೊತ್ತಾಗುತ್ತದೆ. ವರಂಗಕ್ಕೆ ಎರಡು ಮೈಲಿ ದೂರದಲ್ಲಿನ ದೊಡ್ಡ ಗುಡ್ಡದ ನಡುವೆ ಇರುವ ವಿಶಾಲ ಮೈದಾನದಲ್ಲಿ ಹಿಂದೆ ಕೋಟೆ ಪಟ್ಟಣಗಳಿದ್ದವೆಂಬ ಅಭಿಪ್ರಾಯವಿದ್ದು, ಅದನ್ನು ಸ್ಥಳೀಯವಾಗಿ ಬೇಡರ ಕೋಟೆ ಎಂದು ಕರೆಯಲಾಗುತ್ತದೆ.

ಊರಲ್ಲಿನ ಜೈನ ಬಸದಿಗಳಲ್ಲಿ ಮಠದ (ಚಂದ್ರನಾಥ) ಬಸದಿಯಲ್ಲಿರುವ ಮೂರ್ತಿಯು ಚಂದ್ರಕಾಂತ ಶಿಲಾಬಿಂಬವಾಗಿದ್ದು, ಆಕರ್ಷಕವಾಗಿದೆ. ಹಿಂದೆ ಮೂಲಸಂಘ ಕೊಂಡಕುಂದಾನ್ವಯ ಕಾಣೂರ್ಗಣ ಮೇಘ ಪಾಷಾಣಗಚ್ಛಕ್ಕೆ ಸೇರಿದ್ದ, ಇಡೀ ಕರ್ನಾಟಕಕ್ಕೆ ಅಪರೂಪದ್ದಾದ ಈ ಬಸದಿಯು ಇಂದು ಹೊಂಬುಚ್ಚದ ಮಠಾಧಿಪತಿಗಳ ನಿಯಂತ್ರಣದಲ್ಲಿದೆ. ದಕ್ಷಿಣ ಭಾರತದಲ್ಲಿ ಈ ಗಚ್ಛಕ್ಕೆ ಸೇರಿದ ಎರಡು ಕೇಂದ್ರಗಳಲ್ಲಿ ಇದೂ ಒಂದೆಂದೂ ಪಿ.ಎನ್.ನರಸಿಂಹಮೂರ್ತಿ ದಾಖಲಿಸಿದ್ದಾರೆ. ಇಲ್ಲಿ ಪ್ರಾಚೀನ ತಾಳೆಯೋಲೆ ಗ್ರಂಥಗಳ ಭಂಡಾರವೊಂದಿದೆ. ಇಲ್ಲಿರುವ 'ಅಷ್ಟಮಂಗಲ' ಎಂಬ ಕಾಷ್ಠ ನಿರ್ಮಿತ ಮಂಟಪವು ಕಲಾತ್ಮಕವಾಗಿದ್ದು, ಅದರ ಪಟ್ಟಿಕೆಗಳಲ್ಲಿ ಛತ್ರ, ಧ್ವಜ, ಕಳಸ, ಚಾಮರ, ಸುಪ್ರತಿಷ್ಠಕ, ಭೃಂಗಾರ, ದರ್ಪಣ ಹಾಗೂ ತಾಲಗಳೆಂಬ ಅಷ್ಟಮಂಗಳಗಳನ್ನು ಕೆತ್ತಿದ್ದಾರೆ. ಮಂಟಪದ ತುದಿಯಲ್ಲಿ ಇಬ್ಬರು ಅಶ್ವಾರೋಹಿ ಯೋಧರ ಶಿಲ್ಪಗಳಿದ್ದು, ಬುಡದಲ್ಲಿ ಜಿನದತ್ತರಾಯ ಮತ್ತು ವರಂಗರಾಯ ಎಂಬ ನಾಮಾಂಕಿತಗಳಿವೆ. ಹುಂಚದ ಜಿನದತ್ತರಾಯನ ವಂಶಕ್ಕೆ ಸೇರಿದ ವರಂಗರಾಯನ ಆಳ್ವಿಕೆಯಡಿ ಇಲ್ಲಿಯ ಜಿನಾಲಯಗಳು

ನಿರ್ಮಾಣಗೊಂಡು ಅವುಗಳ ನಿರ್ವಹಣೆಗೆಂದು ಉಂಬಳಿ ನೀಡಲ್ಪಟ್ಟಿವೆಯೆಂದು ಹೇಳಲಾಗುತ್ತದೆ. ಈ ಬಸದಿಯಲ್ಲಿರುವ ಪಂಚಲೋಹದ ಜಿನಬಿಂಬಗಳೂ ಆಕರ್ಷಕವಾಗಿವೆ.

ಮಠದ ಬಸದಿಯ ಸನಿಹದಲ್ಲಿರುವ ನೇಮಿನಾಥ ಬಸದಿಯು ವರಂಗದ ಇನ್ನೊಂದು ಆಕರ್ಷಕ ವಾಸ್ತುರಚನೆಯಾಗಿದೆ. ತಟ್ಟನೆ ನೋಡಿದರೆ, ಮೂಡಬಿದಿರೆಯ ಸಾವಿರಕಂಬದ ಬಸದಿಯನ್ನು ನೆನಪಿಸುವ ಈ ಬಸದಿಯನ್ನು ಭವ್ಯವಾದ ಕಂಬಸಾಲುಗಳು ಹೊತ್ತು ನಿಂತಿದ್ದು, ನಯನ ಮನೋಹರವಾಗಿದೆ. ಅಲ್ಲೇ ಇರುವ ಶಾಂತಾರ ಕುಂ(ದ)ಡಣನ ಕಾಲಕ್ಕೆ (೧೨೨೦–೩೦) ಸೇರಿದ ಶಾಸನವೊಂದರಿಂದ ಹಿಂದೆ ವರಾಂಗ ಎಂಬ ಮಹಾಪುರುಷನು ನಿರ್ಮಿಸಿದ ಈ ಬಸದಿಯನ್ನು ಕುಂದಣ್ಣನು ಜೀರ್ಣೋದ್ಧಾರ ಮಾಡಿದನೆಂದು ತಿಳಿದು ಬರುತ್ತದೆ. ಗರ್ಭಗೃಹದಲ್ಲಿರುವ ಪದ್ಮಾಸೀನ ನೇಮಿಚಂದ್ರ ತೀರ್ಥಂಕರನ ಶಿಲ್ಪದ ಜೊತೆಗೆ ನಾಲ್ಕಡಿ ಎತ್ತರದ ಮಾನಸ್ತಂಭವೂ ಭವ್ಯವಾಗಿದೆ. ಬಸದಿಯ ಮಗ್ಗುಲಲ್ಲಿರುವ ನಿಸಿದಿ ಮಂಟಪಗಳು, ಜೈನಯತಿಗಳು ಸಲ್ಲೇಖನ ವಿಧಿ ಆಚರಿಸಿ, ನಿರ್ವಾಣ ಹೊಂದಿದ ಕುರುಹಾಗಿ ನಿಂತಿರುವ ಸ್ಮಾರಕಗಳಾಗಿದ್ದು, ಆಕರ್ಷಕವಾಗಿವೆ. ಈ ಬಸದಿಯಲ್ಲಿರುವ ಪಂಚಲೋಹದ ಅನೇಕ ಜಿನಬಿಂಬಗಳು ಉಲ್ಲೇಖಾರ್ಹವಾಗಿವೆ. ವರಂಗದ ಹಿಂಬದಿಯಲ್ಲಿ ಹಬ್ಬಿಕೊಂಡಿರುವ ಸಹ್ಯಾದ್ರಿ ಶ್ರೇಣಿಯಲ್ಲಿ ಉನ್ನತವಾದ ಅಜ್ಜಿಕುಂಟು ಎಂಬ ಶಿಖರ ಪ್ರದೇಶವು ಕಾಡುಕೋಣ, ಕರಡಿಗಳ ಆವಾಸಸ್ಥಾನವಾಗಿದ್ದು, ಈ ಗಿರಿಶಿಖರದ ತುದಿಯಿಂದ ಕಾಣಸಿಗುವ ದಕ್ಷಿಣಸಿರಿನಾಡ ದರ್ಶನ ಅಭೂತಪೂರ್ವವಾದುದೆಂಬ ಅಭಿಪ್ರಾಯವಿದ್ದು, ಇಲ್ಲಿ ಯುರೇನಿಯಂ ನಿಕ್ಷೇಪವಿರುವ ಸುಳಿವು ಲಭಿಸಿದೆಯೆಂದು ಹೇಳಲಾಗುತ್ತದೆ.

**ಶಂಕರನಾರಾಯಣ** (ಜನಸಂಖ್ಯೆ: ೫,೦೧೪): ತಾಲೂಕು ಕೇಂದ್ರ ಕುಂದಾಪುರದಿಂದ ೩೨ಕಿ.ಮೀ ಪೂರ್ವಕ್ಕೆ ಇರುವ ಪ್ರಮುಖ ಯಾತ್ರಾಸ್ಥಳ. ಪುರಾಣ ಪ್ರಸಿದ್ಧ ಸಪ್ತ ಕ್ಷೇತ್ರಗಳಲ್ಲೊಂದೆಂಬ ಹೆಗ್ಗಳಿಕೆ ಇದಕ್ಕಿದ್ದು, ಪೌರಾಣಿಕವಾಗಿ ಇದನ್ನು ಕ್ರೋಡ ಕ್ಷೇತ್ರವೆಂದೂ ಕರೆಯಲಾಗುತ್ತದೆ. ಇಲ್ಲಿಯ ಗುಹೆಯೊಂದರಲ್ಲಿ ತಪಸ್ಸು ಮಾಡುತ್ತಿದ್ದ ಕ್ರೋಡಮುನಿಯಿಂದ ಆ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. *ಗೋಳಿಕಟ್ಟೆ* ಎಂಬುದು ಇದರ ಮೂಲ ಹೆಸರಾಗಿದ್ದು, ನಂತರದಲ್ಲಿ ಗ್ರಾಮದ ಅದಿದೈವ ಶಂಕರನಾರಾಯಣದಿಂದಾಗಿ, ಅದೇ ಹೆಸರು ಗ್ರಾಮಕ್ಕೂ ಅನ್ವಯಗೊಂಡಿದೆ. ಪೌರಾಣಿಕವಾಗಿ ಖರಾಸುರ–ರಟ್ಟಾಸುರ ಎಂಬ ರಕ್ಕಸ ಸೋದರರು ತಪಸ್ಸಿನ ಮೂಲಕ ಶಿವನಿಂದ 'ಎರಡು ಒಂದಾಗಿ, ಒಂದು ಐದಾದಾಗ ಮರಣ ಬರಲಿ' ಎಂಬ ವಿಪರೀತದ ವರ ಪಡೆದು, ಸಹ್ಯಾದ್ರಿ, ತಪ್ಪಲಿನ ಖಡವಸೆ–ರಟ್ಟಾಡಿ ಗ್ರಾಮಗಳಿಂದ ಆಳುತ್ತಿದ್ದ ಅವರನ್ನು, ಋಷಿ ಮುನಿಗಳ ಕೋರಿಕೆಯಂತೆ ಶಂಕರ–ನಾರಾಯಣರು ಏಕರೂಪ ತಾಳಿ ಸಂಹರಿಸಿ, ಋಷಿ ಮುನಿಗಳ ಆತಂಕವನ್ನು ನಿವಾರಿಸಿದರಂತೆ. ಅದರಂತೆ ಶಂಕರನಾರಾಯಣರು ನೆಲೆಸಿದ್ದ ಪಂಚಕ್ಷೇತ್ರಗಳಲ್ಲಿ ನಾಲ್ಕು (ಕ್ರೋಡಗಿರಿ, ಮುಚ್ಚಟ್ಟು, ಬೆಳ್ವೆ ಹಾಗೂ ಅಮಾಸೆಬೈಲು) ಕುಂದಾಪುರ ತಾಲೂಕಿನಲ್ಲೇ ಇದ್ದರೆ ಉಳಿದೊಂದು ಉಡುಪಿ ತಾಲೂಕಿನ ಆವರ್ಸೆಯಲ್ಲಿದೆ. ಸುಮಾರು ೧೩–೧೪ನೆಯ ಶತಮಾನಕ್ಕೆ ಸೇರಿದ ನಾಲ್ಕಾರು ಶಾಸನಗಳಲ್ಲಿ ಕಂಡುಬರುವ ಕೊಡಗಿಯ ಶಂಕ(ಸಂಖ)ರನಾರಾಯಣನ ಉಲ್ಲೇಖದಿಂದ ಈ ಗುಡಿಯು ಸು. ೧೧–೧೨ನೆಯ ಶತಮಾನದಷ್ಟು ಪ್ರಾಚೀನವಿರಬಹುದೆಂದು ಪಿ. ಗುರುರಾಜಭಟ್ ಅಭಿಪ್ರಾಯಪಟ್ಟಿದ್ದಾರೆ.

ಈ ದೇವಾಲಯಕ್ಕೆ ವಿಜಯನಗರ ಹಾಗೂ ಕೆಳದಿ ಅರಸರು ದಾನ ದತ್ತಿಗಳನ್ನು ನೀಡಿದ್ದ ಅಂಶ ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ವಾದಿರಾಜತೀರ್ಥರು ಈ ಕ್ಷೇತ್ರವನ್ನು ಸಂದರ್ಶಿಸಿ ಶಂಕರನಾರಾಯಣ ನನ್ನು ಮನದುಂಬಿ ಸ್ತುತಿಸಿದ್ದಾರೆ. ಈ ಕ್ಷೇತ್ರವು ಕಾಶಿಯಷ್ಟು ಪವಿತ್ರ ತಾಣವೆಂದು ಸ್ಥಳ ಪುರಾಣದಲ್ಲಿ ಹೇಳಲಾಗಿದೆ. ಇಲ್ಲಿಯ ಶಂಕರನಾರಾಯಣ ದೇವಾಲಯವು ವಿಶಾಲವಾಗಿದ್ದು, ಮುಂಭಾಗದಲ್ಲಿರುವ ಕೋಟಿತೀರ್ಥವು ಸದಾ ನೀರಿನಿಂದ ತುಂಬಿದ್ದು, ಆಕರ್ಷಕವಾಗಿದೆ. ದೇವಾಲಯದ ಗರ್ಭಗೃಹದಲ್ಲಿರುವ ಉದ್ಭವಲಿಂಗವು ಜೋಡಿಲಿಂಗವಾಗಿದ್ದರೂ ಏಕಲಿಂಗದಂತೆ ಗೋಚರಿಸುತ್ತಿದ್ದು, ಸಿದ್ಧಾಮೃತ ತೀರ್ಥ ವೆಂದು ಕರೆಯಲಾಗುವ ಜಲಕುಂಡದೊಳಗಿದ್ದು, ಭಕ್ತರು ಅಪೇಕ್ಷೆಪಟ್ಟರೆ, ಅರ್ಚಕರ ನೆರವಿನೊಂದಿಗೆ ಕನ್ನಡಿಯ ಮೂಲಕ ಅದರ ಪ್ರತಿಬಿಂಬದ ದರ್ಶನವನ್ನೂ ಪಡೆಯಬಹುದಾಗಿದೆ. ಈ ದೇವಾಲಯದಲ್ಲಿ

ಇರುವ ಆಳೆತ್ತರದ ಶಂಕರನಾರಾಯಣ ದೇವರ ಬೆಳ್ಳಿಯ ವಿಗ್ರಹ, ಸ್ಕಂದನ ಎಂಬ ಮಹಾರಥ, ಪಂಚಮುಖಿ ಆಂಜನೇಯಸ್ವಾಮಿ, ೩೬೫ ಬತ್ತಿಗಳನ್ನು ಬೆಳಗಿಸಬಹುದಾದ ಉನ್ನತ ದೀಪಸ್ತಂಭ, ಪುರಾಣಮಂಟಪದ ಅಳಿದುಳಿದಿರುವ ಕಾಷ್ಠಶಿಲ್ಪ ಫಲಕಗಳು, ಆರು ಕ್ವಿಂಟಾಲ್ ತೂಗುವ ಬೃಹದಾಕಾರದ ಘಂಟೆ, ಭೋಗ ಮಂಟಪದ ಬಣ್ಣದ ಚಾವಡಿ ಮುಂತಾದವು ವೀಕ್ಷಕರ ಗಮನ ಸೆಳೆಯುತ್ತವೆ. ಭಕ್ತರು ಶಿವರಾತ್ರಿಯಂದು ಬ್ರಾಹ್ಮಿ ಮುಹೂರ್ತದಲ್ಲಿ ಯಾತ್ರೆ ಆರಂಭಿಸಿ ಶಂಕರನಾರಾಯಣರಿರುವ ಪಂಚಕ್ಷೇತ್ರಗಳನ್ನು ಅಂದೇ ದರ್ಶನ ಮಾಡುವ 'ಪಂಚಸ್ಥಲೀಯಾತ್ರೆ' ವಿಶಿಷ್ಟವಾಗಿರುತ್ತದೆ. ಇದು ತಲಕಾಡಿನ ಪಂಚಲಿಂಗದರ್ಶನವನ್ನು ನೆನಪಿಸುತ್ತದೆ. ***ಕೊಡವೂರು:*** ಕ್ರೋಡಮುನಿಗಳು ಇಲ್ಲಿ ತಪಸ್ಸು ಮಾಡಿ ಶಂಕರನಾರಾಯಣನನ್ನು ಒಲಿಸಿಕೊಂಡಿದ್ದರಿಂದ ಇದಕ್ಕೆ ಕ್ರೋಡಾಶ್ರಮ ಎಂಬ ಹೆಸರು ಬಂದು ಮುಂದೆ ಅದೇ ಕ್ರೋಡಾಪುರ ಆಗಿ ಕಾಲಾಂತರದಲ್ಲಿ ಕೊಡವೂರು ಆಗಿದೆಯೆಂದು ಹೇಳಲಾಗುತ್ತದೆ. ಮಧ್ವಾಚಾರ್ಯರು ಸಂದರ್ಶಿಸಿದ ಸ್ಥಳವಿದಾಗಿದ್ದು, ಅಲ್ಲಿರುವ ಶಂಕರನಾರಾಯಣ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಶಂಕರಾಶ್ರಿತ ನಾರಾಯಣನನ್ನು ಶಂಕರನಾರಾಯಣ ಎಂದು ಹೇಳುವ ಪರಿಪಾಠವೊಂದಿದ್ದು, ವಿಶಾಲವಾದ ಈ ದೇವಾಲಯದ ಏಳು ದ್ವಾರಗಳನ್ನು ದಾಟಿದಾಗ, ಎದುರಾಗುವ ಪ್ರಧಾನ ಗರ್ಭಗೃಹದಲ್ಲಿ ಶಂಕರನಾರಾಯಣನಿದ್ದಾನೆ. ಇದು ಶಂಕರನಾರಾಯಣನ ಸಪ್ತ ಕ್ಷೇತ್ರಗಳಲ್ಲಿ ಒಂದಾಗಿದೆ. ಈ ದೇವಾಲಯದಲ್ಲೇ ದುರ್ಗಾಪರಮೇಶ್ವರಿ, ಗಣಪತಿ, ನಂದಿಕೇಶ್ವರ, ಹನುಮ, ಬ್ರಹ್ಮಶಾಸ್ತಾರ, ಕ್ಷೇತ್ರಪಾಲ, ಹಾಗೂ ನಾಗದೇವರ ಸನ್ನಿಧಿಗಳಿದ್ದು, ಹೊರಗೆ ಮಲ್ಲಿಕಾರ್ಜುನ ಹಾಗೂ ರಾಘವೇಂದ್ರಯತಿಗಳ ವೃಂದಾವನಗಳಿವೆ. ಸಮೀಪದ ಕಾನಂಗಿಯೂ ಪಂಚದೈವ ಕ್ಷೇತ್ರವೆಂದೂ ಪ್ರಸಿದ್ಧಗೊಳ್ಳುತ್ತಿದೆ. ಮಕರಶುದ್ಧ ಹುಣ್ಣಿಮೆಯಂದು ಆರಂಭಗೊಳ್ಳುವ ಏಳು ದಿನಗಳ ಜಾತ್ರೆಯಲ್ಲಿ ಮೊದಲ ದಿನದಂದು ರಾತ್ರಿ ನಡೆಯುವ ದೊಡ್ಡ ರಂಗಪೂಜೆ ವೈಭವದಿಂದ ಕೂಡಿರುತ್ತದೆ. ಇಲ್ಲಿರುವ ನಂದಗೋಕುಲ (೧೯೮೭)ವು ಮುದಿ/ಬರಡಾದ ದನಗಳ ಸಂರಕ್ಷಣೆಯಲ್ಲಿ ತೊಡಗಿದೆ. ಮಚ್ಚಟ್ಟು ಶಂಕರನಾರಾಯಣದಿಂದ ಸಿದ್ಧಾಪುರ ಮಾರ್ಗವಾಗಿ ಈ ಕ್ಷೇತ್ರವನ್ನು ತಲುಪಬಹುದಾಗಿದೆ. ಇಲ್ಲಿ ಹೊಳೆ ನಡುವೆ ಇರುವ ಗುಡಿಯು ಮೂಲ ಶಂಕರನಾರಾಯಣ ಎಂದೇ ಕರೆಯಲ್ಪಟ್ಟಿದ್ದು, ನಿತ್ಯ ಪೂಜೆಗೆಂದು ನದಿಯ ದಂಡೆಯ ಮೇಲೆ ಗುಡಿಯೊಂದನ್ನು ಕಟ್ಟಲಾಗಿದೆ. ದೇವಾಲಯದ ಸಮೀಪವಿರುವ ಕ್ರೋಡಗಿರಿ ಬೆಟ್ಟದ ಮೇಲೆ, ಶಂಕರನಾರಾಯಣನ ಆದಿಸ್ಥಾನ, ಕ್ರೋಡಮುನಿಗಳು ತಪಸ್ಸನ್ನಾಚರಿಸಿದ ಗುಹೆ ಹಾಗೂ ನಾಲ್ಕಾರು ತೀರ್ಥಗಳಿವೆ. ಇಲ್ಲಿ ಶಂಕರನಾರಾಯಣ ಹಾಗೂ ದೇವಿಯರ ಶಿಲಾವಿಗ್ರಹಗಳಿವೆ. ಮಕರ ಸಂಕ್ರಾಂತಿಯಂದು ದೇವರನ್ನು ಮೆರವಣಿಗೆಯಲ್ಲಿ ಇಲ್ಲಿಗೆ ತಂದು ಪೂಜಿಸಿಕೊಂಡು ಹೋಗುವ ಸಂಪ್ರದಾಯವೀಗಲೂ ಇದೆ. ಅಲ್ಲೇ ವೀರ ಕಲ್ಲುಕುಟಿಕ ದೈವದ ಸ್ಥಾನವಿದೆ. ಈ ದೇವರ ವಾರ್ಷಿಕ ಜಾತ್ರೆಯು ಧನುರ್ಮಾಸದಲ್ಲಿ ಒಂಬತ್ತು ದಿನ ಜರುಗುತ್ತಿದ್ದು, ಏಳನೆಯ ದಿನದ ಸ್ಕಂದ ಮಹಾರಥೋತ್ಸವ, ಒಂಬತ್ತನೆಯ ದಿನದ ಮೃಗಾಯಾತ್ರಾ ವಿನೋದೋತ್ಸವಗಳು ಈ ಜಾತ್ರೆಯ ವೈಶಿಷ್ಟ್ಯಗಳಾಗಿವೆ. ***ಸೌಡ:*** ಇದು ಶಂಕರನಾರಾಯಣದಿಂದ ಮೂರು ಕಿ.ಮೀ. ಅಂತರದಲ್ಲಿರುವ ಪ್ರಾಚೀನ ಅಗ್ರಹಾರ, ಕೆಳದಿಯ ಸೋಮಶೇಖರನಾಯಕನ ಕಾಲದಲ್ಲಿ ಇದೇ ತಾಲೂಕಿನ ಹಲಸುನಾಡು ಗ್ರಾಮದ ಸಮರ್ಥರೊಬ್ಬರು ನಾಯಕನ ದಿವಾನರಾಗಿದ್ದು, ಅವರು ನಿರ್ಮಿಸಿದ ಐದು ಅಗ್ರಹಾರಗಳಲ್ಲಿ 'ಸೂಡ' ಕೂಡ ಒಂದು. ಸೂಡದ ಹಳೆ ಅಗ್ರಹಾರದಲ್ಲಿರುವ ಸಾಂಬಶಿವ ದೇವಾಲಯ ನಾಯಕರ ಕಾಲದ್ದಾಗಿದ್ದು, ಶಿಥಿಲಾವಸ್ಥೆಯಲ್ಲಿದ್ದರೂ ಅದರ ಗೋಪುರವು ಆಕರ್ಷಕವಾಗಿದೆ. ಗರ್ಭಗೃಹದಲ್ಲಿ ಸುವರ್ಣರೇಖಿತ ಲಿಂಗದ ಜೊತೆಗೆ ದೇವಿಯ ಸನ್ನಿಧಿಯೂ ಇರುವುದೊಂದು ವಿಶೇಷ. ಶಿವಾಲಯದ ಬದಿಯಲ್ಲಿ ನದಿಗೆ ಹೋಗಲೆಂದು ಕಟ್ಟಿರುವ ಸೋಪಾನಗಳು ಆಕರ್ಷಕವಾಗಿವೆ. ಈ ಗುಡಿಯ ಸನಿಹದಲ್ಲಿರುವ ಲಕ್ಷ್ಮೀವೆಂಕಟೇಶ್ವರ ದೇವಾಲಯವು, ದಿವಾನ ಕುಟುಂಬದ ಆರಾಧ್ಯದೈವವಾಗಿದ್ದು, ೧೯೯೨ರ ವಾರಾಹಿ ಮಹಾಪೂರದಲ್ಲಿ ಅದಕ್ಕೆ ಹಾನಿಯಾಗಿತ್ತು. ಗುಡಿಯಲ್ಲಿರುವ ಶ್ರೀದೇವಿ–ಭೂದೇವಿ ಸಹಿತ ವೆಂಕಟೇಶ್ವರ ಶಿಲ್ಪವು ಆಕರ್ಷಕವಾಗಿದೆ. ಬದಿಯಲ್ಲಿ ದಿವಾನರ ವಸತಿಗೆಂದು ಕಟ್ಟಿದ ಅರಮನೆ ಶಿಥಾಲಾವಸ್ಥೆಯಲ್ಲಿದ್ದು, ಬ್ರಹ್ಮರಥವೂ ಇದೆ. ಹಳೇ ಅಗ್ರಹಾರದಿಂದ ತೆಪ್ಪದಲ್ಲಿ ಹೊಳೆದಾಟಿ ಹೋದರೆ ಸಿಗುವ ಹೊಸ

ಅಗ್ರಹಾರದಲ್ಲಿರುವ ಶಿವಾಲಯದ ಜಲಕುಂಡದಲ್ಲಿ ಶಿವಲಿಂಗವಿದೆ. ಇಲ್ಲಿಯ ಜರಿಯೇ ಗುಪ್ತವಾಗಿ ಹರಿದು ವಾರಾಹಿಯಲ್ಲಿ ಶುಕ್ತಿಮತಿ ತೀರ್ಥವಾಗಿ ಉಕ್ಕುತ್ತದೆಂಬ ಅಭಿಪ್ರಾಯ ಸ್ಥಳೀಕರಲ್ಲಿದೆ.

**ಶಿರೂರು**: ಉಡುಪಿ ಕೃಷ್ಣನ ಅಷ್ಟಮಠ ಪರಂಪರೆಗೆ ಸೇರಿದ ಇದು ಸ್ವರ್ಣನದಿ ತೀರದಲ್ಲಿರುವ ಒಂದು ಪವಿತ್ರ ತೀರ್ಥಸ್ಥಳ. ಸುಮಾರು ಒಂದು ಎಕರೆಯಷ್ಟು ಪ್ರದೇಶವನ್ನು ವ್ಯಾಪಿಸಿರುವ ಈ ಮಠವು ವಿಶಾಲವಾಗಿದ್ದು ಆಕರ್ಷಕವಾಗಿದೆ. ಇದು ದೇವರ ಗುಡಿಗಳು, ಓಲಗಮಂಟಪ, ಉಗ್ರಾಣ, ಯತಿನಿವಾಸ, ಪಾಕಶಾಲೆ, ಭೋಜನಶಾಲೆ, ಗೋಶಾಲೆ, ಮುಂತಾದವುಗಳನ್ನು ಒಳಗೊಂಡಿದ್ದು, ಮಧ್ವಾಚಾರ್ಯರು ಕರುಣಿಸಿದ ಉಪಾಸ್ಯಮೂರ್ತಿ ವಿಠಲನೊಂದಿಗೆ ರಾಮನ ಶಿಲ್ಪಗಳಿಲ್ಲಿವೆ. ಆದರೆ ಶೀರೂರಿನ ಗ್ರಾಮದೇವರು ಹನುಮಂತನಾಗಿದ್ದು, ಅವನ ಸನ್ನಿಧಿಯೂ ಮಠದಲ್ಲಿದೆ. ಮಠದಲ್ಲಿರುವ ಬೃಹತ್ ಭತ್ತದ ಕಣಜ ಕಾಷ್ಠರಚನೆಯಾಗಿದ್ದು, ಅದಕ್ಕೆ ವಿಚಿತ್ರವಾದ ಬೀಗವಿದೆ. ಇದಕ್ಕೆ ಮೂರು ಕಿ.ಮೀ. ಅಂತರದಲ್ಲಿ ಪುತ್ತಿಗೆ ಮಠವಿದ್ದು, ಅದನ್ನು ಕಾಲ್ನಡಿಗೆ/ ತೆಪ್ಪದಲ್ಲಿ ತಲುಪಬಹುದಾಗಿದೆ. ಈ ಮಠದ ಆದಿಗುರುಗಳಾದ ವಾಮನತೀರ್ಥರು (೧೩೧೭) ಮಧ್ವಾಚಾರ್ಯರ ಐದನೆಯ ನೇರ ಶಿಷ್ಯರಾಗಿದ್ದು ಅಲ್ಲಿಂದೀಚೆಗೆ ಈ ಮಠದ ಗುರುಪರಂಪರೆಯು ನಿರಂತರವಾಗಿ ನಡೆದುಕೊಂಡು ಬಂದಿದೆ. ಶಿರೂರಿನ ಹರಿಖಂಡಿಗೆಯಲ್ಲಿರುವ ಗೌಡ ಸಾರಸ್ವತರ ಲಕ್ಷ್ಮೀವೆಂಕಟರಮಣ ದೇವಾಲಯವು ಆಕರ್ಷಕವಾಗಿದ್ದು ಭವ್ಯವಾಗಿದೆ. ಕೊಳಲಗಿರಿಯಲ್ಲಿರುವ ಜೇಸುನಾಥನ ತಿರುಹೃದಯದ ಇಗರ್ಜಿ (೧೯೧೫) ಆಕರ್ಷಕವಾಗಿದೆ.

**ಶಿರೂರು** (ಜನಸಂಖ್ಯೆ: ೧೫,೧೩೧) : ತಾಲೂಕು ಕೇಂದ್ರ ಕುಂದಾಪುರದಿಂದ ೩೨ ಕಿ.ಮೀ. ಉತ್ತರಕ್ಕೆ ಜಿಲ್ಲೆಯ ಉತ್ತರಗಡಿಯಲ್ಲಿದೆ. ಹಿಂದೆ ಇದೊಂದು ಸಣ್ಣ ಬಂದರಾಗಿದ್ದು, ನಂತರದಲ್ಲಿ ಬೈಂದೂರು ಬಂದರಿನ ವ್ಯಾಪ್ತಿಗೆ ಇದನ್ನು ಒಳಪಡಿಸಲಾಗಿತ್ತು. ಇಲ್ಲಿ ಪ್ರಾಚೀನ ಶಿರೂರು ಪಟ್ಟಣದ ಅವಶೇಷಗಳು ಹರಡಿಕೊಂಡಿವೆ.

**ಸಾಲಿಗ್ರಾಮ** (ಜನಸಂಖ್ಯೆ: ೧೪,೯೬೨) : ತಾಲೂಕು ಕೇಂದ್ರ ಉಡುಪಿಯಿಂದ ೨೪ ಕಿ.ಮೀ. ಉತ್ತರಕ್ಕೆ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಪ್ರಮುಖ ಧಾರ್ಮಿಕ ಕೇಂದ್ರ. ಅಲ್ಲಿರುವ ಗುರುನರಸಿಂಹದೇವರ ಗುಡಿಯಿಂದಾಗಿ ಪ್ರಸಿದ್ಧವಾಗಿದ್ದು, ಆರಾಧ್ಯಮೂರ್ತಿಯು ಸಾಲಿಗ್ರಾಮ ಶಿಲೆಯದಾದ್ದರಿಂದ ಊರಿಗೂ ಅದೇ ಹೆಸರಾಯಿತೆಂಬ ಅಭಿಪ್ರಾಯವಿದೆ. ಆದರೆ ಇಲ್ಲಿ ಶಾಲಿವನವು ವಿಪುಲವಾಗಿರುವುದರಿಂದ ಶಾಲಿಗ್ರಾಮವೆನಿಸಿ ಮುಂದೆ ಅದೇ ಸಾಲಿಗ್ರಾಮವಾಗಿರಬೇಕೆಂದೂ ವಿದ್ವಾಂಸರು ಈಗಾಗಲೇ ವಿವೇಚಿಸಿದ್ದಾರೆ. ಆದರೆ ಇಲ್ಲಿಯ ಶಾಸನಗಳಲ್ಲಿ ಗ್ರಾಮದ ಹೆಸರು 'ಕೋಟ'ಎಂದು ದಾಖಲಿಸಲ್ಪಟ್ಟಿದೆ. ಇಲ್ಲಿಯ ೧೪೪೯ರ ಶಾಸನದಲ್ಲಿ ಕೋಟದ ೧೬ ಆದಿವಾಸಿಗಳ ಹಾಗೂ ೧೦,೦೦೦ ಮಹಾಜಗತ್ತು ಒಪ್ಪುವ ಹೆಗಡೆಗಳು ವಿಜಯನಗರಕ್ಕೆ ಬಂದು ಅರಮನೆ ಸಿದ್ದಾಯವಾದ ೨೫೦ ಗದ್ಯಾಣದಲ್ಲಿ ರಿಯಾಯಿತಿ ಪಡೆದ ಉಲ್ಲೇಖವಿದ್ದು, ವಿಚಾರಯೋಗ್ಯವಾದ ಮಾಹಿತಿಯನ್ನು ಹೊಂದಿದೆ. ಅಲ್ಲದೆ ಒಂದು ಘಟ್ಟಿ ವರಾಹ ಗದ್ಯಾಣ–ಎರಡೂವರೆ ಕಾಟಿಗದ್ಯಾಣಕ್ಕೆ ಸಮ ಎಂಬ ಅಂಶವನ್ನೂ ತಿಳಿಸುತ್ತದೆ. ಇಲ್ಲಿಯ ೧೫೨೦ರ ಶಾಸನದಲ್ಲಿ ಕೋಟಗ್ರಾಮದ ೧೦,೦೦೦ ಮಹಾಜಗತ್ತಿಗೆ ಬಿಟ್ಟ ಧರ್ಮದ ಉಲ್ಲೇಖವಿದೆ. ಹಿಂದೆ ಕೋಟ ಬ್ರಾಹ್ಮಣರ ಆರಾಧ್ಯದೈವವಾಗಿದ್ದ ಗುರುನರಸಿಂಹನ ಗುಡಿಯಲ್ಲಿರುವ ಶಿಲ್ಪವು ದ್ವಿಭುಜಧಾರಿ ಶಂಖ–ಚಕ್ರ–ಹಸ್ತ–ಜಟಾಧಾರಿಮೂರ್ತಿಯು ಯೋಗಾನಂದ ಭಂಗಿಯಲ್ಲಿರುವ ಅಪರೂಪದ ಶಿಲ್ಪವಾಗಿದೆ. ಅಂತರ್ ನರಸಿಂಹ ಎಂಬ ವಿಶೇಷಣವನ್ನೂ ಹೊಂದಿರುವ ಈ ಶಿಲ್ಪವನ್ನು ಆದಿಶಂಕರರ ಪರಂಪರೆಗೆ ಸೇರಿದ ಭಟ್ಟಾಚಾರ್ಯರು ಪ್ರತಿಷ್ಠಾಪಿಸಿದರೆಂಬ ಅಭಿಪ್ರಾಯವಿದೆ. ಈ ಮೂರ್ತಿಯು ಪೀಠಕ್ಕೆ ಸೋಕದಂತೆ ತೇಲಿ ನಿಂತಿದೆಯೆಂದು ಹೇಳುವ ವಾಡಿಕೆ ಈ ಭಾಗದಲ್ಲಿದೆ. ಗುಡಿಯ ಹೆಬ್ಬಾಗಿಲಿಗೆ ಜೋಗಿ ಹೆಬ್ಬಾಗಿಲೆಂದು ಕರೆಯುವುದು ರೂಢಿಯಲ್ಲಿದೆ. ಪೌರಾಣಿಕವಾಗಿ 'ಗಜಪುರ'ಎಂದು ಕರೆಯಲ್ಪಟ್ಟಿರುವ ಈ ಊರಲ್ಲಿ ನರಸಿಂಹನನ್ನು ಗಣಹೋಮದ ಮೂಲಕ ಆರಾಧಿಸಲಾಗುತ್ತದೆ. ಈ ಗುಡಿಗೆ ಹೋಗುವ ಹಾದಿಯಲ್ಲೇ ಹನುಮಂತನ ಗುಡಿಯಿದೆ.

**ಸೂಡ** (ಜನಸಂಖ್ಯೆ: ೨,೧೦೩): ತಾಲೂಕು ಕೇಂದ್ರ ಉಡುಪಿಗೆ ದಕ್ಷಿಣದಲ್ಲಿ ಸ್ವಲ್ಪ ಅಂತರದಲ್ಲಿರುವ ಸ್ಕಂದ ಆರಾಧನಾ ಕೇಂದ್ರ. ಇಲ್ಲಿರುವ ಸುಬ್ರಹ್ಮಣ್ಯನ ಪ್ರಾಚೀನ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಉದ್ಯಾವರ ನದಿ ದಂಡೆಯ ಮೇಲಿರುವ ಈ ದೇವಾಲಯದಲ್ಲಿ ಬಹುಹಿಂದಿನಿಂದಲೂ ಹುತ್ತವನ್ನೇ ಪೂಜಿಸ ಲಾಗುತ್ತಿತ್ತು. ಇತ್ತೀಚೆಗೆ ಬಾಲಸುಬ್ರ ಹ್ಮಣ್ಯನ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಕ್ಷೇತ್ರವನ್ನು ಕುಕ್ಕೆ ಸುಬ್ರಹ್ಮಣ್ಯದ ಸುಬ್ರಾಯಪ್ಪ ಹಾಗೂ ಕುಮಾರಧಾರಾ ನದಿಗಳೊಂದಿಗೆ ಕಲ್ಪಿಸಿ ಧನ್ಯರಾಗುವ ಭಕ್ತರ ಅಭೇದ ಕಲ್ಪನೆ, ಅನನ್ಯವೇ ಸರಿ. ಸನಿಹದ ಪಿಲಾರ್ ಕಾನದ ಗುಹೆಯೊಂದರಲ್ಲಿ ತಪ್ಪಸ್ಸು ಮಾಡುತ್ತಿದ್ದ ಪರಶುರಾಮನಿಂದ ಪ್ರತಿಷ್ಠಿತಗೊಂಡಿತೆಂದು ಹೇಳಲಾಗುವ ಇಲ್ಲಿಯ ಸುಬ್ರಹ್ಮಣ್ಯನ ಗುಡಿಯಲ್ಲಿರುವ ಬಾಲಸುಬ್ರಹ್ಮಣ್ಯನಿಗೆ ಸುಬ್ರಹ್ಮಣ್ಯ ಷಷ್ಠಿಯಿಂದ ಐದು ದಿನಗಳ ಕಾಲ ಚಿಕ್ಕ ಜಾತ್ರೆಯಾಗುತ್ತದೆ. ಪರಶು ರಾಮನ ಹೆಸರಲ್ಲಿ ಇತ್ತೀಚೆಗೆ ಭಾರ್ಗವ ಮಂಟಪವನ್ನು ಇಲ್ಲಿ ನಿರ್ಮಿಸಲಾಗಿದೆ. ಷಷ್ಠಿಯ ದಿನ ಇಲ್ಲಿ ನಡೆಯುವ ಮಡೆಸ್ನಾನದ ಸೇವೆ ವಿಶಿಷ್ಟವಾಗಿರುತ್ತದೆ. ಅಂದು ಈ ದೇವಾಲಯದಲ್ಲಿ ನಡೆಯುವ ಮೊದಲ ಪಂಕ್ತಿಯಲ್ಲಿ ಬ್ರಾಹ್ಮಣ-ಸುವಾಸಿನಿಯರ ಎಂಜಲೆಲೆಯ ಮೇಲೆ ಪ್ರದಕ್ಷಿಣಾಪೂರ್ವಕವಾಗಿ ಒಂದು ಸುತ್ತು ಉರುಳುವುದೇ ಮಡೆ ಸ್ನಾನವಾಗಿದ್ದು, ಇದನ್ನು ಹರಕೆಹೊತ್ತ ಬ್ರಾಹ್ಮಣೇತರ ಸ್ತ್ರೀ-ಪುರುಷರು ಭಯಭಕ್ತಿಯಿಂದ ಆಚರಿಸುವ ವಿಚಿತ್ರ ಸಂಪ್ರದಾಯ ಇಂದಿಗೂ ಉಳಿದು ಬಂದಿದೆ.

**ಸೂರಾಲು:** ತಾಲೂಕು ಕೇಂದ್ರ ಉಡುಪಿಯಿಂದ ೨೪ ಕಿ.ಮೀ. ದೂರದಲ್ಲಿರುವ ಇದು ಪೆಜಮಂಗೂರು (ಜನಸಂಖ್ಯೆ: ೪,೨೨೩) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮವಾಗಿದ್ದು, ಹಿಂದೆ ತೊಳಹರ ಎಂಬ ಸಣ್ಣ ಪಾಳೇಪಟ್ಟೊಂದರ ರಾಜಧಾನಿಯಾಗಿ ಮೆರೆದಿರುವ ಊರು. ಸೂರಾಲು, ಸಿರಿಯಾರ ನಲ್ವತ್ತ ನಾಡು, ಕೆಳನಾಡು, ಶಂಕರನಾರಾಯಣ, ಬಸರೂರು ಹಳ್ಳಿಗೆರೆ ಹಾಗೂ ಬೈಂದೂರು ಮಾಗಣೆಗಳಿಗೆ ಪ್ರಭುಗಳಾಗಿದ್ದ ಇವರು, ಸೀತಾನದಿ ತೀರದ ಕೊಕ್ಕರ್ಣೆ ಹಾಗೂ ಬಸರೂರು ಬಂದರುಗಳ ಮೇಲೆ ನಿಯಂತ್ರಣ ಹೊಂದಿದ್ದರು. ಇವರ ಆಳ್ವಿಕೆಯನ್ನು ೧೨ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸ ಬಹುದಾಗಿದ್ದು, ಬಾರಕೂರಿನ ಪಂಚಲಿಂಗೇಶ್ವರ ಗುಡಿಯ ೧೧೪೦ರ ಶಾಸನದಲ್ಲಿ ತೊಳಹರರ ಮೊದಲ ಉಲ್ಲೇಖ ಲಭಿಸುತ್ತದೆ. ಸೂರಾಲಿಯ ಮಹಾಲಿಂಗೇಶ್ವರ ಹಾಗೂ ಪದ್ಮಾವತಿ ಯಕ್ಷಿಯ ಆರಾಧಕರಾಗಿದ್ದ ಇವರು ೨೦ನೆಯ ಶತಮಾನದ ಪೂರ್ವಾರ್ಧ ಭಾಗದವರೆಗೂ ರಾಜ್ಯಭಾರ ಮಾಡಿದವರು. ಪೋರ್ಚುಗೀಸರನ್ನು ಹಿಮ್ಮೆಟ್ಟಿಸಲು ಹೋರಾಡಿದ ಈ ಪ್ರಭುಗಳ ಆಡಳಿತ ಕೆಳದಿ ನಾಯಕರ ಪ್ರಾಬಲ್ಯ ದೊಂದಿಗೆ ಸಂಕುಚಿತಗೊಂಡಿತು. ಪ್ರಸ್ತುತ ಈ ಮನೆತನದವರು ಕೊಕ್ಕರ್ಣೆಯಲ್ಲಿ ನೆಲೆಸಿದ್ದಾರೆ. ಆದರೆ ಈ ಅರಸರ ನೆನಪಾಗಿ ಸೂರಾಲಿನಲ್ಲಿ ಅವರ ಅರಮನೆಯೊಂದು ಸ್ಮಾರಕವಾಗಿ ನಿಂತಿದೆ. ಸುಮಾರು ೧೫೧೧ರಲ್ಲಿ ನಿರ್ಮಾಣಗೊಂಡಿರುವ ಮಣ್ಣಿನ ಈ ಅರಮನೆಯು ತುಳುನಾಡಿನಲ್ಲಿದ್ದ ಮಣ್ಣಿನ ಹನ್ನೆರಡು ಅರಮನೆಗಳಲ್ಲಿ ಉಳಿದಿರುವ ಏಕೈಕ ಅರಮನೆ ಎಂದು ಶಶಾಂಕರು ದಾಖಲಿಸಿದ್ದಾರೆ. ಮುಂಭಾಗವನ್ನು ಬಿಟ್ಟರೆ, ಉಳಿದೆಲ್ಲಾ ಭಾಗ ನೆಲಗಟ್ಟಿಲ್ಲದೆ ಕಟ್ಟಿದ ಅರಮನೆಯಾಗಿದ್ದು, ಸುಟ್ಟ ಅವೆಮಣ್ಣಿನ ಗೋಡೆ, ಮುಳಿಹುಲ್ಲಿನ ಗಾರೆ, ಅದರ ಮೇಲೆ ಸಗಣಿ ಸಾರಿಸಲಾಗಿದೆ. ಮಹಡಿಗೆ ನಾಡಹೆಂಚಿನ ಛಾವಣಿಯಿದ್ದು, ಬಾಗಿಲು, ಕಿಟಕಿ, ಕಂಬ ಬೋದಿಗೆ ಜಾಲಂದ್ರ ಕಮಾನುಗಳಲ್ಲಿನ ಕಾಷ್ಠಶಿಲ್ಪದ ವೈಭವ ಉಲ್ಲೇಖಾರ್ಹ ವಾಗಿದೆ. ೧೯೮೩ರಿಂದ ಈಚೆಗೆ ಅಲ್ಲಿ ಯಾರೂ ವಾಸಿಸುತ್ತಿಲ್ಲ. ಹೊರನೋಟಕ್ಕೆ ಸಾಮಾನ್ಯ ಮನೆಯಂತೆ ಕಂಡರೂ, ಒಳಸಾಗುತ್ತಿದ್ದಂತೆ ಎದುರಾಗುವ ಹೊರರಾಜಾಂಗಣ, ಒಳರಾಜಾಂಗಣ, ಹಳೆಚಾವಡಿ, ಬಣ್ಣದ ಚಾವಡಿ, ಪಟ್ಟದ ಚಾವಡಿ, ಮುಂತಾದ ಏಳು ಅಂಕಣಗಳು ಆಕರ್ಷಕವಾಗಿದ್ದು, ಪೂಜಾಗೃಹದಲ್ಲಿ ಪದ್ಮಾವತಿ ಯಕ್ಷಿ ಇದ್ದಾಳೆ. ವಾರ್ಷಿಕ ಜಾತ್ರೆ, ಹಾಗೂ ನವರಾತ್ರಿ ಉತ್ಸವ ಇಲ್ಲಿನ ವಿಶೇಷವಾಗಿದೆ. ಇಲ್ಲಿರುವ ೧೩೮೩ರ ಶಾಸನ, ಹೊನ್ನಾವುರ_ಒಡೆಯರ ಸಮಕ್ಷಮದಲ್ಲಿ ಶಿವನಿಡುಂಬೂರಿಗೆ ೫೯೪ ಕಾಟಿ ಗದ್ಯಾಣ ದತ್ತಿ ಬಿಟ್ಟ ಅಂಶವನ್ನು ಹೇಳುತ್ತಾ ಸಾಂದರ್ಬಿಕವಾಗಿ ಕೆಲ್ಲಂಗೆರೆ ಛತ್ರ, ಉಡುಪಿನ ದೇವರು, ಮಡಿಯದೇವರುಗಳನ್ನು ಪ್ರಸ್ತಾಪಿಸುತ್ತದೆ. ಮಹಾಲಿಂಗೇಶ್ವರ ಗುಡಿ ಮುಂದಿರುವ ೧೪೧೭, ೧೪೩೪, ೧೪೫೧, ೧೪೫೨ರ ಶಾಸನಗಳಿಂದ ಸೂರಾಲಿನ ಮಹಾದೇವರ ದೇವಾಲಯಕ್ಕೆ ತೊಳಹರ ಅರಸರು

ನೆಣಗುಂದ – ೩೦ ರಲ್ಲಿ ಭೂದತ್ತಿ ಬಿಟ್ಟ ಉಲ್ಲೇಖವಿದೆ. ಇಲ್ಲಿಯ ಮಹಾಲಿಂಗೇಶ್ವರ ದೇವಾಲಯವು ಖರಾಸುರ ಪ್ರತಿಷ್ಠಿತ ಎಂಬ ನಂಬಿಕೆ ಇದ್ದು, ನಾಲ್ಕಾರು ಶಾಸನಗಳಿಲ್ಲಿವೆ. ಈ ಗುಡಿಯಲ್ಲಿ ಸುಗ್ಗಿಹುಣ್ಣಿಮೆ ಯಲ್ಲಿ ನಡೆಯುವ ಸಪ್ತೋತ್ಸವ ಪ್ರಸಿದ್ಧವಾಗಿದೆ. ಈ ದೇವಾಲಯವು ಸರಳವಾಗಿದ್ದು, ಅದರ ಗೋಪುರ ವಿಶಿಷ್ಟವಾಗಿದೆ. ಗೋಪುರದ ನಾಲ್ಕು ಮೂಲೆಗಳಲ್ಲಿ ಮೂಲಶಿಲೆಗೆ ಕೊಂಡಿಯಂತಿರುವ ಕಲ್ಲಿನ ಅಖಂಡ ಬಳೆಗಳು ಉಲ್ಲೇಖಾರ್ಹವಾಗಿದೆ. ಅಲ್ಲಿರುವ ೧೬ ಕಂಬಗಳ ನಂದಿಮಂಟಪವೂ ವಿಶಿಷ್ಟವಾಗಿದೆ. ಇಲ್ಲಿ ಗೋಪಾಲಕೃಷ್ಣ, ಉಮಾಮಹೇಶ್ವರ, ವೆಂಕಟರಮಣ ಮತ್ತು ಅಮ್ಮನವರ ಪ್ರತ್ಯೇಕ ಸ್ಥಾನಗಳಿವೆ. ಅಲ್ಲಿರುವ ಧ್ವಜಸ್ಥಂಭ, ಬ್ರಹ್ಮರಥ, ಪತ್ತಾಸು ಮುಂತಾದವು ಗಮನ ಸೆಳೆಯುತ್ತವೆ. ಹಿಂದೆ ಮಹಾಲಿಂಗೇಶ್ವರ ಜಾತ್ರೆಯ ಸಂದರ್ಭದಲ್ಲಿ ಕೂಸಾಳು ಎಂಬ ಹರಿಜನ ಪಂಗಡದವರು ಎರಡು ತಂಡವಾಗಿ ಅರಮನೆ ಮಗ್ಗುಲಲ್ಲಿರುವ ಅಂಬಡಿಮಲಗದ್ದೆಯಲ್ಲಿ ದೊಣ್ಣೆ ಹಿಡಿದು ಒಡೆದಾಡುವ ಮೂಲಕ ಅಂಬಡಿ ಅಣಕು ಯುದ್ಧವನ್ನು ಪ್ರದರ್ಶಿಸುತ್ತಿದ್ದರು. ***ಕೊಕ್ಕರ್ಣೆ :*** ಸೂರಾಲಿನ ತೊಳಹರರಿಗೆ ಹಿಂದೆ ಇದು ವಿಲಾಸಕೇಂದ್ರವಾಗಿದ್ದು, ಅವರಿಗೆ ಸೇರಿದ ಅರಮನೆ–ಬಸದಿಗಳು ಇಲ್ಲಿವೆ. ಕೊಕ್ಕರ್ಣೆಯ ಕಡವು ಆ ದಿನಗಳಲ್ಲಿ ಭತ್ತದ ಸಾಗಣೆಗೆ ಹೆಸರಾಗಿತ್ತು. ಸಮೀಪದ ನಾಲ್ಕೂರು ಗ್ರಾಮಕ್ಕೆ ಸೇರಿದ ಜೋಂಡಿ ಎಂಬಲ್ಲಿ ಸೀತಾನದಿಯು ಪುಟ್ಟ ಜಲಪಾತವಾಗಿ ಧುಮುಕುತ್ತದೆ. ಕೊಕರ್ಣೆಯಲ್ಲಿರುವ ಅನಿತಾ ವಿದ್ಯಾಸಂಸ್ಥೆಯು ಶಿಕ್ಷಕಿಯರ ತರಬೇತಿ ಕೇಂದ್ರವನ್ನು ನಡೆಸುತ್ತಿದೆ. ಈ ಪರಿಸರದಲ್ಲಿ ಕುಡುಬಿ ಜನಾಂಗದವರು ಸಾಕಷ್ಟು ಪ್ರಮಾಣದಲ್ಲಿದ್ದಾರೆ. ***ಕೆಂಜೂರು :*** ಸೂರಾಲಿಗೆ ಸಮೀಪದಲ್ಲಿರುವ ಇದು ತೊಳಹರರ ಕಾಲದಲ್ಲಿ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದ ಅಂಶವನ್ನು ಬೆಮ್ಮಣ್ಣಾಡಿ ತೊಳಹನ ಕಾಲದ ವೀರೇಶ್ವರ ದೇವಾಲಯದ ೧೪೦೩ರ ಶಾಸನವನ್ನಾಧರಿಸಿ, ಬಿ.ವಸಂತಶೆಟ್ಟಿ ನಿರೂಪಿಸಿದ್ದಾರೆ. ಅಲ್ಲಿರುವ ಪಾದೆಮಠ, ಜತ್ತಾರುಮಠ, ಶಿರಿಮುಡಿಗುಡಿ, ಅಮ್ಮಿಯ ಮೇಲುಮಠ ಮತ್ತು ಕೆಳಮಠಗಳು ಉಲ್ಲೇಖಾರ್ಹವಾಗಿವೆ. ಪಾದೆಮಠದ ವೀರೇಶ್ವರ ದೇವಾಲಯದ ಗೆಂಡೆಸೇವೆ ಗಮನಾರ್ಹವಾಗಿದೆ. ***ಸಾಸ್ತಾವು :*** ಪೆಜಮಂಗೂರು ಗ್ರಾಮಕ್ಕೆ ಸೇರಿದ ಈ ಉಪಗ್ರಾಮದ ಶಾಸ್ತಾರೇಶ್ವರ ಗುಡಿಯ ೧೩೮೩ರ ಶಾಸನವನ್ನು ಆಧರಿಸಿ, ಹರಿಹರಪುತ್ರ ಶಾಸ್ತಾರನ ಕೇಂದ್ರವಿದಾಗಿರು ವುದರಿಂದ 'ಸಾಸ್ತಾವು' ಎಂಬ ಹೆಸರು ಇದಕ್ಕೆ ಬಂದಿದೆ ಎಂದು ವಸಂತಶೆಟ್ಟಿ ಹೇಳುತ್ತಾರೆ. ಇಲ್ಲಿ ವಾರ್ಷಿಕ ಜಾತ್ರೆಯಾಗುತ್ತದೆ.

**ಸೌಕೂರು :** ಇದು ತಾಲೂಕು ಕೇಂದ್ರ ಕುಂದಾಪುರದ ಗುಲ್ವಾಡಿ ಕಂದಾಯ ಗ್ರಾಮ(೪,೧೮೧)ಕ್ಕೆ ಸೇರಿದ ಉಪಗ್ರಾಮ. ಸೌಕೂರಿನಲ್ಲಿ ಸುಮಾರು ಐದು ಶತಮಾನಗಳಷ್ಟು ಪುರಾತನವಾದ ದುರ್ಗಾಪರಮೇಶ್ವರಿ ದೇವಾಲಯವಿದೆ. ಗರ್ಭಗುಡಿಯಲ್ಲಿ ಒಂದೇ ಪೀಠದ ಮೇಲೆ ತ್ರಿಶಕ್ತಿ (ಕಾಳಿ, ಲಕ್ಷ್ಮಿ ಹಾಗೂ ಸರಸ್ವತಿ)ಯರನ್ನು ಶಿವಲಿಂಗರೂಪದಲ್ಲಿ ಪ್ರತಿಷ್ಠಾಪಿಸಲಾಗಿದ್ದು, ಹಿಂಬದಿಯಲ್ಲಿ ದೇವಿಯರ ಪಂಚಲೋಹದ ಮೂರ್ತಿಗಳಿವೆ. ಅಲ್ಲದೆ ಈಶ್ವರ, ಗಣಪತಿ, ವೀರಭದ್ರ ಹಾಗೂ ಹುಲಿದೇವರ ಮೂರ್ತಿಗಳು ಇಲ್ಲಿವೆ. ಎದೆಮಟ್ಟದವರೆಗೆ ಮಾತ್ರವಿರುವ ವೀರಭದ್ರನ ಅಪರೂಪದ ಶಿಲ್ಪವಿದೆ. ಬಾಗಿಲು ಬೊಬ್ಬರ್ಯನ ಬಣ್ಣದ ಮೂರ್ತಿಯೂ ಇಲ್ಲಿದೆ. ಪಂಚಲೋಹದ ಬೃಹತ್ ಗಂಟೆಯೊಂದು ಇಲ್ಲಿದೆ. ಮಾಘ ಬಹುಳ ಮೂಲಾನಕ್ಷತ್ರದಂದು ಈ ದೇವಿಯ ಬ್ರಹ್ಮರಥೋತ್ಸವವಾಗುತ್ತಿದ್ದು, ಪ್ರತೀ ಸಂಕ್ರಮಣದಲ್ಲೂ ಚಿಕ್ಕ (ಪುಷ್ಪ)ರಥವನ್ನು ಎಳೆಯ ಲಾಗುತ್ತದೆ. ದೇವಾಲಯದ ಯಕ್ಷಗಾನ ಮೇಳವು ನವೆಂಬರ್–ಮೇ ನಡುವೆ ಭಕ್ತರ ಆಶಯದಂತೆ ದೇವಿಯ ಹೆಸರಿನಲ್ಲಿ ಹರಕೆಯ ಆಟವನ್ನು ವಿವಿಧೆಡೆ ಪ್ರದರ್ಶಿಸುವುದು ಉಲ್ಲೇಖಾರ್ಹವಾಗಿದೆ.

**ಹಟ್ಟಿಯಂಗಡಿ** (ಜನಸಂಖ್ಯೆ: ೧,೮೪೯): ತಾಲೂಕು ಕೇಂದ್ರ ಕುಂದಾಪುರದಿಂದ ಎಂಟು ಕಿ.ಮೀ. ಈಶಾನ್ಯಕ್ಕೆ ವಾರಾಹಿ ನದಿಯ ಉತ್ತರ ದಂಡೆಯ ಮೇಲಿರುವ ಪ್ರಾಚೀನ ಐತಿಹಾಸಿಕ ಪಟ್ಟಣ. ಬಾರಕೂರು, ಬಸರೂರು, ಉದ್ಯಾವರಗಳಂತೆ ಸಾವಿರಾರು ವರ್ಷಗಳ ಇತಿಹಾಸವನ್ನುಳ್ಳ ವಾಣಿಜ್ಯ ಪಟ್ಟಣ. ಹಿನ್ನೀರಿನ ಬಾಯಲ್ಲಿರು ವುದರಿಂದ ಇದಕ್ಕೆ ಸದಾ ಸಮುದ್ರದ ಸ್ನೇಹ. ಬಸರೂರು–ಹಟ್ಟಿಯಂಗಡಿಗಳು ವಾರಾಹಿ ನದಿಯ ಆಚೀಚೆ ದಡದಲ್ಲಿರುವ ಪ್ರಮುಖ ಬಂದರು ಪಟ್ಟಣಗಳಾಗಿದ್ದು, ಪರಸ್ಪರ ಸಂಬಂಧವನ್ನು ಹೊಂದಿದ್ದ ಕೇಂದ್ರಗಳು. ಪ್ರಾಚೀನ ಶಾಸನಗಳಲ್ಲಿ ಪಟ್ಟಿ, ಪಟ್ಟಿನಗರ ಎಂದೇ ಉಲ್ಲೇಖಿತಗೊಂಡಿರುವ ಇದು, ಹಿಂದೆ ಆಳುಪ,

ಶಾಂತಾರ ಹಾಗೂ ಹೊನ್ನಕಂಬಳಿ ಅರಸರ ರಾಜಧಾನಿ ಪಟ್ಟಣವೂ ಆಗಿತ್ತು. ಆಳುಪರಸರು ತಮ್ಮನ್ನು ಪಟ್ಟಿಯೊಡೆಯರೆಂದು ಕರೆದುಕೊಂಡರೆ, ಶಾಂತಾರರು ಪಟ್ಟಿ ಪೊಂಬುಚ್ಚಪುರವರಾಧೀಶರೆಂದು ತಮ್ಮನ್ನು ಕರೆದುಕೊಂಡಿದ್ದು, ಈ ಎರಡೂ ಪಟ್ಟಣಗಳ ನಡುವೆ ನೇರ ಮಾರ್ಗವೊಂದಿದ್ದು, ಅದನ್ನು ಹೂಜೇನು ತರುವ ಹಾದಿ ಎಂದು ಹಿಂದೆ ಕರೆಯಲಾಗುತ್ತಿತ್ತೆಂದು ಅಭಿಪ್ರಾಯವಿದ್ದು, ಹಟ್ಟಿಯಂಗಡಿಯ ೧೩೩೮ರ ಶಾಸನದಲ್ಲಿ ಕೋಟೇಶ್ವರ ದೇವರ ಉಲ್ಲೇಖವಿದೆ.

ಹಟ್ಟಿಯಂಗಡಿಯ ಆರಾಧ್ಯದೈವವಾದ ಲೋಕನಾಥೇಶ್ವರ ದೇವಾಲಯವು ಸುಮಾರು ಏಳನೆಯ ಶತಮಾನಕ್ಕೆ ಸೇರಿದ ಶಾಸನವನ್ನು ಹೊಂದಿರುವ ಪುರಾತನ ಪೂಜಾಸ್ಥಾನವಾಗಿದ್ದು, ಇತ್ತೀಚೆಗೆ ಸಾಕಷ್ಟು ಜೀರ್ಣೋದ್ಧಾರಗೊಂಡಿದ್ದು, ಆಕರ್ಷಕ ಗೋಪುರಗಳಿಂದ ಅಲಂಕೃತಗೊಂಡಿದೆ. ಗುಡಿಯ ನಾಲ್ಕು ದಿಕ್ಕಿನಲ್ಲಿ ಆದಿತ್ಯ, ಅಂಬಿಕಾ, ವಿಷ್ಣು, ಗಣನಾಥರ ಪ್ರತ್ಯೇಕಸ್ಥಾನಗಳಿದ್ದು, ನಡುವೆ ಮಹೇಶ್ವರನ ಸನ್ನಿಧಿಯೂ ಇದೆ. ಪರಿವಾರ ದೇವತೆಗಳ ಪೂಜೆಯ ನಂತರ, ಶಿವನು ಪೂಜಿಸಲ್ಪಡುವುದು ಇಲ್ಲಿನ ವಿಶೇಷವಾಗಿದೆ. ಇಲ್ಲಿರುವ ಮೂರ್ತಿಯು ಒಂದು ಕೈಯಲ್ಲಿ ಬೆಣ್ಣೆ ಹಿಡಿದಿರುವಂತೆ ತೋರುತ್ತಿದ್ದು, ಇದರಿಂದಾಗಿ ಆ ಮೂರ್ತಿಯನ್ನು ಬೆಣ್ಣೆ ವಾಮನ  ಎಂದು ಕರೆಯಲಾಗುತ್ತಿದೆ. ಇದೇ ರೀತಿ ಗಣನಾಥನ ಶಿಲ್ಪವೂ ವಿಶಿಷ್ಟವಾದ ಮೂರ್ತಿಯಾಗಿದ್ದು, ಆಕರ್ಷಕವಾಗಿದೆ. ಮಧ್ಯಯುಗದಲ್ಲಿ ಗೋಷ್ಠಿಪುರ ಎಂಬ ಹೆಸರನ್ನು ಹೊಂದಿದ್ದ ಹಟ್ಟಿಯಂಗಡಿಯ ೧೫೨೨ರ ಶಾಸನ ಹೊನ್ನಕಂಬಳಿ ಅರಸರ ದತ್ತಿಯಾಗಿದೆ. ಇಲ್ಲಿಯ ೧೫೨೯ರ ಶಾಸನವೊಂದರಲ್ಲಿ ಯಕ್ಷಗಾನ ಪ್ರಸಂಗ ಕರ್ತೃ ರಾಮಭಟ್ಟರ ಮುಂದಾಳತ್ವದಲ್ಲಿ ಹಾರುನಾಡ ಸಮಸ್ತರು, ಲೋಕನಾಥೇಶ್ವರ ದೇವರಿಗೆ ತುಡುವಿನ ಉತ್ಸವಕ್ಕೆ ದಾನ ಬಿಟ್ಟ ಉಲ್ಲೇಖವಿದೆ. ೧೫೯೧ರ ಶಾಸನವೂ ಅದೇ ಅರಸರ ದತ್ತಿಯಾಗಿದೆ. ಈ ದೇವರ ತೇರನ್ನು ಕಾಮನದಹನ ದಿನದಂದೇ ಎಳೆಯಲಾಗುತ್ತದೆ.

ಹಟ್ಟಿಯಂಗಡಿ ಪ್ರಾಚೀನ ಕಾಲದಲ್ಲಿ ಪ್ರಮುಖ ಜೈನನೆಲೆಯಾಗಿದ್ದು, ಇದನ್ನು ಅಲ್ಲಿಯ ಶಾಸನಗಳೂ ಖಚಿತಪಡಿಸುತ್ತವೆ. ಇಲ್ಲಿರುವ ಚಂದ್ರನಾಥ ಬಸದಿಯಲ್ಲಿ ಚಂದ್ರನಾಥ ತೀರ್ಥಂಕರ ಹಾಗೂ ಪದ್ಮಾವತಿ ಯಕ್ಷಿಯರಿದ್ದು, ಶಾಂತಾರ ಅರಸ ಜಿನದತ್ತರಾಯನು ನಿರ್ಮಿಸಿದನೆಂಬ ಅಭಿಪ್ರಾಯವಿದ್ದು, ಸಮೀಪದ ಅರಮನೆಗುಡ್ಡೆ ಎಂಬ ಜಾಗೆಯಲ್ಲಿ ಅವನ ಕಾಲದಲ್ಲಿ ಅರಮನೆ ಇತ್ತೆಂದು ಹೇಳಲಾಗುತ್ತದೆ. ಈ ಬಸದಿಯು ಹೊಂಬುಚ್ಚ ಮಠದ ನಿಯಂತ್ರಣಕ್ಕೆ ಒಳಪಟ್ಟಿದೆ. ಈ ಅಂಶ ಅಲ್ಲೇ ಇರುವ ೧೩೩೮ರ ಶಾಸನದಲ್ಲಿ ದಾಖಲಾಗಿರುವುದು ಉಲ್ಲೇಖಾರ್ಹ. ಅಲ್ಲೇ ಇರುವ ೧೩೭೭ರ ಇನ್ನೊಂದು ಶಾಸನದಿಂದ ಲೆಪ್ಪದ ಚಂದ್ರನಾಥನನ್ನು ಶಿಲಾಮಯಮೂರ್ತಿಯನ್ನಾಗಿ ಮಾಡಿಸಿದ ಉಲ್ಲೇಖವಿದೆ. ಈ ಬಸದಿಯ ಹಿಂಬದಿಯಲ್ಲೇ ಜಟ್ಟಿಂಗರಾಯನ ಬಸದಿಯಿದೆ. ಕ್ಷೇತ್ರಪಾಲ ಜಟ್ಟಿಂಗರಾಯನಿಗಾಗಿ ನಿರ್ಮಿಸಿರುವಂತೆ ತೋರುವ ಈ ಬಸದಿಯ ಗರ್ಭಗೃಹದಲ್ಲಿ ಜಟ್ಟಿಂಗರಾಯನ ಕಲಾತ್ಮಕ ಶಿಲ್ಪವಿದೆ. ಈ ಗುಡಿಯ ದ್ವಾರಪಾಲಕರಾದ ಗುಟ್ಟ್ರಮೆಲ್ಲ ಹಾಗೂ ಭೂತನಾಥರ ಸುಂದರ ಕಾಷ್ಠಮೂರ್ತಿಗಳಿವೆ. ಇಂದು ಇಲ್ಲಿ ಜೈನ ಕುಟುಂಬಗಳಿಲ್ಲದಿದ್ದರೂ ಈ ಬಸದಿಗಳು ಸುಸ್ಥಿತಿಯಲ್ಲಿರುವುದು ಉಲ್ಲೇಖಾರ್ಹ.

ಹಟ್ಟಿಯಂಗಡಿಯು, ಹೆಮ್ಮಾಡಿಯಂತೆ ಕೃಷ್ಣ ಆರಾಧನಾ ಭಕ್ತಿ ಕೇಂದ್ರವೂ ಆಗಿದ್ದು, ಮಹಾರಾಷ್ಟ್ರದ ರಮಾವಲ್ಲಭದಾಸರ (೧೬ನೆಯ ಶತಮಾನದಲ್ಲಿ) ಪ್ರಭಾವದಿಂದಾಗಿ ಕೃಷ್ಣ ಕೇಂದ್ರವಾಗಿ ಜನಪ್ರಿಯತೆ ಗಳಿಸಿತ್ತು. ಅವರ ಶಿಷ್ಯರು ಇಲ್ಲಿಯೇ ಉಳಿದು ಗೋಸಾಯಿ ಪರಂಪರೆ ಆರಂಭಗೊಂಡು, ಗೋಪಾಲಕೃಷ್ಣ ಮಠವು ಸ್ಥಾಪಿಸಲ್ಪಟ್ಟಿತು. ಈ ಮಠದಲ್ಲಿ ಗೇರುಸೊಪ್ಪೆಯಿಂದ ತಂದ ವೇಣುಗೋಪಾಲನ ಕಲಾತ್ಮಕ ವಿಗ್ರಹವಿದ್ದು, ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆ ಇದೆ. ಅಲ್ಲದೆ ಗಂಗಾಧರದಾಸ ಹಾಗೂ ಗೋಪಾಲ ದಾಸರ ಸಮಾಧಿಗಳಿವೆ. ಈ ಮಠದ ಸನಿಹದಲ್ಲಿರುವ ಶಂಕರನಾರಾಯಣಮಠದಲ್ಲಿ ಶಿವಲಿಂಗ ರೂಪದಲ್ಲಿ ಶಂಕರನಾರಾಯಣರು ಪೂಜಿಸಲ್ಪಡುತ್ತಿದ್ದು, ಹಿಂಬದಿಯ ಸಿಂಹಾಸನದ ಮೇಲೆ ಬೆಣ್ಣೆಕೃಷ್ಣ, ವೆಂಕಟರಮಣ, ಗರುಡ ಮುಂತಾದ ಪಂಚಲೋಹದ ಉತ್ಸವ ಮೂರ್ತಿಗಳಿವೆ. ಇದೇ ಪರಿಸರದಲ್ಲಿರುವ ಮೂಡು (ಶಿವಮೌನೇಶ್ವರ)ಮಠವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಗೌಡಸಾರಸ್ವತ ಸಮುದಾಯಕ್ಕೆ ಸೇರಿದ

ಈ ಮಠಗಳು ಶ್ರಾವಣ ಮಾಸದಲ್ಲಿ ಸಂಯುಕ್ತವಾಗಿ ಮೂರು ವಾರಗಳ ಕಾಲ ಆಚರಿಸುವ 'ಅಷ್ಟಮಿ ವ್ರತ' ಉತ್ಸವವು ಅಧ್ಯಯನ ಯೋಗ್ಯ ವಿಷಯವೆಂದು ಕೆ. ಅನಂತರಾಮು ಅಭಿಪ್ರಾಯಪಡುತ್ತಾರೆ.

ಊರ ಸಮೀಪದಲ್ಲೇ ಇರುವ ಗುಡ್ಡದ ಮೇಲೆ ಮಾರಲದೇವಿಯ ವಿಶಾಲವಾದ ಆಲಯವಿದೆ. ಗುಡಿಯ ಗೋಪುರವನ್ನು ಅಷ್ಟಲಕ್ಷ್ಮಿ ಹಾಗೂ ನವದುರ್ಗೆಯರ ಮೂರ್ತಿಗಳು ಅಲಂಕರಿಸಿವೆ. ಇಲ್ಲಿ ತ್ರಿಮೂರ್ತಿನಿಯರು ಆರಾಧಿಸಲ್ಪಡುತ್ತಿದ್ದು, ಸುಮಾರು ಎಂಟನೆಯ ಶತಮಾನದಷ್ಟು ಪ್ರಾಚೀನ ಪೂಜಾಸ್ಥಾನ ಇದೆಂಬ ಅಭಿಪ್ರಾಯವಿದೆ. ಗರ್ಭಗೃಹದಲ್ಲಿ ಒಂದೇ ಪೀಠದ ಮೇಲೆ, ಚಂದನದಿಂದ ಮಾಡಿದ ದೇವಿಯರ ಮುಖಗಳಿವೆ. ಪರಿವಾರದೇವತೆಯಾಗಿ ವೀರಭದ್ರನ ಕಾಷ್ಠ ಬಿಂಬವಿದೆ. ಇಲ್ಲಿಯ ವಿನಾಯಕ ದೇವಾಲಯವು ನೂತನ ಗೋಪುರದಿಂದ ರಾರಾಜಿಸುತ್ತಿದ್ದು, ಗರ್ಭಗೃಹದಲ್ಲಿ ಬಾಲವಿನಾಯಕನು ಉದ್ಭವಮೂರ್ತಿಯಾಗಿ ಪೂಜಿಸಲ್ಪಡುತ್ತಿದ್ದಾನೆ. ಈ ಗುಡಿಗೆ ಸೇರಿದಂತೆ ಇರುವ ಪ್ರಾಚ್ಯ ವಿದ್ಯಾಲಯವು ಗುರುಕುಲ ಮಾದರಿಯಲ್ಲಿ ಸಂಸ್ಕೃತ ಬೋಧನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಈ ದೇವಾಲಯದಲ್ಲಿ ಮಧ್ಯಾಹ್ನ ಭಕ್ತರಿಗೆ ಅನ್ನ ಸಂತರ್ಪಣೆ ಇರುತ್ತದೆ. ಅರಮನೆಗುಡ್ಡೆ ಪರಿಸರದಲ್ಲಿ ಶಾತವಾಹನರಿಗೂ ಹಿಂದಿನ ಕಾಲಕ್ಕೆ ಸೇರಿದ ಅವಶೇಷಗಳು ದೊರೆಯುವ ಸಾಧ್ಯತೆಗಳಿವೆ ಎಂಬ ಅಂಶವನ್ನು ಡಾ. ಅ. ಸುಂದರ ಬಹಳ ಹಿಂದೆಯೇ ವ್ಯಕ್ತಪಡಿಸಿದ್ದಾರೆ. ಇದನ್ನು ಉತ್ಖನನಕ್ಕೆ ಒಳಪಡಿಸಿದರೆ ಹಲವಾರು ಮಹತ್ವದ ಅಂಶಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ. ಅದೇ ರೀತಿ ಇಲ್ಲಿಯ ಏಕಾಂತೇಶ್ವರ ಗುಡ್ಡದ ಮೇಲೆ ಶಿವಾಲಯವಿದ್ದುದಕ್ಕೆ ಕುರುಹಾಗಿ ಶಿವಲಿಂಗವಿದೆ. ರೈಲುಮಾರ್ಗ ರಚನೆಯ ಸಂದರ್ಭದಲ್ಲಿ ವಿಶ್ವಕರ್ಮರ ದೇವಾಲಯವೊಂದು ಕಣ್ಮರೆಯಾಯಿತೆಂದು ತಿಳಿದುಬರುತ್ತದೆ.

**ಹಿರಿಯಡ್ಕ:** ಬೊಮ್ಮರಬೆಟ್ಟು (೭,೮೫೩) ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ ಇದಾಗಿದ್ದು, ಉಡುಪಿಯಿಂದ ೧೩ಕಿ.ಮೀ ಪೂರ್ವಕ್ಕೆ ಉಡುಪಿ–ಆಗುಂಬೆ ಮಾರ್ಗದಲ್ಲಿರುವ ಪ್ರಮುಖ ಸ್ಥಳ. ತುಳುನಾಡಿನ ಆದಿವಾಸಿಗಳಿಗೆಲ್ಲ ಹಿರಿಯಡ್ಕವೇ ಮೂಲಸ್ಥಾನವೆಂದು ಹೇಳಲಾಗುತ್ತದೆ. ಅಲ್ಲಿ ಊರ ಪೇಟೆಬೀದಿಯಲ್ಲಿರುವ ಮಹತೋಭಾರ ವೀರಭದ್ರ ದೇವರ ಆಲಯದಿಂದಾಗಿ ಪ್ರಸಿದ್ಧವಾಗಿದೆ. ಗುಡಿಯ ಮುಂದೆ ಎತ್ತರದ ಧ್ವಜಸ್ತಂಭವಿದ್ದು, ವೀರಭದ್ರನ ಸನ್ನಿಧಿಯು ಕಾವತಾರಿನಂತೆ ದೊಡ್ಡದಿದ್ದು, ದೇವ–ದೈವ–ಭೂತಾಲಯಗಳೆಲ್ಲ ಒಂದಾಗಿ ಸಂಗಮಿಸಿರುವ ಅಪೂರ್ವ ಆರಾಧನಾ ಕೇಂದ್ರವಿದಾಗಿದೆ. ಇಲ್ಲಿರುವ ಅಡಕತ್ತಾಯ ದೈವದ ನೆಲೆಯು ಉಲ್ಲೇಖಾರ್ಹವಾಗಿದ್ದು, ಅದರಿಂದಾಗಿಯೇ ಊರಿಗೆ ಹಿರಿಯಡ್ಕ ಎಂಬ ಹೆಸರು ಬಂದಿದೆಯೆಂಬ ಅಭಿಪ್ರಾಯವಿದೆ.

ವೀರಭದ್ರನ ಗುಡಿಯ ಪ್ರಧಾನ ಗರ್ಭಗೃಹದಲ್ಲಿ ವೀರಭದ್ರನ ಪಂಚಲೋಹದ ಪ್ರತಿಮೆ ಇದ್ದು, ಅದೇ ಪೀಠದಲ್ಲಿ ಅಬ್ಬಗ, ದಾರಗ, ಖಡ್ಗೇಶ್ವರ, ವಾಂಛಿತಾರ್ಥ ಹಾಗೂ ರಾಜರಾಜೇಶ್ವರಿಯರಿದ್ದಾರೆ. ಅಲ್ಲೇ ಪ್ರತ್ಯಂಗಿರ ಎಂಬ ದೈವವಿದ್ದು, ಹೊರಗೆ ನಾಗ–ಬ್ರಹ್ಮ–ಹಾಗೂ ದ್ವಾರಪಾಲಕರ ನೆಲೆಗಳಿವೆ. ಅಲ್ಲದೆ ಪಂಚ (ನಾಗ–ಹಂಸ–ಕಪಿಲ–ಕರ್ಣ–ಸಿದ್ಧಿ) ಯಕ್ಷಿಯರ ಸ್ಥಾನಗಳೂ ಇಲ್ಲಿವೆ. ಗುಡಿಯ ಹೊರಸುತ್ತಿನಲ್ಲಿರುವ ಪರಿವಾರ ದೇವತೆಗಳು ಅಚ್ಚರಿ ಮೂಡಿಸುತ್ತವೆ. ಪಿಲಿಚಾಮುಂಡಿ ನಂದೀಶ, ನಂದಿಪಾಲ, ನಂದಿಗೋಣ, ಶೃಂಗಾರನಂದಿ, ಮಾಲಿ, ಸುಮಾಲಿ, ಕೊಡಮಣಿತ್ತಾಯ, ಖಡ್ಗರಾವಣ ಮುಂತಾದ ಕಾಷ್ಠ ಶಿಲ್ಪಗಳಿವೆ. ಹೊರಸುತ್ತಿನಲ್ಲಿರುವ ಅಡಕತ್ತಾಯನ ಗುಡಿ ಅಪರೂಪದ ರಚನೆಯಾಗಿದ್ದು, ಭಾರಿಯಾದ ಕಂಬವೊಂದನ್ನು ಸ್ಥಾಪಿಸಿ, ಅದನ್ನಾಧರಿಸಿ ಎರಡು ಅಂತಸ್ತಿನ ಕಲಾತ್ಮಕ ಕೆತ್ತನೆಯಿಂದೊಡಗೂಡಿದ ಮರದ ಗುಡಿಯೊಂದನ್ನು ಕೇರಳ ಶೈಲಿಯಲ್ಲಿ ನಿರ್ಮಿಸಲಾಗಿದೆ. ಗುಡಿ ಸಮೀಪದಲ್ಲಿ ವಿಶಾಲವಾದ ಸರೋವರವಿದ್ದು, ಇಲ್ಲಿರುವ ಬ್ರಹ್ಮರಥವನ್ನು ಜಿಲ್ಲೆಯ ಕೆಲವೇ ದೊಡ್ಡ ರಥಗಳ ಸಾಲಿಗೆ ಸೇರಿಸಬಹುದಾಗಿದೆ. ವೀರಭದ್ರ ದೇವರ ಸನ್ನಿಧಿಯಲ್ಲೂ ಹೊಯ್ಲುದಾಕ್ಲು ಮತ್ತು ವಾಕ್ಯ ದೋಷ ಪ್ರಮಾಣ ಕಟ್ಟಳೆಗಳಿದ್ದು, ಅದನ್ನು ಗುಡಿಯ ಮುಂದಿರುವ "ಪ್ರಮಾಣ ಚಾವಡಿ"ಯಲ್ಲಿ ನಡೆಸಲಾಗುತ್ತದೆ. ಮಂಟಪದ ಛಾವಣಿಯಲ್ಲಿ ಬ್ರಹ್ಮನ ಕಾಷ್ಠ ಮೂರ್ತಿಯಿದೆ. ಸಿರಿ ಹುಣ್ಣಿಮೆಯಂದು ಇಲ್ಲಿ ಮಕ್ಕಳಿಂದ ಕಂಬಿಲು ಸೇವೆ ಮಾಡಿಸಲಾಗುತ್ತದೆ. ಮೇಷ

ಮಾಸದ ಚಿತ್ರಾಪೂರ್ಣಿಮೆಯಂದು ನಡೆಯುವ ಸಿರಿಜಾತ್ರೆ ಆಕರ್ಷಕವಾಗಿದ್ದು, ನಾಲ್ಕನೆಯ ದಿನ ದೇವರ ಬ್ರಹ್ಮರಥೋತ್ಸವವಾಗುತ್ತದೆ. ನವರಾತ್ರಿಯಲ್ಲಿ ಬಂಗಾರದ ಶ್ರೀಚಕ್ರದ ಆರಾಧನೆ ಇರುತ್ತದೆ. ವಿಜಯದಶಮಿಯಂದು ದೇವರ ಫೌಜು ಎಂಬ ಮೆರವಣಿಗೆ ಕೊಂಟನಕಟ್ಟೆವರೆಗೂ ಹೋಗುತ್ತದೆ. ಈ ಪರಿಸರದ ಪಳ್ಳಿ ಶ್ರೀನಿವಾಸ ಹೆಗ್ಡೆ ಎಂಬ ಕೃಷಿ ಪಂಡಿತರು ತಮ್ಮ ೮೦ ಎಕರೆ ಕೃಷಿ ಭೂಮಿಯನ್ನು 'ಖಜಾನೆ ಫಾರಂ' ಮಾಡಿ ಕೃಷ್ಯಾಶ್ರಮವನ್ನಾಗಿಸಿದ್ದಾರೆ. ಹಿರಿಯಡ್ಕಾಕ್ಕೆ ಸಮೀಪವಿರುವ ಪೆರ್ಣಂಕಿಲದಲ್ಲಿ ಉದ್ಭವ ಮಹಾಗಣಪತಿಯ ಸನ್ನಿಧಿ ಇದೆ.

**ಹೂವಿನ ಕೆರೆ** : ಕುಂಭಾಸಿಗೆ ಆರು ಕಿ.ಮೀ. ಅಂತರದ ಆಸೋಡು (ಜನಸಂಖ್ಯೆ: ೯೬೮) ಕಂದಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಉಪಗ್ರಾಮ. ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದೆಮಠದ ಯತಿಗಳಾಗಿದ್ದ ವಾದಿರಾಜಸ್ವಾಮಿ (೧೪೮೦–೧೬೦೦)ಗಳ ಜನ್ಮಸ್ಥಳವಾಗಿರುವುದರಿಂದ ಮಹತ್ವ ಪಡೆದಿದೆ. ಇಲ್ಲಿ ವಾದಿರಾಜತೀರ್ಥರ ಗುಡಿ ಹಾಗೂ ಮಠಗಳಿವೆ. ಪುತ್ರಸಂತಾನವಿಲ್ಲದೆ ಕೊರಗುತ್ತಿದ್ದ ರಾಮಾಚಾರ್ಯ–ಗೌರಿದೇವಿ ದಂಪತಿಗೆ ಕುಂಭಾಸಿ ಮಠದ ವಾಗೀಶತೀರ್ಥರ ಅನುಗ್ರಹದಂತೆ ಜನಿಸಿದ ಪುತ್ರರತ್ನವೇ ವಾದಿರಾಜತೀರ್ಥರಾಗಿದ್ದು, ಗುರುಗಳ ಆಶಯದಂತೆ ಇವರೇ ಮುಂದೆ ಆ ಮಠದ ಗುರುಗಳಾಗಿ ಸೋದೆಯ ಅರಸಪ್ಪನಾಯರ್ (೧೫೫೫–೯೮)ನನ್ನು ವಿಪತ್ತಿನಿಂದ ರಕ್ಷಿಸುವ ಮೂಲಕ ಅವನಿಂದ ಪುರಸ್ಕೃತರಾಗಿ ಸೋದೆಯಲ್ಲೇ ನೆಲೆಸಿ, ಮಠ ನಿರ್ಮಿಸಿ ಅಲ್ಲೇ ಸಶರೀರಿಯಾಗಿ ವೃಂದಾವನಸ್ಥರಾದರೆಂದು ಅಭಿಪ್ರಾಯವಿದೆ. ಇದರಿಂದಾಗಿ ಉಡುಪಿಯ ಅಷ್ಟಮಠಗಳ ಸಾಲಿನಲ್ಲಿ ಕುಂಭಾಸಿ ಮಠ ಎಂಬ ಹೆಸರು ಮರೆಯಾಗಿ ಸೋದೆಮಠ ಎಂಬ ಹೆಸರೇ ಹೆಚ್ಚು ಜನಪ್ರಿಯವಾಯಿತೆಂದು ಹೇಳಲಾಗುತ್ತದೆ. ಮಧ್ವಮತ ಪ್ರಚಾರಕರಾದ ವಾದಿರಾಜರು ಕನ್ನಡ ಮತ್ತು ಸಂಸ್ಕೃತಗಳಲ್ಲಿ ಹಲವಾರು ಧಾರ್ಮಿಕ ಗ್ರಂಥಗಳನ್ನು ರಚಿಸುವುದರ ಜೊತೆಗೆ ಹಯವದನಾಂಕಿತವುಳ್ಳ ಅನೇಕ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ವಾದಿರಾಜರು ಜನಿಸಿದರೆಂದು ಹೇಳಲಾಗುವ ಗೌರಿಗದ್ದೆಯಲ್ಲೇ ವಾದಿರಾಜರ ದೇವಾಲಯವಿದ್ದು, ಒಳಗೆ ವಾದಿರಾಜತೀರ್ಥರ ಮೂರ್ತಿ ಇದೆ. ಸನಿಹದ ಬಂಡೆಯೊಂದರ ಮೇಲಿರುವ ಪಾದಚಿಹ್ನೆ ವಾದಿರಾಜರದೆಂಬ ಅಭಿಪ್ರಾಯವಿದ್ದು, ಮಂಟಪವೊಂದನ್ನು ನಿರ್ಮಿಸಲಾಗಿದೆ. ನಾಗನಕಟ್ಟೆಯ ಬಳಿ ಸುಂದರವಾದೊಂದು ಪುಷ್ಕರಣಿ ಇದೆ.

**ಹೆಬ್ರಿ** (ಜನಸಂಖ್ಯೆ: ೫,೭೧೦): ತಾಲೂಕು ಕೇಂದ್ರ ಕಾರ್ಕಳದಿಂದ ೩೩ ಕಿ.ಮೀ. ಅಂತರದಲ್ಲಿರುವ ಪ್ರಮುಖ ಸ್ಥಳ. ಆಗುಂಬೆ ಘಾಟಿಗೆ ಸಮೀಪದಲ್ಲಿದೆ ಹೆಬ್ರಿ, ಚಾರ ಹಾಗೂ ಶಿವಪುರಗಳ ಮೂಲಕವೇ ಹೇರೆತ್ತಿನ ಬಂಡಿಗಳು ಮುಂದೆ ಸಾಗುತ್ತಿದ್ದು, ಬಾರಕೂರು ಕಡೆಯಿಂದ ಬರುವ ವ್ಯಾಪಾರಿಗಳೂ ಇದೇ ಮಾರ್ಗದಲ್ಲಿ ನಡೆಯುತ್ತಿದ್ದುದು ಇದರ ಪ್ರಾಮುಖ್ಯತೆಗೆ ಕಾರಣವಾಗಿತ್ತು. ಹೆಬ್ರಿಬೀಡು ಎಂದು ಕರೆಯಲಾಗುವ ಸ್ಥಳದಲ್ಲಿ ಪ್ರಾಚೀನ ಅರಸು ಪರಂಪರೆಗೆ ಸೇರಿದ ಮನೆತನವೊಂದು ಈಗಲೂ ಇದೆಯೆಂದು ತಿಳಿದುಬರುತ್ತದೆ. ಹೆಬ್ರಿ ಗ್ರಾಮದ ವ್ಯಾಪ್ತಿಯಲ್ಲಿರುವ 'ಚಾರ' ಎಂಬುದು ಹಿಂದೆ ಜೈನ ಅರಸುಗಳು ಆಳುತ್ತಿದ್ದ ಪಟ್ಟಣವಾಗಿತ್ತು. ಪ್ರಾಚೀನ ಶಾಸನಗಳಲ್ಲಿ ಚೇರನಗರ, ಚೇರಪುರ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಮಹತ್ವ ಪಡೆದಿತ್ತು. ಚಾರದಲ್ಲಿರುವ ಮಹಿಷಮರ್ಧಿನಿಯ ಗುಡಿಯು ಪುರಾತನ ಶಕ್ತಿ ಕೇಂದ್ರಗಳಲ್ಲಿ ಒಂದಾಗಿದೆ. ಹಿಂದೆ, ಇದೊಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಘಟ್ಟದ ಮೇಲಿನ ಹಾಗೂ ಕೆಳಗಿನ ವ್ಯಾಪಾರಕ್ಕೆ ಸಂಪರ್ಕ ಸೇತುವಾಗಿದ್ದು, ಇಂದಿಗೂ ಈ ಸ್ಥಳದ ಒಂದು ಭಾಗವನ್ನು ಅಂಗಡಿಚಾರ ಎಂದೇ ಕರೆಯಲಾಗುತ್ತಿದೆ. ಇಲ್ಲಿರುವ ಪಾಳು ಬಿದ್ದ ಜೈನಬಸದಿಗಳು ಅಂದಿನ ದಿನಗಳಲ್ಲಿದ್ದ ಜೈನವಣಿಕ ಸಮಾಜದ ಮೂಕಸಾಕ್ಷಿಗಳಾಗಿದ್ದು, ೧೪೩೩ರ ಶಾಸನದಿಂದ ಮಾದಪ್ಪಸೆಟ್ಟಿ ಹೊಸಬುಸೆಟ್ಟಿಯರು ಇಲ್ಲಿಯ ಬಸದಿಯನ್ನು ನಿರ್ಮಿಸಿದ ಅಂಶ ಗೊತ್ತಾದರೆ ೧೪೫೨ರ ಇನ್ನೊಂದು ಶಾಸನ ಆ ಬಸದಿಗೆ ವಿವಿಧ ಗ್ರಾಮಸ್ಥರು ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಇತ್ತೀಚೆಗೆ ಜೀರ್ಣೋದ್ಧಾರಗೊಂಡಿರುವ ಈ ಗುಡಿಯಲ್ಲಿ ವರ್ಷಂಪ್ರತಿ ಮಕರ ಸಂಕ್ರಮಣದಂದು ಜರುಗುವ 'ಏಳಾಯಣ ಪರ್ವ' ವಿಶಿಷ್ಟವಾಗಿರುತ್ತದೆ. ಹೆಬ್ರಿಯಲ್ಲಿರುವ ಅನಂತಪದ್ಮನಾಭ ದೇವಾಲಯವು ಹನ್ನೆರಡನೆಯ ಶತಮಾನದಷ್ಟು ಪುರಾತನದ್ದಾಗಿದೆ. ಆದರೆ ಇಲ್ಲಿಯ ಶಿಲ್ಪವು ಶೇಷನಯನ ಶಿಲ್ಪವಾಗಿರದೆ, ಸ್ಥಾನಿಕ ಭಂಗಿಯಲ್ಲಿರುವ

ಚತುರ್ಭುಜಧಾರಿ ವಿಷ್ಣು ಶಿಲ್ಪವಾಗಿದೆ. ಗುಡಿ ಆವರಣದಲ್ಲಿ ಖಡ್ಗರಾವಣ ಹಾಗೂ ಧೂಮಾವತಿ ದೈವಸ್ಥಾನಗಳಿವೆ. ಕುಂಭ ಸಂಕ್ರಮಣದಿಂದ ಮೂರನೆಯ ದಿನಕ್ಕೆ ಇಲ್ಲಿ ರಥೋತ್ಸವವಾಗುತ್ತಿದ್ದು, ಮೂರು ಕಿ.ಮೀ. ಅಂತರದಲ್ಲಿರುವ ಸೀತಾನದಿಯಲ್ಲಿ ಮೂರನೆಯ ದಿನ ಅವಭೃತೋತ್ಸವವಿರುತ್ತದೆ. ಇಲ್ಲಿಯ ಅನಂತೇಶ್ವರ ಗುಡಿಯ ಪ್ರಾಕಾರದಲ್ಲಿರುವ ಶಾಸನದಿಂದ ಕೃಷ್ಣದೇವರಾಯನು ನೀಡಿದ ದಾನದ ವಿಷಯ ಗೊತ್ತಾಗುತ್ತದೆಂಬ ಅಭಿಪ್ರಾಯವಿದೆ. ಆದರೆ ಇದರ ನೈಜತೆಯನ್ನು ಪಿ.ಎನ್.ನರಸಿಂಹಮೂರ್ತಿ ಅನುಮಾನಿಸುತ್ತಾರೆ. ಹೆಬ್ರಿಗೆ ಸೇರಿದ ‘ತಾಣ’ ಎಂಬಲ್ಲಿರುವ ಅರ್ಧನಾರೀಶ್ವರ ಗುಡಿ ಉಲ್ಲೇಖಾರ್ಹವಾಗಿದೆ. ಈ ದೇವರಿಗೆ ಸಂಬಂಧಿಸಿದ ಐದು ದಿನಗಳ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ನಡೆಯುವ ಅಂಬಡಿ ಉತ್ಸವ ಉಲ್ಲೇಖಾರ್ಹ. ಈ ಗುಡಿಯ ಆವರಣದಲ್ಲಿ ಅಬ್ಬಕ್ಕ–ದಾರಕ್ಕ, ಕೋಟಿ–ಚನ್ನಯ ಮುಂತಾದ ದೈವಸ್ಥಾನಗಳಿವೆ. ಇಲ್ಲಿರುವ ಕೋಟಿ ಚನ್ನಯರ ಗರಡಿಯ ನಿತ್ಯಪೂಜೆಯನ್ನು ಮೊಯ್ಲಿ ಜನಾಂಗದವರು ಮಾಡುತ್ತಾರೆ. ಇಲ್ಲಿ ಖಡ್ಗೇಶ್ವರಿ, ನಂದಿ, ಮಹಿಷಾಂತಾಯ, ಮೈಂದಲಮ್ಮ (ಕಂಕುಳಲ್ಲಿ ಮಗುವೊಂದನ್ನುಳ್ಳ ಇವಳು ಕೋಟಿಚನ್ನಯರ ಸಹೋದರಿ ಎಂದು ಹೇಳಲಾಗುತ್ತದೆ) ಹಾರೀತಿ / (ಅಂಬಿಕಾಯಕ್ಷಿ?): ಜಾಂಡಿ, ಶಿವರಾಯಿ, ಮಾರಿಯಮ್ಮ ಮುಂತಾದ ಅಸಂಖ್ಯಾತ ದೈವ–ದೇವಸ್ಥಾನಗಳಿವೆ. ಇಲ್ಲಿಯ ದುರ್ಗಾಪರಮೇಶ್ವರಿಗೆ ಜರುಗುವ ಗೆಂಡೋತ್ಸವದಲ್ಲಿ ಮತ್ತಿ ದಿಂಡನ್ನೆ ಬಳಸಲಾಗುತ್ತದೆ. ನೆರೆಯ ಶಿವಪುರದ ಶಂಕರದೇವರ ಗುಡಿಯು ೧೪೧೦ರಲ್ಲಿ ಜೀರ್ಣೋದ್ಧಾರಗೊಂಡ ಅಂಶ ಅಲ್ಲಿರುವ ಶಾಸನದಲ್ಲಿದೆ. ಕರ್ನಾಟಕ ರಾಜ್ಯಕ್ಕೆ ವೀರಪ್ಪ ಮೊಯ್ಲಿಯವರನ್ನು ಮುಖ್ಯಮಂತ್ರಿಯನ್ನಾಗಿ ನೀಡಿದ ಶ್ರೇಯಸ್ಸು ಈ ವಿಧಾನಸಭಾಕ್ಷೇತ್ರಕ್ಕೆ ಸಲ್ಲುತ್ತದೆ.

**ಹೆಮ್ಮಾಡಿ** (ಜನಸಂಖ್ಯೆ: ೩,೯೮೩): ತಾಲೂಕು ಕೇಂದ್ರ ಕುಂದಾಪುರದಿಂದ ಏಳು ಕಿ.ಮೀ. ಉತ್ತರಕ್ಕೆ ಹೆದ್ದಾರಿಯಲ್ಲಿರುವ ಧಾರ್ಮಿಕ ಕೇಂದ್ರ. ಅಲ್ಲಿರುವ ಸಾರಸ್ವತರ ಮಠದಿಂದಾಗಿ ಪ್ರಸಿದ್ಧವಾಗಿದೆ. ಸ್ಥಳೀಯ ಸಾಮಂತರಸರ ಕಾಲದಲ್ಲಿ ನಿರ್ಮಾಣಗೊಂಡಿರುವ ಇದೊಂದು ದೇವಾಲಯವಾಗಿದ್ದು, ದತ್ತಾತ್ರೇಯ, ಗೋಪಾಲಕೃಷ್ಣ ಹಾಗೂ ರಾಜರಾಜೇಶ್ವರಿ ಮೂರ್ತಿಗಳನ್ನಿಲ್ಲಿ ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಯೋಗಿನಿ ಶಾಂತೇರಿ ಜೋಗವ್ವೆ ಹಾಗೂ ಕೃಷ್ಣದಾಸ ಗೋಸಾಯಿ ಎಂಬ ಆಧ್ಯಾತ್ಮಿಗಳ ಸಮಾಧಿಗಳೂ ಇವೆ. ಹಟ್ಟಿಯಂಗಡಿಯಂತೆ ಇದೂ ಕೂಡ ಪ್ರಾಚೀನ ಕೃಷ್ಣ ಆರಾಧನಾ ಕೇಂದ್ರವಾಗಿದ್ದು, ಮಹಾರಾಷ್ಟ್ರದ ದೇವಗಿರಿಯ ರಮಾವಲ್ಲಭದಾಸ ಮತ್ತವರ ಶಿಷ್ಯರು ಕೃಷ್ಣಪಂಥದ ಪ್ರಚಾರ ಮಾಡಿದ್ದಾರೆ. ಇಲ್ಲಿ ಸಮಾಧಿಯಾಗಿರುವ ಕೃಷ್ಣದಾಸಗೋಸಾಯಿ, ಅವರ ಶಿಷ್ಯರಲ್ಲೊಬ್ಬರು. ಶಾಂತೇರಿ ಜೋಗವ್ವೆಯ ಹೆಸರಿನ ಇನ್ನೊಂದು ಮಠವೂ ಇಲ್ಲಿದೆ. ಪ್ರಾಚೀನ ಕಾಲದಲ್ಲಿ ‘ಹೇಮಪುರ’ ಎಂದೂ ಕರೆಯಲ್ಪಡುತ್ತಿದ್ದ ಈ ಊರಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯವು ಪುರಾತನ ಗುಡಿಯಾಗಿದ್ದು, ಗರ್ಭಗೃಹದಲ್ಲಿ ಸುಂದರವಾದ ಲಕ್ಷ್ಮೀನಾರಾಯಣ ಶಿಲ್ಪವಿದೆ. ಸುಮಾರು ೧೩–೧೪ನೇ ಶತಮಾನಕ್ಕೆ ಸೇರಿದ ಎರಡು ಶಾಸನಗಳು ಲಕ್ಷ್ಮೀನಾರಾಯಣನಿಗೆ ನೀಡಿದ ದತ್ತಿಯನ್ನು ತಿಳಿಸಿದರೆ, ೧೫೪೯ರ ಶಾಸನ ಹೆಮ್ಮಾಡಿಯನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿಯ ಲಕ್ಷ್ಮೀನಾರಾಯಣ ಗುಡಿ ಬಳಿಯಿರುವ ೧೫೭೬ರ ಇನ್ನೊಂದು ಶಾಸನ, ಬಾರಕೂರನ್ನಾಳುತ್ತಿದ್ದ ಯತಿರಾಯವಡೆಯರು, ವ್ಯಾಸತೀರ್ಥಶ್ರೀಪಾದರು ಆರಾಧಿಸುವ ರಾಮಚಂದ್ರದೇವರ ಸೇವೆಗೆಂದು ೬೦ ವರಾಹವನ್ನು ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಹಿಂದೆ ಈ ಊರು ತುಂಡರಸರ ಆಡಳಿತ ಕೇಂದ್ರವಾಗಿದ್ದು, ಅದರ ಕುರುಹೆಂದು ಪಡ್ಡಹಿತ್ಲು, ಹೂವಿನ ತೊಪ್ಲು ಹಾಗೂ ಕೋಟೆ ಬೆಟ್ಟು ಜಾಗಗಳನ್ನು ಸ್ಥಳೀಯರು ತೋರಿಸುತ್ತಾರೆ. ಹೆಮ್ಮಾಡಿಗೆ ಸೇರಿದ ಉಪ್ಪಿನಕುದುರು ಉಪಗ್ರಾಮದ ಕೊಗ್ಗ ಕಾಮತರ, ಗಣೇಶ ಯಕ್ಷಗಾನ ಬೊಂಬೆಯಾಟ ಮಂಡಳಿಯು ಯಕ್ಷಗಾನ ಬೊಂಬೆಯಾಟವನ್ನು ದೇಶ–ವಿದೇಶಗಳಲ್ಲಿ ಪ್ರದರ್ಶಿಸುವ ಮೂಲಕ ಖ್ಯಾತಿ ಪಡೆದಿದೆ. ಎರಡು ಎರಡೂವರೆ ಅಡಿ ಎತ್ತರ ಹಾಗೂ ಎರಡರಿಂದ ಮೂರು ಕಿಲೋ ತೂಕವಿರುವ ಮರದ ಗೊಂಬೆಗಳಿಗೆ ಬಣ್ಣ ಹಚ್ಚಿ ವೇಷ ತೊಡಿಸಿ, ಆಡಿಸುವ ಕಲಾತ್ಮಕ ಆಟ ಇದಾಗಿದ್ದು, ಭಕ್ತರ ಇಚ್ಛೆಯಂತೆ ದೇವರ ಹೆಸರಲ್ಲಿ ಹರಕೆ ಸೇವೆಯಾಟವನ್ನೂ ಇದು ಪ್ರದರ್ಶಿಸುತ್ತದೆ.

**ಹೊಸಂಗಡಿ** (ಜನಸಂಖ್ಯೆ: ೪,೯೭೨): ತಾಲೂಕು ಕೇಂದ್ರ ಕುಂದಾಪುರದಿಂದ ೪೨ ಕಿ.ಮೀ. ಪೂರ್ವಕ್ಕೆ ಘಟ್ಟದ ತಪ್ಪಲಿನಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಪುರಾತನ ಪಟ್ಟಣಗಳಲ್ಲೊಂದು. ಮಿಗಿಲಾಗಿ ಹೊನ್ನಕಂಬಳಿ ಎಂಬ ಜೈನ ಸಾಮಂತರಸರ ಪ್ರಮುಖ ರಾಜಧಾನಿ ಪಟ್ಟಣ. ಇವರ ಆಳ್ವಿಕೆಗೆ ಕುಂದಾಪುರ ತಾಲೂಕಿನ ಏಳು ಸೀಮೆಗಳೂ ಸೇರಿದಂತೆ ನೆರೆಯ ಶಿವಮೊಗ್ಗ ಜಿಲ್ಲೆಯ ಕೆಲವು ಸೀಮೆಗಳೂ ಒಳಪಟ್ಟಿದ್ದವೆಂದು ಗಣಪತಿ ಐಗಳ್ ಅಭಿಪ್ರಾಯಪಡುತ್ತಾರೆ. ಆನಂತರದಲ್ಲಿ ಇದು ಕೆಳದಿ ನಾಯಕರಿಗೆ ವಶವಾಗಿ ಮುಂದೆ ಹೈದರನ ನಿಯಂತ್ರಣದಲ್ಲಿ ಇದಕ್ಕೆ ಹೈದರಗಡ್ ಎಂದು ಪುನರ್ ನಾಮಕರಣ ಮಾಡಲಾಗಿತ್ತು. ಹೊಸಂಗಡಿಯಿಂದ ಆರು ಕಿ.ಮೀ. ಅಂತರದಲ್ಲಿರುವ ಕುಂಚಕಲ್ ಅಬ್ಬಿ (ಜಲಪಾತ) ಹಾಗೂ ವಾರಾಹಿ ಜಲವಿದ್ಯುತ್ ಯೋಜನೆಯಿಂದಾಗಿ ಇದು ಪ್ರಸಿದ್ಧವಾಗಿದೆ.

ಹೊಸಂಗಡಿಯಲ್ಲಿ ಪ್ರಾಚೀನ ಕುರುಹಾಗಿ ಕೋಟೆ, ಕಲ್ಯಾಣಿ, ವೀರಗಲ್ಲು ಮುಂತಾದವುಗಳ ಜೊತೆಗೆ ಅನೇಕ ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಶಾಂತೇಶ್ವರ ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದರೂ, ಹಿಂದಿನ ವೈಭವಗಳಿಗೆ ಮೂಕಸಾಕ್ಷಿಯಾಗಿ ನಿಂತಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಬೃಹತ್ ಶಿವಲಿಂಗವಿದೆ. ಇಲ್ಲಿಯ ನೀಲಕಂಠೇಶ್ವರ, ವಿರೂಪಾಕ್ಷ, ಲಕ್ಷ್ಮಿನರಸಿಂಹ, ತಿರುಮಲ ವೆಂಕಟರಮಣ, ವೀರವಿಠಲ ಮುಂತಾದವು ಇನ್ನಿತರ ಪ್ರಮುಖ ದೇವಾಲಯಗಳಾಗಿವೆ. ವಾರಾಹಿ ಜಲವಿದ್ಯುತ್ ಉತ್ಪಾದನಾ ಘಟಕವು ಕರ್ನಾಟಕದ ಮೊಟ್ಟಮೊದಲ ಭೂ ಅಂತರ್ಗತ ಉತ್ಪಾದನಾ ಘಟಕವಾಗಿದೆ. ಹೊಸಂಗಡಿಪೇಟೆಯಿಂದ ಜೀಪಿನಲ್ಲಿ ವಾರಾಹಿ ಜಲವಿದ್ಯುತ್ ಯೋಜನಾ ಪ್ರದೇಶಕ್ಕೆ ಸಾಗುವ ಮಾರ್ಗದಲ್ಲಿ ಸಾವಿರಾರು ಅಡಿ ಎತ್ತರದಿಂದ ಹಂತ ಹಂತವಾಗಿ ಕುಂಚಿಕಲ್ ಜಲಪಾತವಾಗಿ ವೈಯ್ಯಾರದಿಂದ ಧುಮುಕುವ ವಾರಾಹಿಯ ಬೆಡಗು ವೀಕ್ಷಕರಿಗೆ ಮುದನೀಡುತ್ತದೆ. ಈ ಮಾರ್ಗದಲ್ಲಿ ಕಾಣಸಿಗುವ ಮೆಟ್ಕಲ್ಲುಗುಡ್ಡ ಮೊನಚಾಗಿದ್ದು, ಅಲ್ಲೊಂದು ಕಾವಲುಕೋಟೆ ಹಾಗೂ ಗಣಪತಿಯ ಗುಡಿಗಳಿದ್ದು, ಇತ್ತೀಚೆಗೆ ಗಣಪತಿ ಗುಡಿಯನ್ನು ದುರಸ್ತಿ ಮಾಡಲಾಗಿದೆ. ಹೊಸನಗರ ತಾಲೂಕಿನಲ್ಲಿ ವಾರಾಹಿ ನದಿಗೆ ಅಣೆಕಟ್ಟೆಯನ್ನು ನಿರ್ಮಿಸಿದ್ದರೂ ಜಲವಿದ್ಯುತ್ ಉತ್ಪಾದನಾ ಘಟಕವಿರುವುದು ಉಡುಪಿ ಜಿಲ್ಲೆಯಲ್ಲೇ. ಸದಾ ರಮಣೀಯವಾಗಿರುವ ಪ್ರಕೃತಿಯ ನಡುವೆ ಸುರಂಗದ ಮೂಲಕ ಈ ವಿದ್ಯುದ್ಗಾರವನ್ನು ತಲುಪುಬಹುದಾಗಿದೆ. ಈ ಯೋಜನೆಗೆ ೧೯೯೦ರ ವೇಳೆಗೆ ಸುಮಾರು ೨೨೦ ಕೋಟಿ ರೂ.ಗಳು ವೆಚ್ಚವಾಗಿದ್ದು, ಎರಡು ಯಂತ್ರಗಳು ಕಾರ್ಯನಿರ್ವಹಿಸಲಾರಂಭಿಸಿ ವರ್ಷಕ್ಕೆ ೧೧೦ ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿತ್ತು. ಉಳಿದೆರಡು ಯಂತ್ರಗಳನ್ನು ಸ್ಥಾಪಿಸುವ ಕಾರ್ಯ ಭರದಿಂದ ಸಾಗಿತ್ತು. ೨೦೦೪ರಲ್ಲೂ ಈ ಕೇಂದ್ರದ ಎರಡು ವಿದ್ಯುತ್ ಉತ್ಪಾದನಾ ಘಟಕಗಳ ಸಾಮರ್ಥ್ಯವು ೨೩೦ ಮೆ.ವ್ಯಾ.ಗಳಿಗೆ ಸೀಮಿತವಾಗಿತ್ತು. ಗಾತ್ರದಲ್ಲಿ ಕಿರಿದಾಗಿದ್ದರೂ, ಎಂತಹ ವಿಸ್ಮಯಾದ್ಭುತಗಳಿಗೆ ವಾರಾಹಿ ನದಿಯೂ ಕಾರಣವಾಗಿದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಒಂದು ಸುರಂಗದ ಮೂಲಕ ಹಾದು ವಿದ್ಯುತ್ ಉತ್ಪಾದನೆಗೆ ಸಹಕರಿಸಿ ಇನ್ನೊಂದು ಸುರಂಗದ ಮೂಲಕ ಹೊರಸಾಗಿ ಮೂಲನದಿಯನ್ನು ಕೂಡುವ ದೃಶ್ಯ ಮನೋಹರವಾಗಿದೆ. ವಾರಾಹಿ ಏತ ನೀರಾವರಿ ಯೋಜನೆಯೊಂದು ಬಹಳ ಹಿಂದೆಯೇ ಮಂಜೂರಾಗಿದ್ದು, ಅದು ಕಾರ್ಯರೂಪಕ್ಕೆ ಬಂದಲ್ಲಿ ಜಿಲ್ಲೆಯ ಕಾರ್ಕಳ, ಕುಂದಾಪುರ ಹಾಗೂ ಉಡುಪಿ ತಾಲೂಕುಗಳ ೧೫,೦೦೦ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಕರ್ಯ ಲಭಿಸಲಿದೆ.

ಹೊಸಂಗಡಿಗೆ ಸಮೀಪವಿರುವ **ಕೆರೆಕಟ್ಟೆ**ಯು ಕ್ರೈಸ್ತ ಕ್ಷೇತ್ರವಾಗಿದ್ದು, ಅಲ್ಲಿಯ ಸಂತ ಅಂತೋನಿಯ ಕಿರು ಇಗರ್ಜಿಯೊಂದಿಗೆ, ಇಲ್ಲಿರುವ ಸಂತ ಅಂತೋನಿಯ ಪ್ರಾಚೀನ ಶಿಲಾಮೂರ್ತಿಗೆ ೧೯೪೦ರಲ್ಲಿ ಕಿರುಗುಡಿ ಹಾಗೂ ಇಗರ್ಜಿಗಳನ್ನು ನಿರ್ಮಿಸಲಾಗಿದೆ. ವರ್ಷದಲ್ಲಿ ಎರಡು ಬಾರಿ (ಫೆಬ್ರವರಿ ೧೫ ಹಾಗೂ ಜೂನ್ ೧೬)ಇಲ್ಲಿ ದೊಡ್ಡ ಜಾತ್ರೆಯಾಗುತ್ತದೆ. ಇಲ್ಲಿರುವ ಸಾತೊಸ್ರೆಲಿಯಾನ್ ಬೀಬಿಯಾನ್ ದರ್ಗಾದಲ್ಲಿ ಅವಳಿ ಹೆಣ್ಣುಮಕ್ಕಳ ಗೋರಿಗಳಿದ್ದು, – ವರ್ಷದಲ್ಲೊಮ್ಮೆ ಉರುಸಾಗುತ್ತದೆ.

* * * * *